ಭಾನುವಾರ, ಮಾರ್ಚ್ 31, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 91 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವಿಕೇಂದ್ರೀಕೃತ ನೀರಾವರಿಯ ಅತ್ಯುತ್ತಮ ಮಾದರಿಯಾಗಿದ್ದ ಕರ್ನಾಟಕ ಈಗ ಆಳದ ಕೊಳವೆಬಾವಿಗಳ ಮೇಲೆ ಅವಲಂಬಿತವಾಗಿದೆ



ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ: ದೇವೇಗೌಡ ಪ್ರಶ್ನೆ 5

ರ‍್ಯಾಲಿಯಲ್ಲಿ 28 ಪಕ್ಷಗಳು ಭಾಗಿ: ಜೈರಾಮ್ ರಮೇಶ್

‘ನನ್ನದು ಗರ್ವ ಅಲ್ಲ, ಸಹಜ ಸ್ವಾಭಿಮಾನ’ 5

‘ಇಂಡಿಯಾ’ ರ‍್ಯಾಲಿ ವ್ಯಕ್ತಿ ವಿರುದ್ಧವಲ್ಲ: ಕಾಂಗ್ರೆಸ್ 8

ನೀರು ತುಂಬಿಸುತ್ತಿರುವ ಇಲಾಖೆ, ಎನ್‌ಜಿಒಗಳು ● ಹಸ್ತಕ್ಷೇಪಕ್ಕೆ ತಜ್ಞರ ಆಕ್ಷೇಪ

ಜಲಕ್ಷಾಮದಲ್ಲಿ ವನ್ಯಲೋಕ

● ಕೆ.ಎಸ್.ಗಿರೀಶ

ಮಡಿಕೇರಿ: ಅದು, ಕಾವೇರಿ ವನ್ಯಧಾಮದ ಹನೂರು ವನ್ಯಜೀವಿ ವಲಯ. ಅರಣ್ಯ ಇಲಾಖೆ ನಿರ್ಮಿಸಿದ್ದ ಚೆಕ್‌ಡ್ಯಾಂ ಬೇಸಿಗೆಯ ಹೊಡೆತಕ್ಕೆ ಸಂಪೂರ್ಣ ಒಣಗಿ ಹೋಗಿದೆ. ನೀರಿದೆ ಎಂದೇ ಭಾವಿಸಿ ಬಂದ ವನ್ಯಜೀವಿಗಳು ನಿರಾಸೆಯಿಂದ ಹೋಗುತ್ತಿದ್ದವು. ಮತ್ತೆ ಕೆಲವು ಪ್ರಾಣಿಗಳು ಕೂಗಳತೆ ದೂರದಲ್ಲಿದ್ದ ರೈತರ ಜಮೀನುಗಳಿಗೆ ನುಗ್ಗುತ್ತಿದ್ದವು. ಅದನ್ನು ಕಂಡ ಕಾಡಿನಂಚಿನ ಬಂಡಳ್ಳಿಯ ನಂಜುಂಡ ಅವರು ತಮ್ಮ ಕೊಳವೆಬಾವಿಯಿಂದ 3ರಿಂದ 4 ಬಾರಿ ನೀರು ಹರಿಸಿ ಚೆಕ್‌ಡ್ಯಾಂನಲ್ಲಿ ನೀರು ನಿಲ್ಲುವಂತೆ ಮಾಡಿ, ವನ್ಯಜೀವಿಗಳ ಬಾಯಾರಿಕೆ ನೀಗಿಸುತ್ತಿದ್ದಾರೆ.

‘ನೀರು ಹರಿಸಿದ್ದರಿಂದ ಅವು ನೀರಿಗಾಗಿ ಜಮೀನಿನತ್ತ ಬರುವುದು ತಪ್ಪಿತು. ಸಾಕು ಪ್ರಾಣಿಗಳಿಗೆ ಕೊಡುವಂತೆ, ಅವುಗಳಿಗೂ ನೀರು ಕೊಟ್ಟಿದ್ದರಿಂದ ನನಗೂ ಸಮಾಧಾನವಾಯಿತು’ ಎನ್ನುವರು.

ಅತ್ತ, ಚಿಕ್ಕಬಳ್ಳಾಪುರದಿಂದ ಗೌರಿಬಿದನೂರಿಗೆ ಸಾಗುವ ಕಣಿವೆ ಪ್ರದೇಶದಲ್ಲಿ, ಕೇತೇನಹಳ್ಳಿ ಅರಣ್ಯ ಹಾಗೂ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿ ಪ್ರಾಣಿಗಳಿಗೆಂದೇ ಚಿಕ್ಕಬಳ್ಳಾಪುರದ ‘ವಾಟರ್ ಫಾರ್ ವಾಯ್ಸ್‌ಲೆಸ್’ ಸಂಸ್ಥೆಯ ಮಹಾಂತೇಶ್ ನೀರಿನ ತೊಟ್ಟಿಗಳನ್ನಿಟ್ಟಿದ್ದಾರೆ.

ಒಳನೋಟ

‘2018ರಲ್ಲಿ ನಾಯಿಯೊಂದು ನೀರಿಲ್ಲದೇ ಸತ್ತಿದ್ದನ್ನು ಕಂಡ ನಂತರ ಬೇಸಿಗೆಯಲ್ಲಿ ಪ್ರಾಣಿ, ಪಕ್ಷಿಗಳಿಗೆ ವಾರಕ್ಕೊಮ್ಮೆ ನೀರು ಕೊಡುತ್ತಿದ್ದೇನೆ. ಸ್ವಂತ ಹಣದಲ್ಲಿ ತೊಟ್ಟಿಗಳನ್ನಿಟ್ಟಿದ್ದೇನೆ. ಈಗ ಗೆಳೆಯರೂ ಕೈ ಜೋಡಿಸಿದ್ದಾರೆ. ಸ್ವಯಂಪ್ರೇರಿತರಾಗಿ ತೊಟ್ಟಿ ತುಂಬಿಸುವವರೂ ಹೆಚ್ಚಾಗುತ್ತಿದ್ದಾರೆ’ ಎಂದು ಮಹಾಂತೇಶ್ ಹೇಳುತ್ತಾರೆ.

ಧಾರವಾಡ ತಾಲ್ಲೂಕಿನ ದುಬ್ಬನಮರಡಿ ಗ್ರಾಮದ 12 ಎಕರೆ ಪ್ರದೇಶದ ಕೆರೆಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪುನಶ್ಚೇತನಗೊಳಿಸಿ, ಸುತ್ತಮುತ್ತಲಿನ ರೈತರ ಜಮೀನುಗಳ ಕೊಳವೆಬಾವಿಗಳಿಂದ ನೀರು ಪಡೆದು ಕೆರೆಗೆ ನೀರು ಹರಿಸಿದ್ದು, ಪಶು, ಪಕ್ಷಿಗಳ ದಾಹ ನೀಗಿಸುತ್ತಿದೆ.

ಚಾಮರಾಜನಗರದ ಹನೂರಿನ ಕೌದಳ್ಳಿ ಉಪ ವಿಭಾಗದ ಗೋಪಿನಾಥಂ ಸೇರಿದಂತೆ ಐದು ಕಡೆ ಬಿಇಎಲ್ ಮತ್ತು ಸೆಲ್ಕೋ ಸೇರಿ ಸೌರಶಕ್ತಿಚಾಲಿತ ಕೊಳವೆ ಬಾವಿಯಿಂದ ಕಾಡಿನ ಕೆರೆಗಳಿಗೆ ನೀರು ಹರಿಸುತ್ತಿವೆ.

ಮಳೆಯ ಕೊರತೆಯ ನಡುವೆಯೇ ಮಾನವೀಯತೆಯ ಒರತೆ ರಾಜ್ಯದ ಎಲ್ಲೆಡೆ ಚಿಮ್ಮುತ್ತಿದೆ. ವನ್ಯಜೀವಿ ಉಪಟಳದಿಂದ ನೊಂದಿದ್ದ ರೈತರ ಎದೆಯೂ ಕರಗುತ್ತಿದೆ. ವನ್ಯಜೀವಿ ಪ್ರಿಯರು, ವಿವಿಧ ಸಂಘ, ಸಂಸ್ಥೆಗಳು ಪ್ರಾಣಿ, ಪಕ್ಷಿಗಳ ದಾಹ ನೀಗಿಸುತ್ತಿದ್ದಾರೆ.

4ನೇ ಪುಟ ನೋಡಿ



ಕಾವೇರಿ ವನ್ಯಧಾಮದ ಹನೂರು ವನ್ಯಜೀವಿ ವಲಯದಲ್ಲಿ ಬಂಡಳ್ಳಿ ಗ್ರಾಮದ ನಂಜುಂಡ ಅವರು ವನ್ಯಜೀವಿಗಳ ಬಾಯಾರಿಕೆ ತಣಿಸಲು ತಮ್ಮ ಕೊಳವೆಬಾವಿಯಿಂದ ಕಾಡಿನಲ್ಲಿನ ಚೆಕ್‌ಡ್ಯಾಂಗೆ ನೀರು ಹರಿಸಿರುವುದು

ಅಬಕಾರಿ ಹಗರಣ ನಂಟಿನ ರೆಡ್ಡಿಗೆ ಎನ್‌ಡಿಎ ಟಿಕೆಟ್

ಪ್ರಜಾವಾಣಿ ವಾರ್ತೆ

ಅಮರಾವತಿ: ಆಂಧ್ರಪ್ರದೇಶದಲ್ಲಿ ಎನ್‌ಡಿಎ ಕೂಟವು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಾಗಿ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ರಾಘವ ಮಾಗುಂಟ ಅವರ ತಂದೆ ಎಂ. ಶೀನಿವಾಸುಲು ರೆಡ್ಡಿ ಅವರನ್ನು ಒಂಗೋಲ್ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ.

ಟಿಡಿಪಿಯು ರಾಜ್ಯದಲ್ಲಿ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದೆ.

2019ರಲ್ಲಿ ಶೀನಿವಾಸುಲು ಅವರು ಇದೇ ಲೋಕಸಭಾ ಕ್ಷೇತ್ರದಲ್ಲಿ ವೈಎಸ್‌ಆರ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. ಈಚೆಗೆ ಅವರು ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ತೊರೆದು ಟಿಡಿಪಿ ಸೇರಿದ್ದರು. ತಮ್ಮ ಮಗನಿಗೆ ವೈಎಸ್‌ಆರ್‌ಸಿಪಿ ಒಂಗೋಲ್ ಕ್ಷೇತ್ರದ ಟಿಕೆಟ್ ನೀಡುವುದಕ್ಕೆ ನಿರಾಕರಿಸಿತು ಎನ್ನುವ ಕಾರಣಕ್ಕೆ ಪಕ್ಷಾಂತರ ಮಾಡಿದರು ಎನ್ನಲಾಗಿತ್ತು.

ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಆರೋಪದಲ್ಲಿ ರಾಘವ ಮಾಗುಂಟ ಅವರನ್ನು ಇ.ಡಿ ಅಧಿಕಾರಿಗಳು ಕಳೆದ ವರ್ಷ ಬಂಧಿಸಿದ್ದರು. ಬಳಿಕ ಅವರು ಮಾಫಿ ಸಾಕ್ಷಿಯಾಗಿದ್ದರು. ಶ್ರೀನಿವಾಸುಲು ರೆಡ್ಡಿ ಅವರನ್ನೂ ಕೂಡ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ ಹಲವು ಸಲ ವಿಚಾರಣೆ ನಡೆಸಿತ್ತು.



ರಥೋತ್ಸವ

ಕಲಬುರಗಿಯ ಶರಣಬಸವೇಶ್ವರರ 202ನೇ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಶನಿವಾರ ಸಂಜೆ ಅಪಾರ ಭಕ್ತ ಸಮೂಹದ ಮಧ್ಯೆ ಮಹಾರಥೋತ್ಸವ ಜರುಗಿತು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಬಿಲ್ಡರ್ ಮೇಲೆ ಐ.ಟಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ವಂಚನೆ ಮತ್ತು ಚುನಾವಣಾ ಉದ್ದೇಶಕ್ಕೆ ಹಣ ಸಂಗ್ರಹಿಸಿರುವ ಅನುಮಾನದ ಮೇಲೆ ನಗರದ ಹಲವು ಬಿಲ್ಡರ್‌ಗಳ ಮೇಲೆ ಶನಿವಾರ ದಾಳಿ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, 20ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ.

ವಿಲ್ಸನ್ ಗಾರ್ಡನ್, ಫ್ರೇಜರ್ ಟೌನ್, ಕೆ.ಆರ್. ಪುರ ಸೇರಿದಂತೆ ಹಲವು ಕಡೆಗಳಲ್ಲಿ ಶನಿವಾರ ಬೆಳಿಗ್ಗೆ ಏಕಕಾಲಕ್ಕೆ ದಾಳಿ ನಡೆದಿದ್ದು, ರಾತ್ರಿಯವರೆಗೂ ಶೋಧ ಕಾರ್ಯ ನಡೆಯಿತು. ರಾಜಕಾರಣಿಗಳ ಜತೆ ನಿಕಟವಾದ ನಂಟು ಹೊಂದಿರುವ ಕೆಲವು ಬಿಲ್ಡರ್‌ಗಳನ್ನು ಕೇಂದ್ರೀಕರಿಸಿ ಈ ಕಾರ್ಯಾಚರಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಬಿಲ್ಡರ್‌ಗಳ ಮನೆಗಳು, ಕಚೇರಿಗಳು ಮತ್ತು ಅವರ ನಿಕಟವರ್ತಿಗಳ ಮನೆಗಳ ಮೇಲೂ ದಾಳಿ ನಡೆಸಲಾಗಿದೆ. ಚುನಾವಣಾ ಅಕ್ರಮ ತಡೆಯಲು ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅದರ ಭಾಗವಾಗಿಯೇ ಈ ಕಾರ್ಯಾಚರಣೆಯೂ ನಡೆದಿದೆ ಎಂದು ಮೂಲಗಳು ಹೇಳಿವೆ.

ರಿಯಲ್ ಎಸ್ಟೇಟ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳು, ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿಕೆಶಿಗೂ ನೋಟಿಸ್



ಶಿವಕುಮಾರ್

ಬೆಂಗಳೂರು: ‘ಆದಾಯ ತೆರಿಗೆ (ಐ.ಟಿ) ಇಲಾಖೆಯಿಂದ ಶುಕ್ರವಾರ ರಾತ್ರಿ ನನಗೂ ನೋಟಿಸ್ ಬಂದಿದೆ. ಅದೂ ಈಗಾಗಲೇ ಬಗೆಹರಿದ ವಿಚಾರಕ್ಕೆ ಬಂದಿದೆ. ಇದರಿಂದ ಆಘಾತವಾಗಿದೆ. ಕೇವಲ ಕಾಂಗ್ರೆಸ್ ನಾಯಕರನ್ನು ಗುರಿ ಮಾಡಲಾಗುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಬಿಜೆಪಿ ನಾಯಕರ ಮೇಲೂ ತನಿಖೆ ನಡೆಯುತ್ತಿದೆ. ಆದರೆ, ಅವರನ್ನು ವಿಚಾರಣೆಗೆ ಕರೆಯುವುದಿಲ್ಲ’ ಎಂದು ಆರೋಪಿಸಿದರು. ‘ದೇಶದಲ್ಲಿ ಪ್ರಜಾಪ್ರಭುತ್ವ, ಕಾನೂನು ಇದೆ. ಅವುಗಳನ್ನು ಹರಾಜು ಹಾಕುತ್ತಿದ್ದಾರೆ’ ಎಂದು ದೂರಿದರು.

ಕೋಲಾರದ ಬಣ ಕಿತ್ತಾಟ: ಗೌತಮ್‌ಗೆ ಒಲಿದ ‘ಅದೃಷ್ಟ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಲಾರ ಮೀಸಲು ಲೋಕಸಭಾ ಕ್ಷೇತ್ರದ ಟಿಕೆಟ್ ಕಗ್ಗಂಟನ್ನು ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಬಗೆಹರಿಸಿದ್ದು, ಪರಿಶಿಷ್ಟ ಜಾತಿಯ ಎಡಗೈ ಸಮುದಾಯದ ಕೆ.ವಿ.ಗೌತಮ್ ಅವರಿಗೆ ಮಣೆ ಹಾಕಿದೆ.

ಬೆಂಗಳೂರು ಕೇಂದ್ರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವ ಗೌತಮ್ ಅವರು ಮಾಜಿ ಮೇಯರ್ ಕೆ.ಸಿ. ವಿಜಯಕುಮಾರ್ ಅವರ ಪುತ್ರ.

ಬಲಗೈ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು ಎಂದು ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಬಣ ಪಟ್ಟು ಹಿಡಿದಿತ್ತು. ತಮ್ಮ ಅಳಿಯ ಕೆ.ಜಿ.ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ನೀಡಬೇಕೆಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಒತ್ತಡ ಹೇರಿದ್ದರು. ಮುನಿಯಪ್ಪ ಕುಟುಂಬದವರಿಗೆ ಟಿಕೆಟ್ ನೀಡುವುದಕ್ಕೆ ರಮೇಶ್ ಕುಮಾರ್ ಬಣ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜಿಲ್ಲೆಯ ಮುಖಂಡರ ಜತೆಗೆ ಸಮಾಲೋಚಿಸಿ ಮನವೊಲಿಸಿದ್ದರು.

ಹಳ್ಳಿ–ಹಳ್ಳಿಯಲ್ಲಿ ಚುನಾವಣಾ ಪ್ರಚಾರಕ್ಕೆ ಧುಮುಕಿದ ಕೃಷಿ, ಕೂಲಿ ಕಾರ್ಮಿಕರು

ಕುಸಿದ ‘ಉದ್ಯೋಗ’ ಖಾತ್ರಿ ಬೇಡಿಕೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಲೋಕಸಭಾ ಚುನಾವಣೆ ವೇಳಾಪಟ್ಟಿ ಘೋಷಣೆಯಾದ ನಂತರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ಕೆಲಸಕ್ಕಾಗಿ ಸಲ್ಲಿಕೆಯಾಗುವ ಕಾರ್ಮಿಕರ ಬೇಡಿಕೆ ಶೇಕಡ 85ರಷ್ಟು ಕುಸಿದಿದೆ.

ರಾಜ್ಯದಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯುತ್ತಿದೆ. ದಿನಾಂಕ ಘೋಷಣೆಯಾಗುತ್ತಿದ್ದಂತೆ ಗ್ರಾಮೀಣ ಪ್ರದೇಶದ ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರ ಜತೆ ಕೃಷಿ, ಕೂಲಿ ಕಾರ್ಮಿಕರೂ ಅಭ್ಯರ್ಥಿಗಳ ಪರ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ರಾಜ್ಯದಲ್ಲಿ 5,963 ಗ್ರಾಮ ಪಂಚಾಯಿತಿಗಳಿವೆ. ಪ್ರತಿ ಪಂಚಾಯತಿಗಳಲ್ಲೂ ಉದ್ಯೋಗ ಖಾತ್ರಿ ಅಡಿ ಕೆಲಸಕ್ಕೆ ಬೇಡಿಕೆ ಸಲ್ಲಿಸುವವರ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿದೆ. ಶೇ 60ಕ್ಕೂ ಹೆಚ್ಚು ಪಂಚಾಯತಿಗಳಲ್ಲಿ ಉದ್ಯೋಗ ಖಾತ್ರಿ ಕೆಲಸಗಳು ಸ್ಥಗಿತಗೊಂಡಿವೆ. ‘ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಯನ್ನು ₹316ರಿಂದ ₹349ಕ್ಕೆ ಹೆಚ್ಚಿಸಿದ್ದೇವೆ. ಕೆಲಸಕ್ಕೆ ಬನ್ನಿ ಎಂದು ಪಂಚಾಯಿತಿ ಸದಸ್ಯರು ನಿತ್ಯವೂ ಕರೆಯುತ್ತಿದ್ದಾರೆ.

4ನೇ ಪುಟ ನೋಡಿ

ಅಂಕಿ ಅಂಶಗಳು

79.43 ಲಕ್ಷ ಜಾಬ್‌ಕಾರ್ಡ್ ಪಡೆದ ಕುಟುಂಬಗಳು (2023-24)

45.96 ಲಕ್ಷ ಕೆಲಸ ಕೋರಿದ ಕುಟುಂಬಗಳು

29.94 ಲಕ್ಷ ಕೆಲಸ ಪಡೆದ ಕುಟುಂಬಗಳು

43,476 100 ದಿನ ಕೆಲಸ ಪೂರೈಸಿದ ಕಾರ್ಮಿಕರು

13,450 ಚುನಾವಣೆ ಘೋಷಣೆ ನಂತರ ಕೆಲಸ ಕೋರಿದವರು

ಕಟ್ಟಡ ಕಾಮಗಾರಿಗಳಿಗೂ ವಿಘ್ನ



ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ, ಕೃಷಿ ಕೆಲಸಗಳಿಗೆ ಕಾರ್ಮಿಕರ ಕೊರತೆಯಾದರೆ, ನಗರ–ಪಟ್ಟಣ ಪ್ರದೇಶಗಳಲ್ಲಿ ಕಟ್ಟಡ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೂ ಕಾರ್ಮಿಕರ ಕೊರತೆ ಎದುರಾಗಿದೆ.

ನಿರ್ಮಾಣ ಕ್ಷೇತ್ರ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳ ಗುತ್ತಿಗೆ ಪಡೆದವರು, ಕಾರ್ಮಿಕರ ಕೊರತೆ ನೀಗಿಸಲು ಪರದಾಡುವಂತಾಗಿದೆ. ತುರ್ತಾಗಿ ಪೂರ್ಣಗೊಳಿಸುವ ಕಾಮಗಾರಿಗಳಿಗೆ ಲಭ್ಯವಿರುವ ಕಾರ್ಮಿಕರನ್ನು ನಿಯೋಜಿಸಿ, ಗೃಹ ಮತ್ತಿತರ ನಿರ್ಮಾಣ ಕಾಮಗಾರಿಗಳ ಕೆಲಸವನ್ನು ತಾತ್ಕಾಲಿಕವಾಗಿ ಮುಂದೂಡುತ್ತಿದ್ದಾರೆ.

ವೈಯಕ್ತಿಕ ಕಾಮಗಾರಿಗಳಿಗೆ ತಡೆ

ನರೇಗಾ ಯೋಜನೆಯ ಕೆಲವು ಕೆಲಸಗಳಿಗೆ ಚುನಾವಣಾ ನೀತಿ ಸಂಹಿತೆಯೂ ಅಡ್ಡಿಯಾಗಿದೆ. ಅರ್ಹ ಕುಟುಂಬಗಳು ಗರಿಷ್ಠ ₹5 ಲಕ್ಷ ಮೊತ್ತದ ವೈಯಕ್ತಿಕ ಕಾಮಗಾರಿಗಳನ್ನು ಕೈಗೊಳ್ಳಲು ನರೇಗಾ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.

ತೋಟಗಳ ನಿರ್ಮಾಣ, ಕುರಿ, ದನದ ಕೊಟ್ಟಿಗೆ, ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿಕೊಳ್ಳಬಹುದು. ಇಂತಹ ಕೆಲಸಗಳಿಗೆ ಬರುವ ಕಾರ್ಮಿಕರಿಗೂ ಉದ್ಯೋಗ ಖಾತ್ರಿಯ ಕೂಲಿ ನೀಡಲಾಗುತ್ತದೆ. ನೀತಿ ಸಂಹಿತೆ ಮುಗಿಯುವರೆಗೂ ಪಂಚಾಯತಿಗಳು ಯಾವುದೇ ವೈಯಕ್ತಿಕ ಯೋಜನೆಗಳಿಗೆ ಅನುಮೋದನೆ ನೀಡುವಂತಿಲ್ಲ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಾಳೆಯಿಂದ ಏನೆಲ್ಲ ಬದಲಾವಣೆ?

ಏಪ್ರಿಲ್ 1ರಿಂದ 2024–25ನೇ ಆರ್ಥಿಕ ವರ್ಷ ಆರಂಭವಾಗಲಿದೆ. ಇದರ ಜೊತೆಯಲ್ಲಿಯೇ ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ ಹಲವು ಬದಲಾವಣೆಗಳು ಜಾರಿಯಾಗಲಿವೆ. ಅವುಗಳ ಮೇಲೊಂದು ಪಕ್ಷಿನೋಟ ಇಲ್ಲಿದೆ.

ಎನ್‌ಪಿಎಸ್‌ಗೆ ಆಧಾರ್ ದೃಢೀಕರಣ

ಎನ್‌ಪಿಎಸ್ ಖಾತೆಗೆ ಲಾಗಿನ್ ಆಗುವ ನಿಯಮಗಳು ಬದಲಾವಣೆಯಾಗಲಿವೆ. ಬಳಕೆದಾರರು ಲಾಗಿನ್ ಆಗಲು ಐ.ಡಿ ಹಾಗೂ ಪಾಸ್‌ವರ್ಡ್ ಜೊತೆಗೆ ಆಧಾರ್ ಕಾರ್ಡ್ ಆಧಾರಿತ ದೃಢೀಕರಣವನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಕಡ್ಡಾಯಗೊಳಿಸಿದೆ.

ಇ–ವಿಮಾ ಪಾಲಿಸಿ

ಏಪ್ರಿಲ್ 1ರಿಂದ ವಿಮಾ ಪಾಲಿಸಿಗಳ ಡಿಜಿಟಲೀಕರಣಕ್ಕೆ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ಸೂಚಿಸಿದೆ. ಲೈಫ್, ಹೆಲ್ತ್ ಹಾಗೂ ಸಾಮಾನ್ಯ ವಿಭಾಗದಲ್ಲಿ ಇ–ಪಾಲಿಸಿ ಸೇವೆ ಕಡ್ಡಾಯವಾಗಲಿದೆ.

ಫಾಸ್ಟ್ಯಾಗ್‌ಗೆ ಕೆವೈಸಿ ಕಡ್ಡಾಯ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಮಾರ್ಚ್ 31ರೊಳಗೆ ಫಾಸ್ಟ್ಯಾಗ್ ಕೆವೈಸಿ ಪೂರ್ಣಗೊಳಿಸಲು ಹೆದ್ದಾರಿ ಬಳಕೆದಾರರಿಗೆ ಗಡುವು ನೀಡಿದೆ. ಈ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ ಏಪ್ರಿಲ್ 1ರಿಂದ ಫಾಸ್ಟ್ಯಾಗ್ ಖಾತೆ ನಿಷ್ಕ್ರಿಯವಾಗಲಿದೆ. ಖಾತೆಯಲ್ಲಿ ಹಣವಿದ್ದರೂ ಬಳಕೆ ಕಷ್ಟಸಾಧ್ಯ.

ಎಸ್‌ಬಿಐ ನಿರ್ವಹಣಾ ಶುಲ್ಕ ಏರಿಕೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು ವಿವಿಧ ಡೆಬಿಟ್ ಕಾರ್ಡ್‌ಗಳ ವಾರ್ಷಿಕ ನಿರ್ವಹಣಾ ಶುಲ್ಕವನ್ನು ₹75 ಹೆಚ್ಚಿಸಿದೆ.

ಕ್ರೆಡಿಟ್ ಕಾರ್ಡ್ ನಿಯಮ ಬದಲಾವಣೆ

ಎಸ್‌ಬಿಐನ ಕ್ರೆಡಿಟ್ ಕಾರ್ಡ್ ಮೂಲಕ ಬಾಡಿಗೆ ಪಾವತಿಸಿದರೆ ರಿವಾರ್ಡ್ ಪಾಯಿಂಟ್ ಸಿಗುವುದಿಲ್ಲ. ಐಸಿಐಸಿಐ ಕ್ರೆಡಿಟ್ ಕಾರ್ಡ್ ಬಳಕೆದಾರರು ತ್ರೈಮಾಸಿಕದಲ್ಲಿ ಕನಿಷ್ಠ ₹35 ಸಾವಿರ ಖರ್ಚು ಮಾಡಿದರೆ ಆ ಅವಧಿಯಲ್ಲಿ ವಿಮಾನ ನಿಲ್ದಾಣದ ಲಾಂಜ್‌ಗೆ ಒಮ್ಮೆ ಉಚಿತ ಪ್ರವೇಶ ಸಿಗಲಿದೆ. ಯೆಸ್ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಬಳಕೆದಾರರು ತ್ರೈಮಾಸಿಕದಲ್ಲಿ ಕನಿಷ್ಠ ₹10 ಸಾವಿರ ಖರ್ಚು ಮಾಡಿದರೆ ದೇಶೀಯ ವಿಮಾನ ನಿಲ್ದಾಣದ ಲಾಂಜ್ ಪ್ರವೇಶ ಸಿಗಲಿದೆ.

ಕಾರುಗಳು ತುಟ್ಟಿ

ಟೊಯೊಟ ಕಿರ್ಲೋಸ್ಕರ್ ಮೋಟರ್ ಕಾರುಗಳ ಬೆಲೆಯು ಶೇ 0.5ರಿಂದ ಶೇ 2.5ರಷ್ಟು ಹಾಗೂ ಕಿಯಾ ಇಂಡಿಯಾ ಕಂಪನಿಯ ಕಾರುಗಳ ಬೆಲೆಯು ಶೇ 3ರಷ್ಟು ಹೆಚ್ಚಳವಾಗಲಿದೆ.

ವಿಮಾ ನಿಯಮ ಬದಲಾವಣೆ

ಐಆರ್‌ಡಿಎಐ ಸೂಚನೆ ಅನ್ವಯ ಏಪ್ರಿಲ್ 1ರಿಂದ ವಿಮಾ ಪಾಲಿಸಿಗಳ ಸರೆಂಡರ್ ನಿಯಮಗಳಲ್ಲಿ ಬದಲಾವಣೆಯಾಗಲಿದೆ.

ಮೂರು ವರ್ಷದೊಳಗೆ ಪಾಲಿಸಿಯನ್ನು ಸರೆಂಡರ್ ಮಾಡಿದರೆ ಪಾಲಿಸಿದಾರರಿಗೆ ಮುಖಬೆಲೆಗಿಂತ ಕಡಿಮೆ ಮೊತ್ತ ಲಭಿಸುತ್ತದೆ. ನಾಲ್ಕು ಮತ್ತು ಏಳನೇ ವರ್ಷದಲ್ಲಿ ಸರೆಂಡರ್ ಮಾಡಿದರೆ ಮೌಲ್ಯವು ಅಲ್ಪ ಪ್ರಮಾಣದಲ್ಲಿ ಹೆಚ್ಚಳವಾಗಲಿದೆ.

WEEKEND CORNER ಕ್ಲಾಸಿಫೈಡ್ಸ್

LAND FOR JOINT DEVELOPMENT

3 Acres Residential converted land available for Joint Development
on Bengaluru - Hindupur Highway
Near Rajankunte, 24 kms from Vidhana Soudha.
Genuine Developers only.
Contact- 98452 53711
Brokers excuse

LAND REQUIRED

3 to 4 Acres Residential Converted Land required for joint development in outskirt of Bangalore with good approach.
Contact:
9844023523, 9341228681

Nisarga Sarovara, Near E City

READY TO MOVE IN

₹ 30 Lacs

2 BHK FLAT

Swimming Pool, Childrens Play Area, Generator, STP OTIS 3 Lifts
* All inclusive except Registration Loan upto 90%

Surya city 100 feet Road, Chandapura, Near Narayana Hrudayalaya & Metro Station

NISARGA BUILDERS — Call for site visit 6366 864 500

Varaahi LAKE VIEW — Brighter side of Luxury Living

FLATS FOR SALE

Brighter side of Luxury Living



Behind Talaghattapura Police Station, Just 100 Meters from Metro, Near BDA Lake, Kanakapura Road, Bangalore.

READY TO MOVE IN

Contact: 98808 90219, 99005 42218, 97430 08811, 73384 91811

GODOWN SPACE AVAILABLE

AVAILABLE FOR RENT
7500 Sqft, Rs.65/- per Sqft
24 hours Electricity & Parking
Centre of City, 80 Ft Road, Closed by to BTM Layout & Koramangala
108/1, 6th Cross, Sri Ramappa Layout Thavarekere, Bengaluru -560029
9886153036, 9538030520

AVAILABLE FOR RENT

at **YELAHANKA**
SUITABLE FOR SCHOOL & OFFICES
North West Corner,
Total Area of The Site 6318.415.
First Floor Area 3122 Sft, Second Floor Area 3122 Sft, Total Builtup Area 6583 Sft,
Each Floor Five Class Rooms,
Basement Area 3122 Sft.
Address: # 11, 5th Cross, 707, 5th Phase, Yelahanka New Town, Bangalore.
Rent Expected: Rs 250000/ Per Month.
Contact: 9844005550 / 9060543179

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE BUYING

Agricultural Land

Out-Station

LAND FOR MUSHROOM PROJECT

Asiatic Oxygen Ltd. is looking for 35 to 50 acres of agricultural land for their mushroom project. The land should be generally flat and in rectangular shape. There should be abundant supply of water, H.T. power connection and road access. Areas of interest are Bagalkote, Davangere, Hospete, Chitradurga and on the Bengaluru-Chennai Road. Budget is around Rs. 5 Cr. Offers with complete details should be sent to agriland@verdantagro-horti.com

In case of any queries please contact **Mr. Vinayak (M) 9448148563, Mr. Joshi (M) 9924603388 or Mr. Subramanian (M) 9881843924.**

WANTED 20X30 or 30x40 Site Anjanapura BDA Layout any Block & any Facing Contact: 9980978986

Real Estate Agents

Multiple Locations

"WANTED-FOR GENUINE-PURCHASERS Site/House/ Commercial/ Industrial/ Agricultural Land in and around Bangalore-Call only genuine Sellers. "Sri.Ganesh Estate" 9845286505"

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement, genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

Banashankari

"WANTED BANASHANKARI 6th Stage BDA Sites 50x80, 40x60, 30x40, 20x30, Genuine Owners Contact: 9845146725/ 9741466369"

General

REQUIRE LAND For Purchase in NORTH BANGALORE 1+ Acres, Sellers Contact: 8867580471 / 8050897262

Kanakapura Road

WANTED SITE: 40x60, 30x40 NarayanaNagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

Multiple Locations

URGENT REQUIREMENT 30x40,40x60, 50x80 BDA Commercial & Residential for genuine buyers in BSK 6th Stage, Anjanapura, J.P.Nagar, Jayanagar, Kanakapura Road and other areas also, Contact Krishna: 9845059328

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

WANTED BDA SITE VISWESHWARAIAH LAYOUT ANY MEASUREMENT ANY BLOCK, FACE IMMEDIATE REGISTRATION BROKER'S EXCUSE: 6360050356

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

REAL ESTATE SELLING

Sites

Anjanapura

ANJANAPURA BDA, 11TH Block, 40x60, Residential Site 40 Feet Road 9750/- Near Bannerghatta Road :9845600007

40 X 60 East Facing BDA Site for Sale at Anjanapura Broker Exus Contact 8660800061

Banashankari

BANASHANKARI 6TH STAGE- Surrounding BDA- AVAILABLE/ WANTED 20x30 30x40 40x60, 50x80 SITES. BRINDAVAN ASSOCIATES- 9980863245

BANASHANKARI 6TH Stage, 4th H- Block Near 100 feet Road 20x30 North, to Metro Junction 4th Block, 30x40, North Facing: 9916809188, 9606226222

6TH STAGE, 9th blk, 30x40, West Facing, 98 lacs 40x60, North Facing, 1.98 Cr. Contact 9845259332

Bannerghatta Road

AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

30X40 EF 30x50 NF 40x60 EF BBMP AKatha Akhyanagar, 30x40 Near BGS School Hulimavu: 9341238064

Basaweshwaranagar

***BASAVESHWARANAGAR* 3RD** Stage 3rd Block Good Location 40x60 BDA Site for Sale. Contact: 9945079777

Devanahalli

30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

Hosur Road

KHB, SURYANAGAR, PHASE-III, HIG-1, BLOCK-8, 40*60 SOUTH FACING PLOT, NEAR ADIGONDANAHALLISA LECONTACT: 9845027986

Horamavu

SALE 60X47-2820SFT, B KHATA, SITE HURAMAV, behind NPS school, 2.1Cr Nego. North Facing. 9845291967 9900743700

R T Nagar

SALE 50X80 HOTTEST COMMERCIAL Site On 80 Feet Road R.T.Nagar, Genuine Buyers Only Contact 9900001973

Jayanagar

"JAYANAGAR COMMERCIAL 60x80 Rs.19.20 Crore, Commercial 40x60 Rs.8.40 Crore, only Genuine buyers. "Sri.Ganesh Estate"- 9845286505

JAYANAGAR 4TH 'T'Block 44x130 'A'Katha Site 40' Road Suitable for Apartment Near 4th Block Complex-26,000/-. 9739995042.

JAYANAGAR 2ND-BLOCK 40x60 West Facing Plot For Sale, Near Lalbagh Garden & Metro Station. 73382 19033

Kengeri

SITE SIZE 41*30 North facing 'E' Katha near SMV Layout 2nd block Kengeri, square feet 5,500 rupees. Contact: Venkatesh: 8549802661/ Champa: 9036131070

Kempegowda Layout

KEMPEGOWDA LAYOUT Block 7 Sector A: 30x40 West Facing site for sale. Contact: 6362207844

***NADAPRABHU* KEMPEGOWDA** LAYOUT 1st Block 'K Sector, 30x40 North facing, ₹.6800/- sqft. Contact: 9686469799

BDA NADAPRABHU KEMPEGOWDA LAYOUT KANNALLI 1st Block M- Sector East Face 30x40 Price 7000/- 9845857134

Rajarajeshwari Nagar

RAJARAJESHWARINAGAR BHEL Layout 40x60 2 Bedroom8 Houses, Car Parking for sale. Contact: 9945079777

Vishweshwariah Layout

"VISVESHWARAIAH LAYOUT 9th Block 40x60 West Facing near Ambedkar College Site for Sale 13500/- P.Sft. Final.Contact: 9164089633/ 9663226688"

"50X80 WEST- FACING Site for sale at Vishveshwaraiah Layout 8th Block, Ready to build. 9880031654"

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

"40X60 ALLOTTEE Site near 100ft Road, Park and BDA Complex, 6th Block Vishveshwaraiah Layout. 9379776189"

AVAILABLE BDA Site Vishweshwariah Layout 30×40 8th Block South Facing Good Location Genuine Buyers: 7338688111

BDA SITES SMV 1st Block 30x40, 3rd Block 40x60, 6th Block 80Ft ROAD 50x80: 9964971895

"VISHVESHWARAIAH 1ST Block 30x40 site 40ft Road,South facing, Good Location, for-sale. 9886294610, Brokers Excuse"

Intl Airport Road

30x40 Converted Plots @ **2,00,000/-**
166/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Vidyaranyapura

VIDYARANYAPURA HMT Layout 40X60 North Facing Excellent location BDA Approved Clear Titles For Sale, 9341260828

SITES FOR sale-Vaderhalli, Vidyaranyapura post;DC converted sites with all amenities.Further details call-8296106706 / 9845879279

Whitefield

BDA APPROVED sites for Sale off Whitefield/ Old Madras Road. Ready for registration. Hurry! Call: 9035083224

Kanakpura

CORNER 3500 Sqft Site for Sale at Judicial layout Near kanakapura Main Road, Contact 7892243616

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

HRBR Layout

SALE: HRBR- Near JVVihar, 8-BHK, A-Khata, 24 Hour's Cauvery Water. Contact- 8971767744

Jayanagar

SALE 40X80 West Facing old House 40feet Road Near 4th Block Jayanagar Shopping Complex Call:9900136895

SALE JAYANAGAR 7th Block West 40x60 North Facing old House. 30k Contact Sunil: 9845201710

J P Nagar

J.P.NAGAR 6TH PHASE 22x30 NORTH 4 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

Kumaraswamy Layout

NEW DUPLEX building, BDA property, 900 Land 3200 sqft build-up, 4 BHK nearby 15F Bus Stop for Sale. 9343307910.

Nagarabhavi

"BRAND-NEW 4BHK Triplex House GF 1.shop, 2car parking, fully furnished,all amenities,Sale, RHCS Layout Annapoorneshwari-Nagar, N/E.Corner, Both'Side 40'Feet-Road. 9845463951"

RMV

RMV 2ND stage 80 feet road 50x80 independent house. Rent + Rk Garden 40x60 site and house sale Broker excuse Call 9379933099..

Flat

Basavanagudi

FLAT FOR Sale, New 3 BHK semi furnished 1600 sft in VV Puram. KrishnaMurthy 9845399492

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

1550,1660,2200SFT, 3BHK,1.50cr,1.60Cr/1200Sft, 2BHK Corner Semi-furnished 65L Yelachenahalli Metro:8904210201

Yelahanka

KHB YELAHANKA Vth Phase New Town, S-MIG-B Second floor Flat available for Sale. Price 18 Lakhs. Negotiable. Brokers Excuse. Mob: 9448484697.

Commercial Building

Bannerghatta Road

COMMERCIAL BUILDING FOR SALE 40x60 W/F, 8000 Sqft. Near Vijaya Bank Layout, Lift, Basement Parking, Ground First, Second. 6.60cr. 8095055449.

Real Estate Agents

General

ATTENTION!!! We can assist you to buy, sell and manage any of your properties in Bangalore. We are also professional Property Valuers. T and T Properties, Planning, Marketing, Management, Bangalore-64. Ph:9746635687. Email: tandtgroup87@gmail.com



Commerical

Kengeri

COMMERCIAL PROPERTY For Sale 16500/- Sqf, Ajasent Kengeri Metro Station For Hotel, Theater Kumar 9945119449

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

OFFICE/ GODOWN Available For Rent Second Floor- 5200 Sft, Third Floor- 7000 Sft At Hebbal Bhadrappa layout, Off. Ring Road. Rs.22 Per Sft. Contact: 9448044718

"TOTALLY INDEPENDENT 2BHK Very Spacious House-on 50x70 Busy Main Road @ Banashankari 2nd stage near.BDA Complex Suitable'for Play-Home, Office, Commercial Rent Rs.80,000/-. "AVM Real Estate" 9513666788"

Flats

JAYAMAHAL 2-BHK FLAT WITH CAR PARKING For Rent. Neeladri Mahal, Nandi Durga Road, Contact: 9448257711

MYSORE ROAD AVAILABLE LEASE 1800 Sqft FLAT 3BHK INTERIOR DONE RS. THIRTYONE LAKHS NEGOTIABLE: 9738223432

BUSINESS

Business to Business

Finance

LOAN AGAINST PROPERTY/ BUSINESS/ PROJECTS CONTACT :+91 8754809650

Business Offers

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

AUTOMOTIVE

Four Wheelers Selling

Others

MG COMET EV Car Nov 23 for sale. Run 350 km Expecting 10 lakhs.contact 9341371412

PUBLIC NOTICE

PUBLIC NOTICE

Public are informed that our clients **Sri. Nagaraj Shiva Kumar,** S/o. Nagaraj Ummar and **Smt. Archana** W/o. Nagaraj Shivakumar intends to Purchase the Composite Schedule Property bearing No.3, B-Katha Sl. No. 2324, Khatha No.60/8 & 60/9, BBMP Khatha No. 60/8 & 60/9-3, and Property bearing No.3/1, B-Katha Sl. No. 4534, Khatha No.60/8 & 60/9, BBMP Khatha No. 60/8, 60/9/3/1, situated at Bommanahalli Village, Begur Hobli, Bangalore South Taluk, Bangalore, Now comes under the jurisdiction of BBMP, measuring East to West : 79 Feet and North to South 100 Feet, totally measuring 7900 square feet and bounded on the : **East by :** Private Property, **West by :** Kodichikkanahalli Colony, **North by:** Road, **South by :** Private Property. from its owner Smt. Vijayalakshmi, Sri. K. Parandama Naidu, Sri. K. Kodanda Naidu, Smt. K. Usha Rani, MR. K. Yashwanth and Mrs. Kolla Sirisha, if any persons having any right/interest /Claim over the said property may lodge their objections/claims with documentary evidence within 7 days from the date of this publication, to the undersigned.

K. S. Ravi, ADVOCATE
OFFICE# 53/1, 1th Floor,
Guttahalli Main Road,
D.T. Street, 8th Cross,
Malleshwaram, Bangalore-03
Email:raviksadvocate@gmail.com
Mobile: 99450 00789

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

THE LaLiT — TENDER NOTICE

Sealed tenders are invited on the prescribed form for the supply of following items for the **financial year 2024 - 25.**

Perishable Products (Chapati Cooked Fresh, Cheese (Ind & Imp), Chicken / Poultry, Chinese & Mexican food, Eggs, Fresh Flowers & Plants, Frozen Peas, Corn & Frozen snacks, Fruits & Vegetables Indian, Fruits & Vegetables (Imported & Exotic), Ice Creams, Kulfi & Paan, Ice Cubes & Blocks, Milk & Dairy Products, Mutton, Pork & Tenderloin Fresh, Processed Cold Cuts, Seafood (Fresh & Frozen), Sweets & Snacks, Wazwan), **Groceries & Other Food Products** (Bakery Products, Canned Products, Cookies, Crushes & Syrups, Groceries & Provisions Indian, Imported Groceries), **Housekeeping & Cleaning Products** (Chemicals, Garbage & Butchery Bags, Housekeeping & Cleaning Supplies), Industrial Salt, Kitchen & Catering Supplies, LPG Cylinder, Paper Supply, Tobacco, Charcoal & Firewood, **Engineering Products** (Electricals, Engineering Items & General Hardware, Water Tanker), Fuel Gel, Gas Spare Parts, **General Products** (Candles, Clay Products, General & Office Stationery, Printer Cartridge Refilling, Printed Stationery (Back & Front Collaterals), **Rental** (Utensils, Vehicles, Tent House, Ice Cube & Dish Washing Machine, Water Bottling Plant), **Services** (Chaat/Fruit Counter, Scrap Disposal - Wet & Dry, Gas Burner Cleaning, Audio Visual Hiring, Marble Polisher, Pest Control, Manpower- HK/KST/ Engg/F&B, Events Planner, Motor Rewinding, Computer AMC, Tailoring, Painting Jobs, Façade / Glass Cleaning, Horticulture, Courier, STP, Hood Cleaning, Drain Cleaning, Civil Work, Plumbing Work, Electrical Work, Buffing/Polishing Work).

Particulars of specifications and prescribed form can be obtained from the Purchase Office on any working day between 10.00 to 16.30 hours on **Cash Payment of Rs. 1000/-** for each set [Non-Refundable] from **01st April, 2024** to **15th April, 2024.**

Sealed Tenders will be received by **16.30 hours** on or before **15th April, 2024** at the Purchase Office. Late applications shall not be accepted.

The LaLiT Ashok Bangalore
Kumara Krupa High Grounds,
Bangalore - 560001
Karnataka
Board no : 91 80 68177777
Extension No. : 8072
Mobile No : 9591989829

OTHERS

For Sale

DISCOUNT SALE- All Gym items including 4 Stations integrated Training Machine (imported), party going out of station. Contact: 9845765559/ 9845043282

MORE Classifieds Ads on Subsequent Pages

ಶಾಸಕ ಎಸ್‌.ಟಿ. ಸೋಮಶೇಖರ್‌ಗೆ ಜೆಡಿಎಸ್‌ನ ಜವರಾಯಿಗೌಡ ಸವಾಲು

‘ರಾಜೀನಾಮೆ ನೀಡಿ ಚುನಾವಣೆಗೆ ಬನ್ನಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ, ನಂತರ ನನ್ನನ್ನು ಮುಟ್ಟಲು ಯಾರಿಂದಲೂ ಸಾಧ್ಯವಿಲ್ಲ ಎಂದು ದುರಹಂಕಾರದ ಮಾತನಾಡುವ ಎಸ್‌.ಟಿ. ಸೋಮಶೇಖರ್‌ಗೆ ತಾಕತ್ತಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಗೆ ಬರಲಿ’ ಎಂದು ಯಶವಂತಪುರ ವಿಧಾನಸಭೆ ಕ್ಷೇತ್ರದ ಜೆಡಿಎಸ್‌ ಅಧ್ಯಕ್ಷ ಟಿ.ಎನ್‌. ಜವರಾಯಿಗೌಡ ಸವಾಲು ಹಾಕಿದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಪರವಾಗಿ ಕುಂಬಳಗೋಡುವಿನಲ್ಲಿ ಮತಯಾಚನೆ ಮಾಡಿ ಅವರು ಮಾತನಾಡಿದರು.

ಅಭ್ಯರ್ಥಿ ಶೋಭಾ ಕರಂದ್ಲಾಜೆ ಮಾತನಾಡಿ, ‘ದೇಶದ ರಕ್ಷಣೆ, ಅಭಿವೃದ್ಧಿಗಾಗಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನ ಮಂತ್ರಿಯಾಗಬೇಕು. ಹಿಂದಿನ ಹಲವು ಚುನಾವಣೆಗಳಲ್ಲಿ ಬಿಜೆಪಿ, ಜೆಡಿಎಸ್‌ ಕಾರ್ಯಕರ್ತರು ಮತಗಟ್ಟೆಗಳಲ್ಲಿ ಪರಸ್ಪರ ಹೊಡೆದಾಟ, ಕಿತ್ತಾಟ ನಡೆಸಿದ್ದೀರಿ. ಅದನ್ನೆಲ್ಲ ಮರೆತು ಕೆಲಸ ಮಾಡಿ’ ಎಂದು ಮನವಿ ಮಾಡಿದರು.



ಆಗರದಲ್ಲಿ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಮತಯಾಚನೆ ಮಾಡಿದರು

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಸಿ.ಎಂ. ಮಾರೇಗೌಡ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಹಿಂದುಳಿದ ವಿಭಾಗದ ಪ್ರಧಾನ ಕಾರ್ಯದರ್ಶಿ ಆರ್‌.ಪಿ. ಪ್ರಕಾಶ್‌, ಬಿಜೆಪಿ ಉಸ್ತುವಾರಿ ಸಚ್ಚಿದಾನಂದಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವಿಜಯಕುಮಾರ್‌, ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್‌, ಬೆಂಗಳೂರು ದಕ್ಷಿಣ ತಾಲ್ಲೂಕು ಭೂ ಮಂಜೂರಾತಿ ಸಮಿತಿಯ ಮಾಜಿ ಅಧ್ಯಕ್ಷ ಎ. ಶಿವಕುಮಾರ್‌, ಉತ್ತರಿ ವೆಂಕಟಪ್ಪ, ಬಂಜಾರುಪಾಳ್ಯ ಮಂಜುನಾಥ್‌, ಮಾಗಡಿಯ ಬಿಜೆಪಿ ಮುಖಂಡ ಕೆ.ಆರ್‌. ಪ್ರಸಾದ್‌, ಮೈಲಸಂದ್ರ ಮುನಿರಾಜು, ಪಾಲಿಕೆ ಮಾಜಿ ಸದಸ್ಯರಾದ ರ. ಆಂಜನಪ್ಪ, ವೀಣಾ ನಾಗರಾಜು, ಎನ್‌. ನಂಜುಂಡೇಶ್‌, ಜೆ. ರಮೇಶ್‌, ಅನಿಲ್‌ ಚಳಗೇರಿ, ರಂಗರಾಜು ಮಾತನಾಡಿದರು.

ತುಮಕೂರಿನಿಂದ ಸ್ಪರ್ಧಿಸುವಂತೆ ಗೌಡರಿಗೆ ನಾವು ಹೇಳಿದ್ದಲ್ಲ: ಜಿ. ಪರಮೇಶ್ವರ

ಬೆಂಗಳೂರು: ‘2019ರ ಲೋಕಸಭೆ ಚುನಾವಣೆಯಲ್ಲಿ ತುಮಕೂರಿಗೆ ಎಚ್‌.ಡಿ.ದೇವೇಗೌಡರನ್ನು ನಾವು (ಕಾಂಗ್ರೆಸ್‌) ಕರೆದುಕೊಂಡು ಹೋಗಿ ಸೋಲಿಸಿಲ್ಲ. ದೇವೇಗೌಡರ ಪರವಾಗಿ ಜೆಡಿಎಸ್‌ ಪಕ್ಷದವರೇ ಕೆಲಸ ಮಾಡಲಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ತುಮಕೂರಿನಿಂದ ಸ್ಪರ್ಧಿಸುವಂತೆ ದೇವೇಗೌಡ ಅವರನ್ನು ಯಾರೂ ಕರೆದಿರಲಿಲ್ಲ’ ಎಂದರು.

‘ದೇವೇಗೌಡ ಅವರು ತುಮಕೂರಿನಿಂದ ಸ್ಪರ್ಧಿಸುತ್ತಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದೆ. ನೀವು ಸ್ಪರ್ಧಿಸುತ್ತೀರಾ? ಎಂದು ನಾನು ಆಗ ದೇವೇಗೌಡರನ್ನು ಕೇಳಿದ್ದೆ. ಅದಕ್ಕೆ ಅವರು ನಾನು ಇನ್ನೂ ತೀರ್ಮಾನ ಮಾಡಿಲ್ಲಪ್ಪ. ಬೆಂಗಳೂರು ಉತ್ತರ ಕ್ಷೇತ್ರದಿಂದ ನಿಲ್ಲಲು ತೀರ್ಮಾನ ಮಾಡಿಕೊಂಡಿದ್ದೀನಿ ಎಂದಿದ್ದರು. ಬಳಿಕ ನಮ್ಮ ಹೈಕಮಾಂಡ್‌ ಜೊತೆ ಏನು ಮಾತನಾಡಿಕೊಂಡರು ಎಂಬ ವಿಷಯ ಗೊತ್ತಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ತುಮಕೂರಿನಿಂದ ದೇವೇಗೌಡ ಅವರು ಸ್ಪರ್ಧಿಸುತ್ತಾರೆಂದು ಹೈಕಮಾಂಡ್‌ನಿಂದ ಸೂಚನೆ ಬಂತು. ನಾವೆಲ್ಲ ಪ್ರಾಮಾಣಿಕವಾಗಿ ದೇವೇಗೌಡ ಅವರ ಗೆಲುವಿಗಾಗಿ ಕೆಲಸ ಮಾಡಿದ್ದೇವೆ. ಪ್ರಧಾನಿ ಆಗಿದ್ದವರು ನಮ್ಮ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಅಂದಾಗ ಗೆಲ್ಲಿಸಿಕೊಳ್ಳಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು’ ಎಂದರು.

ಎಚ್‌.ಡಿ. ಕುಮಾರಸ್ವಾಮಿ ಅವರ ಆರೋಗ್ಯದ ವಿಚಾರವಾಗಿ ಶಾಸಕ ರಮೇಶ ಬಂಡಿ ಸಿದ್ದೇಗೌಡ ಅವರು ನೀಡಿದ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಚುನಾವಣೆ ಸಂದರ್ಭದಲ್ಲಿ ಯಾರೊಬ್ಬರೂ ವೈಯಕ್ತಿಕ ವಿಚಾರಗಳನ್ನು ಮಾತನಾಡಬಾರದು. ನಮ್ಮ ಮಾತಿನ ಮೇಲೆ ನಮಗೆ ನಿಯಂತ್ರಣ ಇದ್ದರೆ ಒಳ್ಳೆಯದು’ ಎಂದರು.

‘ವಿದ್ಯಾರ್ಥಿ– ಯುವ ಜನರ ಪ್ರಣಾಳಿಕೆ’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ ಸದಸ್ಯರು ಲೋಕಸಭಾ ಚುನಾವಣೆಗಾಗಿ ‘ವಿದ್ಯಾರ್ಥಿ– ಯುವ ಜನರ ಪ್ರಣಾಳಿಕೆ’ ಬಿಡುಗಡೆ ಮಾಡಿದ್ದು, ‘ಇದನ್ನು ಎಲ್ಲ ಪಕ್ಷಗಳು ಅನುಷ್ಠಾನಗೊಳಿಸಬೇಕು’ ಎಂದು ಆಗ್ರಹಿಸಿದರು.

‘ವಿದ್ಯಾರ್ಥಿ ಯುವಜನರ ಮೇಲೆ ಪರಿಣಾಮ ಬೀರುವ ಶಿಕ್ಷಣ ಮತ್ತು ಉದ್ಯೋಗ ಎಂಬ ಅವಳಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬೇಡಿಕೆಗಳನ್ನು ವಿದ್ಯಾರ್ಥಿ–ಯುವಜನರ ಪ್ರಣಾಳಿಕೆ ಮುಂದಿಟ್ಟಿದೆ. ಈ ಎರಡು ಸಮಸ್ಯೆಗಳ ಮೇಲೆಯೇ ಚುನಾವಣೆಯನ್ನು ಎದುರಿಸಬೇಕು. ಶಿಕ್ಷಣ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಕೊಠಾರಿ ಆಯೋಗದ ಶಿಫಾರಸಿನ ಪ್ರಕಾರ ಜಿಡಿಪಿಯ ಶೇ 6ರಷ್ಟು ಶಿಕ್ಷಣಕ್ಕೆ ಮೀಸಲಿಡಬೇಕು. ಶಿಕ್ಷಣದ ವಿಷಯವನ್ನು ರಾಜ್ಯಪಟ್ಟಿಗೆ ಸೇರಿಸಬೇಕು’ ಎಂದು ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಶನಿವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪಂಗಡ, ಒಬಿಸಿ ಸೇರಿದಂತೆ ಎಲ್ಲ ಸಮುದಾಯ ವಿದ್ಯಾರ್ಥಿಗಳಿಗೆ ಮೀಸಲಾತಿ ಸೌಲಭ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಗುತ್ತಿಗೆ ಆಧಾರದ ನೇಮಕಾತಿ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಬೇಕು. ಅಂಗನವಾಡಿ ಮತ್ತು ಶಾಲೆಗಳನ್ನು ಮುಚ್ಚುವ, ವಿಲೀನಗೊಳಿಸುವ ಪ್ರಯತ್ನಗಳನ್ನು ಕೂಡಲೇ ನಿಲ್ಲಿಸಬೇಕು’ ಎಂದು ಒತ್ತಾಯಿಸಿದರು.

‘ಪ್ರತಿ ಜಿಲ್ಲೆಯಲ್ಲಿ ದಲಿತರು, ಆದಿವಾಸಿಗಳು, ಒಬಿಸಿ ಮತ್ತು ಅಲ್ಪಸಂಖ್ಯಾತರಿಗೆ ಸೌಲಭ್ಯಗಳು ಮತ್ತು ಸೇವೆಗಳನ್ನು ನೀಡುವ ವಸತಿನಿಲಯಗಳನ್ನು ನಿರ್ಮಿಸಬೇಕು. ಎನ್‌ಇಇಟಿ ಮತ್ತು ಜೆಇಇ ಸೇರಿದಂತೆ ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳನ್ನು ರದ್ದುಗೊಳಿಸಬೇಕು. ದೇಶದ ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

ದಲಿತ ವಿದ್ಯಾರ್ಥಿ ಪರಿಷತ್‌, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಸ್ಟೂಡೆಂಟ್ಸ್‌ ಇಸ್ಲಾಮಿಕ್‌ ಆರ್ಗನೈಸೇಷನ್‌, ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಅಂಬೇಡ್ಕರ್‌ ಸ್ಟೂಡೆಂಟ್ಸ್‌ ಅಸೋಸಿಯೇಷನ್‌, ಸ್ಟೂಡೆಂಟ್ಸ್‌ ಕ್ರಿಶ್ಚಿಯನ್‌ ಮೂವ್‌ಮೆಂಟ್‌ ಆಫ್‌ ಇಂಡಿಯಾ, ಸ್ಟೂಡೆಂಟ್ಸ್‌ ಫಾರ್‌ ಪೀಪಲ್ಸ್‌ ಡೆಮಾಕ್ರಸಿ, ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ವಿದ್ಯಾರ್ಥಿ ಮುಖಂಡರು ಪಾಲ್ಗೊಂಡಿದ್ದರು.

ಸರ್ಕಾರಿ ಕಚೇರಿ ಬಳಕೆ ದೂರು ಕ್ರಮಕ್ಕೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ಯ ಪಕ್ಷದ ಮುಖಂಡರನ್ನು ಕಾಂಗ್ರೆಸ್‌ ಸೇರಿಸಿಕೊಳ್ಳುವ ಕಾರ್ಯಕ್ರಮಕ್ಕೆ ಸರ್ಕಾರಿ ಕಟ್ಟಡ ಬಳಸಿಕೊಂಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ವಿರುದ್ಧ ಕ್ರಮ ಜರುಗಿಸುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಬಿಜೆಪಿ ಆಗ್ರಹಿಸಿದೆ.

ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್‌.ವಿ. ದೇಶಪಾಂಡೆ ಅವರೊಂದಿಗೆ ಶಿವಕುಮಾರ್‌ ಅವರು ಭಾಗಿಯಾಗಿರುವ ಪಕ್ಷ ಸೇರ್ಪಡೆ ಕಾರ್ಯಕ್ರಮದ ಫೋಟೊವನ್ನು ‘ಎಕ್ಸ್‌’ನಲ್ಲಿ ಹಂಚಿಕೊಂಡಿರುವ ಬಿಜೆಪಿ, ‘ರಾಜಕೀಯ ಕಾರ್ಯಕ್ರಮಕ್ಕೆ ಸರ್ಕಾರಿ ಕಟ್ಟಡ ಬಳಸಿಕೊಂಡಿರುವವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದೆ.

ಕಾಂಗ್ರೆಸ್‌ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಜೆಡಿಎಸ್‌ನ ನಜ್ಮಾ ಚಿಕ್ಕನೇರಳೆ, ಬಿಜೆಪಿ ಯುವ ಮೋರ್ಚಾದ ರಾಜ್ಯ ಘಟಕದ ಉಪಾಧ್ಯಕ್ಷ ಧೀರಜ್‌ ಪ್ರಸಾದ್‌ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡ ಭಾವಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

‘ಟಿಕೆಟ್‌ ತಪ್ಪಿಸಿದವರ ಬಗ್ಗೆ ಮಾತು ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮಲ್ಲಿ ಒಮ್ಮತ ಮೂಡದ ಕಾರಣ ಅನಿವಾರ್ಯವಾಗಿ ಬೇರೆಯವರಿಗೆ (ಕೆ.ವಿ.ಗೌತಮ್‌) ಟಿಕೆಟ್‌ ಕೊಟ್ಟಿದ್ದಾರೆ. ನಮಗೆ ಟಿಕೆಟ್‌ ತಪ್ಪಿಸಿದವರ ಬಗ್ಗೆ ಮಾತನಾಡುವುದು ಬೇಡ’ ಎಂದು ಆಹಾರ ಸಚಿವ ಕೆ.ಎಚ್‌. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನನ್ನ ಅಳಿಯನಿಗೆ ಟಿಕೆಟ್‌ ಕೈತಪ್ಪಿದ್ದಕ್ಕೆ ಯಾವುದೇ ರೀತಿಯ ಬೇಸರವಿಲ್ಲ. ಪಕ್ಷದ ನಿರ್ಧಾರಕ್ಕೆ ಬದ್ಧನೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ’ ಎಂದರು.



‘ನಾವೆಲ್ಲರೂ ಮುನಿಯಪ್ಪ ಸೇರಿ ಕಾಂಗ್ರೆಸ್‌ ಅಭ್ಯರ್ಥಿ ಗೆಲ್ಲಿಸುವ ಕೆಲಸ ಮಾಡಬೇಕು. ಆದ್ದರಿಂದ, ಅವರೂ (ರಮೇಶ್‌ ಕುಮಾರ್‌ ಬಣ) ಕೆಲಸ ಮಾಡಲಿ, ನಾನು ಕೆಲಸ ಮಾಡುತ್ತೇನೆ. ಅಂತಿಮವಾಗಿ ಕಾಂಗ್ರೆಸ್‌ ಗೆಲ್ಲಬೇಕಲ್ಲವೇ? ಪ್ರಾಮಾಣಿಕ ಕೆಲಸ ಮಾಡುತ್ತೇನೆ’ ಎಂದರು.

‘ವರಿಷ್ಠರು ನನ್ನನ್ನು ಕರೆದು ಮಾತನಾಡಿದ್ದಾರೆ. ಹೈಕಮಾಂಡ್‌ ಸೂಚನೆಯಂತೆ ಸಂತೋಷದಿಂದ ಕೆಲಸ ಮಾಡುತ್ತೇನೆ. ನಾನೂ ಕೇಂದ್ರದಲ್ಲಿ ಕೆಲಸ ಮಾಡಿದ್ದೇನೆ. ಸ್ವಪ್ರತಿಷ್ಠೆಗಳು ಏನೂ ಇಲ್ಲ. ಈ ರೀತಿಯ ಘಟನೆಗಳು ನನಗೆ 2–3 ಬಾರಿ ಆಗಿದೆ. ನಾನು ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲವೆಂದು ಮೊದಲೇ ಹೇಳಿದ್ದೆ’ ಎಂದರು.



ಸಂಗೀತ

‘ಅನ್‌ ಬಾಕ್ಸಿಂಗ್‌ ಬೆಂಗಳೂರು ಹಬ್ಬ’ದ ಭಾಗವಾಗಿ ನ್ಯಾಷನಲ್‌ ಸೆಂಟರ್‌ ಫಾರ್‌ ಪರ್ಫಾರ್ಮಿಂಗ್‌ ಆರ್ಟ್ಸ್‌ (ಎನ್‌ಸಿಪಿಎ) ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಿಟೀಲು ವಾದಕ ಮರಾಟ್‌ ಬಿಸೆಂಗಾಲೀವ್‌ ಅವರ ನಿರ್ದೇಶನದ ಸಿಂಫೋನಿ ಆಫ್‌ ಆರ್ಕೆಸ್ಟ್ರಾ ಇಂಡಿಯಾ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು –ಪ್ರಜಾವಾಣಿ ಚಿತ್ರ

ಕೇರಳಕ್ಕೆ ಪಿ.ವಿ. ಮೋಹನ್ ಎಐಸಿಸಿ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಕೆಪಿಸಿಸಿಯ ಉಪಾಧ್ಯಕ್ಷ ಪಿ.ವಿ. ಮೋಹನ್‌ ಅವರನ್ನು ಕೇರಳ ರಾಜ್ಯದ ಎಐಸಿಸಿಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.



ಕೆಪಿಸಿಸಿ ಬೂತ್‌ ಮಟ್ಟದ ಏಜೆಂಟರ ಸಂಯೋಜನಾ ಮತ್ತು ತರಬೇತಿ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಮೋಹನ್‌, ಇತ್ತೀಚೆಗೆ ನಡೆದ ತೆಲಂಗಾಣ ವಿಧಾನಸಭೆ ಚುನಾವಣೆಯ ಉಸ್ತುವಾರಿ ಆಗಿಯೂ ಕೆಲಸ ಮಾಡಿದ್ದರು.

ಯುವ ಇಂಟಕ್: ಚಂದ್ರಶೇಖರ್ ನೇಮಕ

ಬೆಂಗಳೂರು: ಕೆಪಿಸಿಸಿ ಯುವ ಇಂಟಕ್‌ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಜಿ. ಚಂದ್ರಶೇಖರ್‌ ನೇಮಕಗೊಂಡಿದ್ದಾರೆ.



ವಿಧಾನಪರಿಷತ್‌ ಸದಸ್ಯರ ಸಲೀಂ ಅಹಮದ್‌, ಬಿಎಂಟಿಸಿ ಮಾಜಿ ಉಪಾಧ್ಯಕ್ಷ ವಿ. ಎಸ್‌. ಆರಾಧ್ಯ, ಬಿಬಿಎಂಪಿ ಮಾಜಿ ಸದಸ್ಯ ಮೋಹನ್‌ ಕುಮಾರ್‌ ಮತ್ತು ಯುವ ಇಂಟಕ್‌ ಅಧ್ಯಕ್ಷ ಟಿ.ವೈ. ಅರುಣ್‌ ಅವರು ಚಂದ್ರಶೇಖರ್‌ ಅವರಿಗೆ ಕೆಪಿಎಸ್‌ಸಿ ಯುವ ಇಂಟಕ್‌ ಘಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ನೇಮಕಾತಿ ಆದೇಶ ಪತ್ರ ನೀಡಿದರು.

ಬನ್ನೇರುಘಟ್ಟ ಮುಖ್ಯರಸ್ತೆ ಒಂದು ವರ್ಷ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಕಾಮಗಾರಿಗಾಗಿ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಮೈಕೊ ಸಿಗ್ನಲ್‌ನಿಂದ ಆನೆಪಾಳ್ಯ ಜಂಕ್ಷನ್‌ವರೆಗೆ ರಸ್ತೆಯನ್ನು ಒಂದು ವರ್ಷ ಮುಚ್ಚಲು ನಿರ್ಧರಿಸಲಾಗಿದೆ.

‘ನಮ್ಮ ಮೆಟ್ರೊ’ ಲಕ್ಕಸಂದ್ರ ಸುರಂಗ ನಿಲ್ದಾಣದ ದಕ್ಷಿಣ ಭಾಗದಲ್ಲಿನ ಪ್ರವೇಶ ಕಾಮಗಾರಿ ನಡೆಯಲಿದೆ. ಹೀಗಾಗಿ ಏಪ್ರಿಲ್‌ 1ರಿಂದ ಒಂದು ವರ್ಷದ ಅವಧಿಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಡೇರಿ ಸರ್ಕಲ್‌ ಕಡೆಯಿಂದ ಆನೆಪಾಳ್ಯ ಜಂಕ್ಷನ್‌ ಕಡೆಗೆ ಚಲಿಸುವ ವಾಹನಗಳು ಮೈಕೊ ಸಿಗ್ನಲ್‌ನಲ್ಲಿ ಬಲಕ್ಕೆ ತಿರುಗಿ ಬೋಸ್‌ ಲಿಂಕ್‌ ರಸ್ತೆಯ ಮೂಲಕ ಆಡುಗೋಡಿ ಸಿಗ್ನಲ್‌ ತಲುಪಿ ಎಡಕ್ಕೆ ತಿರುಗಿ ಮುಂದಕ್ಕೆ ಹೋಗಬೇಕು.

ಆನೆಪಾಳ್ಯ ಜಂಕ್ಷನ್‌ನಿಂದ ಡೇರಿ ಸರ್ಕಲ್‌ ಕಡೆಗೆ ಚಲಿಸುವ ವಾಹನಗಳಿಗೆ ಯಾವುದೇ ಸಮಸ್ಯೆ ಇರುವುದಿಲ್ಲ. ಡೇರಿ ಸರ್ಕಲ್‌ನಿಂದ ಶಾಂತಿನಗರ ಕಡೆಗೆ ತೆರಳುವ ವಾಹನಗಳು ವಿಲ್ಸನ್‌ ಗಾರ್ಡನ್‌ನ 7ನೇ ಮುಖ್ಯ ರಸ್ತೆಯಲ್ಲಿ ಎಡಕ್ಕೆ ತಿರುವು ತೆಗೆದುಕೊಳ್ಳಬೇಕು ಎಂದು ಬಿಎಂಆರ್‌ಸಿಎಲ್‌ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.



ಗುಲಾಬಿ ಮಾರ್ಗದ ಆರ್‌–6 ಸುರಂಗ ಮಾರ್ಗದಲ್ಲಿ ಟ್ರ್ಯಾಕ್‌ ಸ್ಲ್ಯಾಬ್‌ ಅಳವಡಿಸುತ್ತಿರುವುದು

ಕಾಳೇನ ಅಗ್ರಹಾರದಿಂದ (ಗೊಟ್ಟಿಗೆರೆ) ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗವು ಅತಿ ಉದ್ದದ ಸುರಂಗ ಮಾರ್ಗವನ್ನು ಹೊಂದಿದೆ. ಒಟ್ಟು 21.26 ಕಿ.ಮೀ. ಮಾರ್ಗದಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದ್ದು, ಕಾಮಗಾರಿಗಳು ನಡೆಯುತ್ತಿವೆ. 2025ರ ಅಂತ್ಯದೊಳಗೆ ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್‌ ಹೊಂದಿದೆ.

ಮುಂಬೈ ರೇಸ್

ಫಾಂಟಾನ ಗೆಲ್ಲುವ ನಿರೀಕ್ಷೆ

ವೆಸ್ಟ್ರನ್‌ ಇಂಡಿಯಾ ರೇಸ್‌ ಹಾರ್ಸ್‌ ಓನರ್ಸ್‌ ಅಸೋಶಿಯೇಷನ್‌ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾಂಟಾನ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3.30ಕ್ಕೆ ಪ್ರಾರಂಭವಾಗಲಿರುದ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್‌: ಫಾಂಟಾನ 6, ಫೆನಾಮ್‌ 4, ಜೂಲಿಯಸ್‌ 1
2ನೇ ರೇಸ್‌: ಏಂಜೆಲೊ 7, ಡ್ರೀಮ್‌ ಅಲೈಯನ್ಸ್‌ 3, ಜೈಂಟ್‌ ಕಿಂಗ್‌ 6
3ನೇ ರೇಸ್‌: ನೈಟ್‌ ಕ್ರುಸಾಡರ್‌ 4, ಓಷನ್‌ 8, ಫಿರಾರ್ಡೆಲ್ಲಿ 2
4ನೇ ರೇಸ್‌: ರಿಕೊಚೆಟ್‌ 1, ಮಾರಿಯಾನ 2, ಗುಡ್‌ ಡೀಡ್ಸ್‌ 6
5ನೇ ರೇಸ್‌: ಮಜಾಲ್‌ 10, ಅಜ್ರಿನಾಝ್‌ 1, ಇನ್‌ ಟು ದಿ ಸ್ಟಾರ್ಮ್‌ 3
6ನೇ ರೇಸ್‌: ಸ್ವಾಲಿನ್‌ 3, ಫೇಬಲ್‌ 7, ಸಿಂಡ್ರೆಲ್ಲಾಸ್‌ ಡ್ರೀಮ್‌ 4
7ನೇ ರೇಸ್‌: ನೀಲಿನಾ 9. ಎಸ್ಪಿರ್‌ 6. ಟೈರಾನ್‌ ಬ್ಲ್ಯಾಕ್‌ 3
8ನೇ ರೇಸ್‌: ಕಾನ್‌ಸ್ಟೇಬಲ್‌ 1, ಎಲೊಕ್ವೆಂಟ್‌ 2, ಫ್ಯಾಸನ್‌ ಐಕಾನ್‌ 8
9ನೇ ರೇಸ್‌: ಬ್ಲ್ಯಾಕ್‌ ಥಂಡರ್‌ 1, ಹೌಸ್‌ ಆಫ್‌ ಲಾರ್ಡ್ಸ್‌ 2, ಬಿಟ್ವೀನ್‌ ಫ್ರೆಂಡ್ಸ್‌ 11

ಉತ್ತಮ ಬೆಟ್‌: ಏಂಜೆಲೊ

ಜಾಕ್‌ಪಾಟ್‌ಗೆ	ಜಾಕ್‌ಪಾಟ್‌ಗೆ	1ನೇ ಟ್ರಿಬಲ್‌	2ನೇ ಟ್ರಿಬಲ್‌	3ನೇ ಟ್ರಿಬಲ್‌
3,4,5,6,7	5,6,7,8,9	1,2,3	6,7,8	7,8,9

ಸಂಕ್ಷಿಪ್ತ ಸುದ್ದಿ

ರೈಲು ನಿಲ್ದಾಣಗಳಲ್ಲಿ ಯುಪಿಐ ಪಾವತಿ ವ್ಯವಸ್ಥೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಒಂದು ಕೌಂಟರ್‌ನಲ್ಲಿ ಕ್ಯೂಆರ್‌ ಕೋಡ್‌ ಆಧಾರಿತ ಯುಪಿಐ ಪಾವತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಶೀಘ್ರದಲ್ಲಿ ಬೆಂಗಳೂರು ವಿಭಾಗದ ಎಲ್ಲ ರೈಲು ನಿಲ್ದಾಣಗಳಿಗೆ ಈ ವ್ಯವಸ್ಥೆ ವಿಸ್ತರಿಸಲಾಗುವುದು ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ರೈಲ್ವೆ ಬೋರ್ಡ್‌ ಅನೇಕ ಸುಧಾರಣೆಗಳನ್ನು ತರಲು ನಿರ್ಧರಿಸಿದ್ದು, ಡಿಜಿಟಲ್‌ ಇಂಡಿಯಾ ಪ್ರೋತ್ಸಾಹಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಕೌಂಟರ್‌ ಟಿಕೆಟ್‌ ಬುಕ್ಕಿಂಗ್‌ ಪ್ರಕ್ರಿಯೆ ಇದರಿಂದ ಸುಲಭಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಪ್ರತಿ ಶುಕ್ರವಾರ ಫೋನ್ ಇನ್

ಬೆಂಗಳೂರು: ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಏಪ್ರಿಲ್‌ ಹಾಗೂ ಮೇ ತಿಂಗಳ ಪ್ರತಿ ಶುಕ್ರವಾರ ಫೋನ್‌ ಇನ್‌ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷರು ತಿಳಿಸಿದ್ದಾರೆ.

ಬೇಸಿಗೆಯಲ್ಲಿ ಉಲ್ಬಣವಾಗುವ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ. ಆದರೂ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ಶುಕ್ರವಾರ ಬೆಳಗ್ಗೆ 9.30ರಿಂದ 10.30ರವರೆಗೆ ನೇರ ಫೋನ್‌ ಇನ್‌ ನಡೆಸಲಾಗುತ್ತದೆ ಎಂದು ಹೇಳಿದ್ದಾರೆ.

ಶನಿವಾರ ನಡೆದ ಫೋನ್‌ ಇನ್‌ ಕಾರ್ಯಕ್ರಮದಲ್ಲಿ ನಾಗರಿಕರು ಹಲವು ಸಮಸ್ಯೆಗಳನ್ನು ಹೇಳಿಕೊಂಡರು. ಈ ಸಮಸ್ಯೆಗಳನ್ನು 24 ಗಂಟೆಯೊಳಗೆ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಸಾಪ: ಸಭಾಂಗಣದ ಬಾಡಿಗೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪರ ಕಾರ್ಯಕ್ರಮಗಳು ಹೆಚ್ಚಾಗಬೇಕೆಂಬ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಭಾಂಗಣಗಳ ಬಾಡಿಗೆಯನ್ನು ಇಳಿಕೆ ಮಾಡಿದೆ.

ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದ ಬಾಡಿಗೆಯನ್ನು ಶನಿವಾರ ಮತ್ತು ಭಾನುವಾರ ಹೊರತುಪಡಿಸಿ ಉಳಿದ ದಿನ ಇಳಿಕೆ ಮಾಡಲಾಗಿದೆ. ಪೂರ್ತಿ ದಿನಕ್ಕೆ ₹ 20 ಸಾವಿರವಿದ್ದ ಬಾಡಿಗೆ, ಸೋಮವಾರದಿಂದ ಶುಕ್ರವಾರದ ವರೆಗೆ ₹ 15 ಸಾವಿರಕ್ಕೆ, ಅರ್ಧ ದಿನಕ್ಕೆ ₹ 10 ಸಾವಿರದಿಂದ ₹7 ಸಾವಿರಕ್ಕೆ ಇಳಿಸಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಇಡೀ ದಿನಕ್ಕೆ ₹ 5,500 ಬಾಡಿಗೆ ಹೊಂದಿದ್ದ ಅಕ್ಕಮಹಾದೇವಿ ಸಭಾಂಗಣದ ಬಾಡಿಗೆಯನ್ನು ₹ 4 ಸಾವಿರಕ್ಕೆ ಇಳಿಸಲಾಗಿದೆ. ಅರ್ಧ ದಿನಕ್ಕೆ ₹3 ಸಾವಿರದಿಂದ ₹ 2 ಸಾವಿರಕ್ಕೆ ಇಳಿಸಲಾಗಿದೆ ಎಂದು ಹೇಳಿದ್ದಾರೆ.

ನವೀಕೃತ ಕುವೆಂಪು ಸಭಾಂಗಣದಲ್ಲಿಯೇ ಕಸಾಪ ಆಡಳಿತ ಕಚೇರಿಯೂ ಕಾರ್ಯನಿರ್ವಹಿಸುವುದರಿಂದ ಸಂಜೆ 5.50ರಿಂದ ರಾತ್ರಿ 9 ಗಂಟೆಯವರೆಗೆ ಬಾಡಿಗೆಗೆ ನೀಡಲಾಗುತ್ತದೆ. ಈ ಅವಧಿಗೆ ₹ 3 ಸಾವಿರ ಬಾಡಿಗೆ ನಿಗದಿಪಡಿಸಲಾಗಿದೆ. ರಜಾ ದಿನ ಮತ್ತು ಭಾನುವಾರ ಅರ್ಧ ದಿನಕ್ಕೆ ₹ 4 ಸಾವಿರ ಹಾಗೂ ಪೂರ್ಣ ದಿನಕ್ಕೆ ₹ 7 ಸಾವಿರ ಪಡೆಯಲಾಗುತ್ತದೆ ಎಂದು ತಿಳಿಸಿದ್ದಾರೆ.

ಕುವೆಂಪು ಸಭಾಂಗಣದ ಆವರಣದಲ್ಲಿ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ಹೊರತಂದ ಹರ್ಮನ್ ಮೊಗ್ಲಿಂಗ್ ಹೆಸರಿನಲ್ಲಿ ಸುಸಜ್ಜಿತ ಸ್ಟುಡಿಯೊ ಸ್ಥಾಪಿಸಲಾಗಿದ್ದು, ಇಲ್ಲಿ ಆನ್‌ಲೈನ್ ಕಾರ್ಯಕ್ರಮಗಳು, ಪತ್ರಿಕಾಗೋಷ್ಠಿ ಮತ್ತು ಸಭೆಗಳನ್ನು ನಡೆಸಬಹುದಾಗಿದೆ. ಈ ಸ್ಟುಡಿಯೊ ಅರ್ಧ ದಿನಕ್ಕೆ ₹ 2 ಸಾವಿರ ಬಾಡಿಗೆ ಹೊಂದಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವರ್ಣಾಹತುಶಾಹಿ ಜೀವಂತ'

'ಮಹಾಡ್ ಸತ್ಯಾಗ್ರಹ' ವಿಚಾರಸಂಕಿರಣದಲ್ಲಿ ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಾಹತುಶಾಹಿ ವ್ಯವಸ್ಥೆ ಕೊನೆಗೊಂಡಿದ್ದರೂ 'ವರ್ಣಾಹತುಶಾಹಿ' (ವರ್ಣಾಶ್ರಮ) ವ್ಯವಸ್ಥೆ ಮುಂದುವರಿದಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಮಹಾಡ್ ಸತ್ಯಾಗ್ರಹ: ಇತಿಹಾಸ ಮತ್ತು ವರ್ತಮಾನದ ಭಾರತ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಅಂಬೇಡ್ಕರ್ ಅವರು ಚೌಡರ್ ಕೆರೆಗೆ ಇಳಿದು ನೀರನ್ನು ಎತ್ತಿ ಹಿಡಿದು ಮಹಾಡ್ ಸತ್ಯಾಗ್ರಹದ ಮೂಲಕ ವರ್ಣಾಶ್ರಮದ ವಿರುದ್ಧ ಸಮರ ಸಾರಿದರು. ಮಹಾತ್ಮ ಗಾಂಧೀಜಿ ಸಮುದ್ರದ ಬದಿಯಲ್ಲಿ ಉಪ್ಪನ್ನು ಎತ್ತಿ ಹಿಡಿದು ಉಪ್ಪಿನ ಸತ್ಯಾಗ್ರಹದ ಮೂಲಕ ವಸಾಹತುಶಾಹಿ ವಿರುದ್ಧ ಸಮರ ಸಾರಿದರು. ಉಪ್ಪಿನ ಸತ್ಯಾಗ್ರಹ ಈಗ ಇತಿಹಾಸವಾಗಿದೆ. ಆದರೆ, ಮಹಾಡ್ ಸತ್ಯಾಗ್ರಹ ಇಂದಿಗೂ ಪ್ರಸ್ತುತವಾಗಿದೆ. ಇದಕ್ಕೆ ಜಡ ಸಂಪ್ರದಾಯವಾದಿಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ತಾರತಮ್ಯ ಮುಂದುವರಿಸಿರುವುದು ಕಾರಣ' ಎಂದು ವಿಶ್ಲೇಷಿಸಿದರು.

'ಕೇಂದ್ರ ಸಚಿವರಾಗಿದ್ದ ಬಾಬು ಜಗಜೀವನ್‌ರಾಂ ದೇವಸ್ಥಾನ ಉದ್ಘಾಟಿಸಿ ತೆರಳಿದ ಮರುಕ್ಷಣವೇ ಶುದ್ಧಗೊಳಿಸಲಾಯಿತು. ಇಂದಿರಾ ಗಾಂಧಿಯವರನ್ನು ಪುರಿ ಜಗನ್ನಾಥ ದೇವಾಲಯಕ್ಕೆ ಬಿಡಲೇ ಇಲ್ಲ. ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಭಾಷಣ ಮಾಡಿದ ಸ್ಥಳವನ್ನು ಶುದ್ಧಗೊಳಿಸಲಾಯಿತು. ಬೆಳಿಗ್ಗೆ ಎದ್ದರೆ ಕೃಷ್ಣನ ನಾಮಸ್ಮರಣೆ ಮಾಡುವ ಜೇಸುದಾಸ್ ಅವರಿಗೆ ಇಲ್ಲಿವರೆಗೆ ಗುರುವಾಯೂರು ದೇವಸ್ಥಾನಕ್ಕೆ ಪ್ರವೇಶ ಸಿಕ್ಕಿಲ್ಲ. ಶಬರಿಮಲೆ ಮಹಿಳೆಯರಿಗೆ ಪ್ರವೇಶ ಸಿಕ್ಕಿಲ್ಲ. ಇವೆಲ್ಲ ಜಡ ಸಂಪ್ರದಾಯ ಮುಂದುವರಿದಿರುವುದಕ್ಕೆ ಸಾಕ್ಷಿ' ಎಂದು ತಿಳಿಸಿದರು.

ಚಿಂತಕ ಬಿ.ಶ್ರೀಪಾದ ಭಟ್ ಮಾತನಾಡಿ, 'ಅಂಬೇಡ್ಕರ್ ಸಾಮಾಜಿಕವಾಗಿ ಎರಡೇ ಚಳವಳಿಗಳನ್ನು ಮಾಡಿದರು. ಚೌಡರ್ ಕೆರೆ ನೀರು ಕುಡಿಯುವ ಮಹಾಡ್ ಸತ್ಯಾಗ್ರಹ ಮತ್ತು ಕಾಳಾರಾಂ ದೇವಸ್ಥಾನ ಪ್ರವೇಶ. ಉಳಿದೆಲ್ಲವೂ ಕಾನೂನಾತ್ಮಕ ಹೋರಾಟಗಳು. ಚೌಡರ್ ಕೆರೆ ಮುಟ್ಟಿದ್ದಕ್ಕಾಗಿ ಹಲ್ಲೆ ಮಾಡಿದವರಲ್ಲಿ ಮುಸ್ಲಿಮರು ಇದ್ದರು. ಯಾಕೆಂದರೆ ಈ ಕೆರೆಯ ನೀರನ್ನು ಮೇಲ್ಜಾತಿಯಿಂದ ಮುಸ್ಲಿಮ್ ಆಗಿ ಮತಾಂತರ ಆದವರು ಮುಟ್ಟಬಹುದಿತ್ತು. ಕೆಳಜಾತಿಯಿಂದ ಮತಾಂತರಗೊಂಡವರು ಮುಟ್ಟುವಂತಿರಲಿಲ್ಲ' ಎಂದು ವಿವರಿಸಿದರು.

ಹೋರಾಟಗಾರ್ತಿ ದು. ಸರಸ್ವತಿ ವಿಷಯ ಮಂಡಿಸಿ, 'ದಲಿತರು ಒಟ್ಟಾಗಿ ಮಾಡಿದ ಮೊದಲ ಬಂಡಾಯದ ಹೋರಾಟವೇ ಮಹಾಡ್ ಸತ್ಯಾಗ್ರಹ. ಭಾರತದ ಮೊದಲ ನಾಗರಿಕ ಹಕ್ಕಿಗಾಗಿ ಹೋರಾಟ' ಎಂದು ಬಣ್ಣಿಸಿದರು.

ದಸಂಸ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಜನಪದ ಅಕಾಡೆಮಿ ನಿಯೋಜಿತ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ವಿ.ಎಲ್. ನರಸಿಂಹಮೂರ್ತಿ ವಿಷಯ ಮಂಡನೆ ಮಾಡಿದರು. ಕೆಐಎಡಿಬಿ ನಿವೃತ್ತ ಅಧಿಕಾರಿ ಟಿ.ಆರ್.ಸ್ವಾಮಿ, ಚಿಂತಕರಾದ ರಮೇಶ್ ಡಾಕುಳಕಿ, ಕಾರಳ್ಳಿ ಶ್ರೀನಿವಾಸ್, ಎಚ್.ಆರ್. ಸ್ವಾಮಿ, ನಿರ್ಮಲಾ, ಚಂದ್ರಶೇಖರಯ್ಯ ಪ್ರತಿಕ್ರಿಯಿಸಿದರು.



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ 'ಮಹಾಡ್ ಸತ್ಯಾಗ್ರಹ: ಇತಿಹಾಸ ಮತ್ತು ವರ್ತಮಾನದ ಭಾರತ' ವಿಚಾರ ಸಂಕಿರಣದಲ್ಲಿ ಸಂವಿಧಾನ ಪೀಠಿಕೆ ಬೋಧಿಸಿದ ಬಾಲಕ ಸಾಯಿರಾಜ್

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಸುಮಾ ಶಾಸ್ತ್ರಿ, ನಾಗೇಶ ಕಾವೆಟಿ, ವೀಣಾ ಶಾಸ್ತ್ರಿ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8.30

ಲತಾಮಾಲ ಅವರ 'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಪುಸ್ತಕ ಬಿಡುಗಡೆ: ಆರ್. ಸುನಂದಮ್ಮ, ಎ.ಆರ್. ವಾಸವಿ, ಕೆ. ಶರೀಫಾ, ಅಧ್ಯಕ್ಷತೆ: ಜಿ. ರಾಮಕೃಷ್ಣ, ಪುಸ್ತಕದ ಕುರಿತು: ಕೆ.ಪಿ. ಸುರೇಶ, ಅತಿಥಿಗಳು: ಶಿವಸುಂದರ್, ಮುಕುಂದರಾವ್, ಆಯೋಜನೆ: ಅಭಿರುಚಿ ಪ್ರಕಾಶನ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ನುಡಿ ಮಿಲನ ಐದು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಸುಧಾಕರನ್ ರಾಮಂತಳಿ, ಅಶೋಕ್ ಪಿನ್ನಮನೇನಿ, ಕಾವೇರಿ ನಂಬೀಸನ್, ವಿವೇಕ್ ಶಾನಭಾಗ, ಉಪಸ್ಥಿತಿ: ಕೇಶವ ಮಳಗಿ, ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಸಿರಿಮೂರ್ತಿ ಕಾಸರವಳ್ಳಿ ಅವರ 'ಶಾಂತಿಧಾಮ' ಪುಸ್ತಕ ಬಿಡುಗಡೆ: ಕೆ.ಎನ್. ಗಣೇಶಯ್ಯ, ಅಧ್ಯಕ್ಷತೆ: ನಿರಂಜನ ವಾನಳ್ಳಿ, ಉಪಸ್ಥಿತಿ: ಗಜಾನನ ಶರ್ಮ, ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಕಲಾಗ್ರಾಮ, ಎನ್.ಜಿ.ಇ.ಎಫ್, ಬಡಾವಣೆ, ನಾಗರಬಾವಿ, ಬೆಳಿಗ್ಗೆ 10

ಬಡಗುತಿಟ್ಟು ಶೈಲಿಯ ಯಕ್ಷಗಾನ ತರಗತಿಯ ಎಂಟನೇ ಬ್ಯಾಚ್ ಆರಂಭ: ಪುರಾಣ ಕಥಾಪಾಠ– ಸುಧಾಕರ ಜೈನ್, ಸ್ಥಳ: ಬಲಮುರಿ ಗಣಪತಿ ದೇವಸ್ಥಾನ, ಸತ್ಯನಾರಾಯಣ ಸ್ವಾಮಿ ಸೇವಾ ಸಮಿತಿ, ಪ್ರೇಮನಗರ, ಬೆಳಿಗ್ಗೆ 10

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: ಗೊ ಗ್ರೀನ್ ಸ್ಯಾಪ್ಲಿಂಗ್ ಪ್ಲಾಂಟಿಂಗ್, ಆಯೋಜನೆ: ಎಐಎಂ, ಸ್ಥಳ: ಸುಕೃಷಿ ಆರ್ಗ್ಯಾನಿಕ್ ಫಾರ್ಮ್, ಗ್ರೀನ್‌ಪಾತ್, ಮರಸರಹಳ್ಳಿ, ನೆಲಮಂಗಲ, ಬೆಳಿಗ್ಗೆ 10.30

ರಾಜಪ್ಪ ದಳವಾಯಿ ಅವರ ಸೇವಾನಿವೃತ್ತಿ ಸಂದರ್ಭದಲ್ಲಿ ಅವರಿಗೆ 'ಶೈಕ್ಷಣಿಕ ಗೌರವ': ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಎಚ್.ಎಲ್. ಪುಷ್ಪ, ಶೇಖ್ ಲತೀಫ್, ಡೊಮಿನಿಕ್, ಅಧ್ಯಕ್ಷತೆ: ಎಸ್.ಎಂ. ಜಯಕರ, ಆಯೋಜನೆ: ಡಾ. ರಾಜಪ್ಪ ದಳವಾಯಿ ಟ್ರಸ್ಟ್, ಸ್ಥಳ: ಪ್ರೊ. ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಪ್ರೇಮ ಸಿ., ಅತಿಥಿಗಳು: ಎಸ್.ಎನ್. ಸುಶೀಲ, ರೇವತಿ ಕಾಮತ, ಪಿ. ಪ್ರವೀಣ್ ಕುಮಾರ್, ಆಯೋಜನೆ: ಅಭಿವ್ಯಕ್ತಿ ಕಲ್ಚರಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಸೋಮದೇವ ಮಹಾಕವಿಯ ಕಥಾಸರಿತ್ಸಾಗರ' ಪುಸ್ತಕ ಬಿಡುಗಡೆ: ಹಂ.ಪ. ನಾಗರಾಜಯ್ಯ, ಪುಸ್ತಕದ ಕುರಿತು: ಎಚ್. ಡುಂಡಿರಾಜ್, ಉಪಸ್ಥಿತಿ: ಡಿ. ರಘುನಾಥ್, ಗೊರೂರು ಗೋವಿಂದರಾಜು, ಆಯೋಜನೆ: ಐಬಿಎಚ್ ಪ್ರಕಾಶನ, ಸ್ಥಳ: ಪಾರ್ಕ್‌ವ್ಯೂ ರೆಸ್ಟೋರೆಂಟ್, ಕೆಎಸ್‌ಐಟಿ ಕಾಲೇಜಿನ ಎದುರು, ರಘುವನಹಳ್ಳಿ, ಬೆಳಿಗ್ಗೆ 10.30

ಜ್ಯೋತಿ ಎಸ್ ಅವರ 'ಜರ್ನಿ ಆಫ್ ಜ್ಯೋತಿ' ಪುಸ್ತಕ ಬಿಡುಗಡೆ: ವಿಜಯಾ ಕಳ್ಳಿಮಠ, ಅಧ್ಯಕ್ಷತೆ: ಚಂದ್ರಶೇಖರ ಆಲೂರು, ಪುಸ್ತಕದ ಕುರಿತು: ವಿ.ಎಸ್. ನಾಯಕ ಬಳಕೂರು, ಅತಿಥಿಗಳು: ಜಯತೀರ್ಥ ಜೋಶಿ, ದೇವಿ ಕಳಸದ, ಉಪಸ್ಥಿತಿ: ರಾಜಕುಮಾರ ಮಡಿವಾಳರ, ಆಯೋಜನೆ: ಅಮೃತ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

'ದೇವಾಲಯಗಳ ಹಿಂದಿನ ವೈಜ್ಞಾನಿಕ ತತ್ವಗಳ ತಳಹದಿ', 'ಅಯೋಧ್ಯೆಯ ಬಾಲ ರಾಮನ ಶಿಲ್ಪರಚನೆಯ ಕಥನ' ಕುರಿತು ಉಪನ್ಯಾಸ: ಜಿ.ಎಲ್. ಭಟ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿಯ ಶತಮಾನೋತ್ಸವ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 11

ಪುಟ್ಟಹೊನ್ನಯ್ಯ ಜಿ.ಎಸ್. ಅವರ 'ಅಂಬೆಗಾಲು', 'ಭಾವಯಾನ' ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಎಂ. ಬೈರೇಗೌಡ, ಅತಿಥಿಗಳು: ಕುಸುಮಾ ಹನುಮಂತರಾಯಪ್ಪ, ಪುಟ್ಟಣ್ಣ, ಎಚ್. ತುಕಾರಾಂ, ಹೊ.ನ. ನೀಲಕಂಠೇಗೌಡ, ಆಯೋಜನೆ: ವಿ.ಪಿ.ಎಸ್. ಗೆಳೆಯರ ಬಳಗ, ಸ್ಥಳ: ವಾಸುದೇವ ಸಭಾಂಗಣ, ಕನ್ಯಾಕುಮಾರಿ ಶಾಲೆ, ಕೆಂಗುಂಟೆ ವೃತ್ತ, ಮಧ್ಯಾಹ್ನ 3

'ಸಂಸ್ಥಾಪನೋತ್ಸವ ಹವ್ಯಕ ವಿಶೇಷ ಪ್ರಶಸ್ತಿ, ಪಲ್ಲ ಪ್ರಶಸ್ತಿ' ಪ್ರದಾನ: 'ಹವ್ಯಕ ವಿಭೂಷಣ' ಪ್ರಶಸ್ತಿ ಪುರಸ್ಕೃತರು: ಎಚ್.ಎಂ. ತಿಮ್ಮಪ್ಪ ಕಲಸಿ, 'ಹವ್ಯಕ ಭೂಷಣ' ಪ್ರಶಸ್ತಿ ಪುರಸ್ಕೃತರು: ಗಣೇಶ್ ಎಲ್. ಭಟ್, ಶಿವಾನಂದ ಕಳವೆ, ಗೋಪಾಲಕೃಷ್ಣ ದೇಲಂಪಾಡಿ, 'ಹವ್ಯಕ ಶ್ರೀ' ಪ್ರಶಸ್ತಿ ಪುರಸ್ಕೃತರು: ಗಿರಿಧರ್ ದಿವಾನ್, ಗಣೇಶ್ ದೇಸಾಯಿ, ಮಂಗಳ ಬಾಲಚಂದ್ರ, 'ಹವ್ಯಕ ಸೇವಾಶ್ರೀ' ಪ್ರಶಸ್ತಿ ಪುರಸ್ಕೃತರು: ಶ್ರೀಕಾಂತ ಹೆಗಡೆ ಅಂತ್ರವಳ್ಳಿ, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಸಂಜೆ 4

ಕಲಾ ಮಂಗಳ ಉತ್ಸವ: ಅತಿಥಿಗಳು: ಅನು ಪ್ರಭಾಕರ್, ಲಕ್ಷ್ಮಿ ಗೋಪಾಲಸ್ವಾಮಿ, ಸತ್ಯನಾರಾಯಣ ರಾಜು, ಷಣ್ಮುಗಂ ಸುಂದರಂ, ಶ್ರೀವತ್ಸ ಶಾಂಡಿಲ್ಯ, ಆಯೋಜನೆ: ಇಂಟರ್ ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5



ಅನು ಪ್ರಭಾಕರ್

'ಡಿ.ವಿ.ಜಿ, ಸಂತ ಶಿಶುನಾಳ ಶರೀಫರು, ಪು.ತಿ.ನ' ಮರೆಯಲಾಗದ ಮಹನೀಯರ ನೆನಪುಗಳು: 'ಸಂತ ಶಿಶುನಾಳ ಶರೀಫ ಪ್ರಶಸ್ತಿ' ಪ್ರದಾನ: ಎಚ್.ಎಸ್. ವೆಂಕಟೇಶಮೂರ್ತಿ, ಪ್ರಶಸ್ತಿ ಪುರಸ್ಕೃತರು: ಕಸ್ತೂರಿ ಶಂಕರ್, ಬಿ.ಕೆ. ಚಂದ್ರಶೇಖರ್, ಪುತ್ತೂರು ನರಸಿಂಹ ನಾಯಕ್, ಎಸ್.ಬಿ. ಶಿವಲಿಂಗಪ್ಪ, ಧ್ವನಿಸಾಂದ್ರಿಕೆ ಬಿಡುಗಡೆ: ಬಿ.ಆರ್. ಲಕ್ಷಣರಾವ್, ಮಹೇಶ ಜೋಶಿ, ಗೀತಗಾಯನ: ವೈ.ಕೆ. ಮುದ್ದುಕೃಷ್ಣ, ಶ್ರೀನಿವಾಸ ಉಡುಪ, ಕಿಕ್ಕೇರಿ ಕೃಷ್ಣಮೂರ್ತಿ, ಸೀಮಾ ರಾಯ್ಕರ್, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಕಹಳೆ ಬಂಡೆ ಉದ್ಯಾನ ವೇದಿಕೆ, ಬಸವನಗುಡಿ, ಸಂಜೆ 5.30



ಬಿ.ಆರ್ ಲಕ್ಷ್ಮಣರಾವ್

'ಅನ್ ಬಾಕ್ಸಿಂಗ್ ಬೆಂಗಳೂರು ಹಬ್ಬ'ದ ಭಾಗವಾಗಿ ವೈವಿಧ್ಯಮಯ ಪಾಶ್ಚಿಮಾತ್ಯ, ಅಂತರರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ: ಒಡಿಸ್ಸಿ ನೃತ್ಯ ಪ್ರದರ್ಶನ: ರತಿಕಾಂತ್ ಮಹಾಪಾತ್ರ ಸೃಜನ್, 'ಪಾಪ್, ರೆಟ್ರೊ, ರಾಕ್ ಎನ್ ರೋಲ್ ಮತ್ತು ಕ್ಲಾಸಿಕ್ ರಾಕ್' ಅಂತರರಾಷ್ಟ್ರೀಯ ಸಂಗೀತ': ಪ್ರಸ್ತುತಿ: ಡೆರೆನ್ ದಾಸ್, ದಿ ಸಿಕ್ಸ್‌ತ್ ಸೆನ್ಸ್ ತಂಡ, ಆಯೋಜನೆ: ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ (ಎನ್‌ಸಿಪಿಎ), ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 6

'ಗುಂಡು ಬಳಗ' ನಾಟಕ ಪ್ರದರ್ಶನ: ನಿರ್ದೇಶನ: ಶಾಂತಕುಮಾರ್, ಅತಿಥಿಗಳು: ರಂಗರಾಮಪ್ಪ, ಗಜೇಂದ್ರ, ಸೌಮ್ಯ, ಚಂದನ್, ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

'ಲಾಕೌಟ್ ಅಲ್ಲ ನಾಕೌಟ್' ನಾಟಕ ಪ್ರದರ್ಶನ: ರಚನೆ: ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ಸ್ಟೇಜ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7.20

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಚನ್ನಪ್ಪ ಪ್ರತಿಷ್ಠಾನದ ಬಹುಮಾನ ಪ್ರಕಟ

ಬೆಂಗಳೂರು: ಎಸ್. ಚನ್ನಪ್ಪ ಪ್ರತಿಷ್ಠಾನವು 2023ನೇ ಸಾಲಿನ ಮಕ್ಕಳ ಸಾಹಿತ್ಯ ಕೃತಿಗಳ ಬಹುಮಾನವನ್ನು ಪ್ರಕಟಿಸಿದ್ದು, ರಾಯಚೂರಿನ ಈರಣ್ಣ ಬೆಂಗಾಲಿ ಅವರ 'ಮೊಸಳೆ ಮತ್ತು ಮಿಂಚುಳ್ಳಿ' ಕೃತಿ ಮೊದಲ ಬಹುಮಾನ ಪಡೆದಿದೆ.

ಗಂಗಾವತಿಯ ಮೈಲಾರಪ್ಪ ಬೂದಿಹಾಳ ಮುಗಿಲ ಹಕ್ಕಿ ಅವರ 'ಬಾರೋ ಕಂದ ಶಾಲೆಗೆ' 2ನೇ ಬಹುಮಾನ ಹಾಗೂ ಬೆಂಗಳೂರಿನ ಗೀತಾ ಶ್ರೀನಿವಾಸನ್ ಅವರ 'ಪುಟಾಣಿಗಳಿಗೆ ಪುಟಕ್ಕೊಂದು ಪುಟ್ಟ ಕಥೆ' ಕೃತಿ 3ನೇ ಬಹುಮಾನ ಪಡೆದಿದೆ ಎಂದು ಪ್ರತಿಷ್ಠಾನ ಪ್ರಕಟಣೆಯಲ್ಲಿ ತಿಳಿಸಿದೆ.

केन्द्रीय विद्यालय, राष्ट्रिय वैमानिक प्रयोगशाला परिसर, बेंगलोर – ५६० ०१७

KENDRIYA VIDYALAYA
NAL CAMPUS BANGALORE-17
(An Autonomous body under Ministry of Education, Govt. Of India)
Tel: 080-25211610, Website: https://nal.kvs.ac.in, E-mail: kvnal05@gmail.com

Admission Notice: 2024-25, BALVATIKA III (OFFLINE)

1. Registration for the admission of Balvatika III will commence at 10.00am on 01/04/2024 (Monday) and will close at 5pm on 15/04/2024(Monday).
2. The Registration forms may be collected from the Vidyalaya office on all working days during Vidyalaya hours.

NOTE: Eligibility

1. The child should be of 5 years old but less than 6 years as on 31/03/2024(Child born on 01st April will also be considered)
2. Maximum age limit is relaxed by two years in case of Children with Special Needs(CwSN)
3. Admission will be given as per priority category and reservation norms as mentioned in Admission Guidelines 2024-25.
4. Admission will not be granted, if wrong and misleading information in the application form is found at the time of scrutiny by the KV.

Sd/- PRINCIPAL

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ನಮೂನೆ–8 ನಿಯಮ 17(2)(ಡಿ)
ಇಪಿ ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ./139/2023–24

1. **ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತುಮಕೂರು ಸಹಕಾರಿಯ ಸುಸ್ತಿದಾರರಾದ (1) ಲೀಲಾವತಮ್ಮ ಅಲಿಯಾಸ್ ಲೀಲಾವತಿ ನಾಗರಾಜ್, ಕೋಂ ಟಿ. ನಾಗರಾಜ್, ನಂ.64/2, ಗುರುಮೂರ್ತಪ್ಪ ಗಾರ್ಡನ್, ಸಾರಕ್ಕಿ ಮುಖ್ಯರಸ್ತೆ, ಶಾಕಾಂಬರಿನಗರ, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು–560078, (2) ಅನಿತ ಎನ್.ರಾಜ್ ಬಿನ್ ಟಿ.ನಾಗರಾಜ್** ನಿಂದ ಬಾಕಿಯಾಗಿರುವ ಬಾಕಿ ಮೊತ್ತ ದಿನಾಂಕ: 05.06.2023ಕ್ಕೆ ಒಟ್ಟು ರೂ. 2,59,54,857/– ರೂಪಾಯಿಗಳ ಸಂದಾಯದ ಬಗ್ಗೆ ಈ ಕೆಳಗೆ ನಮೂದಿಸಲಾದ ಸ್ಥಿರ ಸ್ವತ್ತುಗಳ ಜಪ್ತಿಯನ್ನು 2024ನೇ ಇಸವಿ ಏಪ್ರಿಲ್ ತಿಂಗಳ 15ನೇ ದಿನಾಂಕ ಸೋಮವಾರದಂದು ಬಹಿರಂಗ ಹರಾಜು ಮೂಲಕವಾಗಿ ಅಥವಾ ಹರಾಜನ್ನು ಮುಂದೂಡಲಾದ ದಿನಾಂಕದಂದು **ಸ್ವತ್ತುಗಳು ಇರುವ ಸ್ಥಳದಲ್ಲಿ** ಬಹಿರಂಗ ಹರಾಜನ್ನು ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಹಗಲು 11–00 ಗಂಟೆಗೆ ಪ್ರಾರಂಭವಾಗಿ ಅತ್ಯಧಿಕ ಬಿಡ್ ಕೂಗುವುವವರಿಗೆ ಸ್ವತ್ತನ್ನು ಮೂರು ಸಲಕ್ಕಾಗಿ ಖಾಯಂ ಮಾಡಿ ಕೊಡಲಾಗುವುದು.
2. ಬಿಡ್ಡುದಾರರು ಹರಾಜಿನ ಮೊಬಲಗಿನ ಪೈಕಿ ಅದರ ಶೇಕಡಾ 25ಕ್ಕೆ ಸಮನಾದ ಮೊಬಲಗನ್ನು ಹರಾಜಿನ ಸಮಯದಲ್ಲಿ ಠೇವಣಿ ಇಡತಕ್ಕದ್ದು ಮತ್ತು ಬಿಡ್ಡು ಹಣದ ಉಳಿದ ಮೊಬಲಗನ್ನು ಮಾರಾಟದ ದಿನಾಂಕದಿಂದ 45 ದಿವಸಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ ಅವರು ಇಟ್ಟಿದ್ದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು.
3. ಮೇಲೆ ಹೇಳಿದ ಪ್ರಕಾರ ನಿಗದಿತ ಸಮಯದೊಳಗೆ ಹಣವನ್ನು ಠೇವಣಿ ಇಡದಿದ್ದರೆ ಅಥವಾ ಅಂಥ ಪ್ರಕಾರ ಮೊಬಲಗಿನ ಪೈಕಿ ಉಳಿದ ಮೊಬಲಗನ್ನು ಸಂದಾಯ ಮಾಡದಿದ್ದರೆ ಪ್ರಥಮ ಬಿಡ್ಡುದಾರರ ಸಂಬಂಧದಲ್ಲಿ ಆದ ವೆಚ್ಚ ಅಥವಾ ನಷ್ಟ ಒಳಗೊಂಡಂತೆ, ಆ ಸ್ವತ್ತಿನ ಮರು ಮಾರಾಟಕ್ಕಾಗಿ ಹೊಸ ಅಸೂಚನೆಯನ್ನು ಪ್ರಕಟಿಸಿದ ನಂತರ ಭೂಮಿಗಳನ್ನು ಪುನಃ ಮಾರಾಟ ಮಾಡಲಾಗುವುದು.
4. ಮಾರಾಟದ ಕಾಲದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಪರವಾಗಿಯೇ ಬಿಡ್ಡು ಮಾಡುತ್ತಾರೋ ಅಥವಾ ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುತ್ತಾರೋ ಎಂಬುದನ್ನು ತಿಳಿಸಬೇಕೆಂದು ಕೋರಬಹುದು. ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಆ ಅನ್ಯ ವ್ಯಕ್ತಿಯು ಸ್ವತಃ ಸಹಿ ಮಾಡಿದ ಅಧಿಕಾರ ಪತ್ರವನ್ನು ಹಾಜರು ಮಾಡುವಂತೆ ಕೋರಬಹುದು. ಈ ಪ್ರಕಾರ ಹಾಜರು ಪಡಿಸದೇ ಇದ್ದರೆ ಅವರ ಬಿಡ್ಡನ್ನು ತಿರಸ್ಕರಿಸಬಹುದು.
5. ಸುಸ್ತಿದಾರನಾಗಲೀ ಅಥವಾ ಅವರ ಪರವಾಗಲಿ ಯಾವೊಬ್ಬ ಏಜೆಂಟನಾಗಲೀ ಅಥವಾ ಜಪ್ತಿ ಮಾಡಲಾದ ಸ್ವತ್ತುಗಳ ಸಂಬಂಧದಲ್ಲಿ ಹಿತಾಸಕ್ತಿಯುಳ್ಳ ಕ್ಲೇಮುದಾರನಾಗಲಿ ಅಥವಾ ಯಾರೊಬ್ಬರು ಬಡ್ಡಿ ಮತ್ತು ಇತರ ಖರ್ಚುಗಳ ಸಹಿತ ಪೂರಾ ಮೊಬಲಗನ್ನು ಸಂದಾಯ ಮಾಡಿದರೆ ಹರಾಜನ್ನು ನಿಲ್ಲಿಸತಕ್ಕದ್ದು. ಪರಂತು, ಹಾಗೆ ಸಂದಾಯ ಮಾಡುವುದು ಹರಾಜು ಮಾಡಲು ನಿಗದಿಪಡಿಸಿದ ದಿನಾಂಕದ ಹಿಂದಿನ ದಿನದ ಸೂರ್ಯಾಸ್ತಕ್ಕೆ ಮುಂಚೆಯಾಗಿರತಕ್ಕದ್ದು.
6. ಹರಾಜು ಉಪ ವಿಭಾಗೀಯ ಸಹಕಾರಿಯ ರಿಜಿಸ್ಟ್ರಾರರು ಅದನ್ನು ಖಾಯಂ ಮಾಡುವವರಿಗೆ ಖಾಯಂ ಆಗತಕ್ಕದ್ದಲ್ಲ. ಮಾರಾಟವು ಮುಕ್ತಾಯದ ನಂತರ ಅದರ ಮೇಲಣ ಸ್ಟಾಂಪು ಶುಲ್ಕವನ್ನು ಪಾವತಿ ಮಾಡಿದಲ್ಲಿ ಸದರಿ ಉಪ ವಿಭಾಗದ ಸಹಾಯಕ ರಿಜಿಸ್ಟ್ರಾರನು ಸಹಿ ಹಾಗೂ ಮೊಹರು ಹಾಕಿರುವ ಮಾರಾಟದ ಪ್ರಮಾಣಪತ್ರವನ್ನು ಅವನಿಗೆ ನೀಡತಕ್ಕದ್ದು.
7. ಭೂಮಿಗಳ ವಿವರಣೆಯಲ್ಲಿ ಅಥವಾ ಅವುಗಳ ಅಂದಾಜು ವಿಸ್ತೀರ್ಣ ವಿಷಯದಲ್ಲಿ ತಪ್ಪುಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಸರ್ಕಾರವು ಜವಾಬ್ದಾರಿಯಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು.

1. **ತಾಲ್ಲೂಕು, ಗ್ರಾಮ:** ನಂ.64/2, ಗುರುಮೂರ್ತಪ್ಪ ಗಾರ್ಡನ್, ಸಾರಕ್ಕಿ ಮುಖ್ಯರಸ್ತೆ, ಶಾಕಾಂಬರಿನಗರ, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು–560078,
2. **ಸುಸ್ತಿದಾರನ ಹೆಸರು: ಲೀಲಾವತಮ್ಮ ಅಲಿಯಾಸ್ ಲೀಲಾವತಿ ನಾಗರಾಜ್, ಕೋಂ ಟಿ. ನಾಗರಾಜ್**
3. **ಸುಸ್ತಿದಾರನಿಗೆ ಸೇರಿದ ಸ್ಥಿರ ಸ್ವತ್ತುಗಳ ವಿವರ, ಭೂಮಿಯ ಸ.ನಂ., ಅಂದಾಜು ವಿಸ್ತೀರ್ಣ:** **ಷೆಡ್ಯೂಲ್ ಸ್ವತ್ತಿನ ವಿವರ: ನಗರ ಮತ್ತು ಬಡಾವಣೆ:** ಬೆಂಗಳೂರು ಮಹಾನಗರ, ಸಾರಕ್ಕಿ ಗ್ರಾಮ, ವಾರ್ಡ್ ನಂ.57, ಶಾಕಾಂಬರಿ ನಗರ, ಗುರುಮೂರ್ತಪ್ಪ ಗಾರ್ಡನ್, 5ನೇ ಕ್ರಾಸ್, ಖಾತಾ ಸಂಖ್ಯೆ: 64/2, ಪಿ.ಐ.ಡಿ. ನಂ. 57–64/2–5, ಸ್ವತ್ತಿನ ವಿಸ್ತೀರ್ಣ: ಪೂರ್ವ–ಪಶ್ಚಿಮ: 50 ಅಡಿಗಳು, ಉತ್ತರ– ದಕ್ಷಿಣ: 100 ಅಡಿಗಳು, ಈ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಸೈಟು ನಂ. 64/2/8, ಪಶ್ಚಿಮಕ್ಕೆ: ಸರ್ವೆ ನಂ. 64/2, ಉತ್ತರಕ್ಕೆ: ಸೈಟು ನಂ. 64/2/16, ದಕ್ಷಿಣಕ್ಕೆ: ರಸ್ತೆ.
4. **ತೀರ್ಪು ಮೊಬಲಗು: ರೂ. 2,17,72,799/–**
5. **ಸ್ವತ್ತುಗಳ ಮೇಲೆ ಯಾವುದಾದರೂ ಋಣಗಳು ಇದ್ದ ಪಕ್ಷಕ್ಕೆ ಅವುಗಳ ವಿವರ:** ಸಹಕಾರಿಯ ಸಾಲದ ಋಣಭಾರ ಇರುತ್ತದೆ.

ಷರಾ: ಈ ನೋಟೀಸನ್ನು ಮಾರಾಟದ ಮೂವತ್ತು ದಿನಗಳ ಮುಂಚಿತವಾಗಿಯಾದರೂ ಸಹಾಯಕ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ತಾಲ್ಲೂಕು ಕಛೇರಿಯಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಮತ್ತು ಮಾರಾಟದ ದಿನಾಂಕಕ್ಕೆ ಮುಂಚೆ ನಿರಂತರ ಮೂರು ದಿನಗಳ ಸದರೀ ಗ್ರಾಮದಲ್ಲಿ ಡಂಗೂರ ಸಾರುವ ಮೂಲಕ ಪ್ರಕಟಿಸತಕ್ಕದ್ದು.

ಸಹಿ/– (ಪ್ರೇಮಾನಂದ ಬಿ.ಪಿ.)
ವಸೂಲಾತಿ ಅಧಿಕಾರಿಗಳು (ನಿ–441), ಹಾಗೂ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 04–03–2024

ಮಣ್ಣು ಸಮತಟ್ಟು ಮಾಡುತ್ತಿದ್ದ ವೇಳೆ ಗಲಾಟೆ

ವ್ಯಕ್ತಿ ಕೊಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಮ್ಮಿಗೆಪುರದಲ್ಲಿ ಮಣ್ಣು ಸಮತಟ್ಟು ಮಾಡುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಜೆ.ಸಿ.ಬಿ ಯಂತ್ರದ ಮಾಲೀಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಹೆಮ್ಮಿಗೆಪುರದ ಎಚ್.ಎಸ್. ಲಿಂಗಮೂರ್ತಿ ಕೊಲೆಯಾದ ವ್ಯಕ್ತಿ.

ಲಿಂಗಮೂರ್ತಿ ಅವರ ಸಹೋದರ ಗೋವಿಂದರಾಜು ಎಂಬುವವರು ದೂರು ನೀಡಿದ್ದು, ಹೆಮ್ಮಿಗೆಪುರ ನಿವಾಸಿ ಚಿರಂಜೀವಿ ಅಲಿಯಾಸ್ ಚಿರಿ (40) ಹಾಗೂ ಆತನ ಇಬ್ಬರು ಸಹಚರರನ್ನು ಬಂಧಿಸಲಾಗಿದೆ.

ಕೊಲೆಯಾದ ಲಿಂಗಮೂರ್ತಿ ಮತ್ತು ಅವರ ಸಹೋದರ ಗುತ್ತಿಗೆದಾರರಾಗಿದ್ದರು. ಲಿಂಗಮೂರ್ತಿ ಅವರ ಬಳಿ ಜೆಸಿಬಿ ಯಂತ್ರಗಳಿದ್ದವು. ಹೆಮ್ಮಿಗೆಪುರ ಐರಾ ಸ್ಕೂಲ್ ಪಕ್ಕದ ಖಾಲಿ ಜಾಗದಲ್ಲಿ ಸುರಿದಿದ್ದ ಮಣ್ಣನ್ನು ಶುಕ್ರವಾರ ತಡರಾತ್ರಿ ಲಿಂಗಮೂರ್ತಿ ಜೆಸಿಬಿ ಯಂತ್ರದ ಮೂಲಕ ಮಟ್ಟ ಮಾಡುತ್ತಿದ್ದರು.



ಲಿಂಗಮೂರ್ತಿ

ಆಗ ಸ್ಥಳಕ್ಕೆ ಬಂದಿದ್ದ ಆರೋಪಿಗಳು, 'ಮಣ್ಣನ್ನು ಮಟ್ಟ ಮಾಡುವುದು ಮಾತ್ರವಲ್ಲ, ನೀರು ಹಾಕು. ಇಲ್ಲವಾದರೆ ಧೂಳು ಹೆಚ್ಚಾಗುತ್ತದೆ' ಎಂದು ಗದರಿದ್ದರು.

ಇದಕ್ಕೆ ಲಿಂಗಮೂರ್ತಿ ಪ್ರತಿಕ್ರಿಯಿಸಿ, 'ನೀರು ಹಾಕುವುದು ನಮ್ಮ ಕೆಲಸ ಅಲ್ಲ. ಗುತ್ತಿಗೆ ಪಡೆದುಕೊಂಡ ಕೆಲಸ ಮಾತ್ರ ಮಾಡುತ್ತೇವೆ ಎಂದಿದ್ದಾರೆ. ಇದೇ ವಿಚಾರಕ್ಕೆ ಗಲಾಟೆ ನಡೆದಿದೆ' ಎಂದು ಪೊಲೀಸರು ಹೇಳಿದರು.

ಕಣ್ಣು ದಾನ

ಲಿಂಗಮೂರ್ತಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಂತೆ ವೈದ್ಯರು,'ತೀವ್ರ ರಕ್ತಸ್ರಾವ ಆಗಿರುವುದರಿಂದ ಬದುಕುವುದು ಕಷ್ಟ' ಎಂದು ಹೇಳಿದ್ದರು. ಆಗ ಲಿಂಗಮೂರ್ತಿ, 'ನಾನು ಬದುಕುವುದಿಲ್ಲ ಎಂದಾದರೆ ನನ್ನ ಕಣ್ಣುಗಳನ್ನು ದಾನ ಮಾಡುತ್ತೇನೆ' ಎಂದು ಹೇಳಿದ್ದರು. ಕೆಲ ಹೊತ್ತಿನ ಬಳಿಕ ಲಿಂಗಮೂರ್ತಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಲಿಂಗಮೂರ್ತಿ ಸಹೋದರ ಗೋವಿಂದರಾಜುಗೆ ಕರೆ ಮಾಡಿ ಚಿರಂಜೀವಿ ಗಲಾಟೆ ಮಾಡುತ್ತಿರುವ ವಿಚಾರ ತಿಳಿಸಿ, ಸ್ಥಳಕ್ಕೆ ಬರುವಂತೆ ಕೋರಿದ್ದರು. ಮತ್ತೊಂದೆಡೆ ಗಲಾಟೆ ವಿಕೋಪಕ್ಕೆ ಹೋದಾಗ ಆರೋಪಿಗಳು ಚಾಕುವಿನಿಂದ ಲಿಂಗಮೂರ್ತಿ ಎದೆಗೆ ಇರಿದು ಪರಾರಿಯಾಗಿದ್ದರು'.

'ರಕ್ತದ ಮಡುವಿನಲ್ಲಿ ಬಿದ್ದಿದ್ದ ಲಿಂಗಮೂರ್ತಿ ಅವರನ್ನು ಸ್ನೇಹಿತ ಕುಮಾರ್ ಎಂಬುವರು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಹಾಗೂ ಲಿಂಗಮೂರ್ತಿ ನಡುವೆ ಈ ಹಿಂದೆಯೂ ಗಲಾಟೆ ನಡೆದಿತ್ತು. ಶುಕ್ರವಾರ ರಾತ್ರಿ ಉದ್ದೇಶ ಪೂರ್ವಕವಾಗಿಯೇ ಜೆಸಿಬಿ ಯಂತ್ರದ ಕೆಲಸ ಮಾಡುವ ಸ್ಥಳಕ್ಕೆ ಬಂದು ಚಿರಂಜೀವಿ ಗಲಾಟೆ ಮಾಡಿದ್ದಾನೆ. ಅಲ್ಲದೆ, ಕೊಲೆ ಮಾಡುವ ಉದ್ದೇಶದಿಂದಲೇ ಚಾಕುವನ್ನು ಜತೆಗೆ ತಂದಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆನ್‌ಲೈನ್‌ನಲ್ಲಿ ಸಾಮಗ್ರಿ ಖರೀದಿ'

'ದಿ ರಾಮೇಶ್ವರಂ ಕೆಫೆ' ಸ್ಫೋಟ ಪ್ರಕರಣ: ಬಂಧಿತನ ವಿಚಾರಣೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆ'ಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಬಂಧಿತನಾಗಿರುವ ಶಂಕಿತ ಮುಜಾಮಿಲ್ ಶರೀಫ್‌ನನ್ನು ಏಳು ದಿನ ಕಸ್ಟಡಿಗೆ ಪಡೆದಿರುವ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ವಿಚಾರಣೆ ಮುಂದುವರಿಸಿದೆ.

ತಲೆಮರೆಸಿಕೊಂಡಿರುವ ಶಂಕಿತರಾದ ಅಬ್ದುಲ್ ಮತೀನ್ ಅಹ್ಮದ್ ತಾಹಾ, ಮುಸಾವೀರ್ ಹುಸೇನ್ ಶಾಜೀದ್ ಅವರೊಂದಿಗೆ ಸೇರಿಕೊಂಡು ಮುಜಾಮಿಲ್ ಶರೀಫ್ ಸ್ಫೋಟಕ್ಕೆ ರೂಪಿಸಿದ್ದ ಸಂಚಿನ ಬಗ್ಗೆ ತನಿಖಾ ತಂಡಕ್ಕೆ ಮಹತ್ವದ ಮಾಹಿತಿ ಲಭಿಸಿದ್ದು ತನಿಖೆ ಚುರುಕುಗೊಳಿಸಿದೆ.

'ರಾಮೇಶ್ವರಂಕೆಫೆ' ಬಾಂಬ್‌ಸ್ಫೋಟಕ್ಕೆ ಬೆಂಗಳೂರಿನ ಹೊರವಲಯದಲ್ಲಿ ಶಂಕಿತರು ಐಇಡಿ ಸಿದ್ಧಪಡಿಸಿರುವ ಮಾಹಿತಿ ಸಿಕ್ಕಿದೆ. ಸ್ಫೋಟಕ್ಕೆ ಬಳಸಲು ಬೇಕಾದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ₹4,500ರಿಂದ ₹5 ಸಾವಿರವನ್ನು ಶಂಕಿತರು ವ್ಯಯಿಸಿದ್ದರು. ಬಾಂಬ್ ತಯಾರಿಸಲು ಸುಮಾರು ಎರಡರಿಂದ ಮೂರು ತಿಂಗಳು ತೆಗೆದುಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ಬಾಂಬ್ ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳ ಪೈಕಿ ಕೆಲವನ್ನು ಆನ್‌ಲೈನ್ ಮೂಲಕವೇ ಶಂಕಿತರು ಖರೀದಿಸಿದ್ದರು. ಡೆಟೋನೇಟರ್, ಟೈಮರ್, ಬ್ಯಾಟರಿ, ರಂಜಕವನ್ನು ಆನ್‌ಲೈನ್ ಮೂಲಕ ಖರೀದಿಸಿದ್ದರೆ, ನಟ್, ಬೋಲ್ಟ್, ಕೆಲವು ವೈಯರ್‌ಗಳನ್ನು ಅಂಗಡಿಯಲ್ಲಿ ಖರೀದಿಸಿದ್ದರು. ಖರೀದಿಸಿದ ಕಚ್ಚಾ ವಸ್ತುಗಳನ್ನು ಮುಜಾಮಿಲ್ ಶರೀಫ್, ಬಾಂಬ್ ತಯಾರಿಸುತ್ತಿದ್ದ ಅಬ್ದುಲ್‌ಮತೀನ್ ಅಹ್ಮದ್ ತಾಹ ಮತ್ತು ಮುಸಾವೀರ್ ಹುಸೇನ್ ಶಾಜೀದ್‌ಗೆ ನೀಡುತ್ತಿದ್ದ ಎಂಬ ಶಂಕೆ ವ್ಯಕ್ತವಾಗಿದೆ' ಎಂದು ಮೂಲಗಳು ಹೇಳಿವೆ.

ಕೆಪಿಎಸ್ಸಿ: ಕಿರಿಯ ಎಂಜಿನಿಯರ್‌ಗಳ ನೇಮಕಾತಿ ಆಯ್ಕೆ ಪಟ್ಟಿಯೇ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಚೇರಿಯಲ್ಲಿದ್ದ ಕಿರಿಯ ಎಂಜಿನಿಯರ್‌ಗಳ ನೇಮಕಾತಿ ಆಯ್ಕೆ ಪಟ್ಟಿ ನಾಪತ್ತೆಯಾಗಿದೆ' ಎಂದು ಆಯೋಗದ ಸಹಾಯಕ ಕಾರ್ಯದರ್ಶಿ ಜೆ.ರಾಘವೇಂದ್ರ ಅವರು ದೂರು ನೀಡಿದ್ದಾರೆ.

'ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಗೆ ಮಾರ್ಚ್ 22ರಂದು ದೂರು ನೀಡಲಾಗಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಕಿರಿಯ ಎಂಜಿನಿಯರ್‌ಗಳ ನೇಮಕಾತಿಗೆ 2016ರ ಸೆಪ್ಟೆಂಬರ್ 24ರಂದು ಪರೀಕ್ಷೆ ನಡೆದಿತ್ತು. ಅದರ ನೇಮಕಾತಿಗೆ ಸಂಬಂಧಿಸಿದ ಕಡತ ಈಗ ನಾಪತ್ತೆಯಾಗಿದೆ'.

'2018ರ ನವೆಂಬರ್ 22ರಂದು ಪ್ರಕಟಿಸಿದ್ದ ಹೆಚ್ಚುವರಿ ಆಯ್ಕೆಪಟ್ಟಿ ಸಂಬಂಧ ಎಚ್.ಡಿ. ವಿವೇಕಾನಂದ ಎಂಬುವರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಆದೇಶದಂತೆ ಕೆಪಿಎಸ್‌ಸಿ ಗೋಪ್ಯ ಶಾಖೆ-3ರಲ್ಲಿ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗಿತ್ತು. ಈ ವರ್ಷದ ಜನವರಿ 22ರಂದು ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಕಡತ ಸ್ವೀಕರಿಸಿದ್ದ ಕಡತ ನಾಪತ್ತೆಯಾಗಿದೆ ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಆಯೋಗದ ಕಚೇರಿಯ ಎಲ್ಲಾ ಶಾಖೆಗಳಲ್ಲೂ ಕಡತಕ್ಕಾಗಿ ಶೋಧ ನಡೆಸಲಾಗಿದೆ. ಪತ್ತೆಯಾದಲ್ಲಿ ಶಾಖೆ-2ಕ್ಕೆ ತಲುಪಿಸಲು ಸಿಬ್ಬಂದಿಗೆ ಸೂಚಿಸಲಾಗಿತ್ತು. ಆಯೋಗದ ಸಿಬ್ಬಂದಿ ಎಲ್ಲೆಡೆ ಶೋಧ ನಡೆಸಿದ್ದರೂ ಕಡತ ಸಿಕ್ಕಿಲ್ಲ' ಎಂದು ದೂರಿನಲ್ಲಿ ಹೇಳಲಾಗಿದೆ.

'ಆಯೋಗದ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ನಿರ್ದಿಷ್ಟವಾಗಿ ಯಾರ ಹೆಸರು ಉಲ್ಲೇಖಿಸಿ ದೂರು ನೀಡಿಲ್ಲ. ಪ್ರಕರಣ ಸಂಬಂಧ ಆಯೋಗದಿಂದ ಎಲ್ಲ ಮಾಹಿತಿ ಕೇಳಲಾಗಿದೆ. ಕಡತ ಇನ್ನೂ ಲಭ್ಯವಾಗಿಲ್ಲ. ತನಿಖೆ ಮುಂದುವರಿದಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಎಚ್. ಟಿ.ಶೇಖರ್ ತಿಳಿಸಿದ್ದಾರೆ.

ಪತ್ರಕರ್ತೆಗೆ ಹೊಡೆದಿದ್ದ ಪತ್ರಕರ್ತ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ನಾಮಪತ್ರ ಸಲ್ಲಿಸುವ ದಿನ (ಗುರುವಾರ) ಪಿಟಿಐ ವರದಿಗಾರ್ತಿ ಎಲಿಜಬೆತ್ ಕುರಿಯನ್ ಅವರ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಎಎನ್‌ಐ ಪತ್ರಕರ್ತ ಕೆ.ಪಿ. ರಾಘವೇಂದ್ರ ರಾವ್ ಅವರನ್ನು ರಾಮನಗರಪುರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬೆಂಗಳೂರಿನಿಂದ ಶನಿವಾರ ಬೆಳಿಗ್ಗೆ ರಾಘವೇಂದ್ರ ಅವರನ್ನು ವಿಚಾರಣೆಗೆಂದು ರಾಮನಗರಕ್ಕೆ ಕರೆಸಿದ್ದ ಪೊಲೀಸರು, ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿದ ನಂತರ ಬಿಡುಗಡೆ ಮಾಡಲಾಯಿತು.

ನಟ ಡೇನಿಯಲ್ ಬಾಲಾಜಿ ನಿಧನ

ಚೆನ್ನೈ (ಪಿಟಿಐ): ತಮಿಳಿನ ನಟ ಡೇನಿಯಲ್ ಬಾಲಾಜಿ (48) ಹೃದಯಾಘಾತದಿಂದ ಶನಿವಾರ ನಿಧನರಾದರು. ಇವರು ಕನ್ನಡದ 'ಕಿರಾತಕ' ಸಿನಿಮಾದಲ್ಲಿ ನಟಿಸಿದ್ದರು.



ಬಾಲಾಜಿ

ಬಾಲಾಜಿ ತಿರುವನ್ಮಿಯುರ್‌ನಲ್ಲಿ ವಾಸವಿದ್ದರು. ತೀವ್ರ ಎದೆನೋವು ಕಾಣಿಸಿದ್ದರಿಂದ ಅವರನ್ನು ಕೊಟ್ಟಿವಕ್ಕಂನಲ್ಲಿರುವ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಟ ಯಶ್ ಅವರ 'ಕಿರಾತಕ' ಸಿನಿಮಾದಲ್ಲಿ ಬಾಲಾಜಿ ತಮ್ಮ ಪಾತ್ರ ಮುಖೇನ ಕನ್ನಡಿಗ ಅಭಿಮಾನಿಗಳ ಮನಗೆದ್ದಿದ್ದರು. 'ಚಿಂತಿ' ಎಂಬ ತಮಿಳು ಧಾರಾವಾಹಿಯಲ್ಲಿ ಡೇನಿಯಲ್ ಪಾತ್ರ ನಿರ್ವಹಿಸಿದ ಬಳಿಕ ಡೇನಿಯಲ್ ಎಂದೇ ಖ್ಯಾತರಾದರು.



ಪ್ರಶಸ್ತಿ ಪ್ರದಾನ

ಆದರ್ಶ ಸುಗಮ ಸಂಗೀತ ಅಕಾಡೆಮಿಯು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಕಲಾವಿದೆ ಮಾಲತಿ ಶರ್ಮ ಅವರಿಗೆ 'ಕನ್ನಡ ನಿತ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ಗಾಯಕರಾದ ಕಿಕ್ಕೇರಿ ಕೃಷ್ಣಮೂರ್ತಿ, ನಗರ ಶ್ರೀನಿವಾಸ ಉಡುಪ, ಅಪ್ಪಗೆರೆ ತಿಮ್ಮರಾಜು, ಕಲಾವಿದರಾದ ಜಯರಾಂ, ಜಯಕುಮಾರ್, ಸುದರ್ಶನ್, ಕಾರ್ತಿಕ್, ಶಿವಶಂಕರ್ ಪಾಲ್ಗೊಂಡಿದ್ದರು.

ಬಿಟ್ ಕಾಯಿನ್: ನಿರೀಕ್ಷಣಾ ಜಾಮೀನಿಗೆ ಅಧಿಕಾರಿಗಳ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಟ್ ಕಾಯಿನ್ ವರ್ಗಾವಣೆ, ಹ್ಯಾಕಿಂಗ್ ಮತ್ತು ಪಾಸ್‌ವರ್ಡ್ ಬದಲಾಯಿಸಿದ ಆರೋಪದಡಿ ತಲೆ ಮರೆಸಿಕೊಂಡಿರುವ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಎಸ್‌ಪಿ ಶ್ರೀಧರ್ ಕೆ. ಪೂಜಾರ್ ಮತ್ತು ಯಲಹಂಕ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಆರ್. ಚಂದ್ರಧರ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಮತ್ತೊಬ್ಬ ಪೊಲೀಸ್ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್ ಬಾಬು ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ.

ಪೂಜಾರ್ ಮತ್ತು ಚಂದ್ರಧರ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರ ಏಕಸದಸ್ಯ ನ್ಯಾಯಪೀಠ ಏಪ್ರಿಲ್ 1ರಂದು ವಿಚಾರಣೆ ನಡೆಸಲಿದೆ.

ಎಫ್‌ಐಆರ್ ರದ್ದು ಕೋರಿ ಡಿ.ಎಂ.ಪ್ರಶಾಂತ್ ಬಾಬು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ನ್ಯಾಯಪೀಠ ಏಪ್ರಿಲ್ 18ಕ್ಕೆ ವಿಚಾರಣೆ ನಡೆಸಲಿದೆ.

'ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿದ್ದ ಶ್ರೀಧರ್ ಪೂಜಾರ್, ಚಂದ್ರಧರ, ಲಕ್ಷ್ಮಿಕಾಂತಯ್ಯ, ಪ್ರಶಾಂತ್ ಬಾಬು ಸೇರಿದಂತೆ ಕೆಲವು ಅಧಿಕಾರಿಗಳು ಆರೋಪಿಗಳಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮತ್ತು ರಾಬಿನ್ ಖಂಡೇಲ್‌ವಾಲ ಅವರನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಿಕೊಂಡು ಜಿಸಿಐಡಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಂತೋಷ್ ಕುಮಾರ್ ನೆರವಿನಿಂದ ಹ್ಯಾಕಿಂಗ್, ಬಿಟ್ ಕಾಯಿನ್‌ಗಳ ವರ್ಗಾವಣೆ ಮತ್ತು ಪಾಸ್‌ವರ್ಡ್ ಬದಲಾವಣೆ ಮಾಡಿದ್ದಾರೆ' ಎಂಬ ಆರೋಪ ಎದುರಿಸುತ್ತಿದ್ದಾರೆ.

ಅಪಘಾತ: ಬೈಕ್ ಸವಾರ ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಮಿಳುನಾಡಿನ ಈರೋಡ್ ನಿವಾಸಿ ಪ್ರಭು (30) ಮೃತಪಟ್ಟ ಬೈಕ್ ಸವಾರ.

'ನಕಲಿ ಟಿಪ್ಪಣಿ' ಸೃಷ್ಟಿ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್‌ಎಚ್‌ಎಂ ಒಳಗುತ್ತಿಗೆ ನೌಕರರನ್ನು ಕಾಯಂ ಮಾಡುವಂತೆ 'ನಕಲಿ ಟಿಪ್ಪಣಿ'ಯೊಂದನ್ನು ತಯಾರಿಸಿ ರವಾನೆ ಮಾಡಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಅವರ ಆಪ್ತ ಕಾರ್ಯದರ್ಶಿ ಸಿದ್ದೇಶ್ ಪೊತಲಕಟ್ಟಿ ಅವರು ದೂರು ನೀಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ದೂರಿನಲ್ಲಿ ಏನಿದೆ?: 'ನಕಲಿ ಟಿಪ್ಪಣಿ ಸೃಷ್ಟಿಸಿರುವುದು ಮಾರ್ಚ್ 16ರಂದು ಆಪ್ತ ಶಾಖೆಯ ಗಮನಕ್ಕೆ ಬಂದಿತ್ತು. ಆ ಕಾಗದಕ್ಕೆ ನಾನು ಸಹಿ ಮಾಡಿಲ್ಲ. ಲೆಟರ್‌ಹೆಡ್ ಸಹ ಶಾಖೆಗೆ ಸಂಬಂಧಿಸಿದ್ದು ಅಲ್ಲ' ಎಂದು ಸಿದ್ದೇಶ್ ಹೇಳಿದ್ದಾರೆ.

'ಮುಖ್ಯಮಂತ್ರಿ ಆದೇಶದ ಮೇರೆಗೆ ಎನ್‌ಎಚ್‌ಎಂ ಒಳಗುತ್ತಿಗೆ ನೌಕರರನ್ನು ಕಾಯಂ ಮಾಡುವಂತೆಯೂ ಹಾಗೂ ಎನ್‌ಎಚ್‌ಎಂ ನೌಕರರ ಸೇವೆ ಅಗತ್ಯ, ವಿಶೇಷ ಪ್ರಕರಣ ಎಂದು ಪರಿಗಣಿಸಿ ಎನ್‌ಎಚ್‌ಎಂ ನೌಕರರ ಸಂಘದ ಮನವಿಯನ್ನು ಪರಿಶೀಲಿಸಬೇಕು ಎಂದು ನಕಲಿ ಟಿಪ್ಪಣಿಯಲ್ಲಿ ಹೇಳಲಾಗಿದೆ. ಅಲ್ಲದೇ, ನೌಕರರ ಸೇವೆ ಕಾಯಂ ಮಾಡಲು ಎಲ್ಲ ಇಲಾಖೆಗಳಿಂದ ಸೂಕ್ತ ಪ್ರಸ್ತಾವನೆ ಹಾಗೂ ಅನುಮೋದನೆ ಪಡೆದು ಕಡತ ಮಂಡಿಸಲು ಆದೇಶಿಸಿದೆ ಎಂದು ಟಿಪ್ಪಣಿಯಲ್ಲಿ ದಾಖಲಿಸಲಾಗಿದೆ. ಈ ಕಾಗದವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆಗೂ ರವಾನೆ ಮಾಡಲಾಗಿದೆ'.

'ನೌಕರರ ಕಾಯಂ ಮಾಡುವ ಯಾವುದೇ ಪತ್ರ ಹಾಗೂ ಮನವಿಯನ್ನು ನಮ್ಮ ಶಾಖೆಯಲ್ಲಿ ಸ್ವೀಕರಿಸಿಲ್ಲ ಅಥವಾ ಸಂಘದ ಸದಸ್ಯರೂ ಸಹ ಶಾಖೆಗೆ ಬಂದಿಲ್ಲ. ಪ್ರತಿಯೊಂದು ಪತ್ರ, ಟಿಪ್ಪಣಿ, ಮನವಿಗಳನ್ನು ಇ–ಆಫೀಸ್ ತಂತ್ರಾಂಶದ ಮೂಲಕವೇ ರವಾನೆ ಮಾಡಲಾಗುತ್ತದೆ. ಇ-ತಂತ್ರಾಂಶ ವಿಲ್ಲದ ಕಚೇರಿಗೆ ಇ–ಮೇಲ್ ಮೂಲಕ ರವಾನೆ ಮಾಡಲಾಗುತ್ತದೆ. ಶಾಖೆಯಲ್ಲಿ ಟಿಪ್ಪಣಿ (ಆಂತರಿಕ) ಎಂಬ ಶಬ್ದವನ್ನು ಬಳಕೆ ಮಾಡುವುದಿಲ್ಲ. ಟಿಪ್ಪಣಿ ಎಂಬ ಶಬ್ದ ಮಾತ್ರ ಬಳಕೆ ಮಾಡುತ್ತೇವೆ. ಸುಳ್ಳು ಕಾಗದ ಸೃಷ್ಟಿಸಿ ರವಾನೆ ಮಾಡಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

ಜಲಕ್ಷಾಮದಲ್ಲಿ ವನ್ಯಲೋಕ





ನಾಗರಹೊಳೆಯಲ್ಲಿ ಬರಿದಾಗಿರುವ ದೊಡ್ಡಪ್ಪನ ಕಟ್ಟೆ ಕೆರೆ

ವನ್ಯಜೀವಿ ವಲಯ	ಕೆರೆಗಳು	ಬತ್ತಿರುವ ಕೆರೆಗಳು
ಕಾರ್ಕಳ	19	05
ಬೆಳ್ತಂಗಡಿ	16	01
ಕೆರೆಕಟ್ಟೆ	22	05
ಕುದುರೆಮುಖ	19	01
ಸೋಮೇಶ್ವರ	22	03
ಆಗುಂಬೆ	29	08
ಸಿದ್ಧಾಪುರ	24	05
ಕೊಲ್ಲೂರು	25	06
ಕೆ.ಗುಡಿ	71	22
ಪುಣಜನೂರು	52	21
ಕೊಳ್ಳೇಗಾಲ	28	11
ಯಳಂದೂರು	73	19
ಬೈಲೂರು	37	14
ನಾಗರಹೊಳೆ	269	33

ಒಂದನೇ ಪುಟದಿಂದ..

ಮತ್ತೊಂದೆಡೆ, ಅರಣ್ಯ ಇಲಾಖೆಯೂ ಹಲವೆಡೆ ಇಂಥದ್ದೇ ಪ್ರಯತ್ನದಲ್ಲಿದೆ.

ನೀರಿಗಾಗಿ ಪ್ರಾಣಿಗಳು ಜಮೀನಿಗೆ ನುಗ್ಗುವ ಆತಂಕ ರೈತರನ್ನು ಆವರಿಸಿರುವಾಗಲೇ, ಕಾಡಿನ ಕೆರೆ ಕಟ್ಟೆಗಳಿಗೆ ಅರಣ್ಯ ಸಿಬ್ಬಂದಿ ಟ್ಯಾಂಕರ್ ನೀರು ಹರಿಸುತ್ತಿದ್ದಾರೆ. ಕೊಳವೆಬಾವಿ ಕೊರೆದು, ಕಾಂಕ್ರೀಟ್ ತೊಟ್ಟಿ ನಿರ್ಮಿಸಿ ನೀರು ತುಂಬಿಸುತ್ತಿದ್ದಾರೆ. ಆದರೆ, ಸನ್ನಿವೇಶ 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತಾಗಿದೆ.

ಡಾ.ಅನಿಲ್ ಮಲ್ಹೋತ್ರಾ ಹಾಗೂ ಅವರ ಪತ್ನಿ ಪಮೇಲಾ ಮಲ್ಹೋತ್ರಾ ಅವರು ಸ್ಥಾಪಿಸಿದ್ದ 'ದೇಶದ ಮೊದಲ ಖಾಸಗಿ ಕಾಡು' ಎಂಬ ಹೆಗ್ಗಳಿಕೆ ಪಾತ್ರವಾಗಿರುವ ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನ ತೆರಾಲು ಗ್ರಾಮದ 250 ಎಕರೆಯಷ್ಟು 'ಸಾಯ್ ಸಾಂಚ್ಯುರಿ' (ಸೇವ್ ಅನಿಮಲ್ ಇನಿಷಿಯೇಟಿವ್) ಯಲ್ಲಿ ಹರಿಯುತ್ತಿದ್ದ ಜಲಧಾರೆಗಳೂ ಬತ್ತಿಹೋಗಿವೆ. ಮಳೆಯಾಗದಿದ್ದರೆ ತೊರೆ ಸಂಪೂರ್ಣ ಬತ್ತುವ ದಿನಗಳು ದೂರವಿಲ್ಲ.

ಬೇಸಿಗೆ ಯಾರಿಗೂ ಹೊಸತಲ್ಲ. ಆದರೆ, ಸತತ ನಾಲ್ಕು ವರ್ಷ ಬಿದ್ದ ವರ್ಷಧಾರೆಯ ನಡುವೆಯೂ ಮುಂಗಾರು ಕೈಕೊಟ್ಟು, ಎಲ್ಲೆಡೆ ಕೆರೆ, ಕಟ್ಟೆಗಳು ಒಣಗಿವೆ. ವನ್ಯಜೀವಿಗಳು ವಲಸೆ ಹೋಗುತ್ತಿವೆ. ಕಾಡಂಚಿನ ಪ್ರದೇಶಗಳ ತೋಟಗಳಿಗೆ ಲಗ್ಗೆ ಇಡುತ್ತಿವೆ. ದಿನಕ್ಕೆ ಹತ್ತಾರು ಕಿಲೋಮೀಟರ್ ಅಲೆಯುವ ಆನೆಗಳು ಕಾಡಿನಲ್ಲಿ ನೀರಿಲ್ಲದೆ ಊರಿನತ್ತ ತಿರುಗಿವೆ. ಎರಡೂವರೆ ತಿಂಗಳಿಂದ ಕಾಡಾನೆ ದಾಳಿಗೆ ಸಿಲುಕಿ ಕೊಡಗಿನಲ್ಲಿ ಮೂವರು ಮೃತಪಟ್ಟಿದ್ದಾರೆ, ನಾಲ್ವರು ಗಾಯಗೊಂಡಿದ್ದಾರೆ.

ಅರಣ್ಯದಲ್ಲಿ ಕಾಂಕ್ರೀಟ್ ತೊಟ್ಟಿ

ಧಾರವಾಡ, ಹಾವೇರಿ, ವಿಜಯನಗರ, ಗದಗ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಶಿರಸಿ ಭಾಗದ ಕಾಡಿನೊಳಗೆ 28 ಕಾಂಕ್ರೀಟ್ ತೊಟ್ಟಿ ನಿರ್ಮಿಸಿ, ಟ್ಯಾಂಕರ್ ಮೂಲಕ ನೀರು ತುಂಬಿಸಲಾಗಿದೆ. 83 ಕೆರೆ, ಹೊಂಡಗಳಿಗೆ ನೀರು ತುಂಬಿಸಲಾಗುತ್ತಿದೆ. 'ಗದಗ ಜಿಲ್ಲೆಯ ಕಪ್ಪತಗುಡ್ಡ ಹಾಗೂ ಮುಂಡರಗಿ ತಾಲ್ಲೂಕಿನ ಅರಣ್ಯದಲ್ಲಿ 30ಕ್ಕೂ ಹೆಚ್ಚು ಕೊಳಗಳನ್ನು ನಿರ್ಮಿಸಿ, 15 ದಿನಕ್ಕೊಮ್ಮೆ ಟ್ಯಾಂಕರ್ ನೀರು ತುಂಬಿಸುತ್ತಿದ್ದೇವೆ. ಯಾವ ಪ್ರಾಣಿಯೂ ಕುಡಿಯುವ ನೀರಿನ ಅಭಾವವಾಗದಂತೆ ನೋಡಿಕೊಳ್ಳಲಾಗಿದೆ' ಎಂದು ಆರ್‌ಎಫ್‌ಒ ವೀರೇಂದ್ರ ಮರಿಬಸಣ್ಣನವರ ಹೇಳುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಕಾತೂರ ವಲಯ ವ್ಯಾಪ್ತಿಯ ಐದು ಕಡೆ ಹಾಗೂ ಶಿರಸಿ ಅರಣ್ಯ ವಲಯ ವ್ಯಾಪ್ತಿಯಲ್ಲಿ ನಾಲ್ಕೈದು ಕಡೆ ಕಾಂಕ್ರೀಟ್ ತೊಟ್ಟಿ ಅಳವಡಿಸಿ ನೀರು ತುಂಬಿಸಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ 28ಕ್ಕೂ ಹೆಚ್ಚು ಕೆರೆಗಳು ಬತ್ತಿವೆ. ಕೆರೆಗಳನ್ನು ಭರ್ತಿ ಮಾಡುವ ಯೋಜನೆ ಜಾರಿಯಲ್ಲಿದ್ದರೂ, ಚಿಂಕಾರಾ, ನರಿ, ತೋಳದಂತಹ ಪ್ರಾಣಿಗಳಿಗೆ ತೊಂದರೆಯಾಗಿಲ್ಲ' ಎನ್ನುತ್ತಾರೆ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಧರ.

'ಖಾನಾಪುರ ತಾಲ್ಲೂಕಿನ ಕಾಡಿನಲ್ಲಿ ಏಪ್ರಿಲ್ ಮೊದಲ ವಾರದವರೆಗೆ ನೀರು ಸಾಲಬಹುದು. ನಂತರ, ಟ್ಯಾಂಕರ್ ಮೂಲಕ ನೀರು ತುಂಬಿಸಲಾಗುತ್ತದೆ' ಎಂದು ಎಸಿಎಫ್ ಗುರುಪ್ರಸಾದ್ ಹೇಳುತ್ತಾರೆ.

ಬೀದರ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಈ ವರ್ಷ 8 ಹೊಂಡಗಳನ್ನು ನಿರ್ಮಿಸಲಾಗಿದೆ. ಒಟ್ಟು 24 ಹೊಂಡಗಳಿಗೆ ಜನವರಿಯಿಂದಲೇ ಟ್ಯಾಂಕರ್ ನೀರು ತುಂಬಿಸಲಾಗುತ್ತಿದ್ದು, ಮಳೆಗಾಲದವರೆಗೂ ಮುಂದುವರಿಯಲಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿಯ ಅರಣ್ಯ ಪ್ರದೇಶದ ಕೆಲಭಾಗಗಳಲ್ಲಿ ಬೆಳೆಯ ನಿಜಾಮ್ ಕಾಲದ ಲಾಲ್ ತಾಲಾಬನ್ನು ಸವಳಿಸಿದ್ದು, ಅದೇ ಕೆರೆಯ ಅಂಗಳದಲ್ಲಿ 2 ವರ್ಷದ ಹಿಂದೆ ಕೊಳವೆಬಾವಿ ಕೊರೆಸಿ ಸೋಲಾರ್ ವಿದ್ಯುತ್ ವ್ಯವಸ್ಥೆ ಅಳವಡಿಸಲಾಗಿದೆ. ಕೆರೆಯ ನೀರು ಖಾಲಿಯಾದಂತೆ ಕೊಳವೆ ಬಾವಿಯಿಂದ ಹರಿಸಲಾಗುತ್ತಿದೆ. ವನ್ಯಜೀವಿಗಳಿಗೆ ಇಲ್ಲಿ ನೀರಿನ ಸಮಸ್ಯೆ ಇಲ್ಲ.

ಕಾಳಿ ಹುಲಿ ಸಂರಕ್ಷಿತಾರಣ್ಯದಲ್ಲಿ ಕೆಲ ವರ್ಷಗಳ ಹಿಂದೆ ಮಳೆ ಕೊರತೆ ಉಂಟಾಗಿದ್ದ ವೇಳೆ ಕಾಂಕ್ರೀಟ್ ತೊಟ್ಟಿ ಇಟ್ಟು ನೀರು ಪೂರೈಸಲಾಗುತ್ತಿತ್ತು. ಆದರೆ, ಈಚಿನ ವರ್ಷದಲ್ಲಿ ಕಾಡಿನಲ್ಲಿನ ಜಲಮೂಲಗಳಲ್ಲಿ ನೀರಿರುವುದರಿಂದ ಕೃತಕ ತೊಟ್ಟಿ ಇಡುವ ಪರಿಸ್ಥಿತಿ ಇಲ್ಲ.

'ಟೆರರ್ ಸೂಕ್ಷ್ಮ ಪ್ರದೇಶವಾಗಿದ್ದರೂ ಇಲ್ಲಿ ಅರಣ್ಯದಲ್ಲಿ ಕೆಲ ವರ್ಷಗಳ ಹಿಂದೆ ನೀರಿಗಾಗಿ ಅರಣ್ಯ ಇಲಾಖೆ ಬಾಂದಾರ ನಿರ್ಮಿಸಿತ್ತು. ಕಾಡಿನಲ್ಲಿ ಕೆರೆನಿರ್ಮಿಸುವ ಸಮಯ ನಿರ್ವಹಣೆ ಮಾಡುತ್ತಿಲ್ಲ' ಎಂದು ಕಾಳಿ ಬ್ರಿಗೇಡ್ ಸಂಚಾಲಕ ರವಿ ರೇಡ್ಕರ್ ದೂರುತ್ತಾರೆ.

ಪರಿಸರ ವ್ಯವಸ್ಥೆಯ ನಾಶ: ಜೀವಸಂಕುಲಕ್ಕೆ ತೊಂದರೆ: ಸುರೇಶ್ ಹೆಬ್ಳೀಕರ್

'ದಟ್ಟ ಅರಣ್ಯ, ಫಲವತ್ತಾದ ಮಣ್ಣು, ಹುಲ್ಲುಗಾವಲು ಪ್ರದೇಶ, ಕುರುಚಲು ಪ್ರದೇಶ, ಕುರುಚಲು ಕಾಡು, ಕೆರೆ ಪ್ರದೇಶ ಇದ್ದಲ್ಲಷ್ಟೇ ಮಳೆ, ಬೆಳೆ, ಜಲ ಸಮೃದ್ಧಿಯಾಗುತ್ತದೆ. ಆದರೆ, ನಮ್ಮ ಸ್ವಾರ್ಥದಿಂದ ಅವೆಲ್ಲ ನಾಶವಾಗಿವೆ. ಮಳೆ ಕೊರತೆಯಾಗಿ, ಮನುಷ್ಯರ ಸೇರಿದಂತೆ ವನ್ಯಜೀವಿಗಳು ನೀರು, ಆಹಾರಕ್ಕೆ ಪರದಾಡುವಂತಾಗಿದೆ' ಎಂಬುದು ಪರಿಸರವಾದಿ ಸುರೇಶ್ ಹೆಬ್ಳೀಕರ್ ಅವರ ವಾದ.


'ಕಾವೇರಿ, ತುಂಗಭದ್ರಾ, ಕೃಷ್ಣ, ಕಾಳಿ, ಮಲಪ್ರಭಾ, ಶರಾವತಿ, ಅಘನಾಶಿನಿ ಸೇರಿ ನಾಡಿನ ಬಹುತೇಕ ನದಿಗಳ ಹರಿವಿನ ಪ್ರದೇಶ ಕಡಿಮೆಯಾಗಿದೆ. ಜೀವಸಂಕುಲಕ್ಕಾಗಿ ಪಶ್ಚಿಮಘಟ್ಟದ ದಟ್ಟ ಅರಣ್ಯವನ್ನು ಉಳಿಸಿಕೊಳ್ಳಬೇಕು' ಎನ್ನುತ್ತಾರೆ ಅವರು.

ಕಡಿಮೆಯಾದ ನೀರು ಹಿಂಗುವ ಪ್ರದೇಶ: 'ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳು ಅನುಷ್ಠಾನಗೊಳ್ಳುತ್ತಿರುವುದರಿಂದ ಮಳೆನೀರು ಹಿಂಗುವ ಪ್ರದೇಶಗಳು ಕಡಿಮೆಯಾಗುತ್ತಿವೆ' ಎನ್ನುತ್ತಾರೆ ಪರಿಸರವಾದಿ ದಿನೇಶ್ ಹೊಳ್ಳ.

'ಆಯಾ ಪ್ರದೇಶದ ಧಾರಣ ಸಾಮರ್ಥ್ಯದ ಅಧ್ಯಯನದ ಬಳಿಕವೇ ಯಾವುದೇ ಅಭಿವೃದ್ಧಿ ಯೋಜನೆ ಜಾರಿಯಾಗಬೇಕು. ಶೋಲಾ ಅರಣ್ಯದಲ್ಲಿರುವ ಜಲನಾಡಿಗಳಿಂದ ಸಣ್ಣ ತೊರೆಗಳು ಹರಿಯುತ್ತವೆ. ಪ್ರಾಣಿಗಳು ಸಂಚರಿಸುವ ಪ್ರದೇಶಗಳನ್ನು ಗುರುತಿಸಿ, ಆ ತೊರೆಗಳಿಗೆ ಅಲ್ಲಲ್ಲಿ ತಾತ್ಕಾಲಿಕವಾಗಿ ಸಣ್ಣ ತಡೆಗಳನ್ನು ಹಾಕಿ, ಕಾಡುಪ್ರಾಣಿಗಳಿಗೆ ಕುಡಿಯುವ ನೀರಿಗೆ ತೊಂದರೆ ಆಗದಂತೆ ಕ್ರಮ ವಹಿಸಬಹುದು' ಎಂಬುದು ಅವರ ಪ್ರತಿಪಾದನೆ.

ನಾಡಿನತ್ತ ಕೃಷ್ಣಮೃಗ ಪಡೆ

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಕೃಷ್ಣಮೃಗ ಅಭಯಾರಣ್ಯದ ಸಣ್ಣ ಹಳ್ಳ, ಕೆರೆ ಕಟ್ಟೆಗಳು ಬರಿದಾಗಿವೆ. ಕೃಷ್ಣಮೃಗಗಳು ತುಂಗಭದ್ರಾ ನದಿ ಸಮೀಪದ ಮುದೇನೂರು ಐರಣಿ, ಹಿರೇಬಿದರಿ, ಬೇಲೂರು, ಹರನಗಿರಿ, ಕುದರಿಹಾಳ, ಉದಗಟ್ಟಿ, ಹೀಲದಹಳ್ಳಿ, ಚೌಡಯ್ಯದಾನಪುರದ ನೀರಾವರಿ ಜಮೀನುಗಳತ್ತ ಬರುತ್ತಿವೆ. ಆದರೆ, ತುಂಗಭದ್ರಾ ನದಿ ನೀರು ಕಡಿಮೆಯಾಗಿದ್ದರಿಂದ ರೈತರು ನೀರಾವರಿ ಪ್ರದೇಶಗಳಲ್ಲೂ ಭತ್ತ ಬೆಳೆಯದೆ, ಕೃಷ್ಣಮೃಗಗಳಿಗೆ ಮೇವಿನ ಕೊರತೆ ಕಾಡುತ್ತಿದೆ.



ಬೆಂಗಳೂರಿನ ಆನೇಕಲ್ ಅರಣ್ಯ ಉಪವಲಯದಲ್ಲಿ 70 ನೀರಿನ ಸೆಲೆಗಳ ಪೈಕಿ 35ಕ್ಕೂ ಹೆಚ್ಚು ಕಡೆ ನೀರು ಬತ್ತಿದೆ. ಕಾಡಿನಲ್ಲಿ ಆನೆಗಳು ನೀರಿನ ಮೂಲಗಳನ್ನು ಚೆಲ್ಲಾಗಿ ಗುರುತಿಸಿಕೊಂಡಿರುತ್ತವೆ. ನೀರು ಬತ್ತಿರುವುದರಿಂದ ಕಾಡಾನೆಗಳು ಹಿಂಡೊಂದು ಈಚೆಗೆ ಆನೇಕಲ್ ದೊಡ್ಡ ಕೆರೆಯವರೆಗೆ ಬಂದಿತ್ತು. ಇಲ್ಲಿ, ನೀರಿನ ಮೂಲಗಳು ಏಪ್ರಿಲ್‌ವರೆಗೂ ಇರಬಹುದು. ಮಳೆ ಬಾರದಿದ್ದರೆ ಪ್ರಾಣಿಗಳಿಗೆ ಕಷ್ಟ ಹೆಚ್ಚಾಗುತ್ತದೆ.


ತುಮಕೂರು ಜಿಲ್ಲೆಯಲ್ಲೂ ಪ್ರಾಣಿಗಳು ಜನ ವಸತಿ ಪ್ರದೇಶಗಳತ್ತ ಬರುತ್ತಿವೆ. ಮಧುಗಿರಿ ತಾಲ್ಲೂಕಿನ ತಿಮ್ಮಲಾಪುರ ಕರಡಿ ಧಾಮ, ಪಾವಗಡ, ಕೊರಟಗೆರೆ ಭಾಗದಲ್ಲಿ ಕರಡಿಗಳು ತೊಂದರೆ ಎದುರಿಸುತ್ತಿವೆ. ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಚಿಂಕಾರಾಗಳಿಗೂ ಬಿಸಿ ತಟ್ಟಿದೆ.

ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ ಎಲ್ಲ ಕಡೆಯೂ ಟ್ಯಾಂಕರ್ ನೀರು ಪೂರೈಕೆಯಾಗುತ್ತಿಲ್ಲ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಾಣಿಗಳು ಅರಣ್ಯದಂಚಿನ ಗ್ರಾಮಗಳತ್ತ ಬರುತ್ತಿವೆ. ಕೃಷ್ಣಮೃಗಗಳ ತಾಣವಾದ ಕಡೂರು ತಾಲ್ಲೂಕಿನ ಬಾಸೂರು ಅರಣ್ಯದ ನಾಲ್ಕು ಕೆರೆಗಳಿಗೆ ಬೋರ್‌ವೆಲ್ ಪೈಪ್‌ಲೈನ್ ಹಾಕಲಾಗಿದೆ.

ಬಂಡೀಪುರ ಹುಲಿ ಮೀಸಲು ಪ್ರದೇಶ ವ್ಯಾಪ್ತಿಯ 13 ವಿಭಾಗಗಳ ಸುಮಾರು 363 ಕೆರೆಗಳ ಪೈಕಿ, ಸುಮಾರು 47 ಕೆರೆಗಳಿಗೆ ಕೊಳವೆ ಬಾವಿಯಿಂದ ಸೌರಶಕ್ತಿ ಚಾಲಿತ ಪಂಪ್‌ಸೆಟ್ ಮೂಲಕ ನೀರು ತುಂಬಿಸಲಾಗಿದೆ. ಮಲೆ ಮಹದೇಶ್ವರ ಮತ್ತು ಕಾವೇರಿ ವನ್ಯಧಾಮಗಳಲ್ಲೂ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ.

ನಾಗರಹೊಳೆಯ 269 ಕೆರೆಗಳ ಪೈಕಿ 33 ಸಂಪೂರ್ಣ ಒಣಗಿವೆ. 27 ಕೆರೆಗಳಿಗೆ ಕೊಳವೆಬಾವಿ, ಟ್ಯಾಂಕರ್ ನೀರು ಪೂರೈಸಲಾಗುತ್ತಿದೆ. ಅರಣ್ಯದೊಳಗೆ ಹರಿಯುವ ಸಾರಥಿ, ನಾಗರಹೊಳೆ ಹಾಗೂ ಲಕ್ಷ್ಮಣತೀರ್ಥ ನದಿಯ ಜೌಗು ಪ್ರದೇಶದಲ್ಲಿ ಚೆಕ್ ಡ್ಯಾಂ ನಿರ್ಮಿಸಿ ನೀರು ಸಂಗ್ರಹಿಸಲಾಗುತ್ತಿದೆ.

ಕಾಡಿನಲ್ಲಿ ಕೃತಕವಾಗಿ ಕೆರೆ, ಕಟ್ಟೆ ಕಟ್ಟಿದರೆ ತೊಂದರೆ!: ಕೃಪಾಕರ



'ಪ್ರಾಣಿಗಳಿಗೆ ನೀರಿಲ್ಲವೆಂದು ಕೆರೆ, ಕಟ್ಟೆಗಳನ್ನು ಕಟ್ಟಿದರೆ, ಕೋಟ್ಯಂತರ ವರ್ಷಗಳಿಂದ ರೂಪುಗೊಂಡಿರುವ ಜೀವ ಪರಿಸರ ವ್ಯವಸ್ಥೆಗೆ ತೊಂದರೆಯಾಗುತ್ತದೆ. ಕೆರೆ, ಕಟ್ಟೆಗಳನ್ನು ಮೃಗಾಲಯದಲ್ಲಿ ನಿರ್ಮಿಸಿಕೊಳ್ಳಲಿ. ಅರಣ್ಯಗಳಲ್ಲಿ ಮಾನವ ಹಸ್ತಕ್ಷೇಪ ಮಾಡಬಾರದು' ಎನ್ನುತ್ತಾರೆ ಗ್ರೀನ್ ಆಸ್ಕರ್ ಪುರಸ್ಕೃತ ವನ್ಯಜೀವಿ ತಜ್ಞ ಕೃಪಾಕರ.

'ವನ್ಯಜೀವಿಗಳು ಎಷ್ಟೋ ಬರ, ಪ್ರವಾಹಗಳನ್ನು ಕಂಡಿವೆ. ಅವುಗಳನ್ನು ಎದುರಿಸಬೇಕಾದ ಶಕ್ತಿ ಸಹಜವಾಗಿಯೇ ಬಂದಿರುತ್ತದೆ. ಬರಗಾಲದಲ್ಲಿ ನೀರ-ಸೆಲೆಗಳನ್ನು ಹುಡುಕಿಕೊಂಡಿರುತ್ತವೆ. ಪ್ರಾಣಿಗಳಿಗೆ ಕಾಡಿನಲ್ಲಿ ನೀರಿಲ್ಲವೆಂದು ಭಾವನಾತ್ಮಕವಾಗಿ ಸ್ಪಂದಿಸಬೇಕಿಲ್ಲ' ಎಂದು ಪ್ರತಿಪಾದಿಸುತ್ತಾರೆ.

'ಬರಗಾಲದಲ್ಲೇ ಪ್ರಾಣಿಗಳ ಸಂಖ್ಯೆ ನಿಯಂತ್ರಣಕ್ಕೆ ಬರುತ್ತದೆ. ಮಾಂಸಹಾರಿ ಪ್ರಾಣಿಗಳಿಗೆ ಹೆಚ್ಚು ನೀರು ಬೇಕಿಲ್ಲ. ಮಾಂಸದಿಂದಲೇ ಸಿಗುತ್ತದೆ. ಹೀಗಾಗಿ, ಅವು ನೀರಿಗಾಗಿ ಬರುವುದು ಕಡಿಮೆ. ಸಸ್ಯಹಾರಿ ಪ್ರಾಣಿಗಳು ಜೌಗು, ತೊರೆಗಳನ್ನು ಅವಲಂಬಿಸಿರುತ್ತವೆ. ನಿಸರ್ಗದತ್ತವಾಗಿ ರೂಪುಗೊಂಡ ತೊರೆಗಳ ಹರಿವು ಕೃತಕ ಕೆರೆಗಳಿಂದ ನಿಲ್ಲುತ್ತದೆ' ಎಂಬುದು ಅವರ ವಿಶ್ಲೇಷಣೆ.

'ಅರಣ್ಯ ಇಲಾಖೆಯು ಬೆಂಕಿ, ಬೇಟೆ, ಒತ್ತುವರಿಯಿಂದ ಕಾಡನ್ನು ರಕ್ಷಿಸಬೇಕು. ಬೋರ್‌ವೆಲ್‌ಗಳ ಅಳವಡಿಕೆಯೂ ಸರಿಯಲ್ಲ. ಪಂಪ್‌ಸೆಟ್‌ಗಳ ಮೋಟಾರ್ ಶಬ್ಧವೂ ವನ್ಯಜೀವಿಗಳಿಗೆ ತೊಂದರೆಯೇ. 1870ರಲ್ಲಿ ದೇಶದಲ್ಲಿ ಮಾನವ ಇತಿಹಾಸದಲ್ಲಿಯೇ ಅತಿ ಭೀಕರವಾದ ಬರ ಬಂದಿತ್ತು. ಜಲಕ್ಷಾಮದಿಂದ ಶೇ 50 ರಷ್ಟು ಜನಸಂಖ್ಯೆ ಇಳಿಯಿತು. ನೀರಿನ ಮೂಲಗಳನ್ನು ಅರಸಿದ ಸಮುದಾಯಗಳು, ಜನರಷ್ಟೇ ಉಳಿದರು' ಎಂದು ಸ್ಮರಿಸುತ್ತಾರೆ.



ರಾಣೇಬೆನ್ನೂರು ಕೃಷ್ಣಮೃಗ ಅಭಯಾರಣ್ಯದಲ್ಲಿನ ತೊಟ್ಟಿಗಳಿಗೆ ಅರಣ್ಯ ಇಲಾಖೆಯ ಸಿಬ್ಬಂದಿ ಟ್ಯಾಂಕರ್ ಮೂಲಕ ನೀರು ತುಂಬಿಸುತ್ತಿರುವುದು

'ನಾಗರಹೊಳೆಯಲ್ಲಿ ಪ್ರಾಣಿಗಳಿಗೆಂದು ಸೌರಶಕ್ತಿ ಚಾಲಿತ ಪಂಪ್‌ಸೆಟ್ ಮೂಲಕ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. 2024–25ನೇ ಸಾಲಿನಲ್ಲಿ ಎಂಟು ಸೌರಶಕ್ತಿ ಚಾಲಿತ ಪಂಪ್‌ಸೆಟ್ ಅಳವಡಿಕೆಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದರು.

'ಕಪಿಲಾ, ತಾರಕ ನದಿ ಅಣೆಕಟ್ಟೆಯ ನೀರನ್ನು ಬೇಸಿಗೆಯ ಬೆಳೆಗಳಿಗೆ ನೀಡುವುದರಿಂದ ಹಿನ್ನೀರು ಕಡಿಮೆಯಾಗಿದ್ದು, ಪ್ರಾಣಿಗಳು ವಲಸೆ ಹೋಗುತ್ತಿವೆ. ನೀರನ್ನು ಕೃಷಿಗೆ ಬಳಸದೆ ಪ್ರಾಣಿಗಳಿಗೆ ಮೀಸಲಿಟ್ಟರೆ ಕೊರತೆಯ ಒತ್ತಡ ತಗ್ಗಿಸಬಹುದು' ಎಂದು ಹೇಳಿದರು.

ಭದ್ರಾ ವನ್ಯಜೀವಿ ಅಭಯಾರಣ್ಯವು ಭದ್ರಾ ಜಲಾಶಯದ ಹಿನ್ನೀರಿಗೆ ಹೊಂದಿಕೊಂಡಂತಿದ್ದು, ನೀರಿನ ಸಮಸ್ಯೆ ಇಲ್ಲ. ಜಲಾಶಯದಲ್ಲಿ ಹಾಗೂ ಕೆರೆ ಕಟ್ಟೆಗಳಲ್ಲೂ ನೀರಿದೆ' ಎಂದು ಭದ್ರಾ ವನ್ಯಜೀವಿ ಅಭಯಾರಣ್ಯದ ಡಿಸಿಎಫ್ ಯಶಪಾಲ್ ಹೇಳಿದರು.

ಆದರೆ, ನೀರು ತುಂಬಿಸುವುದರಿಂದಷ್ಟೇ ಕಾಡಂಚಲ್ಲಿ ವನ್ಯಜೀವಿಗಳ ವಲಸೆಯನ್ನು ತಡೆಯಲಾಗದು. ಸಸ್ಯಾಹಾರಿ ಪ್ರಾಣಿಗಳು ಹಸಿರು ಮೇವು ಸಿಗದೆ, ಜೌಗು ಪ್ರದೇಶಗಳತ್ತ, ಜಲಾಶಯದ ಹಿನ್ನೀರಿನತ್ತ ಹೋಗುತ್ತವೆ. ಸಸ್ಯಹಾರಿ ಪ್ರಾಣಿಗಳ ಹಿಂದೆಯೇ ಮಾಂಸಹಾರಿ ಪ್ರಾಣಿಗಳು ಸಹ ಆಹಾರಕ್ಕಾಗಿ ಅಲೆದಾಡುತ್ತವೆ. ಜಲಾಶಯದ ಹಿನ್ನೀರಿನಲ್ಲಿ ನೀರು ಕಾಲಿಯಾದಾಗ ಹುಲ್ಲು ಬೆಳೆದರೂ ಲಕ್ಷಾಂತರ ಸಸ್ಯಹಾರಿಗಳಿಗೆ ಇದೆಲ್ಲಿ ಸಾಕಾದೀತು? ಮಾರ್ಚ್, ಏಪ್ರಿಲ್‌ನಲ್ಲಿ ಒಂದೆರಡು ಮಳೆಯಾದರೂ ಕಾಡು, ಕಾಡು ಪ್ರಾಣಿಗಳು 'ಉಸಿರಾಡಬಹುದು' ಎನ್ನುವ ನಿರೀಕ್ಷೆಯಲ್ಲಿ ಅರಣ್ಯ ಇಲಾಖೆಯಿದೆ.

ಪೂರಕ ಮಾಹಿತಿ: ಪ್ರಜಾವಾಣಿಯ ಜಿಲ್ಲಾ ವರದಿಗಾರರಿಂದ



ಚನ್ನಪಟ್ಟಣ ತಾಲ್ಲೂಕಿನ ಕೂಡ್ಲೂರು ಬಳಿ ಕಣ್ವ ನದಿಯಲ್ಲಿ ಕಾಡಾನೆಗಳ ನೀರಾಟ

ಪ್ರಭಾಮಣಿ, ಸತೀಶ್, ಅರಳಿಸುರಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ



ಸತೀಶ್ ಜಿ.ಕೆ.



ಪ್ರಭಾಮಣಿ ನಾಗರಾಜ



ವಿನಾಯಕ ಅರಳಸುರಳಿ

ಪ್ರಬಂಧ ಸ್ಪರ್ಧೆ

ಬೆಂಗಳೂರು: ಕನ್ನಡ ಸಾಹಿತ್ಯದ ಪ್ರಬಂಧ ಪ್ರಕಾರಕ್ಕೆ ಪ್ರತಿ ವರ್ಷವೂ ಹೊಸ ಭಾವ–ಬಣ್ಣಗಳನ್ನು ಪರಿಚಯಿಸುವ 'ಸುಧಾ ಯುಗಾದಿ ಪ್ರಬಂಧ ಸ್ಪರ್ಧೆ'ಯ 2024ರ ಸಾಲಿನ ಫಲಿತಾಂಶ ಪ್ರಕಟಗೊಂಡಿದ್ದು, ಹಾಸನದ ಪ್ರಭಾಮಣಿ ನಾಗರಾಜ ಅವರ 'ಎಲ್ಲದಕೂ ಕಾರಣ ನೀನೇ ಪ್ರಿಯ ದರ್ಪಣ' ಪ್ರಬಂಧ ಮೊದಲ ಬಹುಮಾನ ಪಡೆದಿದೆ.

ತೀರ್ಥಹಳ್ಳಿಯ ಸತೀಶ್ ಜಿ.ಕೆ. ('ಬದುಕಿನ ಕತ್ತಲಾಚೆಗೆ ಬೆಳಕಿನ ಬಯಲು') ಹಾಗೂ ಶಿವಮೊಗ್ಗ ಜಿಲ್ಲೆ ಮೂಡುಗಡ್ಡೆಯ ವಿನಾಯಕ ಅರಳಸುರಳಿ ('ದವಾಖಾನೆಯ ದಾಖಲೆಗಳು') ಅವರ ಪ್ರಬಂಧಗಳು ಎರಡನೇ ಮತ್ತು ಮೂರನೇ ಬಹುಮಾನ ಪಡೆದಿವೆ. ಬಹುಮಾನಿತ ಪ್ರಬಂಧಗಳಿಗೆ ಕ್ರಮವಾಗಿ ₹15,000, ₹ 12,000 ಹಾಗೂ ₹ 10,000 ದೊರೆಯಲಿದೆ.

'ಹಿರಿಯತನದಲಿ ನೋಡೆ ಊರುಗೋಲ ಹಿಡಿದವರು' (ಜಿ.ವಿ. ಅರುಣ), 'ಇಲಿಯ ಬೇಟೆ' (ಶಿವರಾಜ್ ಬ್ಯಾಡರಹಳ್ಳಿ), 'ರೌಡಿ ಮಿಂಟುವಿನ ಜೀವನ ವೃತ್ತಾಂತ' (ಇಸ್ಮತ್ ಪಜೀರ್), 'ಏಳು ಚುಕ್ಕಿ ರಂಗೋಲಿ' (ಪ್ರವೀಣ್ ಕುಮಾರ್ ಜಿ.), 'ನಿಲ್‌ದಾಣಗಳ ನಾದಲೀಲೆ' (ಸುಧಾಕರ ದೇವಾಡಿಗ ಬಿ.), 'ಪರಿವರ್ತನೆ' (ಡಾ. ಪ್ರೇಮಲತ ಬಿ.) ಪ್ರಬಂಧಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಐದು ನೂರಕ್ಕೂ ಹೆಚ್ಚಿನ ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದವು. ಭಾರತಿ ದೇವಿ ಪಿ. ಹಾಗೂ ಚಿದಾನಂದ ಸಾಲಿ ಈ ವರ್ಷದ ಪ್ರಬಂಧ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಕುಸಿದ 'ಉದ್ಯೋಗ' ಖಾತ್ರಿ ಬೇಡಿಕೆ

ಒಂದನೇ ಪುಟದಿಂದ..

ಆದರೆ, ಕೂಲಿ ಸಕಾಲಕ್ಕೆ ಖಾತೆಗಳಿಗೆ ಜಮೆಯಾಗುತ್ತಿಲ್ಲ. ಅದೇ ಚುನಾವಣಾ ಪ್ರಚಾರಗಳಿಗೆ, ಪಕ್ಷಗಳ ರ್‍ಯಾಲಿಗಳಿಗೆ ಹೋದರೆ ಖಾತ್ರಿಗಿಂತ ಎರಡು ಪಟ್ಟು ಹೆಚ್ಚು ಕೂಲಿ ಸಿಗುತ್ತದೆ. ಅಂದಿನ ಹಣ ಅಂದೇ ಕೊಡುತ್ತಾರೆ. ಊಟ, ಉಪಾಹಾರವೂ ಉಚಿತ. ನಿತ್ಯವೂ ಊರೂರು ತಿರುಗುತ್ತೇವೆ. ಇನ್ನು ಒಂದು ತಿಂಗಳು ಯಾವ ಕೆಲಸಕ್ಕೂ ಹೋಗುವುದಿಲ್ಲ' ಎನ್ನುತ್ತಾರೆ ತಣಿಗೆರೆಯ ಕಾರ್ಮಿಕ ಅಂಜನಪ್ಪ.

ಕೂಲಿ ವಿಳಂಬ, ಕಾರ್ಮಿಕರು ವಿಮುಖ: 'ನಿಯಮಿತವಾಗಿ ಹಣ ಬಿಡುಗಡೆ ಮಾಡದ ಕಾರಣ ಸಮಯಕ್ಕೆ ಸರಿಯಾಗಿ ಕೂಲಿ ಹಣ ಸಿಗದೇ ಕಾರ್ಮಿಕರು ಬೇಸರಗೊಂಡಿದ್ದರು. ನಿಯಮದಂತೆ 15 ದಿನಗಳಿಗೆ ಒಮ್ಮೆ ಕೂಲಿ ಹಣ ಜಮೆ ಮಾಡಬೇಕು. ಕಳೆದ ಡಿಸೆಂಬರ್ ಮೂರನೇ ವಾರ ಜಮೆ ಮಾಡಿದ್ದು ಬಿಟ್ಟರೆ ಮೂರು ತಿಂಗಳು ಹಣ ಬಂದಿರಲಿಲ್ಲ. ಇದೇ ಮಾರ್ಚ್ 21ರಂದು ಬಂದಿದೆ. ಪಂಚಾಯತಿ ವ್ಯಾಪ್ತಿಯಲ್ಲಿ 2,967 ಜಾಬ್‌ಕಾರ್ಡ್ ಪಡೆದ ಕಾರ್ಮಿಕರಿದ್ದು, ಬಾಕಿ ತುರ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲು ಮನವೊಲಿಸುತ್ತಿದ್ದೇವೆ. ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಕಾರಣ ಯಾರೂ ಬರುತ್ತಿಲ್ಲ. ಕೆಲಸ ಸ್ಥಗಿತಗೊಳಿಸಿದ್ದೇವೆ' ಎಂದು ಹೆಸರು ಹೇಳಲಿಚ್ಛಿಸದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜ್ಯದಲ್ಲಿ 2023–24ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ 13.81 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದೆ (ಎಂಟು ಗಂಟೆಗಳ ಒಂದು ಕೆಲಸವನ್ನು ಒಂದು ಮಾನವ ದಿನ ಎಂದು ಪರಿಗಣಿಸಲಾಗುತ್ತದೆ. 100 ಮಂದಿ ಒಂದೇ ದಿನದಲ್ಲಿ ಎಂಟು ತಾಸು ಕೆಲಸ ಮಾಡಿದರೆ, ಅದನ್ನು 100 ಮಾನವ ದಿನಗಳು ಎಂದು ಪರಿಗಣಿಸಲಾಗುತ್ತದೆ). ರಾಜ್ಯದಲ್ಲಿ ಕೆಲಸ ನಿರ್ವಹಿಸಿರುವ ಕಾರ್ಮಿಕರಿಗೆ ನೀಡಬೇಕಿರುವ ಕೂಲಿ ₹475.59 ಕೋಟಿ ಬಾಕಿ ಇದ್ದು, ತಕ್ಷಣ ಬಿಡುಗಡೆ ಮಾಡುವಂತೆ ಕೋರಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದಿದೆ.

ಇಬ್ಬರು ಶಿಕ್ಷಕರ ಅಮಾನತು

ಬೆಂಗಳೂರು: ರಾಜ್ಯದಲ್ಲಿ ಶನಿವಾರ ನಡೆದ ಎಸ್‌ಎಸ್‌ಎಲ್‌ಸಿ ವಿಜ್ಞಾನ ಪರೀಕ್ಷೆಯಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಆರೋಪದಡಿ ಇಬ್ಬರು ಶಿಕ್ಷಕರನ್ನು ಅಮಾನತು ಹಾಗೂ ನಕಲು ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡಲಾಗಿದೆ.

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಪರಶುರಾಂಪುರದ ಕರ್ನಾಟಕ ಪಬ್ಲಿಕ್ ಶಾಲೆಯ ಕೇಂದ್ರದಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಚಳ್ಳಕೆರೆ ತಾಲ್ಲೂಕಿನ ಪಿ.ಓಬನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಚಂದ್ರಶೇಖರ ಹಾಗೂ ಕೊರ್ಲಕುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪ್ರಕಾಶ್ ಅಮಾನತುಗೊಂಡವರು.

ಇದೇ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯಲೋಪ ಎಸಗಿದ ಚಳ್ಳಕೆರೆಯ ಮಂಜರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರೇವಣ್ಣ ಹಾಗೂ ಗೋಸಿಕೆರೆ ರಾಧಾಕೃಷ್ಣ ಗ್ರಾಮಾಂತರ ಪ್ರೌಢಶಾಲೆಯ ಶಿಕ್ಷಕ ರಾಘವೇಂದ್ರ ಅವರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಬಾಗಲಕೋಟೆ ಜಿಲ್ಲೆ ಬೀಳಿಗಿ ಖಾಸಗಿ ಶಾಲೆಯ ಕೇಂದ್ರದಲ್ಲಿ ನಕಲು ಮಾಡುತ್ತಿದ್ದ ವಿದ್ಯಾರ್ಥಿಯನ್ನು ಡಿಬಾರ್ ಮಾಡಲಾಗಿದೆ. ಪರೀಕ್ಷೆಗೆ ಹೆಸರು ನೋಂದಾಯಿಸಿದ್ದ ವಿದ್ಯಾರ್ಥಿಗಳಲ್ಲಿ ಶೇ 98.2 ವಿದ್ಯಾರ್ಥಿಗಳು ವಿಜ್ಞಾನ ವಿಷಯದ ಪರೀಕ್ಷೆ ಬರೆದರು.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 31-3-1999

● **ಎಲ್ಲ ರಾಜ್ಯ ಲಾಟರಿಗಳ ನಿಷೇಧಕ್ಕೆ ಕೇಂದ್ರ ಕ್ರಮ**

ನವದೆಹಲಿ, ಮಾ.30 (ಯುಎನ್‌ಐ)– ಎಲ್ಲ ರಾಜ್ಯ ಲಾಟರಿಗಳನ್ನು ನಿಷೇಧಿಸಲು ಕೇಂದ್ರ ಸಚಿವ ಸಂಪುಟ ಇಂದು ತೀರ್ಮಾನ ತೆಗೆದುಕೊಂಡಿದೆ. ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ಈ ಸಂಬಂಧ ಸೂಕ್ತ ಮಸೂದೆ ಮಂಡಿಸಲಿದೆ. ರಾಜ್ಯಗಳ ನಿರಾವರಿ ಯೋಜನೆಗಳಿಗೆ ಸರ್ಕಾರ ನೀಡುವ ಸಹಾಯಧನವನ್ನು ಹೆಚ್ಚಿಸಲೂ ಸಹ ತೀರ್ಮಾನಿಸಿದೆ.

ಸಂವಿಧಾನದ ಏಳನೇ ಪರಿಚ್ಛೇದದ ಒಂದನೇ ಪಟ್ಟಿಯಲ್ಲಿರುವ 40 ವಿಷಯ ಪ್ರವೇಶಗಳಲ್ಲಿ ಲಾಟರಿಗಳನ್ನು ನಿಷೇಧಿಸುವ ಕಾನೂನು ತರಲು ಸಚಿವ ಸಂಪುಟ ಅನುಮೋದನೆ ನೀಡಿದೆ.

50 ವರ್ಷಗಳ ಹಿಂದೆ

ಭಾನುವಾರ, 31-3-1974

● **ಚಳವಳಿ ನೇತೃತ್ವ ವಹಿಸಲು ಜೆ.ಪಿ ಸಿದ್ಧ**

ಪಟನ, ಮಾ.30– ಶಾಂತಿಯುತ ಪ್ರತಿಭಟನೆ ಮತ್ತು ಕಾರ್ಯಾಚರಣೆ ನಡೆಸುವ ಹಕ್ಕನ್ನು ಜನತೆಗೆ ನಿರಾಕರಿಸುವ ಸರ್ಕಾರದ ಅಪ್ರಸ್ತುತ ನೀತಿ ಇದೇ ರೀತಿ ಮುಂದುವರಿದಲ್ಲಿ ಶಾಂತಿಸೈನಿಕರ ಮೌನಮೆರವಣಿಗೆ ಕರೆದೊಯ್ಯುವ ಅನಿವಾರ್ಯ ಕ್ರಮಕ್ಕೆ ತಾವು ಕೈ ಹಾಕಬೇಕಾಗುವುದೆಂದು ಸರ್ವೋದಯ ನಾಯಕ ಜಯಪ್ರಕಾಶ ನಾರಯಣ್ ಎಚ್ಚರಿಕೆ ನೀಡಿದ್ದಾರೆ. 'ನನ್ನ ಆರೋಗ್ಯ ಸುಧಾರಿಸುದಕ್ಕೂ ಮುಂಚೆಯೆ ಶಾಂತಿ ಸೈನಿಕರ ಮೆರವಣಿಗೆಯನ್ನು ಸ್ವತಃ ನಾನೇ ಕರೆದೊಯ್ಯುವುದು ಅನಿವಾರ್ಯವಾಗುತ್ತದೆ' ಎಂದು ಜಯಪ್ರಕಾಶ್ ನಾರಾಯಣ್ ತಿಳಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮಾರ್ಚ್ 31, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಷಷ್ಠಿ ಗಂ.21-32 ನಕ್ಷತ್ರ: ಜೇಷ್ಠ ಗಂ.22-57 ಯೋಗ: ವ್ಯತೀಪಾತ ಗಂ.21-53 ಕರಣ: ಗರ ಗಂ. 09-28, ಮೀನ ಮಾಸದ 17 ನೇ ದಿನ, ಮಳೆನಕ್ಷತ್ರ: ರೇವತಿ 1.

ರಾಹುಕಾಲ : ಸಾಯಂಕಾಲ 04-30 - 06-00

ಸೂರ್ಯೋದಯ : 06-30 ಸೂರ್ಯಾಸ್ತ : 06-39

ಮುಸ್ಲಿಂ ದಿನಾಂಕ : 20 ರಂಜಾನ್, **ದಿನ ವಿಶೇಷ :** ಈಸ್ಟರ್ ಭಾನುವಾರ (ಕ್ರಿಶ್ಚಿಯನ್)

ಅದೃಷ್ಟ ಸಂಖ್ಯೆ : 8, 5

ಮೇಷ: ಉದ್ಯೋಗದಲ್ಲಿ ನಿಮ್ಮ ಗುಂಪಿಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಿ. ತಾಯಿಯ ಆಶೀರ್ವಾದದಿಂದ ಆ ಕೆಲಸ ಸಾಧ್ಯವಾಗುವುದು. ಮಾನಸಿಕ ವ್ಯಥೆ ನಿವಾರಣೆಯಾಗುತ್ತದೆ.

ವೃಷಭ: ಮುಕ್ತಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸುವಿರಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಅಧಿಕವಾಗಿರಲಿದೆ. ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸಲು ತಿಳಿ ಹೇಳಬೇಕಾಗುತ್ತದೆ.

ಮಿಥುನ: ಹೊಸ ವ್ಯಾಪಾರ ವ್ಯವಹಾರಗಳಿಂದಾಗಿ ಈ ದಿನ ವೃತ್ತಿಪರರ ಸ್ಥಳ ಬದಲಾವಣೆಯಾಗುವ ಸಂಭವವಿದೆ. ನಿಮ್ಮ ಅಧಿಕ ಪ್ರಯತ್ನದಿಂದಾಗಿ ಹಣ ಮತ್ತು ಗ್ರಹಾನುಕೂಲದಿಂದ ಖ್ಯಾತಿಗಳೆರಡನ್ನೂ ಪಡೆದುಕೊಳ್ಳುವಿರಿ.

ಕರ್ಕಾಟಕ: ವಾಹನದ ಬಿಡಿಭಾಗಗಳ ಮಾರಾಟ ಮತ್ತು ಸೇವೆಯಲ್ಲಿ ನಿರೀಕ್ಷೆಗೂ ಮೀರಿದ ಆದಾಯ ಪ್ರಾಪ್ತಿಯಾಗುತ್ತದೆ. ಕಲಾವಿದರುಗಳು ಅದರಲ್ಲೂ ಹೆಚ್ಚಾಗಿ ಮಾತುಗಾರರು ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಮನ್ನಣೆ ಪಡೆದುಕೊಳ್ಳುವಿರಿ.

ಸಿಂಹ: ಬಂಧುಗಳಲ್ಲಿ ಮಾಡಿದ ಸಾಲ ಮರುಪಾವತಿ ಮಾಡುವ ಚೈತನ್ಯವನ್ನು ಹೊಂದುವಿರಿ. ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿಯನ್ನು ನಡೆಸುವಂತಾಗಲಿದೆ. ಅಧಿಕಾರಿಗಳ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಪುಷ್ಟಿ ದೊರೆಯಲಿದೆ.

ಕನ್ಯಾ: ನಿಮ್ಮ ಅನಿವಾರ್ಯಗಳಿಗೆ ಬಂಧು-ಮಿತ್ರರ ಸಹಕಾರ ನಿಮಗೆ ದೊರೆಯಲಿದೆ. ತೆರಿಗೆ ಅಧಿಕಾರಿಗಳಿಗೆ ಪ್ರಶಂಸೆಯ ಮಾತುಗಳು ಕೇಳಲು ಸಿಗುವುದು. ಶ್ರೀ ದೇವಿ ಸ್ತುತಿಯಿಂದ ಮನಸ್ಸಿಗೆ ಹೆಚ್ಚಿನ ಸಂತಸ ಉಂಟಾಗುತ್ತದೆ.

ತುಲಾ: ದೇಹಾರೋಗ್ಯ ಉತ್ತಮವಾಗಿ ದಿನನಿತ್ಯದಂತೆ ಮಕ್ಕಳೊಡನೆ ಆಟಪಾಠಗಳಲ್ಲಿ ಪಾಲ್ಗೊಳ್ಳುವಿರಿ. ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸುವುದು ಉತ್ತಮ. ನೀಲಿ ಬಣ್ಣ ಶುಭತರಲಿದೆ.

ವೃಶ್ಚಿಕ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜೊತೆಯಲ್ಲಿ ಅಧಿಕ ಲಾಭವೂ ದೊರಕಲಿದೆ. ನೆರೆಹೊರೆಯವರ ಕಿರಿಕಿರಿ ತಪ್ಪದು. ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು.

ಧನು: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ ಇದೆ, ಅಥವಾ ಸಂಘ ಸಂಸ್ಥೆಗಳಲ್ಲಿ ಅಧಿಕಾರ ಲಭಿಸುವುದು. ವಾಹನದ ವ್ಯವಹಾರಗಳಿಂದ ಲಾಭವಿದ್ದು, ವಾಹನ ಖರೀದಿಸುವ ಯೋಚನೆ ಬರಲಿದೆ.

ಮಕರ: ಉದಯೋನ್ಮುಖ ಕಲಾವಿದರುಗಳಿಗೆ ಹೆಚ್ಚಿನ ಅವಕಾಶ ಲಭಿಸಲಿದೆ. ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಅವರ ಸಾಧನೆಗೆ ಚ್ಯುತಿ ಬರುವುದಿಲ್ಲ.

ಕುಂಭ: ಈ ದಿನ ಸಂತೋಷ ನೀಡುವ ಹಲವು ವಿಷಯಗಳು ಕೇಳಿ ಬರುವುದು. ಹಣದ ಹರಿವು ತೃಪ್ತಿಕರವಾಗಿರುವುದರಿಂದ ಯಾವುದೆ ರೀತಿಯ ತೊಂದರೆ ಇರಲಾರದು. ಪ್ರಯಾಣದಿಂದಾಗಿ ಆಯಾಸ ಉಂಟಾಗಬಹುದು.

ಮೀನ: ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟವನ್ನು ಹೆಚ್ಚಿಸಿಕೊಳ್ಳುವಿರಿ. ಚತುರತೆಯಿಂದಾಗಿ ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು. ಬಂಗಾರ ಭೂಮಿ ಮತ್ತು ಸ್ಥಿರಾಸ್ತಿಗಳು ನಿಮ್ಮದಾಗಲಿದೆ.

ಪದಬಂಧ 5637


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯಾರ ಸಹಾಯವೂ ಇಲ್ಲದಿರುವಿಕೆ (6)
5.ಎಲ್ಲಾ ಕಡೆಯಿಂದ ಉಂಟಾದ ನಿರ್ಬಂಧ (4)
6.ಎದುರು ಹೀಗೆ ಜೋರು ಮಾಡು! (3)
8.ವೇಶ ತೋರಿಸಲು ಒಳಹೋಗುವಿಕೆ! (3)
11.ಆತುರದಿಂದ ಓಡುತ್ತಿರುವ ಕುದುರೆ (3)
13.ಬರವಿದ್ದಾಗ ಬೇಡ ಬಂದಿದ್ದಾನಲ್ಲಾ! (3)
14.ಮಧುರವಾದ ಧ್ವನಿಯಿದು (4)
17.ವ್ರತೋಪವಾಸಗಳಿಂದ ದೇಹವನ್ನು ನಿಗ್ರಹಿಸುವುದು (6)

ಮೇಲಿಂದ ಕೆಳಕ್ಕೆ

1.ಜಗಲಿಯ ಹತ್ತಿರ ಕಾಣಿಸಿದ ಹೆಬ್ಬಾವು (4)
2.ಶ್ರಮ ನಿರ್ವಹಿಸುವುದು(2)
3.ಬೆಂಕಿಗೆ ಗಾಳಿಯೂದುವ ಸಲಕರಣೆ (2)
4.ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
7.ದೃಢಪಡಿಸುವ ಸಾಧನ (4)
8.ಇದು ಕನ್ನಡಿಗನ ಎಕ್ಸ್ಪಿರಿಮೆಂಟ್! (3)
9.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
10.ಜನಿವಾರದ ಹಬ್ಬವೆನಿಕೊಳ್ಳುವ ವೈದಿಕ ಕರ್ಮ (4)
12.ರಾಜ ಗೃಹವಿದು (4)
15.ಅಧೀನತೆಗೊಳಪಟ್ಟಿದ್ದು (2)
16.ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾದ ಸಂಖ್ಯೆ (2)



5636ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಲಭೋಪಾಯ 4.ವಿಪ್ಲವ
5.ಮಲಾರ 6.ಹತಾರ
8.ಮಯಸಂ 9.ತಂಬಾಕು
12.ಮಂದಿರ 15.ಜವಾನ
16.ಅವನಿ 17.ನವೀಕರಣ

ಮೇಲಿಂದ ಕೆಳಕ್ಕೆ:
1.ಸುಹಾಸಿನಿ 2.ಭೋಜನಾಲಯ
3.ಯಮಳ 4.ವಿರಹ
7.ತಾರೀಕು 8.ಮಡದಿ
10.ಬಾಲಬಡಿಕ 11.ಕಡುಜಾಣ
13.ರಜನಿ 14.ಆನನ

ಸುಡೊಕು 6022

4			3		8			2
	7						8	
9					2			6
							6	
	2	6	9		7			
	4		6		1		7	5
			1					7
8		7					9	1
1	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6021 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣೆ ನಂತರವೂ ಬಿಜೆಪಿ ಜತೆ ಮೈತ್ರಿ ಮುಂದುವರೆಯಲಿದೆ – ಜೆಡಿಎಸ್ ವರಿಷ್ಠರ ವಿಶ್ವಾಸ

ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ: ದೇವೇಗೌಡ

ಪ್ರಜಾವಾಣಿ ವಾರ್ತೆ

ತುಮಕೂರು: 'ಜೆಡಿಎಸ್ ಎಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸುತ್ತಿದ್ದಾರೆ. ಹಾಗಾದರೆ ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ' ಎಂದು ಜೆಡಿಎಸ್ ವರಿಷ್ಠ ದೇವೇಗೌಡ ಪ್ರಶ್ನಿಸಿದ್ದಾರೆ.

ನಗರದಲ್ಲಿ ಶನಿವಾರ ಜೆಡಿಎಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, 'ನಾಲ್ಕು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ತಮ್ಮ ಪಕ್ಷ ಇಂಥ ಹೀನಾಯ ಸ್ಥಿತಿಯಲ್ಲಿದ್ದರೂ ಸಿದ್ದರಾಮಯ್ಯ ಜೆಡಿಎಸ್ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ಪಕ್ಷದ ಬಗ್ಗೆ ಮಾತನಾಡಲು ಅವರಿಗೆ ಯಾವ ನೈತಿಕತೆ ಇದೆ' ಎಂದು ಕೇಳಿದರು.

'ಮುಖ್ಯಮಂತ್ರಿ ಆಗಿದ್ದಾಗಲೇ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮಂಡ್ಯದಲ್ಲಿ ಮಗನನ್ನು ಗೆಲ್ಲಿಸಿಕೊಳ್ಳಲು ಆಗಲಿಲ್ಲ. ಇನ್ನೂ ಅವರು ಮಂಡ್ಯದಲ್ಲಿ ಹೇಗೆ ಗೆಲ್ಲುತ್ತಾರೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲು ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಳೇ ಇರಲಿಲ್ಲ. ಯಾವ ಸಚಿವರೂ ಮುಂದೆ ಬರಲಿಲ್ಲ. ಸಿದ್ದರಾಮಯ್ಯ ಅಂಥವರ ಕುತಂತ್ರ ಬುದ್ಧಿಯಿಂದಾಗಿ ಕಾಂಗ್ರೆಸ್‌ಗೆ ಇಂತಹ ದುಃಸ್ಥಿತಿ ಬಂದಿದೆ' ಎಂದರು.

'ದೇವೇಗೌಡರು ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಂಡರು ಎಂದು ಸಿದ್ದರಾಮಯ್ಯ ಟೀಕಿಸುತ್ತಿದ್ದಾರೆ. ಹಾಗಾದರೆ ನಾವು ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳಲು ಯಾರು ಕಾರಣ' ಎಂದು ಅವರು ಪ್ರಶ್ನಿಸಿದರು.

ಬಿಜೆಪಿ–ಜೆಡಿಎಸ್ ಮೈತ್ರಿ ಲೋಕಸಭೆ ಚುನಾವಣೆಯ ನಂತರವೂ ಮುಂದುವರಿಯಲಿದೆ. ಮೈತ್ರಿ ಬಗ್ಗೆ ಮಾತನಾಡಲು ಅವರಿಗೆ ಯಾವ ನೈತಿಕತೆ ಇದೆ ಎಂದರು.

ರಾಜಣ್ಣ ಜತೆ ಸೇರಿ ಪಿತೂರಿ: '2019ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿದ್ದರೂ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ್ದೆ. ನನ್ನನ್ನು ಚುನಾವಣೆಗೆ ನಿಲ್ಲಿಸಲು ಏನೆಲ್ಲಾ ಆಟ ಆಡಿದರು. ಬಲವಂತವಾಗಿ ಕರೆತಂದು ತುಮಕೂರು ಕ್ಷೇತ್ರದಿಂದ ಸ್ಪರ್ಧಿಸುವಂತೆ ಮಾಡಿ ಸೋಲಿಸಿದರು' ಎಂದು ಬೇಸರಿಸಿಕೊಂಡರು.

'ಮೈಸೂರು ಕ್ಷೇತ್ರದಲ್ಲಿ ತಮ್ಮ ಹಳೆಯ ಶಿಷ್ಯನಿಗೆ ಟಿಕೆಟ್ ಕೊಡಿಸಲು ನನ್ನನ್ನು ತುಮಕೂರು ಕ್ಷೇತ್ರದಿಂದ ಸ್ಪರ್ಧಿಸುವಂತೆ ಮಾಡಿದರು. ಸಚಿವ ಕೆ.ಎನ್.ರಾಜಣ್ಣ ಜತೆ ಸೇರಿಕೊಂಡು ರಾತ್ರಿ ಒಂದು ಗಂಟೆವರೆಗೂ ಸಭೆ ನಡೆಸಿ, ಪಿತೂರಿ ಮಾಡಿ ನನ್ನನ್ನು ಕಳೆದ ಚುನಾವಣೆಯಲ್ಲಿ ಸೋಲಿಸಿದರು' ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

'ವಾಲ್ಮೀಕಿ ಸಮುದಾಯಕ್ಕೆ ನಾನು ಮಾಡಿದ ಸೇವೆ ಸ್ಮರಿಸುವುದಾದರೆ ಯಾವುದೇ ಕಾರಣಕ್ಕೂ ಕೆ.ಎನ್.ರಾಜಣ್ಣ ಅವರನ್ನು ನಂಬಬಾರದು. ಅವರು ನಂಬಿಕೆ, ವಿಶ್ವಾಸಕ್ಕೆ ಅರ್ಹರಲ್ಲ' ಎಂದು ದೇವೇಗೌಡ ಕಿಡಿಕಾರಿದರು.

'ಗೊಲ್ಲರಿಗೆ ಮೀಸಲಾತಿ ಕೊಡಿಸುವೆ'



ಎಚ್.ಡಿ. ದೇವೇಗೌಡ

ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಮೂರು ತಿಂಗಳಲ್ಲಿ ಗೊಲ್ಲ ಸಮುದಾಯಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ಕೊಡಿಸಲಾಗುವುದು ಎಂದು ಎಚ್.ಡಿ.ದೇವೇಗೌಡ ಭರವಸೆ ನೀಡಿದರು.

'ಗೊಲ್ಲರಿಗೆ ಮೀಸಲಾತಿ ಕೊಡಿಸುವ ಜವಾಬ್ದಾರಿ ನನ್ನ ಮೇಲಿದೆ. ಕೊಟ್ಟ ಮಾತು ತಪ್ಪುವುದಿಲ್ಲ. ಅವರ ಮನೆ ಬಾಗಿಲಿಗೆ ಮೀಸಲಾತಿ ತಲುಪಿಸುತ್ತೇನೆ' ಎಂದು ಹೇಳಿದರು.

'ನನ್ನದು ಗರ್ವ ಅಲ್ಲ, ಸಹಜ ಸ್ವಾಭಿಮಾನ'



ಸಿದ್ದರಾಮಯ್ಯ

ಬೆಂಗಳೂರು: 'ನನ್ನ ಗರ್ವಭಂಗ ಮಾಡುತ್ತೇನೆಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಶಪಥ ಮಾಡಿದ್ದಾರೆ. ನನ್ನದು ಗರ್ವವೂ ಅಲ್ಲ, ಅಹಂಕಾರವೂ ಅಲ್ಲ. ನನ್ನದು ಕನ್ನಡಿಗರ ರಕ್ತದ ಕಣಕಣದಲ್ಲಿರುವ ಸ್ವಾಭಿಮಾನ. ಕನ್ನಡ-ಕನ್ನಡಿಗ-ಕರ್ನಾಟಕದ ರಕ್ಷಣೆಗಾಗಿ ತಲೆ ಎತ್ತಿ, ಎದೆಯುಬ್ಬಿಸಿ ಪ್ರಶ್ನಿಸುವ ಮತ್ತು ಹೋರಾಟ ನಡೆಸುವ ಸ್ವಾಭಿಮಾನ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಾಧ್ಯಮ ಹೇಳಿಕೆ ನೀಡಿರುವ ಮುಖ್ಯಮಂತ್ರಿ, 'ವೈಯಕ್ತಿಕ ಇಲ್ಲವೆ ರಾಜಕೀಯ ಲಾಭಕ್ಕಾಗಿ ನಾನು ಯಾರ ಜೊತೆಯಲ್ಲಿಯೂ ರಾಜಿ ಮಾಡಿಕೊಳ್ಳಲಾರೆ. ಅಂತಹ ಪರಿಸ್ಥಿತಿ ಬಂದೊದಗಿದರೆ ರಾಜಕೀಯವಾಗಿ ನಿವೃತ್ತಿಯಾಗುತ್ತೇನೆಯೇ ವಿನಾ, ಕರ್ನಾಟಕದ ಹಿತಾಸಕ್ತಿಯ ವಿರೋಧಿಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾರೆ' ಎಂದು ಕೆಣಕಿದ್ದಾರೆ.

'ಹತ್ತು ವರ್ಷಗಳ ಅಧಿಕಾರ ಅವಧಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕರ್ನಾಟಕದ ಹಿತಾಸಕ್ತಿ ವಿರುದ್ಧ ಕೆಲಸ ಮಾಡಿದೆ. ನಾಡಧ್ವಜಕ್ಕೆ ವಿರೋಧ, ಹಿಂದಿ ಹೇರಿಕೆ, ಕಾವೇರಿ, ಕೃಷ್ಣ, ಮಹದಾಯಿ ಜಲವಿವಾದಗಳಲ್ಲಿ ಅನ್ಯಾಯ, ಕೇಂದ್ರ ಸ್ವಾಮ್ಯದ ಸಂಸ್ಥೆಗಳಲ್ಲಿ ಕನ್ನಡಿಗ ಯುವಜನರಿಗೆ ವಂಚನೆ.... ಹೀಗೆ ಕರ್ನಾಟಕಕ್ಕೆ ದ್ರೋಹ ಎಸಗುತ್ತಾ ಬಂದಿದೆ. ಹೀಗಿದ್ದರೂ, ದೇಶದ ಎಲ್ಲ ಸಮಸ್ಯೆಗಳಿಗೆ ಮೋದಿ ಮತ್ತು ಶಾ ಬಳಿ ಪರಿಹಾರವಿದೆ ಎಂದು ಹೇಳುವಾಗ ಕನಿಷ್ಠ ನಿಮ್ಮ ಆತ್ಮಸಾಕ್ಷಿಯಾದರೂ ನಿಮ್ಮನ್ನು ಚುಚ್ಚಲಿಲ್ಲವೇ' ಎಂದೂ ಪ್ರಶ್ನಿಸಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರ ತೆರಿಗೆ ಹಂಚಿಕೆಯಲ್ಲಿ ಮಾಡಿರುವ ಅನ್ಯಾಯಕ್ಕೆ ಕ್ಷಮೆಯೇ ಇಲ್ಲ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಕೂಡಾ ಕೇಂದ್ರ ಸರ್ಕಾರದ ಅನ್ಯಾಯವನ್ನು ಕೂಗಿ ಹೇಳುತ್ತಿವೆ. ಆದರೆ, ಕರ್ನಾಟಕದ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಮಾತ್ರ ನಮ್ಮ ನಾಡಿನ ವಿರೋಧಿಗಳ ಜೊತೆಯಲ್ಲಿ ರಾಜಿ ಮಾಡಿಕೊಂಡು ಕನ್ನಡಿಗರಿಗೆ ದ್ರೋಹ ಎಸಗಿದೆ' ಎಂದು ಟೀಕಿಸಿದ್ದಾರೆ.

ಅಡುಗೆ ಮಾಡಲು ಲಾಯಕ್ಕು ಹೇಳಿಕೆ: ಸೈನಾ ನೆಹ್ವಾಲ್ ಕಿಡಿ

ಪ್ರಜಾವಾಣಿ ವಾರ್ತೆ



ಸೈನಾ ನೆಹ್ವಾಲ್

ಬೆಂಗಳೂರು (ಪಿಟಿಐ): ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಟೀಕಿಸುವ ಭರದಲ್ಲಿ ಅವರು ಅಡುಗೆ ಮಾಡಲು ಲಾಯಕ್ಕು ಎಂದು ಹೇಳಿದ್ದ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ತರಾಟೆಗೆ ತೆಗೆದುಕೊಂಡಿದ್ದಾರೆ.

'ಮಹಿಳೆಯರು ಅಡುಗೆ ಮಾಡಲು ಲಾಯಕ್ಕು ಎಂದು ಶಾಮನೂರು ಶಿವಶಂಕರ ಪ್ಪಾಜಿ ಅವರು ದಾವಣಗೆರೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಬಗ್ಗೆ ಹೇಳಿಕೆ ನೀಡಿದ್ದಾರೆ. ಇಂಥ ಕೀಳು ಅಭಿರುಚಿಯ ಹೇಳಿಕೆಯನ್ನು 'ಲಡ್ಕಿ ಹೂಂ, ಲಡ್ ಸಕ್ತೀ ಹೂಂ' (ನಾನು ಹೆಣ್ಣು, ಹೋರಾಡಬಲ್ಲೆ) ಎಂದು ಹೇಳುವ ಪಕ್ಷದಿಂದ ನಿರೀಕ್ಷಿಸಿರಲೇ ಇಲ್ಲ' ಎಂದು 34 ವರ್ಷದ ಆಟಗಾರ್ತಿ 'ಎಕ್ಸ್'ನಲ್ಲಿ ಬರೆದಿದ್ದಾರೆ.

'ನಾನು ಭಾರತಕ್ಕೆ ಪದಕ ಗೆದ್ದುಕೊಂಡು ಬಂದಾಗ ಕಾಂಗ್ರೆಸ್ ಪಕ್ಷ ನಾನೇನು ಮಾಡಬೇಕೆಂದು ಬಯಸಿತ್ತು? ಎಲ್ಲ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ತಮ್ಮ ಕ್ಷೇತ್ರದಲ್ಲಿ ಮೇರುಸಾಧನೆ ಮಾಡಲು ಬಯಸುವಾಗ ಇಂಥ ಹೇಳಿಕೆಗಳು ವ್ಯಾಕುಲಗೊಳಿಸುತ್ತವೆ' ಎಂದಿದ್ದಾರೆ. ಸೈನಾ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.

ದಾವಣಗೆರೆಯ ಬಂಟರ ಭವನದಲ್ಲಿ ಇತ್ತೀಚೆಗೆ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಪಕ್ಷದ ಹಿರಿಯ ಶಾಸಕ ಶಿವಶಂಕರಪ್ಪ ಈ ಹೇಳಿಕೆ ನೀಡಿದ್ದರು.

ಗುಟ್ಟು ಬಿಡದ ಸುಮಲತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಮುಂದಿನ ರಾಜಕೀಯ ಹೆಜ್ಜೆ ಕುರಿತು ರಹಸ್ಯ ಕಾಯ್ದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ಶನಿವಾರ ಬೆಂಬಲಿಗರ ಸಭೆ ನಡೆಸಿದರೂ ಯಾವುದೇ ನಿರ್ಧಾರ ಪ್ರಕಟಿಸಲಿಲ್ಲ.

ಮಂಡ್ಯ ಜಿಲ್ಲೆಯಿಂದ ಬಂದಿದ್ದ ಬೆಂಬಲಿಗರ ಜತೆ ಇಲ್ಲಿನ ಜೆ.ಪಿ.ನಗರದಲ್ಲಿ ಸುದೀರ್ಘ ಸಭೆ ನಡೆಸಿ ಅಭಿಪ್ರಾಯ ಆಲಿಸಿದರು. ಮಗ ಅಭಿಷೇಕ್ ಜತೆಗಿದ್ದರು. ಮಂಡ್ಯದಲ್ಲೇ ಏ. 3ರಂದು ಸಭೆ ನಡೆಸಿ ತಮ್ಮ ಮುಂದಿನ ಹೆಜ್ಜೆಯ ಕುರಿತು ನಿರ್ಧಾರ ಪ್ರಕಟಿಸುವುದಾಗಿ ಹೇಳಿದರು.

ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಬೆಂಬಲಿಗರಲ್ಲಿ ಹಲವರು ಒತ್ತಾಯಿಸಿದರು. ಜನಾಭಿಪ್ರಾಯ ಸಂಗ್ರಹಿಸಿದ ಬಳಿಕವೇ ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ಸಭೆಯ ಬಳಿಕ ತೆರೆದ ವಾಹನದಲ್ಲಿ ನಿಂತು ಮಾತನಾಡಿದ ಅವರು, 'ಹಿಂದಿನ ಚುನಾವಣೆಯಲ್ಲಿ ದೊಡ್ಡ ಶಕ್ತಿಗಳೂ ಜತೆಗಿರದಿದ್ದರೂ ನಿಮ್ಮೆಲ್ಲರ ಬೆಂಬಲದಿಂದ ಗೆದ್ದು ಬಂದಿದ್ದೆ. ಎಷ್ಟೇ ಸವಾಲು, ನೋವು ಎದುರಾದರೂ ಎದೆಗುಂದಲಿಲ್ಲ. ಪ್ರಾಮಾಣಿಕವಾಗಿ ಮಂಡ್ಯ ಜಿಲ್ಲೆಯ ಸೇವೆ ಮಾಡಿದ್ದೇನೆ. ಮಂಡ್ಯದ ಘನತೆಯನ್ನು ಸಂಸತ್ತಿನಲ್ಲೂ ಎತ್ತಿ ಹಿಡಿದಿದ್ದೇನೆ' ಎಂದರು.

'ನಾನು ಸ್ವಾರ್ಥಕ್ಕಾಗಿ ರಾಜಕೀಯ ಮಾಡುವುದಿಲ್ಲ. ಮಂಡ್ಯ ಅಭ್ಯರ್ಥಿಯನ್ನು ನಿರ್ಧರಿಸಿದ ಬಳಿಕ ಬೇರೆ ಕಡೆ ಸ್ಪರ್ಧಿಸುವಂತೆ ಬಿಜೆಪಿಯಿಂದ ಆಹ್ವಾನ ಬಂದಿತ್ತು. ಮಂಡ್ಯದಲ್ಲಿರುವುದೇ ನನ್ನ ಸ್ವಾರ್ಥ' ಎಂದು ಹೇಳಿದರು.

'ಬಿಜೆಪಿ ಬೆಂಬಲಿಸಿದರೆ ಉತ್ತಮ ಸ್ಥಾನಮಾನ ನೀಡುವುದಾಗಿ ಬಿ.ಎಸ್. ಯಡಿಯೂರಪ್ಪ ಮತ್ತು ಬಿ.ವೈ. ವಿಜಯೇಂದ್ರ ತಿಳಿಸಿದ್ದರು. ನನಗೆ ಸೀಮಿತವಾಗಿ ತೀರ್ಮಾನಿಸಲಾಗದು. ನನ್ನನ್ನು ಬೆಂಬಲಿಸಿದವರ ಸ್ಥಾನಮಾನದ ಬಗ್ಗೆಯೂ ನಾನು ಯೋಚಿಸುತ್ತಿದ್ದೇನೆ. ಆ ಬಗ್ಗೆ ಬಿಜೆಪಿ ವರಿಷ್ಠರ ಮುಂದೆಯೇ ಪ್ರಶ್ನೆ ಎತ್ತಿದ್ದೇನೆ' ಎಂದರು.

'ಬಿಜೆಪಿ ಸೇರುವಂತೆ ಆಹ್ವಾನ ಬಂದಿದೆ. ಮಂಡ್ಯದ ಜನರ ಋಣ ಎಲ್ಲಕ್ಕಿಂತ ಮುಖ್ಯ. ಏ.3ರಂದು ಮಂಡ್ಯದಲ್ಲಿಸಭೆನಡೆಸಿತೀರ್ಮಾನಪ್ರಕಟಿಸಲಾಗುವುದು' ಎಂದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ವೇದಿಕೆ ಹಂಚಿಕೊಳ್ಳುವ ಕುರಿತ ಪ್ರಶ್ನೆಗೆ, 'ಎಲ್ಲ ಪ್ರಶ್ನೆಗಳಿಗೂ ಅಂದೇ ಉತ್ತರ ದೊರಕಲಿದೆ' ಎಂದರು.

ಶಾಸಕ ಶ್ರೀನಿವಾಸ್ ವಿರುದ್ಧ ಪ್ರಕರಣ

ತುಮಕೂರು: ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವಿರುದ್ಧ ವೈಯಕ್ತಿಕ ನಿಂದನೆ ಮಾಡಿದ ಆರೋಪ ಎದುರಿಸುತ್ತಿರುವ ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ, ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ ಅಡಿ ತುಮಕೂರು ಗ್ರಾಮಾಂತರ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಹೆಗ್ಗೆರೆಯಲ್ಲಿ ಮಾರ್ಚ್ 25ರಂದು ನಡೆದ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆಯಲ್ಲಿ ಶ್ರೀನಿವಾಸ್, 'ವಿ. ಸೋಮಣ್ಣ ಬೆಂಗಳೂರಿನ ಕೊಚ್ಚೆ ನೀರು, ತುಮಕೂರಿನ ಜನ ಸ್ವಾಭಿಮಾನಿಗಳು, ಪ್ರಜ್ಞಾವಂತರು. ಚುನಾವಣೆಯಲ್ಲಿ ಅವರನ್ನು ಗೆಲ್ಲಿಸಬೇಡಿ' ಎಂದು ಹೇಳಿದ್ದರು.

ಈ ಸಭೆಯಲ್ಲಿ ಹಾಜರಿದ್ದ ಚುನಾವಣೆಯ ಎಫ್‌ಎಸ್‌ಟಿ ತಂಡದ ಕೆ.ಶಿವಪ್ಪ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಈ ಸಂಬಂಧ ದೂರು ದಾಖಲಿಸಿಕೊಳ್ಳಲು ನಿರ್ದೇಶನ ನೀಡುವಂತೆ ಕೋರಿ ಜೆಎಂಎಫ್‌ಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಕೋರ್ಟ್ ಆದೇಶದ ಮೇರೆಗೆ ದೂರು ದಾಖಲಿಸಿಕೊಳ್ಳಲಾಗಿದೆ.

ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ; ಬೆಂಬಲಿಗರ ನಂಬಿಸುವುದೇ ಈಶ್ವರಪ್ಪಗೆ ಸವಾಲು

ಬೆಂಕಿ ಮಳೆಗೆ ಬಿಜೆಪಿಯ 'ತಣ್ಣನೆ' ತಂತ್ರಗಾರಿಕೆ

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಈಶ್ವರಪ್ಪ ನಮ್ಮ ನಾಯಕರು. ಬಿಜೆಪಿಯಲ್ಲೇ ಇರುತ್ತಾರೆ. ಪಕ್ಷ ಅವರಿಗೆ ತಾಯಿ ಇದ್ದಂತೆ. ಅಮ್ಮನ ಮಾತು ಮಗ ಮೀರೊಲ್ಲ. ಶೀಘ್ರ ದೊಡ್ಡವರು (ಹೈಕಮಾಂಡ್) ಕರೆ ಮಾಡಿ ಸಮಸ್ಯೆ ಪರಿಹರಿಸುತ್ತಾರೆ...

ಇದು ಬಿ.ಎಸ್.ಯಡಿಯೂರಪ್ಪ ವಿರುದ್ಧ ಬಂಡಾಯದ ಕಹಳೆ ಮೊಳಗಿಸಿ ಸ್ವತಂತ್ರ ಸ್ಪರ್ಧೆಗೆ ಸಿದ್ಧತೆ ನಡೆಸಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಬಗ್ಗೆ ಜಿಲ್ಲೆಯ ಬಿಜೆಪಿ ಮುಖಂಡರು ಕೊಡುತ್ತಿರುವ ಬಹಿರಂಗ ಹೇಳಿಕೆ.

ಪುತ್ರ ಕಾಂತೇಶ ಅವರಿಗೆ ಹಾವೇರಿ ಟಿಕೆಟ್ ಕೈ ತಪ್ಪಿದ್ದಕ್ಕೆ ಈಶ್ವರಪ್ಪ ಆಕ್ರೋಶಗೊಂಡಿದ್ದಾರೆ. ಹೋದಲ್ಲಿ, ಬಂದಲ್ಲಿ ಯಡಿಯೂರಪ್ಪ ಕುಟುಂಬದ ವಿರುದ್ಧ ಬೆಂಕಿ ಉಗುಳುತ್ತಿದ್ದಾರೆ. ಆದರೆ ಬಿಜೆಪಿ ಮುಖಂಡರು ಮಾತ್ರ 'ಈಶ್ವರಪ್ಪ ಬಿಜೆಪಿಯಲ್ಲೇ ಇರುತ್ತಾರೆ' ಎಂದು ತಣ್ಣಗೆ ಪ್ರತಿಕ್ರಿಯಿಸುತ್ತಿದ್ದಾರೆ.

ಇದು ಈಶ್ವರಪ್ಪ ಬೆಂಬಲಿಗರನ್ನು ಗೊಂದಲಕ್ಕೆ ತಳ್ಳಿದೆ. ಈಶ್ವರಪ್ಪ ಅವರನ್ನು ಇನ್ನಷ್ಟು ಕೆಣಕುತ್ತಿದೆ. ತಮ್ಮ ಸ್ಪರ್ಧೆ ವಿಷಯದಲ್ಲಿ ಬೆಂಬಲಿಗರ ನಂಬಿಸುವುದೇ ಅವರಿಗೆ ದೊಡ್ಡ ಸವಾಲಾಗಿದೆ. ಹೀಗಾಗಿ ಹೋದಲ್ಲಿ, ಬಂದಲ್ಲಿ, 'ನಾನು ಚುನಾವಣೆಗೆ ಸ್ಪರ್ಧಿಸುವುದು ಗ್ಯಾರಂಟಿ' ಎಂದು ಪುನರುಚ್ಚರಿಸುತ್ತಿದ್ದಾರೆ.

ಅದರ ಭಾಗವಾಗಿ, 'ಬ್ರಹ್ಮ ಬಂದು ಹೇಳಿದರೂ ನನ್ನ ಸ್ಪರ್ಧೆ ನಿಶ್ಚಿತ' ಎಂದು ಈಚೆಗೆ ಘೋಷಣೆ ಮಾಡಿದ್ದರು. ಅದೇ ದಿನ ಮನೆಯಲ್ಲೇ ಚುನಾವಣಾ ಪ್ರಚಾರ ಕಚೇರಿ ಆರಂಭಿಸಿ ಬೆಂಬಲಿಗರ ಸಭೆ ನಡೆಸಿದ್ದರು.

ಈ ವೇಳೆ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಹಿರಿಯರೊಬ್ಬರು, 'ಈಶ್ವರಪ್ಪ ಯಾವ ಹೊತ್ತಲ್ಲಿ ಬೆಂಬಲಕ್ಕೆ ಕರೆದರೂ ನಾವು ಬರುತ್ತೇವೆ. ಆದರೆ ಅವರು ಚುನಾವಣೆಗೆ ನಿಲ್ಲುವುದು ಈಗಲೂ ಅನುಮಾನ. ಪ್ರಧಾನಿ ನರೇಂದ್ರ ಮೋದಿ ಕರೆ ಮಾಡಿದರೆ ನಿಲುವು ಬದಲಿಸಬಹುದು. ಎಲ್ಲವೂ ದೈವ ನಿಶ್ಚಿತ' ಅಂದು ಬಿಟ್ಟರು. ಮುಜುಗರಕ್ಕೊಳಗಾಗಿದ್ದ ಈಶ್ವರಪ್ಪ, 'ಸ್ವತಃ ನರೇಂದ್ರ ಮೋದಿ ಬಂದು ಹೇಳಿದರೂ ಸ್ಪರ್ಧಿಸುವುದು ನಿಶ್ಚಿತ' ಎಂದು ಅಲ್ಲಿಯೇ ಸ್ಪಷ್ಟನೆ ಕೊಡಬೇಕಾಯಿತು.

'ದಾವಣಗೆರೆ, ಬೆಳಗಾವಿಯಲ್ಲಿ ಭಿನ್ನಮತಶಮನಮಾಡಿದರೂಶಿವಮೊಗ್ಗದಲ್ಲಿ ಆ ಕೆಲಸ ಆಗಲಿಲ್ಲ. ಪಕ್ಷದವರೂ ಸಾಹೇಬರ (ಈಶ್ವರಪ್ಪ) ಮನವೊಲಿಕೆಯ ಪ್ರಯತ್ನ ಕೈ ಬಿಟ್ಟಂತೆ ಕಾಣುತ್ತಿದೆ. ಈಗ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ನಂಬಿಕೆ ಬರುತ್ತಿದೆ. ಆದರೂ ಕೊನೆಯ ಗಳಿಗೆಯಲ್ಲಿ ಮೋದಿ ಕರೆ ಮಾಡಿದರೆ?' ಎಂದು ಬಿಜೆಪಿಯಲ್ಲಿರುವ ಈಶ್ವರಪ್ಪ ಬೆಂಬಲಿಗರೊಬ್ಬರು ಪ್ರಶ್ನಿಸುತ್ತಾರೆ. 'ನಾಮಪತ್ರ ಹಿಂದಕ್ಕೆ ಪಡೆಯುವ ಕೊನೆಯ ದಿನದವರೆಗೂ ಕಾದು ನೋಡುವೆ. ನಂತರ ಅವರೊಂದಿಗೆ ಬಹಿರಂಗವಾಗಿ ಗುರುತಿಸಿಕೊಳ್ಳುವೆ' ಎಂದು ಹೇಳುತ್ತಾರೆ.

ಬಿಜೆಪಿಯವರು ಕರೆಯುತ್ತಿಲ್ಲ?: 'ಈಶ್ವರಪ್ಪ ಸ್ಪರ್ಧಿಸಿದರೆ ಹಿಂದುತ್ವದ ಪರ ಮತಗಳು ಮಾತ್ರವಲ್ಲ. ಹಿಂದುಳಿದ ವರ್ಗಗಳ ಮತಗಳೂ ಅನುಕಂಪದ ರೂಪದಲ್ಲಿ ಅವರಿಗೆ ಬೀಳಬಹುದು. ಇಲ್ಲಿ ನಷ್ಟದ ಬಾಬ್ತು ನಮ್ಮದು ಮಾತ್ರವಲ್ಲ ಕಾಂಗ್ರೆಸ್‌ನದ್ದೂ ಆಗಲಿದೆ. ಹೀಗಾಗಿ ನಾವು ಕರೆಯುವುದು ನಿಲ್ಲಿಸಿದ್ದೇವೆ' ಎಂದು ಬಿಜೆಪಿ ಮುಖಂಡರೊಬ್ಬರು ಹೇಳುತ್ತಾರೆ.



ಪಕ್ಷಕ್ಕೆ ನಾನು ವಾಪಸ್ ಬರುವೆ ಎಂದು ಹೇಳಿಕೆ ನೀಡಿ ಬೆಂಬಲಿಗರಲ್ಲಿ ಗೊಂದಲ ಸೃಷ್ಟಿಸುವುದು ವಿರೋಧಿಗಳ ಚುನಾವಣಾ ತಂತ್ರಗಾರಿಕೆಯ ಭಾಗ. ನನ್ನ ಸ್ಪರ್ಧೆ ನಿಶ್ಚಿತ
ಕೆ.ಎಸ್. ಈಶ್ವರಪ್ಪ, ಮಾಜಿ ಉಪಮುಖ್ಯಮಂತ್ರಿ

'ದೇವರನ್ನೂ ನಂಬಿಸಬೇಕಾಯಿತು'

ಲೋಕಸಭಾ ಚುನಾವಣೆಗೆ ಕೆ.ಎಸ್.ಈಶ್ವರಪ್ಪ ನಿಲ್ಲುತ್ತಿದ್ದಾರೋ, ಇಲ್ಲವೋ ಎಂಬ ಅನುಮಾನ ಆ ದೇವರಿಗೂ ಬಂದಿದೆಯಂತೆ. ಭದ್ರಾವತಿ ಬಳಿಯ ದಾನವಾಡಿ ರಂಗನಾಥ ದೇವಸ್ಥಾನದಲ್ಲಿ ಶುಕ್ರವಾರ ಈ ಸಂಗತಿ ನಿಷ್ಕರ್ಷೆಗೆ ಒಳಪಟ್ಟಿತ್ತು ಎಂದು ಕೆ.ಎಸ್. ಈಶ್ವರಪ್ಪ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಅಲ್ಲಿ ಏನಾದರೂ ಕೋರಿಕೊಂಡರೆ ಒಂದೇ ನಿಮಿಷದಲ್ಲಿ ದೇವರ ವಿಗ್ರಹದಿಂದ ಹೂವಿನ ರೂಪದ ಪ್ರಸಾದ ಸಿಗುತ್ತದೆ ಎಂಬ ನಂಬಿಕೆ ಇದೆ. ಆದರೆ ಎರಡು ನಿಮಿಷ ಕೂತರೂ ನನಗೆ ಸಿಗಲಿಲ್ಲ. ರಂಗನಾಥಪ್ಪ ಯಾಕೆ ಹೀಗೆ ಮಾಡುತ್ತಿದ್ದೀಯ ಪ್ರಸಾದ ಕೊಡು ಎಂದು ಜೊತೆಗಿದ್ದ ಬೆಂಬಲಿಗರು ಕೂಗಿ ಕೇಳಿದರೂ ಫಲ ಸಿಗಲಿಲ್ಲ. ಸ್ನೇಹಿತರೊಬ್ಬರ ಸಲಹೆ ಮೇರೆಗೆ, ರಂಗನಾಥ ನಾನು ಚುನಾವಣೆಗೆ ನಿಲ್ಲುವುದು ನೂರಕ್ಕೆ ನೂರು ಸತ್ಯ. ದಯವಿಟ್ಟು ನನಗೆ ಆಶೀರ್ವಾದ ಮಾಡು ಎಂದು ಕೇಳಿಕೊಂಡೆ. ತಕ್ಷಣ ಪ್ರಸಾದ ಸಿಕ್ಕಿತು' ಎಂದು ಈಶ್ವರಪ್ಪ ಹೇಳಿದರು.



ಮತಯಾಚನೆ...

ಹೊಸಪೇಟೆ ಸಮೀಪದ ಹೊಸೂರಿನಲ್ಲಿ ಶನಿವಾರ ಬಳ್ಳಾರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಶ್ರೀರಾಮುಲು ಪರ ಮಾಜಿ ಸಚಿವ ಆನಂದ್ ಸಿಂಗ್ ವೃದ್ಧೆಯೊಬ್ಬರಲ್ಲಿ ಮತ ಯಾಚಿಸಿದ ಪರಿ –ಪ್ರಜಾವಾಣಿ ಚಿತ್ರ/ ಲವ ಕೆ.

ಹೇಮಂತ್ ನಿಂಬಾಳ್ಕರ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಅವರ ಜಾಗಕ್ಕೆ ಬಿಬಿಎಂಪಿ ವಿಶೇಷ ಆಯುಕ್ತ ಸುರಲ್ಕರ್ ವಿಕಾಸ್ ಕಿಶೋರ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಶನಿವಾರವೇ ಅವರು ಅಧಿಕಾರ ಸ್ವೀಕರಿಸಿದ್ದಾರೆ. 'ಹೇಮಂತ್ ನಿಂಬಾಳ್ಕರ್ ಅವರು ತಮ್ಮ ಪತ್ನಿ ಹಾಗೂ ಉತ್ತರ ಕನ್ನಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಂಜಲಿ ನಿಂಬಾಳ್ಕರ್ ಅವರಿಗೆ ಮತ ನೀಡುವಂತೆ ಪ್ರಭಾವ ಬೀರುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ತಕ್ಷಣವೇ ಅವರನ್ನು ವರ್ಗಾವಣೆ ಮಾಡಬೇಕು. ರಾಜ್ಯದಲ್ಲೇ ಇದ್ದರೆ ಮತ್ತೆ ತಮ್ಮ ಪ್ರಭಾವ ಬಳಸುವ ಸಾಧ್ಯತೆ ಇದ್ದು, ಅವರಿಗೆ ಕರ್ನಾಟಕದಿಂದ ಹೊರಗೆ ಕೆಲಸ ಮಾಡಲು ಅವಕಾಶ ಕೊಡಬೇಕು' ಎಂದು ಮೂರು ದಿನಗಳ ಹಿಂದಷ್ಟೇ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಈ ಹಿನ್ನೆಲೆಯೊಳಗೆ ಅವರನ್ನು ವರ್ಗಾವಣೆ ಮಾಡಲಾಗಿದೆ.

ಕಾಂಗ್ರೆಸ್ ಸೇರಿದ ತೇಜಸ್ವಿನಿ ಗೌಡ

ನವದೆಹಲಿ: ಕರ್ನಾಟಕ ವಿಧಾನ ಪರಿಷತ್‌ನ ಮಾಜಿ ಸದಸ್ಯೆ ತೇಜಸ್ವಿನಿ ಗೌಡ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಶನಿವಾರ ಸೇರ್ಪಡೆಯಾದರು.

2014ರಲ್ಲಿ ಬಿಜೆಪಿ ಸೇರಿದ್ದ ಅವರು 2018ರಲ್ಲಿ ಪರಿಷತ್ ಸದಸ್ಯೆಯಾಗಿ ಆಯ್ಕೆಯಾಗಿದ್ದರು. ಅವರು ಮೈಸೂರು ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಸಿಕ್ಕಿರಲಿಲ್ಲ. ಕೆಲವು ದಿನಗಳ ಹಿಂದೆ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಬಿಜೆಪಿಗೆ ಸಾಂವಿಧಾನಿಕ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇಲ್ಲ' ಎಂದು ಆರೋಪಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು 23 ಕ್ಷೇತ್ರಗಳಲ್ಲಿ ಜಯ ಗಳಿಸಲಿದೆ ಎಂದರು.

ಅವರು ಕನಕಪುರ ಕ್ಷೇತ್ರದಿಂದ 14ನೇ ಲೋಕಸಭೆಗೆ (2004–2009) ಆಯ್ಕೆ ಆಗಿದ್ದರು. ಆಗ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನುಮಣಿಸಿದ್ದರು.

ತೆರಿಗೆ ಬೆದರಿಕೆಗೆ ಬಗ್ಗಲ್ಲ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಸೋಲಿನ ಭೀತಿಯಲ್ಲಿರುವ ಬಿಜೆಪಿ, ಐ.ಟಿ, ಇ.ಡಿ, ಸಿಬಿಐ ಮತ್ತಿತರ ಸ್ವಾಯತ್ತ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಹಣಿಯಲು ಹೊರಟಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

'ಪಕ್ಷವನ್ನು ಹೀಗೆ ದುರ್ಬಲಗೊಳಿಸಿ ಗೆಲುವು ಸಾಧಿಸಬಹುದೆಂದು ಬಿಜೆಪಿ ತಿಳಿದುಕೊಂಡಿದ್ದರೆ ಅದು ಭ್ರಮೆ' ಎಂದು ಮಾಧ್ಯಮ ಪ್ರಕಟಣೆಯಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ.

'ಆದಾಯ ತೆರಿಗೆ ಪಾವತಿಸದ ಆರೋಪ ಹೊರಿಸಿ ₹ 1,823 ಕೋಟಿ ಪಾವತಿಸುವಂತೆ ಐ.ಟಿ ಇಲಾಖೆ ಪಕ್ಷಕ್ಕೆ ನೋಟಿಸ್ ನೀಡಿದೆ. 2017-18ರಲ್ಲಿ ಬಿಜೆಪಿ ವಿಳಾಸವೇ ಇಲ್ಲದ 1,297 ದಾನಿಗಳಿಂದ ₹ 42 ಕೋಟಿ ದೇಣಿಗೆ ಪಡೆದಿರುವುದನ್ನು ಪಕ್ಷದ ನಾಯಕರು ಬಹಿರಂಗಪಡಿಸಿದ್ದಾರೆ. ನಮ್ಮ ಪಕ್ಷಕ್ಕೆ ಅನ್ವಯಿಸಿದ ಮಾನದಂಡವನ್ನೇ ಅನ್ವಯಿಸಿದರೆ ಬಿಜೆಪಿ ಕಳೆದ ಏಳು ವರ್ಷಗಳಲ್ಲಿ ನಡೆಸಿರುವ ತೆರಿಗೆ ಉಲ್ಲಂಘನೆಗೆ ₹ 4,263 ಕೋಟಿ ಪಾವತಿಸಬೇಕಾಗಿದೆ' ಎಂದಿದ್ದಾರೆ.

'ಚುನಾವಣೆ ಘೋಷಣೆಯಾಗುತ್ತಿದ್ದಂತೆ ಟಿಎಂಸಿ, ಸಿಪಿಐ ಸೇರಿ ವಿವಿಧ ವಿರೋಧ ಪಕ್ಷಗಳ ಮೇಲೆಯೂ ಐ.ಟಿ ಇಲಾಖೆ ತೆರಿಗೆ ಭಯೋತ್ಪಾದನೆಯ ಅಸ್ತ್ರ ಪ್ರಯೋಗಿಸಿದೆ. ಆದರೆ, ಬಿಜೆಪಿಯ ತೆರಿಗೆ ಉಲ್ಲಂಘನೆ ಬಗ್ಗೆ ಮಾತ್ರ ಕುರುಡಾಗಿದೆ' ಎಂದಿದ್ದಾರೆ.

'ಕಾಂಗ್ರೆಸ್ ಪಕ್ಷದ ಕೆಲವು ನಾಯಕರ ಡೈರಿಗಳೆಂದು ಹೇಳಲಾದ ದಾಖಲೆ ಪತ್ರಗಳನ್ನು ಮುಂದಿಟ್ಟುಕೊಂಡು ಈಗ ಆರೋಪ ಮಾಡುತ್ತಿರುವ ಐಟಿ ಇಲಾಖೆಗೆ, ಕರ್ನಾಟಕದಲ್ಲಿಯೇ ಬಹಿರಂಗವಾಗಿದ್ದ ಯಡಿಯೂರಪ್ಪ ಡೈರಿಗಳು, ನರೇಂದ್ರ ಮೋದಿಯವರೂ ಫಲಾನುಭವಿ ಎಂದು ಆರೋಪಿಸಲಾಗಿರುವ 'ಬಿರ್ಲಾ-ಸಹಾರಾ' ಡೈರಿಯಾಗಲಿ ಏಕೆ ಕಣ್ಣಿಗೆ ಬಿದ್ದಿಲ್ಲ. ಚುನಾವಣಾ ಬಾಂಡ್ ಹಗರಣದಿಂದ ಗಮನ ಬೇರೆಡೆ ಸೆಳೆಯುವ ಜೊತೆಗೆ ಈಗ ವಿಪಕ್ಷಗಳ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದೆ' ಎಂದು ದೂರಿದ್ದಾರೆ.

'ವಿಜಯ್ ಮಲ್ಯ, ನೀರವ್ ಮೋದಿ ಮೊದಲಾದ ಬ್ಯಾಂಕ್ ವಂಚಕರ ₹ 10.09 ಲಕ್ಷ ಕೋಟಿಯಷ್ಟು ಬ್ಯಾಂಕ್ ಸಾಲ ಮನ್ನಾ ಮಾಡಿರುವ ಬಿಜೆಪಿ ಸರ್ಕಾರ, ಅವರಿಂದ ಪಡೆದಿರುವ ಕಮಿಷನ್ ಹಣ ಎಷ್ಟು ಎನ್ನುವುದನ್ನು ತಿಳಿಸಬೇಕಾಗಿದೆ. ಕಾಂಗ್ರೆಸ್ ಪಕ್ಷದ ನಿಜವಾದ ಶಕ್ತಿ ಹಣ ಬಲ ಅಲ್ಲ, ಜನ ಬಲ. ಬಿಜೆಪಿಯಲ್ಲಿ ಹಣ ಬಲ ಇದ್ದರೆ ನಮ್ಮಲ್ಲಿ ಜನಬಲ ಇದೆ. ತೆರಿಗೆ ವಂಚಕರು, ಬ್ಯಾಂಕ್‌ಗಳನ್ನು ಮುಳುಗಿಸಿದವರು, ಗಣಿ ಲೂಟಿಕೋರರು, ಕಾಳಸಂತೆಕೋರರು, ಕಳ್ಳ-ಖದೀಮರೇ ಬಿಜೆಪಿಯ ಬಲ' ಎಂದೂ ಕುಟುಕಿದ್ದಾರೆ.

ವಿರೋಧ ಪಕ್ಷಗಳನ್ನು ಸದೆಬಡಿದು ಮತ್ತೇ ಅಧಿಕಾರಕ್ಕೆ ಬರಲು ಬಿಜೆಪಿಯವರು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ
ಜಿ. ಪರಮೇಶ್ವರ, ಗೃಹ ಸಚಿವ

'ಶೋಭಾಗೆ ಯಾಕೆ ನೋಟಿಸ್ ಕೊಟ್ಟಿಲ್ಲ?'

ಬೆಂಗಳೂರು: 'ಅಕ್ರಮ ಹಣ ವರ್ಗಾವಣೆಯ ಆರೋಪ ಎದುರಿಸುತ್ತಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಯಾಕೆ ಇ.ಡಿ ನೋಟಿಸ್ ಕೊಟ್ಟಿಲ್ಲ' ಎಂದು ಕೆಪಿಸಿಸಿ ವಕ್ತಾರ ರಮೇಶ್ ಬಾಬು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷಕ್ಕೆ ಯಾಕೆ ನೋಟಿಸ್ ಕೊಡಲಾಗಿದೆ. ಕೇಜ್ರಿವಾಲ್ ಮೇಲೆ ಯಾವ ಆರೋಪವೂ ಇಲ್ಲ. ಕೆಲವು ಸಾಕ್ಷ್ಯಗಳನ್ನು ಬಳಸಿಕೊಂಡು ಅವರನ್ನು ಬಂಧಿಸಲಾಗಿದೆ' ಎಂದು ಕಿಡಿಕಾರಿದರು. ಶೋಭಾ ಮೇಲೆ 24 ಗಂಭೀರ ಆರೋಪಗಳೂ ಇವೆ. ಇಷ್ಟಿದ್ದರೂ ಅವರನ್ನು ಕೇಂದ್ರದಲ್ಲಿ ಹೇಗೆ ಮಂತ್ರಿ ಮಾಡಲಾಗಿದೆ' ಎಂದರು.

ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ.ರಾಜೀವ್ ಗೌಡ ಅವರು, 'ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಇ.ಡಿ ಪ್ರಕರಣದಲ್ಲಿ ಆರೋಪಿ. ಅವರು ಇಲ್ಲಿ ನಾಮಪತ್ರ ಸಲ್ಲಿಕೆಗೂ ಮೊದಲು ಅವರ ಮೇಲೆ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಕುಕ್ಕರ್ ಕಂಪನಿಗೆ ನೋಟಿಸ್ ಜಾರಿ

ಬೆಂಗಳೂರು: ಮತದಾರರಿಗೆ ಆಮಿಷ ಒಡ್ಡಲು ರಾಜಕಾರಣಿಗಳಿಗೆ ಪ್ರೆಷರ್ ಕುಕ್ಕರ್ ಪೂರೈಸಿರುವ ಅನುಮಾನದ ಮೇಲೆ ರಾಮನಗರ ಜಿಲ್ಲೆ ಹಾರೋಹಳ್ಳಿ ತಾಲ್ಲೂಕಿನಲ್ಲಿರುವ ಪ್ರೆಷರ್ ಕುಕ್ಕರ್ ತಯಾರಿಕಾ ಕಂಪನಿಯೊಂದಕ್ಕೆ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.ಈ ಕಂಪನಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಏಳು ದಾಸ್ತಾನು ಕೇಂದ್ರಗಳನ್ನು ಹೊಂದಿದೆ. ಕೆಲವು ತಿಂಗಳುಗಳಿಂದ ತಯಾರಿಸಿರುವ ಕುಕ್ಕರ್‌ಗಳ ಸಂಖ್ಯೆ, ಸಗಟು ಖರೀದಿದಾರರ ವಿವರ ಒದಗಿಸುವಂತೆ ಐ.ಟಿ ಅಧಿಕಾರಿಗಳು ಸೂಚಿಸಿದ್ದಾರೆ. ಬೆಂಗಳೂರಿನ ಕಚೇರಿಗೆ ವಿಚಾರಣೆಗೆ ಹಾಜರಾಗುವಂತೆಯೂ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಲಕ್ಷ್ಮಣ ರೇಖೆ ದಾಟಿದರೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುಂಪು ರಾಜಕಾರಣ ನಮ್ಮಲ್ಲಿಲ್ಲ. ಲಕ್ಷ್ಮಣ ರೇಖೆ ದಾಟಲು ಯಾರಿಗೂ ಅವಕಾಶ ಇಲ್ಲ. ಪಕ್ಷದಲ್ಲಿ ಶಿಸ್ತು ಮುಖ್ಯ. ಶಿಸ್ತು ಉಲ್ಲಂಘಿಸಿದರೆ ಕ್ರಮ ಕೈಗೊಳ್ಳುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಎಚ್ಚರಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋಲಾರ ಕ್ಷೇತ್ರದ ಟಿಕೆಟ್ ವಿಚಾರದಲ್ಲಿ ಕೆ.ಎಚ್.ಮುನಿಯಪ್ಪ ಮತ್ತು ರಮೇಶ್ ಕುಮಾರ್ ಜೊತೆ ಮಾತನಾಡಿದ್ದೇನೆ. ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಎರಡೂ ಬಣಗಳಿಗೂ ಟಿಕೆಟ್ ಕೊಟ್ಟಿಲ್ಲ' ಎಂದರು.

'ಶಿಸ್ತು ಉಲ್ಲಂಘಿಸಿದವರು ಕ್ಷಮೆ ಕೇಳಿದ್ದಾರೆ. ಶಾಸಕರು, ಸಚಿವರು ಸೇರಿ ಎಲ್ಲರೂ ಪಕ್ಷದ ತೀರ್ಮಾನಕ್ಕೆ ಬದ್ಧರಾಗಿರಬೇಕು. ಸಾಮಾನ್ಯ ಕಾರ್ಯಕರ್ತ ಕೆ.ವಿ.ಗೌತಮ್ ಅವರಿಗೆ ಕೋಲಾರ ಕ್ಷೇತ್ರದ ಟಿಕೆಟ್ ಅನ್ನು ಹೈಕಮಾಂಡ್ ಘೋಷಿಸಿದೆ. ಅವರು ಮಾಜಿ ಮೇಯರ್ ಪುತ್ರ. ಹೊಸ ಮುಖ' ಎಂದರು.


'ಕೋಲಾರದಲ್ಲಿ ದಲಿತ ಬಲಗೈ ಸಮುದಾಯಕ್ಕೆ ಟಿಕೆಟ್ ನೀಡುವಂತೆ ಒತ್ತಡ ಇತ್ತು. ಸುಮಾರು ಕ್ಷೇತ್ರಗಳಲ್ಲಿ ಎಡಗೈ ಸಮುದಾಯ ಹೆಚ್ಚಾಗಿದೆ. ಎಡಗೈ ಸಮುದಾಯಕ್ಕೆ ಬಿಜೆಪಿ ಎರಡು ಸೀಟ್ ಕೊಟ್ಟಿದೆ. ನಾವು ಎರಡು ಸೀಟು ಕೊಟ್ಟಿದ್ದೇವೆ' ಎಂದು ಹೇಳಿದರು.

ಮುನಿಯಪ್ಪ ಮುನಿಸು ತಣಿಸಲು ಯತ್ನ: ಕೋಲಾರ ಅಭ್ಯರ್ಥಿ ಆಯ್ಕೆ ವಿಚಾರವಾಗಿ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವ ಮುನಿಯಪ್ಪ ಅವರ ಮುನಿಸು ತಣಿಸಲು ಯತ್ನಿಸಿದ್ದಾರೆ.

'ಕೋಲಾರ ಟಿಕೆಟ್ ಆಯ್ಕೆ ವಿಚಾರದಲ್ಲಿ ಸುದೀರ್ಘ ಚರ್ಚೆ ನಡೆಸಲಾಗಿದೆ. ಕೋಲಾರ ಕ್ಷೇತ್ರದ ಎಲ್ಲ ಕಾಂಗ್ರೆಸ್ ನಾಯಕರ ಅಭಿಪ್ರಾಯ ಕೇಳಿದ್ದೇವೆ. ಪಕ್ಷದ ತೀರ್ಮಾನಕ್ಕೆ ಬದ್ಧರಾಗಿ ಇರುತ್ತೇವೆ ಎಂದು ಎಲ್ಲರೂ ಹೇಳಿದರು. ಏಳು ಬಾರಿಯ ಸಂಸದ, ಮುನಿಯಪ್ಪ ಕೂಡ ಪಕ್ಷಕ್ಕಾಗಿ ಯಾವುದೇ ತ್ಯಾಗಕ್ಕೆ ಸಿದ್ಧ ಎಂದಿದ್ದಾರೆ' ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ಯೇಸು ಪ್ರಕಾಶ್



ಸಾಗರ: ರಂಗಭೂಮಿ, ಕಿರುತೆರೆ, ಚಲನಚಿತ್ರ ನಟ ಯೇಸುಪ್ರಕಾಶ್ (55) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಎರಡು ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಇವರು ನೀನಾಸಂ ಬಳಗ, ಕೆ.ವಿ. ಸುಬ್ಬಣ್ಣ ರಂಗಸಮೂಹ ಸೇರಿ ಹಲವು ರಂಗ ತಂಡಗಳಲ್ಲಿ ಕೆಲಸ ಮಾಡಿದ್ದರು. ಯಕ್ಷಗಾನದಲ್ಲೂ ತರಬೇತಿ ಪಡೆದು ಕೆಲವು ಪ್ರಸಂಗಗಳಿಗೆ ಬಣ್ಣ ಹಚ್ಚಿದ್ದರು. ಎಸ್.ನಾರಾಯಣ್ ನಿರ್ದೇಶನದ 'ವೀರು' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿದ್ದರು. ರಾಜಾಹುಲಿ, ಯಾರೇ ಕೂಗಾಡಲಿ, ಸಾರಥಿ, ಯೋಧ, ಕಲ್ಪನಾ-2 ಸೇರಿ 35ಕ್ಕೂ ಹೆಚ್ಚು ಸಿನಿಮಾ ಹಾಗೂ 100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದರು.






ಗುಸುಗುಸು

ಕಾಗೇರಿ ಬಾವಂಗೆ ಕೈಕೊಟ್ರಾ ಅನಂತ ಬಾವ!

ದಶಕಗಳ ಕಾಲ ಉತ್ತರಕನ್ನಡವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ಅನಂತಕುಮಾರ ಹೆಗಡೇರು, ಸಂವಿಧಾನ ಬದಲಿಸಲು ಹೋಗಿ ಸಚಿವ ಸ್ಥಾನ ಕಳೆದುಕೊಂಡಿದ್ದರು. ಹಿಂದುತ್ವದ ಹಾದಿಯಿಂದ ಹೆಜ್ಜೆ ಹೊರಗಿಟ್ಟಿರುವ ಮೋದಿ, ಅಮಿತ್ ಶಾ ಜೋಡಿ, ಹೆಗಡೇರಿಗೆ ಟಿಕೆಟ್ ಕೊಡದೇ ವಿಶ್ವೇಶ್ವರ ಹೆಗಡೆ ಕಾಗೇರಿಗೆ ಟಿಕೆಟ್ ಕೊಟ್ಟಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ 'ಸ್ಪೀಕರ್' ಆಗಿದ್ದಾಗಲೇ, ಕೆಲವು ಶಾಸಕರು ಕಾಗೇರಿಯವರ ಎಚ್ಚರಿಕೆಗೆ ಬಗ್ಗುತ್ತಿರಲಿಲ್ಲ. ಇನ್ನು ಕಾಗೇರಿ ಬಾವನ 'ಧ್ವನಿ' ಉತ್ತರಕನ್ನಡದಲ್ಲಿ ಮೊಳಗ್ತದಾ ಎಂಬ ಚರ್ಚೆ ಶುರುವಾಗಿದೆಯಂತೆ.



ಅನಂತಕುಮಾರ ಹೆಗಡೆ



ವಿಶ್ವೇಶ್ವರ ಹೆಗಡೆ ಕಾಗೇರಿ

ದಶಕಗಳಿಂದಲೂ ಗುದ್ದಾಡಿಕೊಂಡೇ ರಾಜಕಾರಣ ಮಾಡಿಕೊಂಡು ಬಂದ ನಮ್ಮ ಕಾಗೇರಿ ಬಾವಂಗೆ, ಅನಂತ ಬಾವ ಕೈಕೊಟ್ನಾ ಎಂತ ಮಾರಾಯ ಎಂಬುದು ಕ್ಷೇತ್ರದಲ್ಲಿ ಪ್ರಶ್ನೆ. ಟಿಕೆಟ್ ಘೋಷಣೆಯಾಗಿದ್ದೇ ತಡ, ಕಾಗೇರಿ ಬಾವ, 'ಅನಂತಣ್ಣ ನಾನು ಜೋಡೆತ್ತು ಇದ್ದಂಗೆ. ಹ್ವಾಯ್ ಅನಂತ್ ಬಾವ ನನ್ನ ಜತೆಗೆ ಇರ್ತನಾ' ಎಂದು ತಮ್ಮ ಆಪ್ತರಲ್ಲಿ ಹೇಳಿಕೊಂಡೇ ಬಂದಿದ್ದರಂತೆ.

ಹೆಂಗಾದರೂ ಆಗಲಿ, ಅನಂತಣ್ಣನ ಒಮ್ಮೆ ಕಂಡೇ ಬಿಡುವಾ ಎಂದು ಕಾಗೇರಿ ಸವಾರಿ ಅನಂತ ಬಾವನ ಮನೆ ಕಡೀಗೆ ಹೊಂಟೇ ಬಿಟ್ಟಿತು. ಕಾಗೇರಿ ಬರೋ ಸಂಗ್ತಿ ತಿಳಿದ ಅನಂತ ಬಾವ, ಮನೆ ಬಾಗಿಲಿಗೆ ಚಿಲ್ಕ ಹಾಕ್ಕಂಡ್ ಎತ್ತಲೋ ಸವಾರಿ ಹೊರಟೇ ಬಿಟ್ಟಿತಂತೆ. ಜೋಡೆತ್ತು ಸಿಗದೇ, ನೊಗವನ್ನೂ ಒಬ್ಬನೇ ಹೊರಲಾಗದೇ ಕಾಗೇರಿ ಬಾವ, ಪೆಚ್ಚು ಮೋರೆ ಹಾಕ್ಕಂಡ್ ಬಂತಂತೆ ಎಂಬುದು ಶಿರಸಿ ಸುದ್ದಿಯಂತೆ.

ಇದನ್ನು ಕೇಳಿದ ಕಾಗೇರಿ ಬಾವ, 'ಯಂತಾ? ನಾ ಅನಂತಣ್ಣನಲ್ಲಿಗೆ ಹೋಗೋದು ಅಂದ್ರೇನು? ಒಂದ್ ವ್ಯಾಳೆ ನಾನೇ ಆಕಡೆ ಹೋಯಿದು ಗೊತ್ತಿದ್ರೆ ಅನಂತಣ್ಣ ಹಾಗೆಲ್ಲ ಮಾಡವ್ನಲ್ಲ. ಇದೆಲ್ಲ, ನನಗೆ ಆಗದವರು ಕಟ್ಟಿದ್ ಕತೆ' ಎಂದು ಒಂದ್ ನಗೆ ಹಾರಿಸಿದ್ರಂತೆ.

ಮತ ಆಮಿಷ: ಆಯೋಗದ ವಶ

₹21.85 ಕೋಟಿ ನಗದು

ಉಚಿತ ಉಡುಗೊರೆ	₹ 82.12 ಲಕ್ಷ
ಮದ್ಯ	₹ 28.69 ಕೋಟಿ (8.93 ಲಕ್ಷ ಲೀ)
ಮಾದಕವಸ್ತು	₹ 1.60 ಕೋಟಿ (231.55 ಕೆ.ಜಿ.)
ಚಿನ್ನ	₹ 9.18 ಕೋಟಿ (15.38 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!



ಕೋಲಾರ ಕ್ಷೇತ್ರದಲ್ಲಿ ಅವರೂ(ರಮೇಶ್ ಕುಮಾರ್ ಬಣ) ಕೆಲಸ ಮಾಡಲಿ. ನಾನೂ ಮಾಡುವೆ. ಕೋಲಾರ ಮಾತ್ರವಲ್ಲ ಚಿಕ್ಕಬಳ್ಳಾಪುರದಲ್ಲೂ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ. ದೇವನಹಳ್ಳಿಯನ್ನು ಅಭಿವೃದ್ಧಿ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದೇನೆ. ಅದರಂತೆ ಕೆಲಸ ಮಾಡುತ್ತೇನೆ. ಸ್ವಪ್ರತಿಷ್ಠೆ, ಬೇಸರ ನನಗಿಲ್ಲ. ಕಾಂಗ್ರೆಸ್ ಪಕ್ಷವನ್ನು ಎಲ್ಲಾ ಕಡೆ ಗೆಲ್ಲಿಸಲು ಶ್ರಮಿಸುತ್ತೇನೆ

ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ಕ್ಷೇತ್ರ ಮಹಾತ್ಮೆ



ಮುಖ್ಯಮಂತ್ರಿಯಾಗಿದ್ದಾಗಲೇ ಮಂಡ್ಯದಲ್ಲಿ ತಮ್ಮ ಮಗನನ್ನು ಕಣಕ್ಕೆ ಇಳಿಸಿದ್ದ ಕುಮಾರಸ್ವಾಮಿ ಅವರಿಗೆ 'ಸಕ್ಕರೆ' ಸಿಕ್ಕಿರಲಿಲ್ಲ. 'ಸೀತಾರಾಮ ಕಲ್ಯಾಣ'ದ ಸಿನಿಮಾ ಟಿಕೆಟ್ ಅನ್ನು ಮನೆಮನೆಗೆ ತಲುಪಿಸಿದ್ದರೂ ಅದು ಮತವಾಗಿರಲಿಲ್ಲ. ಹಿರಿಯ ಚಿತ್ರನಟಿ ಸುಮಲತಾ ಅವರು 'ಮಂಡ್ಯದ ಗಂಡು ಅಂಬರೀಷ್' [illegible]ದಲ್ಲಿ ನಿಂತುಕೊಂಡು ತಾವೇ 'ಮಂಡ್ಯದ ಹೆಣ್ಣು' ಎಂದು ತೋರಿಸಿದ್ದರು. ಕಾಂಗ್ರೆಸ್ ಜತೆಗೆ ಕೂಡಿಕೆ ಮಾಡಿಕೊಂಡಿದ್ದ ಕುಮಾರಸ್ವಾಮಿಯವರಿಗೆ 'ಹಸ್ತ'ದವರು ಕೈಕೊಟ್ಟಿದ್ದು ಹೊಸತೇನಲ್ಲ. ಚನ್ನಪಟ್ಟಣ–ರಾಮನಗರ ತಮ್ಮ ಎರಡು ಕಣ್ಣೆಂದು ಹೇಳುತ್ತಿದ್ದ ಕುಮಾರಸ್ವಾಮಿ, 'ಹಸ್ತ ಸಾಮುದ್ರಿಕೆ' ಸರಿಯಿಲ್ಲ ಎನ್ನುತ್ತಾ, ಈಗ 'ಕಮಲ' ಮುಡಿದಿದ್ದಾರೆ. ಜೆಡಿಎಸ್‌ನ ಭದ್ರಕೋಟೆಯಾಗಿದ್ದ ಮಂಡ್ಯದಲ್ಲಿ, ಕೆ.ಆರ್. ಪೇಟೆಯಲ್ಲಿ ಮಾತ್ರ ತೆನೆ ಹೊತ್ತ ಮಹಿಳೆ ಗೆದ್ದಿದ್ದಾಳೆ. ಉಳಿದೆಡೆ 'ಹಸ್ತ'ವೇ ಹಿಡಿದಿದೆ. ಒಂದು ಕಾಲದ ತಮ್ಮ ಪರಮಾಪ್ತ ಚಲುವರಾಯಸ್ವಾಮಿಯವರೇ ಕುಮಾರಸ್ವಾಮಿ ಸೋಲಿಸಲು ವೀಳ್ಯ ಪಡೆದು ಕಣದಲ್ಲಿದ್ದಾರೆ. ಕುಮಾರಸ್ವಾಮಿ ಸೇರಿದಂತೆ ಎಲ್ಲ ಪಕ್ಷದ ರಾಜಕಾರಣಿಗಳಿಗೂ ಪರೋಕ್ಷವಾಗಿ 'ಸ್ಟಾರ್'ಗಿರಿ ತರಲು ನೆರವಾದ ವೆಂಕಟರಮಣೇಗೌಡ ಯಾನೆ ಸ್ಟಾರ್ ಚಂದ್ರು, ಈ ಬಾರಿ ತಮ್ಮ ಸ್ಟಾರ್ ಉಳಿಸಿಕೊಳ್ಳುತ್ತಾರೋ, ಕುಮಾರಸ್ವಾಮಿಯವರ 'ಸ್ಟಾರ್' ಬದಲಿಸುತ್ತಾರೋ... ಕಬ್ಬಿನ ಸಿಹಿ ಯಾರಿಗೆ..?

ಪ್ರಜಾವಾಣಿ ಸಂದರ್ಶನ

'ನನ್ನ 'ಹೊಸ ಅವತಾರ'ಕ್ಕೂ ಜನ ಬೆಂಬಲದ ನಿರೀಕ್ಷೆ

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ, 32 ವರ್ಷದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಇದೇ ಮೊದಲ ಬಾರಿಗೆ ಚುನಾವಣಾ ರಾಜಕಾರಣದ ಅಖಾಡಕ್ಕೆ ಇಳಿದಿದ್ದಾರೆ. ರಾಜಕಾರಣಕ್ಕೆ ಬಂದಿರುವುದೇಕೆ, ಇದುವರೆಗಿನ ಅನುಭವ ಹೇಗಿದೆ, ಆಕಾಂಕ್ಷೆಗಳೇನು, ಶ್ರೀರಕ್ಷೆ ಯಾರದು ಎಂಬಿತ್ಯಾದಿ ವಿಷಯಗಳ ಬಗ್ಗೆ 'ಪ್ರಜಾವಾಣಿ' ಜತೆ ಮಾತನಾಡಿದ್ದಾರೆ.



• ಎಂ. ಮಹೇಶ

● **ನನ್ನ ಆಕಾಂಕ್ಷೆಗಳಿಗೂ–ರಾಜಕೀಯಕ್ಕೂ ಹೊಂದುವುದಿಲ್ಲ, ಆದ್ದರಿಂದ ರಾಜಕೀಯಕ್ಕೆ ಬರುವುದಿಲ್ಲ ಎಂದಿದ್ದ ನೀವು ಈಗ ಪ್ರವೇಶಿಸಿದ್ದೀರಿ?**

ಆಗ ನನಗೆ ವಾತಾವರಣ ಸರಿ ಇರಲಿಲ್ಲ ಎನಿಸಿತ್ತು. ಆತ್ಮವಿಶ್ವಾಸ ಬೇಕು, ಪಕ್ವತೆ ಬೇಕು ಎನಿಸಿತ್ತು. ಈಗ ಸಿದ್ಧವಾಗಿದ್ದೇನೆ ಎನಿಸಿದ್ದರಿಂದ ಬಂದಿದ್ದೇನೆ. ವಯಸ್ಸಾಗುತ್ತಾ ಬದಲಾವಣೆಗಳು ಸಹಜ. ಒಳ್ಳೆಯ ಕೆಲಸ ಮಾಡಬಹುದೆಂದು ಯೋಚಿಸಿ ಇಲ್ಲಿಗೆ ಬಂದೆ. ಅನುಮಾನಗಳು ಹೋಗಿ, ಈಗ ಸ್ಪಷ್ಟತೆ ಬಂದಿದೆ. ನನ್ನ ತತ್ವಗಳೇನು ಎನ್ನುವುದು ಗೊತ್ತಾಗಿದೆ. ನನಗಿರುವ ಹಿನ್ನೆಲೆಯೂ ಅನುಕೂಲ ಆಗುತ್ತದೆಂದು ತಿಳಿದು ರಾಜಕೀಯಕ್ಕೆ ಪ್ರವೇಶಿಸಿದ್ದೇನೆ.

● **ಬಯಸಿ ಬಂದಿದ್ದಾ ಅಥವಾ ಯಾರದ್ದಾದರೂ ಒತ್ತಾಯವಿತ್ತಾ?**

ಆಸೆಯೂ ಇತ್ತು; ಬಿಜೆಪಿಯಿಂದಲೂ ಆಹ್ವಾನವಿತ್ತು. ಎರಡೂ ಸರಿಯಾದ ಸಮಯಕ್ಕೆ ಹೊಂದಾಣಿಕೆ ಆಗಿದ್ದರಿಂದ 'ಲಗ್ನ' ಕೂಡಿಬಂದಿದೆ ಎನಿಸಿತು.

● **ರಾಜಕೀಯಕ್ಕೆ ಬರಲು ಮನಸ್ಸು ಮಾಡಿದ್ದು, ತಯಾರಿ ಆರಂಭಿಸಿದ್ದು ಯಾವಾಗ?**

ಒಂದು ವರ್ಷದ ಹಿಂದೆ ಮನಸ್ಸು ಬಂತು. ಈಗ ಒಳ್ಳೆಯ ಅವಕಾಶ ಬಂದಿದೆ ಎನಿಸಿತು. ಆಗಿನಿಂದಲೇ ಸಿದ್ಧತೆ, ಅಧ್ಯಯನ ಮಾಡುತ್ತಿದ್ದೆ. ಕಲಿಕೆ ನಿರಂತರವಾಗಿ ಇರುತ್ತದೆ.

● **ರಾಜವಂಶಸ್ಥ ಎಂಬ ವರ್ಚಸ್ಸು ನಿಮ್ಮ ಕೈಹಿಡಿಯುವುದೆಂದು ಅನ್ನಿಸಿದೆಯೇ?**

ಅದು ಸಂಬಂಧವಿರುವುದು ಅರಮನೆಗಷ್ಟೆ. ದತ್ತು ಸ್ವೀಕಾರ ಪ್ರಕ್ರಿಯೆ ಮುಗಿದ ನಂತರ ನಾನೆಲ್ಲಿಯೂ ರಾಜ, ಯುವರಾಜ ಎಂಬ ಪದವಿಯನ್ನಾಗಲಿ, ಪದಗಳನ್ನಾಗಿ ಬಳಸಿಲ್ಲ. ಆದರೆ, ಜನರಿಗೂ–ಅರಮನೆಗೂ ಭಾವನಾತ್ಮಕ ಸಂಬಂಧವಿದೆ. ಅಂದಿನ ಕಾಲದಲ್ಲಿ ರಾಜರು ಒಳ್ಳೆಯ ಕೆಲಸ ಮಾಡಿದ್ದರಿಂದ ಅರಮನೆಗೆ ಗೌರವ ಕೊಡುತ್ತಾರೆಯೇ ಹೊರತು ಪದವಿಗಲ್ಲ. ಚುನಾವಣೆಯಲ್ಲಿ ಯೋಗ್ಯತೆಯನ್ನು ಆಧರಿಸಿಯೇ ಜನ ನಿರ್ಧಾರ ಮಾಡುತ್ತಾರೆ.

● **ಈ ಚುನಾವಣೆಯು ಎಸಿ (ಹವಾನಿಯಂತ್ರಿತ ವ್ಯವಸ್ಥೆ) ಕೊಠಡಿಯ ರಾಜವಂಶಸ್ಥ– ಸಾಮಾನ್ಯನ ನಡುವಿನ ಹೋರಾಟ ಎಂಬ ವಿಶ್ಲೇಷಣೆ ಇದೆಯಲ್ಲಾ?**

ಆಯ್ಕೆಯಾದವರು ಎ.ಸಿ ರೂಂನಲ್ಲಿ ಕುಳಿತೂ ಕೆಲಸ ಮಾಡಬಹುದು. ಆಚೆ ಬಂದೂ ನಿರ್ವಹಿಸಬಹುದು. ಬಿಸಿಲಲ್ಲೂ ಕೆಲಸ ಮಾಡುತ್ತೇನೆ. ಎಲ್ಲರೂ ಭಾವಿಸಿದಂತೆ ಇಡೀ ಅರಮನೆಯಲ್ಲಿ ಎ.ಸಿ ಇಲ್ಲ. ನಾವು ಮಲಗುವ ಕೊಠಡಿಯಲ್ಲಷ್ಟೇ ಇದೆ. ಈಗ ಎಲ್ಲ ಪಕ್ಷಗಳ ಕಚೇರಿಯಲ್ಲೂ ಎ.ಸಿ ಇದೆಯಲ್ಲವೇ?

● **ಮೈಸೂರು–ಕೊಡಗು ಅಭಿವೃದ್ಧಿಗೆ ನಿಮ್ಮ ಮುನ್ನೋಟವೇನು?**

ಪ್ರಕೃತಿಯ ಬಗೆಗೆ ಕಾಳಜಿಯನ್ನಿಟ್ಟುಕೊಂಡು 'ಸಾವಯವ ಅಭಿವೃದ್ಧಿ' (ಆರ್ಗ್ಯಾನಿಕ್ ಡೆವಲಪ್‌ಮೆಂಟ್) ಮಾಡುವುದು ನನ್ನ ಆಶಯ. ಅದಕ್ಕೆ ಪೂರಕವಾದ ಯೋಜನೆಗಳು ಬೇಕಾಗುತ್ತವೆ. ಮೈಸೂರನ್ನು ಮೈಸೂರಾಗಿ, ಕೊಡಗನ್ನು ಕೊಡಗಾಗಿಯೇ ಉಳಿಸಬೇಕು. ಪರಂಪರೆಯನ್ನೂ ಕಾಪಾಡಿಕೊಳ್ಳಬೇಕು. ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಅಗತ್ಯವಿಲ್ಲ. ಸಮಸ್ಯೆಗಳಿಗೆ ಕಾರಣವಾಗುವ ಅಭಿವೃದ್ಧಿ ಬೇಕಾಗುವುದಿಲ್ಲ. ಸೂಕ್ತ ಅಭಿವೃದ್ಧಿ ಅವಶ್ಯ.



ವರ್ಚಸ್ಸಿನಿಂದ ಸಹಾಯ ಆಗುತ್ತಿರುವುದು ಹೌದು. ಸ್ವಸಾಮರ್ಥ್ಯದ ಮೇಲೆಯೇ ಗೆಲ್ಲಬೇಕಾಗುತ್ತದೆ.

● **ನರೇಂದ್ರ ಮೋದಿ ಅಲೆ ನಿಮ್ಮನ್ನು ಗೆಲುವಿನತ್ತ ಕರೆದೊಯ್ಯಬಲ್ಲುದೇ?**

ಸಂಪೂರ್ಣವಾದ ವಿಶ್ವಾಸವಿದೆ. ಇಡೀ ಜಗತ್ತಿನಲ್ಲಿ ಅಂತಹ ಒಳ್ಳೆಯ ನಾಯಕ ಸಿಗುವುದು ಅಪರೂಪ. ಅಂಥವರು ಬರಲು ಅದೆಷ್ಟು ಶತಮಾನಗಳು ಬೇಕಾಗುತ್ತವೆಯೋ? ಅವರೇ ನನಗೆ ಸ್ಫೂರ್ತಿ. ಅಂಥ ನಾಯಕತ್ವದೊಂದಿಗೆ ಕೆಲಸ ಮಾಡಬೇಕೆಂದು ಅನಿಸಿದ್ದರಿಂದಲೇ ರಾಜಕೀಯಕ್ಕೆ ಬಂದೆ. ಒಳ್ಳೆಯ ನಾಯಕರು ಇರುವಾಗ, ಅಲೆ ಇದ್ದೇ ಇರುತ್ತದೆ. ಅದನ್ನು ಧನಾತ್ಮಕವಾಗಿ ಉಪಯೋಗಿಸಿಕೊಂಡರೆ ಇಡೀ ದೇಶಕ್ಕೆ ಒಳಿತಾಗುತ್ತದೆ.

● **ಚುನಾವಣೆಯಲ್ಲಿ ನಿಮ್ಮ ಶಕ್ತಿ ಏನು?**

ಪಕ್ಷ, ಕ್ಷೇತ್ರದ ಜನ, ಚಾಮುಂಡೇಶ್ವರಿ ದೇವಿ. ಇವರೆಲ್ಲರೂ ಹಿಂದಿರುವಾಗ ಏನೇ ಸಂಕಷ್ಟ ಬಂದರೂ ಚಿಕ್ಕದೇ. ನನ್ನ ಸಾಮರ್ಥ್ಯ ಹಾಗೂ ಯೋಗ್ಯತೆಯ ಬಗ್ಗೆ ಅರಿವಿದೆ; ವಿಶ್ವಾಸವೂ ಬಂದಿದೆ.

● **ಪ್ರಚಾರಕ್ಕೆ ಪತ್ನಿ, ತಾಯಿ ಬರುತ್ತಾರೆಯೇ?**

ನನ್ನನ್ನೂ ಸಾಮಾನ್ಯ ಅಭ್ಯರ್ಥಿ ಎಂದೇ ನೋಡಿ. ಸಾಮಾನ್ಯನಾಗಿಯೇ ಕೆಲಸ ಮಾಡುತ್ತಿದ್ದೇನೆ. ಕುಟುಂಬದವರು ಅಗತ್ಯವಿದ್ದರೆ ಬರುತ್ತಾರೆ. ಅಭ್ಯರ್ಥಿ ಆತನ ಸಾಮರ್ಥ್ಯದ ಮೇಲೆ ಗೆಲ್ಲಬೇಕು. ಕುಟುಂಬ, ಗಿಮಿಕ್‌ಗಳು, ಸ್ಟಾರ್ ಪ್ರಚಾರ... ಇದೆಲ್ಲವೂ ತಪ್ಪೇನಿಲ್ಲ. ಆದರೆ, ನನ್ನ ಸಾಮರ್ಥ್ಯ, ಯೋಗ್ಯತೆಯಿಂದ ಗೆಲ್ಲಬೇಕು.

● **ಜನರು ನಿಮಗೇ ಏಕೆ ಮತ ಕೊಡಬೇಕು?**

ಮಗ, ಸಹೋದರನ ರೀತಿ ಎಲ್ಲರೂ ಸ್ವಾಗತಿಸಿದ್ದಾರೆ. ಅದಕ್ಕೆ ಚಿರಋಣಿಯಾಗಿದ್ದೇನೆ. ಆ ಋಣ ತೀರಿಸಲು ಅವಕಾಶ ಕೊಡಬೇಕು. ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಅಭಿವೃದ್ಧಿ ಮತ್ತು ಅಲ್ಲಿನವರು ಕೃಷಿ ಮತ್ತು ಪ್ರವಾಸೋದ್ಯಮ ಕ್ಷೇತ್ರ ಅವಲಂಬಿಸಿರುವ ಅರಿವಿದೆ. ಇದಕ್ಕೆ ಅರಮನೆ ಹಿಂದಿನಿಂದಲೂ ಪ್ರೋತ್ಸಾಹಿಸುತ್ತ ಬಂದಿದೆ. ಸುಸ್ಥಿರ ಪ್ರಗತಿಯ ಬಗ್ಗೆ ನನ್ನಲ್ಲೂ ಒಂದಷ್ಟು ಪರಿಕಲ್ಪನೆಗಳಿವೆ. ಸಂಸದನಾಗಲು ನಾನೇ ಸೂಕ್ತ ಎಂಬ ಭಾವನೆಯಿದೆ.

● **ನೀವು ಜನಸಾಮಾನ್ಯರಿಗೆ ಸುಲಭವಾಗಿ ಸಿಗುವುದಿಲ್ಲ ಎಂಬ ದೂರಿದೆಯಲ್ಲಾ?**

ಪ್ರತಿಪಕ್ಷದ ಉದ್ದೇಶವೇ ವಿರೋಧಿಸುವುದು. ಸಂಸದ ಎನಿಸಿಕೊಂಡವರು ಮನೆಯಲ್ಲಿ ಕುಳಿತುಕೊಂಡಿರಲು ಆಗುವುದಿಲ್ಲ. ಅರಮನೆಯೂ ಒಂದು ಮನೆಯೇ. ಸಂಸದರು ಕೆಲಸ ಮಾಡಲೇಬೇಕಾಗುತ್ತದೆ. ಆಯ್ಕೆಯಾದ ನಂತರ ಜನರೇನು ಯಾರನ್ನೂ ಸುಮ್ಮನೆ ಬಿಟ್ಟುಬಿಡುವುದಿಲ್ಲ. ಆಯ್ಕೆಯಾದ ದಿನದಿಂದಲೇ ಕೆಲಸ–ಹೊಣೆಗಾರಿಕೆ ಶುರುವಾಗುತ್ತದೆ. ಈಗಿನ ವ್ಯವಸ್ಥೆಗೆ ತಕ್ಕಂತೆ ಎಲ್ಲವೂ ನಡೆಯುತ್ತದೆ.

● **ಅರಮನೆಯಿಂದ ಹೊರ ಬಂದಿರುವ ನಿಮಗೆ ಸಾಮಾನ್ಯ ಜನರ ಕಷ್ಟಗಳು ಅರಿವಿಗೆ ಬರುತ್ತಿವೆಯೇ?**

ಬೀದಿಗಿಳಿದಿರುವುದರಿಂದ ಎಲ್ಲರೂ ಬಂದು ನನ್ನಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಹಿಂದೆಯೂ ಕೇಳುತ್ತಿದ್ದೆವು. 'ಭೇರುಂಡ', 'ಕಲಿಸು ಪ್ರತಿಷ್ಠಾನ' ಸೇರಿದಂತೆ ನಮ್ಮದೇ ಆದ ವಿವಿಧ ಸಂಸ್ಥೆಗಳ ಮೂಲಕ ಜನರಿಗೆ ಸ್ಪಂದಿಸುತ್ತಿದ್ದೇವೆ. ಸಮಸ್ಯೆಗಳನ್ನು ದೊಡ್ಡ ಮಟ್ಟದಲ್ಲಿ ಪರಿಹರಿಸಲು ಅಧಿಕಾರ ಬೇಕು. ಎಲ್ಲರ ಪ್ರತಿನಿಧಿಯಾಗಿ ಸಂಸದರ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡಲು ಉತ್ಸುಕನಾಗಿದ್ದೇನೆ.

● **ಜನರ ಪ್ರತಿಕ್ರಿಯೆ ಹೇಗಿದೆ?**

ಎರಡೂ ಜಿಲ್ಲೆಗಳಲ್ಲೂ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಹಿಂದೆಯೂ ದೊರೆಯುತ್ತಿತ್ತು; ನನ್ನ 'ರಾಜಕೀಯದ ಅವತಾರ'ಕ್ಕೂ ಬೆಂಬಲ ಸಿಗುತ್ತಿದೆ. ಅದನ್ನು ಮತವಾಗಿ ಪರಿವರ್ತಿಸಲು ಪಕ್ಷದಿಂದ ಕೆಲಸ ನಡೆದಿದೆ.

● **ಮೈತ್ರಿ ಪಕ್ಷವಾದ ಜೆಡಿಎಸ್‌ನವರ ಸಹಕಾರ ತೃಪ್ತಿಕರವಾಗಿದೆಯೇ?**

ಇದೆ. ಈಚೆಗೆ ನಾಯಕರ ಸಭೆಯನ್ನೂ ನಡೆಸಲಾಗಿದೆ. ಸಮನ್ವಯ–ಹೊಂದಾಣಿಕೆ ಸಂಪೂರ್ಣವಾಗಿ ಬಂದಿದೆ. ಮೈತ್ರಿ ಅಭ್ಯರ್ಥಿ ಎಂದು ಹೇಳಿಕೊಂಡೇ ಪ್ರಚಾರ ಮಾಡುತ್ತಿದ್ದೇವೆ.

● **ಪ್ರತಾಪ ಸಿಂಹ ಅವರಿಗೆ ಟಿಕೆಟ್ ಕೈತಪ್ಪಿದ್ದರಿಂದ ಒಕ್ಕಲಿಗ ಸಮಾಜದಲ್ಲಿರುವ ಅಸಮಾಧಾನ ಬಿಜೆಪಿಗೆ ಒಳೇಟು ಕೊಡಲಿದೆ ಎಂಬ ಮಾತಿದೆಯಲ್ಲಾ?**

ಸಂಸದರೂ ನನ್ನೊಂದಿಗೆ ಪ್ರಚಾರ ಮಾಡುತ್ತಿದ್ದಾರೆ. ಯಾವುದೇ ಒಳೇಟು ಬೀಳುವುದಿಲ್ಲ.

● **ಕಾಂಗ್ರೆಸ್ ಒಕ್ಕಲಿಗಾಸ್ತ್ರ ಪ್ರಯೋಗಿಸುತ್ತಿದೆಯಲ್ಲಾ?**

ನನಗೆ ಯಾವುದೇ ಜಾತಿ ಇಲ್ಲ. ಎಲ್ಲ ಜಾತಿಗಳಿಗೂ ಸೇರಿದ ವಂಶ ನಮ್ಮದು. 'ಒಂದು ಸಮಾಜ; ಒಂದು ದೇಶ'ಕ್ಕಾಗಿ ಎಲ್ಲರೂ ಮತ ಚಲಾಯಿಸುತ್ತಾರೆ ಎಂಬ ವಿಶ್ವಾಸವಿದೆ.

---

33 ವರ್ಷದ ಬಳಿಕ ಹೊಸ ಮುಖ!

• ಕೆ.ಓಂಕಾರ ಮೂರ್ತಿ

ಕೋಲಾರ

ಕೋಲಾರ: ಕೋಲಾರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ 33 ವರ್ಷದ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಹೊಸ ಮುಖಕ್ಕೆ ಟಿಕೆಟ್ ಲಭಿಸಿದೆ.

ಪರಿಶಿಷ್ಟ ಜಾತಿಯ ಎಡಗೈ ಸಮುದಾಯದ ಮುನಿಯಪ್ಪ 1991ರಿಂದ ಸತತ ಎಂಟು ಬಾರಿ ಕೋಲಾರದಿಂದ ಸ್ಪರ್ಧಿಸಿ ಏಳು ಸಲ ಗೆದ್ದಿದ್ದಾರೆ. ಅಭ್ಯರ್ಥಿ ವಿಚಾರದಲ್ಲಿ ಸತತ ಎಂಟು ಚುನಾವಣೆಗಳಲ್ಲಿ ಮುನಿಯಪ್ಪ ಅವರಿಗೆ ಸಡ್ಡು ಹೊಡೆಯುವವರೇ ಇರಲಿಲ್ಲ.

ಕಳೆದ ಚುನಾವಣೆಯಲ್ಲಿ 2 ಲಕ್ಷ ಮತಗಳ ಅಂತರದಿಂದ ಬಿಜೆಪಿಯ ಎಸ್.ಮುನಿಸ್ವಾಮಿ ವಿರುದ್ಧ ಮೊದಲ ಬಾರಿಗೆ ಸೋಲು ಕಂಡಿದ್ದರು. 1952ರಿಂದ ಬಹುತೇಕ ಚುನಾವಣೆಗಳಲ್ಲಿ ಗೆದ್ದು ಕೋಲಾರ ಲೋಕಸಭಾ ಕ್ಷೇತ್ರವನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದ ಕಾಂಗ್ರೆಸ್ ಮೊದಲ ಬಾರಿ ಈ ಕ್ಷೇತ್ರದ ಮೇಲೆ ಹಿಡಿತ ಕಳೆದುಕೊಂಡಿತ್ತು.

ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ವಿಧಾನಸಭೆ ಮಾಜಿ ಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಬಣಗಳ ಜಗಳ ಇದಕ್ಕೆ ಕಾರಣ ಎಂಬುವುದು ಗುಟ್ಟಾಗಿ ಉಳಿದಿಲ್ಲ. ಎರಡೂ ಬಣಗಳ ನಡುವಿನ ಜಗಳ ಅತಿರೇಕಕ್ಕೆ ಹೋಗಿದ್ದು ಈ ಬಾರಿ ಕೋಲಾರ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಲು ಕಾರಣವಾಯಿತು. ಇದರಿಂದಾಗಿ ಕ್ಷೇತ್ರದ ಜನರಿಗೆ ಪರಿಚಯವೇ ಇಲ್ಲದ ಬೆಂಗಳೂರಿನವರಾದ ಎಡಗೈ ಸಮುದಾಯದ ಕೆ.ವಿ.ಗೌತಮ್ ಎಂಬುವರಿಗೆ ಅದೃಷ್ಟ ಒಲಿದಿದೆ. ಇದರೊಂದಿಗೆ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯಲ್ಲಿ ಶೇಕಡಾ 75ರಷ್ಟು ಮತದಾರರನ್ನು ಹೊಂದಿರುವ ಬಲಗೈ ಸಮುದಾಯಕ್ಕೆ ಈ ಬಾರಿಯೂ ಟಿಕೆಟ್ ಕೈತಪ್ಪಿದೆ.

'ಮಹಾಘಟಬಂಧನ್' ಮೇಲುಗೈ?: ಕಳೆದ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯ ರಾಜಕಾರಣಕ್ಕೆ ಮರಳಿ ಸಚಿವರಾದ ಮುನಿಯಪ್ಪ ತಮ್ಮ ಅಳಿಯ ಕೆ.ಜಿ. ಚಿಕ್ಕಪೆದ್ದಣ್ಣ ಅವರಿಗೆ ಈ ಬಾರಿ ಟಿಕೆಟ್ ಕೊಡಿಸಲು ಭಾರಿ ಕಸರತ್ತು ನಡೆಸಿ ಯಶಸ್ವಿಯಾಗುವ ಹಂತಕ್ಕೆ ತಲುಪಿದ್ದರು. ಈ ವಿಚಾರ ಗೊತ್ತಾಗುತ್ತಲೇ 'ಮಹಾಘಟಬಂಧನ್' ಎಂದು ಕರೆಯಲಾಗುವ ರಮೇಶ್ ಕುಮಾರ್ ಬಣ ಎಚ್ಚೆತ್ತುಕೊಂಡಿತು.

ಘಟಬಂಧನ್ ಪ್ರಮುಖ ಸದಸ್ಯರಾದ ಚಿಂತಾಮಣಿ ಶಾಸಕ, ಸಚಿವ ಡಾ.ಎಂ.ಸಿ.ಸುಧಾಕರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕೋಲಾರ ಶಾಸಕ ಕೊತ್ತೂರು ಮಂಜುನಾಥ್, ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್ ಸಡ್ಡು ಹೊಡೆದು ನಿಂತರು. ಮುನಿಯಪ್ಪ ಕುಟುಂಬಕ್ಕೆ ಟಿಕೆಟ್ ಕೊಡಬಾರದೆಂದು ಪಟ್ಟು ಹಿಡಿದು ರಾಜೀನಾಮೆಗೂ ಮುಂದಾದ ಅವರೀಗ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.

ಆರಂಭದಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಸಿ.ಎಂ.ಮುನಿಯಪ್ಪ ಎಂಬುವರಿಗೆ ಟಿಕೆಟ್ ಕೊಡಬೇಕು ಎಂದು ಹಟಕ್ಕೆ ಬಿದ್ದಿದ್ದ ಈ ಬಣದವರು, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸಂಧಾನದ ಬಳಿಕ ಕೆ.ಎಚ್. ಮುನಿಯಪ್ಪ ಕುಟುಂಬ ಹೊರತುಪಡಿಸಿ ಯಾರಿಗೇ ಟಿಕೆಟ್ ಕೊಟ್ಟರೂ ಅಭ್ಯಂತರ ಇಲ್ಲವೆಂದಿದ್ದರು. ಅದರಂತೆ ಎಡಗೈ ಸಮುದಾಯದ ಗೌತಮ್ ಅವರಿಗೆ ಟಿಕೆಟ್ ನೀಡಿರುವುದನ್ನು ಸ್ವಾಗತಿಸಿದ್ದಾರೆ.

ಮೊದಲ ಚುನಾವಣೆಯಿಂದ ಹಿಡಿದು ಈವರೆಗೆ ಈ ಕ್ಷೇತ್ರದಲ್ಲಿ ಬಲಗೈ ಸಮುದಾಯದವರಿಗೆ ಟಿಕೆಟ್ ಲಭಿಸಿಲ್ಲ. ಎಡಗೈ ಸಮುದಾಯ ಅಥವಾ ಬೋವಿ ಸಮುದಾಯದವರಿಗೆ ಟಿಕೆಟ್ ಸಿಗುತ್ತಿದೆ. ಹೀಗಾಗಿ, ಈ ಬಾರಿ ಬಲಗೈ ಸಮುದಾಯದವರಿಗೆ ಟಿಕೆಟ್ ನೀಡಬೇಕೆಂದು ರಮೇಶ್ ಕುಮಾರ್ ಬಣದಲ್ಲಿ ಗುರುತಿಸಿಕೊಂಡಿದ್ದ ಶಾಸಕರು ಪಟ್ಟು ಹಿಡಿದಿದ್ದರು.

ಈಗಾಗಲೇ ಮೈತ್ರಿಕೂಟದಿಂದ ಜೆಡಿಎಸ್‌ನ ಸ್ಥಳೀಯ ಅಭ್ಯರ್ಥಿ ಎಂ.ಮಲ್ಲೇಶ್ ಬಾಬು ಕಣಕ್ಕಿಳಿದಿದ್ದಾರೆ. ಹಾಲಿ ಸಂಸದರಿದ್ದರೂ ಮೈತ್ರಿಧರ್ಮ ಪಾಲನೆಗಾಗಿ ಈ ಕ್ಷೇತ್ರದ ಟಿಕೆಟ್ ಅನ್ನು ಬಿಜೆಪಿ ತ್ಯಾಗ ಮಾಡಿದೆ.



ಬಲಗೈ ಸಮುದಾಯಕ್ಕೆ ಟಿಕೆಟ್ ಬೇಕೆಂದು ರಾಜೀನಾಮೆಗೆ ಮುಂದಾದೆವು. ಎಡಗೈ ಸಮುದಾಯಕ್ಕೆ ಸಿಕ್ಕಿದೆ. ಸಂಧಾನ ಸಭೆ ಒಪ್ಪಂದದಂತೆ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇವೆ

ಅನಿಲ್ ಕುಮಾರ್, ಪರಿಷತ್ ಸದಸ್ಯ



ಕೋಲಾರ ಕಾಂಗ್ರೆಸ್ ನಾಯಕರಲ್ಲಿನ ವೈಮನಸ್ಯ ಬಗೆಹರಿಯಲಿದೆ. ನನ್ನನ್ನು ಅಭ್ಯರ್ಥಿ ಮಾಡಿರುವುದಕ್ಕೆ ಯಾರ ವಿರೋಧವೂ ಇಲ್ಲ. ಎಲ್ಲರ ವಿಶ್ವಾಸದೊಂದಿಗೆ ಪ್ರಚಾರ ನಡೆಸುತ್ತೇನೆ

ಕೆ.ವಿ.ಗೌತಮ್, ಕಾಂಗ್ರೆಸ್ ಅಭ್ಯರ್ಥಿ

ಎಡಗೈ 2, ಬಲಗೈಗೆ 3 ಟಿಕೆಟ್

ರಾಜ್ಯದ ಲೋಕಸಭಾ ಕ್ಷೇತ್ರಗಳ ಪೈಕಿ ಐದು ಕ್ಷೇತ್ರಗಳು ಪರಿಶಿಷ್ಟ ಜಾತಿಗೆ ಮೀಸಲಾಗಿವೆ. ಕಾಂಗ್ರೆಸ್ ಈಗಾಗಲೇ ಮೂರು ಕ್ಷೇತ್ರಗಳ ಟಿಕೆಟ್ ಅನ್ನು (ವಿಜಯಪುರ, ಕಲಬುರಗಿ, ಚಾಮರಾಜನಗರ) ಬಲಗೈ ಸಮುದಾಯದ ಅಭ್ಯರ್ಥಿಗಳಿಗೆ ಕೊಟ್ಟಿದೆ. ಎರಡು ಕ್ಷೇತ್ರಗಳ ಟಿಕೆಟ್ (ಚಿತ್ರದುರ್ಗ, ಕೋಲಾರ) ಎಡಗೈ ಸಮುದಾಯದ ಪಾಲಾಗಿವೆ. ಈ ಮೂಲಕ ಸಾಮಾಜಿಕ ನ್ಯಾಯ ಪಾಲನೆಗೆ ಕಸರತ್ತು ನಡೆಸಿದಂತಿದೆ.

ಗೌತಮ್ ಮುಂದೆ ಸವಾಲು

ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬಂತೆ ಮುನಿಯಪ್ಪ–ರಮೇಶ್ ಕುಮಾರ್ ಜಗಳದಲ್ಲಿ ಗೌತಮ್ ಸುಲಭವಾಗಿ ಟಿಕೆಟ್ ಪಡೆದಿದ್ದಾರೆ. ಆದರೆ, ಜಿಲ್ಲೆಯಲ್ಲಿರುವ ಎರಡೂ ಬಣದವರನ್ನು ವಿಶ್ವಾಸಕ್ಕೆ ಪಡೆಯುವುದೇ ಗೌತಮ್ ಮುಂದಿರುವ ದೊಡ್ಡ ಸವಾಲು. ಬೆಂಗಳೂರು ಮೇಯರ್ ಹಾಗೂ ಎಸ್‌ಸಿ–ಎಸ್‌ಟಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಆಗಿದ್ದ ಕೆ.ಸಿ. ವಿಜಯಕುಮಾರ್ ಅವರ ಪುತ್ರನಾದ ಕೆ.ವಿ. ಗೌತಮ್ (48) ಬೆಂಗಳೂರಿನ ಆರ್.ವಿ.ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಗೌತಮ್ ಸದ್ಯ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದಾರೆ.



ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಡಾ. ಚಿನ್ನಪ್ಪ ವೈ. ಚಿಕ್ಕಹಾಗಡೆ ಅವರು ನಾಮಪತ್ರ ಸಲ್ಲಿಸುವುದಕ್ಕೆ ಮುಂಚೆ ಕೃತಕ ಆನೆ ಏರಿ ರಾಮನಗರ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದರು

ಆನೆಯನೇರಿ ಬಂದ ಬಿಎಸ್‌ಪಿ ಅಭ್ಯರ್ಥಿ!

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಡಾ. ಚಿನ್ನಪ್ಪ ವೈ. ಚಿಕ್ಕಹಾಗಡೆ ಅವರು ನಾಮಪತ್ರ ಸಲ್ಲಿಸಲು ಶನಿವಾರ ಆನೆ ಏರಿ ಬರುವ ಮೂಲಕ ಗಮನ ಸೆಳೆದರು. ಅಂದಹಾಗೆ ಅದು ನೈಜ ಆನೆಯಲ್ಲ. ಬದಲಿಗೆ ಕೃತಕ ಆನೆ!

ಟ್ರಾಲಿ ಮೇಲೆ ನಿರ್ಮಿಸಿದ್ದ ಕೃತಕ ಆನೆಯನ್ನು ನಾಲ್ವರ ತಂಡ ಮುಕ್ಕಾಲು ಕಿ.ಮೀ. ದೂರವಿದ್ದ ಡಿ.ಸಿ ಕಚೇರಿವರೆಗೆ ತಳ್ಳಿಕೊಂಡು ಬಂದಿತು. ಪಕ್ಷದ ಪದಾಧಿಕಾರಿಗಳೊಂದಿಗೆ ಚುನಾವಣಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರಿಗೆ ಚಿನ್ನಪ್ಪ ತಮ್ಮ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಗೆ ಮುಂಚೆ ನಗರದ ಎಸ್‌ಪಿ ಕಚೇರಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದ ಮೆರವಣಿಗೆಯಲ್ಲಿ ಆನೆ ಮೇಲೆ ಸವಾರಿ ಮಾಡಿದ ಚಿನ್ನಪ್ಪ, ಮಾರ್ಗದುದ್ದಕ್ಕೂ ಪಕ್ಷದ ಧ್ವಜ ಪ್ರದರ್ಶಿಸಿದರು.

ಕಣದತ್ತ ಕಿರುನೋಟ



ಈ ಬಾರಿ ತ್ರಿಕೋನ ಸ್ಪರ್ಧೆಗೆ ಶಿವಮೊಗ್ಗ ವೇದಿಕೆ

ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ ಹಾಗೂ ಬಿ.ಎಸ್.ಯಡಿಯೂರಪ್ಪ ಕುಟುಂಬದ ನಡುವಿನ ಕಾದಾಟಕ್ಕೆ 2009ರಿಂದ ವೇದಿಕೆಯಾಗಿರುವ ಶಿವಮೊಗ್ಗದಲ್ಲಿ ಈ ಬಾರಿಯೂ ಅದೇ ಮುಂದುವರಿದೆ. ಈ ಕದನದ ಮಧ್ಯೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಕೂಡ ರಂಗಕ್ಕೆ ಇಳಿದಿದ್ದು, ತ್ರಿಕೋನ ಪೈಪೋಟಿಗೆ ಸಿದ್ಧತೆ ನಡೆದಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಹಾಲಿ ಸಂಸದ ಬಿ.ವೈ. ರಾಘವೇಂದ್ರ, ಕಾಂಗ್ರೆಸ್‌ನಿಂದ ಗೀತಾ ಶಿವರಾಜಕುಮಾರ್ ಕಣದಲ್ಲಿದ್ದಾರೆ. ಈಶ್ವರಪ್ಪ ಸ್ಪರ್ಧೆಯಿಂದಾಗಿ ಕ್ಷೇತ್ರ ಗಮನ ಸೆಳೆದಿದೆ.

ಕಳೆದ ಬಾರಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಅಭ್ಯರ್ಥಿಯಾಗಿದ್ದ ಮಧು ಬಂಗಾರಪ್ಪ ಸೋತಿದ್ದರು. ಬದಲಾದ ಸನ್ನಿವೇಶದಲ್ಲಿ ಅವರು ಕಾಂಗ್ರೆಸ್‌ನಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಅವರು, ಸಹೋದರಿ ಗೀತಾ ಬೆನ್ನಿಗೆ ನಿಂತಿದ್ದಾರೆ. 2014ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದ ಅನುಕಂಪ ಹಾಗೂ ಕಾಂಗ್ರೆಸ್‌ನ 'ಗ್ಯಾರಂಟಿ' ಯೋಜನೆಗಳ ಬಲ ಗೀತಾ ಅವರ ಬೆಂಬಲಕ್ಕಿದೆ. 'ಮನೆ ಮಗಳಿಗೆ ಮತ ಕೊಡಿ' ಎಂದು ಭಾವನಾತ್ಮಕ ಅಸ್ತ್ರ ಹೂಡಿರುವ ಅವರಿಗೆ, ಪತಿ, ನಟ ಶಿವರಾಜಕುಮಾರ್ ವರ್ಚಸ್ಸು, ಎಸ್.ಬಂಗಾರಪ್ಪ ನಾಮಬಲ ಜತೆಗಿದೆ. ಬಿಜೆಪಿ ಸಂಘಟನೆ, ಯಡಿಯೂರಪ್ಪ ವರ್ಚಸ್ಸು, ಸಹೋದರ, ಬಿ.ವೈ. ವಿಜಯೇಂದ್ರ ಬಲದ ಜತೆಗೆ, 'ಅಭಿವೃದ್ಧಿ ಮಂತ್ರ' ಬೆನ್ನಿಗಿಟ್ಟುಕೊಂಡು ಬಿ.ವೈ. ರಾಘವೇಂದ್ರ ಕ್ಷೇತ್ರ ಸುತ್ತುತ್ತಿದ್ದಾರೆ. ರಾಷ್ಟ್ರಭಕ್ತರ ಬಳಗದ ಹೆಸರಿನಲ್ಲಿ ಪ್ರಧಾನಿ ಮೋದಿ ಅವರ ಭಾವಚಿತ್ರ ಇಟ್ಟುಕೊಂಡು ಮತದಾರರತ್ತ ಹೊರಟಿರುವ ಈಶ್ವರಪ್ಪ, ಹಿಂದುತ್ವದ ಮಂತ್ರ ಪಠಿಸುತ್ತಿದ್ದಾರೆ.

ಅಭ್ಯರ್ಥಿಗಳು



ಬಿ.ವೈ.ರಾಘವೇಂದ್ರ
ಬಿಜೆಪಿ



ಗೀತಾ ಶಿವರಾಜಕುಮಾರ್
ಕಾಂಗ್ರೆಸ್



ಕೆ.ಎಸ್.ಈಶ್ವರಪ್ಪ
ಬಿಜೆಪಿ (ಬಂಡಾಯ)

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಬಿಜೆಪಿ	ಕಾಂಗ್ರೆಸ್	ಜೆಡಿಎಸ್
4	3	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,52,107	8,77,761	33

ಒಟ್ಟು 17,29,901

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಬಿ.ವೈ.ರಾಘವೇಂದ್ರ	ಬಿಜೆಪಿ	7,29,872
ಸಮೀಪದ ಪ್ರತಿಸ್ಪರ್ಧಿ	ಮಧು ಬಂಗಾರಪ್ಪ	ಜೆಡಿಎಸ್	5,06,512



(ಪರಿಶಿಷ್ಟ ಪಂಗಡ ಮೀಸಲು)

ಕೈ–ಕಮಲ ನೇರ ಸ್ಪರ್ಧೆ

ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಮಾಜಿ ಸಚಿವ ಬಿ.ಶ್ರೀರಾಮುಲು ಬಿಜೆಪಿ ಅಭ್ಯರ್ಥಿ. ಕಾಂಗ್ರೆಸ್‌ನಿಂದ ಇ.ತುಕಾರಾಮ್ ಅಭ್ಯರ್ಥಿ. ಎರಡೂ ಪಕ್ಷಗಳಲ್ಲೂ ಟಿಕೆಟ್ ಕುರಿತು ಅಸಮಾಧಾನವಿಲ್ಲ. ಬಂಡಾಯದ ಲಕ್ಷಣಗಳು ಇಲ್ಲ. ಹೀಗಾಗಿ ಶ್ರೀರಾಮುಲು–ತುಕಾರಾಮ್ ನಡುವೆ ನೇರ ಹಣಾಹಣಿ ಆಗಲಿದೆ. ಶ್ರೀರಾಮುಲು ವಾಲ್ಮೀಕಿ ಸಮುದಾಯದ ಪ್ರಬಲ ನಾಯಕ. 2004ರಲ್ಲಿ ಬಳ್ಳಾರಿ ನಗರ ಶಾಸಕರಾಗಿ ಬಿಜೆಪಿಯಿಂದ ಆಯ್ಕೆಯಾಗಿದ್ದ ಶ್ರೀರಾಮುಲು ರಾಜಕೀಯ ಹಲವು ಮಗ್ಗುಲುಗಳನ್ನು ಬದಲಿಸಿದೆ. ಹೀಗಾಗಿ ಕಣದಲ್ಲಿ ಅವರು ಅನುಭವಿ 'ಸ್ಪರ್ಧಿ'. ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು (ಕೆಆರ್‌ಪಿಪಿ) ವಿಲೀನಗೊಳಿಸಿ ಬಿಜೆಪಿಗೆ ಜನಾರ್ದನ ರೆಡ್ಡಿ ಸೇರಿದ್ದು 'ನೆರವು' ಆಗಬಹುದು ಎಂಬ ನಿರೀಕ್ಷೆ ರಾಮುಲು ಅವರಿಗಿದೆ.

ನಾಲ್ಕು ಬಾರಿ ಶಾಸಕರಾಗಿರುವ ಇ.ತುಕಾರಾಮ್ ಅವರ ಕಾರ್ಯ ಚಟುವಟಿಕೆ ಸಂಡೂರಿಗಷ್ಟೇ ಸೀಮಿತವಾಗಿತ್ತು. ಅಲ್ಪ ಅವಧಿಗೆ ಅವರು ಸಚಿವರೂ ಆಗಿದ್ದರು. ಈಗ ಮೊದಲನೇ ಸಲ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಶ್ರೀರಾಮುಲು ಅವರು ಮೋದಿ ವರ್ಚಸ್ಸು ಮತ್ತು ಕೇಂದ್ರ ಸರ್ಕಾರದ ಯೋಜನೆಗಳನ್ನು ನಂಬಿದ್ದಾರೆ. ತುಕಾರಾಮ ಅವರು ಕ್ಷೇತ್ರ ವ್ಯಾಪ್ತಿಯ 6 ಕಾಂಗ್ರೆಸ್ ಶಾಸಕರು, ಮೂವರು ಸಚಿವರು ಮತ್ತು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನೆಚ್ಚಿಕೊಂಡಿದ್ದಾರೆ.

ಅಭ್ಯರ್ಥಿಗಳು



ಇ ತುಕಾರಾಮ್
ಕಾಂಗ್ರೆಸ್



ಬಿ. ಶ್ರೀರಾಮುಲು
ಬಿಜೆಪಿ

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
6	1	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
9,20,022	9,45,053	266

ಒಟ್ಟು 18,65,341

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ವೈ.ದೇವೇಂದ್ರಪ್ಪ	ಬಿಜೆಪಿ	6,01,388
ಸಮೀಪದ ಪ್ರತಿಸ್ಪರ್ಧಿ	ವಿ.ಎಸ್.ಉಗ್ರಪ್ಪ	ಕಾಂಗ್ರೆಸ್	5,75,681



ಬಿಜೆಪಿ ಪ್ರಾಬಲ್ಯ ಮುರಿಯಲು 'ಕೈ' ಕಸರತ್ತು

2008ರ ಕ್ಷೇತ್ರ ಪುನರ್ವಿಂಗಡಣೆ ಬಳಿಕ ಅಸ್ತಿತ್ವಕ್ಕೆ ಬಂದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮೇಲೆ ಬಿಜೆಪಿ ಬಲವಾದ ಹಿಡಿತ ಸಾಧಿಸಿದೆ. ನಂತರದ ಮೂರೂ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದು 'ಹ್ಯಾಟ್ರಿಕ್' ಗೆಲುವು ಸಾಧಿಸಿದ ಪಿ.ಸಿ. ಮೋಹನ್ ನಾಲ್ಕನೇ ಬಾರಿ ಚುನಾವಣಾ ಅಖಾಡದಲ್ಲಿದ್ದಾರೆ. ಮನ್ಸೂರ್ ಅಲಿ ಖಾನ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ, ಈ ಬಾರಿ ಕ್ಷೇತ್ರವನ್ನು 'ಕೈ'ವಶ ಮಾಡಿಕೊಳ್ಳುವ ಉಮೇದಿನಲ್ಲಿದೆ.

ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಕಾಂಗ್ರೆಸ್ ಅದೇ ಸಮುದಾಯದವರನ್ನು ಕಣಕ್ಕಿಳಿಸುತ್ತಾ ಬಂದಿದೆ. ಹಿಂದೂ– ಮುಸ್ಲಿಂ ಪೈಪೋಟಿಯ ವಿಷಯವನ್ನೇ ಮುಂಚೂಣಿಗೆ ತರುವ ಮೂಲಕ ಬಿಜೆಪಿ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದೆ. 2008ರಿಂದ ಈವರೆಗೆ ನಡೆದ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲೂ ಬಿಜೆಪಿ ಮೂರು ಸ್ಥಾನಗಳನ್ನಷ್ಟೇ ಪಡೆಯುತ್ತಿದೆ. ಆದರೂ, ಲೋಕಸಭಾ ಚುನಾವಣೆಯಲ್ಲಿ ಗೆಲುವಿನ ಪತಾಕೆ ಹಾರಿಸುತ್ತಿದೆ.

ಈ ಬಾರಿ ಕಾಂಗ್ರೆಸ್‌ನ ಐವರು ಶಾಸಕರಲ್ಲಿ ಇಬ್ಬರು ಸಚಿವರಿದ್ದಾರೆ. 'ಗ್ಯಾರಂಟಿ' ಯೋಜನೆಗಳ ಪ್ರಭಾವ ತನ್ನ ಅಭ್ಯರ್ಥಿಯನ್ನು ಗೆಲುವಿನ ದಡ ಸೇರಿಸಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಧರ್ಮದ ಆಧಾರದಲ್ಲಿ ನಡೆಯುವ ಮತಗಳ ಧ್ರುವೀಕರಣವನ್ನು ಒಡೆದರಷ್ಟೇ ಕಾಂಗ್ರೆಸ್ ಗುರಿ ತಲುಪಲು ಸಾಧ್ಯ.

ಅಭ್ಯರ್ಥಿಗಳು



ಕೆ. ಮನ್ಸೂರ್ ಅಲಿ ಖಾನ್
ಕಾಂಗ್ರೆಸ್



ಪಿ.ಸಿ. ಮೋಹನ್
ಬಿಜೆಪಿ

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ
5	3

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
12,36,897	11,61548	465

ಒಟ್ಟು 23,98,910

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಪಿ.ಸಿ. ಮೋಹನ್	ಬಿಜೆಪಿ	6,02,853
ಸಮೀಪದ ಪ್ರತಿಸ್ಪರ್ಧಿ	ರಿಜ್ವಾನ್ ಅರ್ಷದ್	ಕಾಂಗ್ರೆಸ್	5,31,885

ಮಹಿಳಾ ಮೀಸಲಾತಿ ಮಸೂದೆ 2023ರ ಹಿಂದೆ ರಾಜಕೀಯ ಲಾಭ ಗಳಿಕೆಯ ಉದ್ದೇಶ

‘ನಾರಿ ಶಕ್ತಿ’ಗೆ ಎಲ್ಲ ಪಕ್ಷಗಳ ವಂದನೆ ಸದ್ಯಕ್ಕಿಲ್ಲ ನಾಯಕಿಯರಿಗೆ ಸ್ಪಂದನೆ!

ನಿಜಕ್ಕೂ ರಾಜಕೀಯ ಪಕ್ಷಗಳಿಗೆ ಬದ್ಧತೆ ಇದ್ದಿದ್ದರೆ ಮಸೂದೆಯ ಹಂಗಿಲ್ಲದೆಯೂ ಹೆಚ್ಚು ಮಹಿಳೆಯರಿಗೆ ಅವಕಾಶ ಕಲ್ಪಿಸಲು ಸಾಧ್ಯವಿಲ್ಲವೇ? ಮಹಿಳೆಯರ ಮತ ಗಳಿಸುವಲ್ಲಿ ಇರುವ ಹವಣಿಕೆಯು ಅವರನ್ನು ಚುನಾವಣಾ ಕಣದಲ್ಲಿ ಹುರಿಯಾಳುಗಳನ್ನಾಗಿಸುವಲ್ಲಿ ಮಾತ್ರ ಹೆಚ್ಚಾಗಿ ಕಾಣುವುದಿಲ್ಲವೇಕೆ?

• ನೀಆ ಎಂ.ಎಚ್.


ಬಾನ್ಸುರಿ ಸ್ವರಾಜ್, ಬಂಡೋ ಕಠಾರಿಯ, ಸಂಯುಕ್ತಾ ಪಾಟೀಲ, ಪ್ರಿಯಾಂಕಾ ಜಾರಕಿಹೊಳಿ, ಸೀತಾ ಸೊರೇನ್, ಪ್ರಭಾ ಮಲ್ಲಿಕಾರ್ಜುನ, ಗಾಯತ್ರಿ ಸಿದ್ದೇಶ್ವರ, ಸೌಮ್ಯ ರೆಡ್ಡಿ... ಪ್ರಸಕ್ತ ಲೋಕಸಭಾ ಚುನಾವಣೆಗೆ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ಇಂತಹ ಹೆಸರುಗಳು ಜನಮಾನಸದಲ್ಲಿ ಮಂದಹಾಸ ಮೂಡಿಸುತ್ತವೆ. ವ್ಹಾವ್! ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಮುನ್ನವೇ ಹೆಚ್ಚು ಮುಖಗಳಿಗೆ ಈ ಪರಿ ಮನ್ನಣೆಯೇ ಎಂದು ಅಚ್ಚರಿ ಹುಟ್ಟಿಸುತ್ತವೆ. ಆದರೆ ಈ ಪಟ್ಟಿಯ ಮೇಲೊಂದು ಭೂತಕನ್ನಡಿ ಹಿಡಿದರೆ ಅಲ್ಲಿ ಕಾಣಸಿಗುವುದು ಬೇರೆಯದೇ ಮುಖ!

ಪ್ರಾತಿನಿಧ್ಯವಾಗಿ ಇಲ್ಲಿ ಕಂಡುಬರುವ ಒಂದು ಸಾಮ್ಯತೆಯೆಂದರೆ, ಇವರೆಲ್ಲರಲ್ಲೂ ಇರುವ ರಾಜಕೀಯ ನಂಟು. ದಶಕಗಳಿಂದಲೂ ಅಧಿಕಾರ ರಾಜಕಾರಣದ ಗಾಳಿಯನ್ನೇ ಉಸಿರಾಡುತ್ತಾ ಬಂದಿರುವ ಕುಟುಂಬಗಳ ಕುಡಿಗಳು ಇವರು. ಇದು, ಮಸೂದೆಯ ಭವಿಷ್ಯದ ಫಲಾನುಭವಿಗಳ ಬಗೆಗೆ ಸ್ಥೂಲ ಚಿತ್ರಣವೊಂದನ್ನು ನಮಗೆ ಕಟ್ಟಿಕೊಡುತ್ತದೆ. ಕೆಲವರು ತಂದೆ, ತಾಯಿ ಅಥವಾ ಪತಿ ಮೃತಪಟ್ಟಾಗ 'ಅನುಕಂಪದ ಆಧಾರ'ದಲ್ಲಿ ಪಡೆಯುವ ಸರ್ಕಾರಿ ನೌಕರಿಯಂತೆ ಟಿಕೆಟ್ ಗಿಟ್ಟಿಸಿದವರಾಗಿದ್ದರೆ, ನಿನ್ನೆ ಮೊನ್ನೆಯವರೆಗೂ ಜಾರ್ಖಂಡ್ ಮುಕ್ತಿ ಮೋರ್ಚಾದಲ್ಲಿದ್ದು, ಭ್ರಷ್ಟಾಚಾರ ಹಗರಣದಲ್ಲಿ ಜಾಮೀನಿನ ಮೇಲೆ ಹೊರಗಿರುವ ಸೀತಾ ಸೊರೇನ್ ಅಂತಹವರು 'ಸ್ವಚ್ಛ'ವಾಗುವ ಸಲುವಾಗಿ ಬಿಜೆಪಿಯ ಕದ ತಟ್ಟಿದವರು. ಇದೇ ತಿಂಗಳ 19ರಂದು ಪಕ್ಷ ಸೇರಿ, ಅದೇ ದಿನಗಳಲ್ಲೇ ಟಿಕೆಟ್ ಗಿಟ್ಟಿಸಿಕೊಂಡವರು! ಆದರೆ ಚುನಾವಣಾ ಅಖಾಡದಲ್ಲಿ ಸೆಣಸುವುದು ಸಾಮಾನ್ಯ ಮಾತ್ರದವರಿಗೆ ಅಸಾಧ್ಯ ಎನ್ನುವಂತಹ ಇಂದಿನ ಪರಿಸ್ಥಿತಿಯಲ್ಲಿ, ಪುರುಷಾಧಿಪತ್ಯವು ತಮ್ಮ ಕುಟುಂಬದ ಹೆಣ್ಣುಮಕ್ಕಳನ್ನು ಕಣಕ್ಕಿಳಿಸಲು ಮನಸು ಮಾಡಿರುವುದನ್ನೂ ಒಂದು ಕ್ರಾಂತಿಕಾರಕ ನಡೆ ಎಂದೇ ಪರಿಗಣಿಸಬೇಕಾಗುತ್ತದೆ!


ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸೆಪ್ಟೆಂಬರ್‌ನಲ್ಲಿ ಹೊಸ ಸಂಸತ್ ಭವನಕ್ಕೆ ಅಡಿಯಿಟ್ಟಾಗ, ಏಕಾಏಕಿ ವಿಶೇಷ ಅಧಿವೇಶನ ಕರೆದು ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆ- 2023ರ ಹಿಂದೆ ರಾಜಕೀಯ ಲಾಭ ಗಳಿಕೆಯ ಉದ್ದೇಶ ಇರುವುದು ಸುಸ್ಪಷ್ಟ. ಆದರೂ ಅದರಿಂದ ತನ್ನ ಮಹತ್ವವನ್ನೇನೂ ಕಳೆದುಕೊಳ್ಳದ ಮಸೂದೆ, ಕೆಲವು ಪ್ರಶ್ನೆಗಳು ಮತ್ತು ಅನುಮಾನಗಳನ್ನೂ ಹುಟ್ಟುಹಾಕಿದೆ.

ಜಾಗತಿಕವಾಗಿ...

ವಿಶ್ವದೆಲ್ಲೆಡೆ ಮಹಿಳಾ ರಾಜಕಾರಣಿಗಳ ಸಂಖ್ಯೆ ಅಸಾಧಾರಣವಾಗೇನೂ ಇಲ್ಲ. 2022ರವರೆಗೆ 60 ರಾಷ್ಟ್ರಗಳಲ್ಲಿ ಇದ್ದ ಒಟ್ಟು ಮಹಿಳಾ ಸಂಸದರ ಪ್ರಮಾಣ ಶೇ 20ಕ್ಕಿಂತ ಕಡಿಮೆ ಎಂಬುದು ರಾಜಕೀಯ ವಿಜ್ಞಾನಿಗಳು ನಡೆಸಿದ ಅಧ್ಯಯನವೊಂದರಿಂದ ತಿಳಿದುಬಂದಿದೆ.



1996ರಲ್ಲಿ ಸಂಸತ್ತಿನಲ್ಲಿ ಮಂಡನೆಯಾಗಿದ್ದರೂ ಒಕ್ಕೊರಲಿನ ವಿಷಯದಲ್ಲಿ ರಾಜಕೀಯ ಪಕ್ಷಗಳು ಒಮ್ಮತ, ಬದ್ಧತೆ ತೋರದೆ ಇದ್ದ ಕಾರಣಕ್ಕೆ ಶೈತ್ಯಾಗಾರ ಸೇರಿದ್ದ ಈ ಸಾಂವಿಧಾನಿಕ ತಿದ್ದುಪಡಿಯು ಈಗ ಪ್ರಾತಿನಿಧಿಕವಾಗಿ ಬೆಂಬಲ ದೊರೆತಿರುವುದು ಸ್ವಾಗತಾರ್ಹ ಬೆಳವಣಿಗೆಯೇ ಸರಿ. ಏಕೆಂದರೆ, ಇದೇ ರಾಜಕೀಯ ಪಕ್ಷಗಳು ಒಂದು ಕಾಲದಲ್ಲಿ ಇಂತಹದ್ದೊಂದು ಮೀಸಲಾತಿಯ ಪ್ರಸ್ತಾಪವನ್ನೇ ಸಾರಾಸಗಟಾಗಿ ತಿರಸ್ಕರಿಸಿದ್ದವು.



ಆದರೆ ಇಂದು ಸರ್ಕಾರ ರೂಪಿಸಿರುವ ಮೀಸಲಾತಿ ಮಸೂದೆಗೆ 'ನಾರಿ ಶಕ್ತಿ ವಂದನ್ ಅಧಿನಿಯಮ' ಎಂದು ಪರ್ಯಾಯ ನಾಮಕರಣವನ್ನೇ ಮಾಡಿದೆ. ಆಡಳಿತಾರೂಢ ಪಕ್ಷ ಮಾತ್ರವಲ್ಲದೆ ಎಲ್ಲ ಪಕ್ಷಗಳೂ ನಾರಿ ಶಕ್ತಿಗೆ ವಂದಿಸಲು ಮುಗಿಬೀಳುತ್ತಿವೆ. ಹಾಗಿದ್ದರೆ ಇದರ ಹಿಂದಿನ ಅಸಲಿಯತ್ತು ಏನಿರಬಹುದು? ಒಂದೇ ಒಂದು ಸಣ್ಣ, ಆದರೆ ಮಹತ್ವವಾದ ಅಂಕಿಅಂಶವು ನಮ್ಮ ಈ ಕುತೂಹಲವನ್ನು ಒಮ್ಮೆಗೇ ತಣಿಸುತ್ತದೆ.

1962ರ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿದವರಲ್ಲಿ ಪ್ರತಿ 1,000 ಪುರುಷರಿಗೆ 675 ಮಹಿಳೆಯರು ಇದ್ದರು. ಅದೇ 2019ರ ಚುನಾವಣೆಯಲ್ಲಿ ಮಹಿಳೆಯರ ಮತದಾನದ ಪ್ರಮಾಣ ಪುರುಷ ಮತದಾರರ ಸಂಖ್ಯೆಯನ್ನು ಮೀರಿಸಿತ್ತು! ಮತದಾನದ ಹಕ್ಕು ಪಡೆದ ಪ್ರತಿ 1,000 ಪುರುಷರಿಗೆ ಮಹಿಳೆಯರ ಸಂಖ್ಯೆ 926 ಮಾತ್ರ ಇದ್ದುದರ ನಡುವೆಯೂ ಅತಿ ಹೆಚ್ಚಿನ ಹೆಂಗಳೆಯರು ಮತಗಟ್ಟೆಗೆ ಹಾಜರಾಗಿ ಹಕ್ಕು ಚಲಾಯಿಸಿದ್ದರು. ಶೇ 67.01ರಷ್ಟು ಪುರುಷರಿಗೆ ಪ್ರತಿಯಾಗಿ ಶೇ 67.18ರಷ್ಟು ಸ್ತ್ರೀಯರು ಮತದಾನ ಮಾಡಿದ ದಾಖಲೆಯು ಸ್ವತಂತ್ರ ಭಾರತದಲ್ಲಿ ಇತಿಹಾಸವನ್ನೇ ನಿರ್ಮಿಸಿತು. ಸ್ಥಳೀಯ ಸಂಸ್ಥೆಗಳೂ ಸೇರಿದಂತೆ ಇತ್ತೀಚಿನ ವರ್ಷಗಳಲ್ಲಿ ನಡೆಯುತ್ತಿರುವ ಯಾವುದೇ ಚುನಾವಣೆಯಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಭರವಸೆಗಳಿಲ್ಲದ ಪ್ರಣಾಳಿಕೆಗಳೇ ಬಿಡುಗಡೆಯಾಗದಿರುವುದರ ಹಿಂದಿನ ಮರ್ಮ ಇದು!

ಮಸೂದೆಗೆ ಇದೀಗ ಉಭಯ ಸದನಗಳ ಅನುಮೋದನೆ ದೊರೆತಿರುವುದು ಅದರ ಜಾರಿಯ ಸಾಧ್ಯಾಸಾಧ್ಯತೆಯನ್ನಂತೂ ನಿಚ್ಚಳವಾಗಿಸಿದೆ. ಆದರೂ ಇಷ್ಟೆಲ್ಲಾ ಸಾಂಸ್ಥಿಕ ತಡೆಗೋಡೆಗಳನ್ನು ದಾಟಿ ಬಂದ ನಂತರವೂ ಈ ಬಾರಿಯ ಚುನಾವಣೆಯಲ್ಲೇ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಾರದಿರುವುದೇಕೆ? ನಿಜಕ್ಕೂ ರಾಜಕೀಯ ಪಕ್ಷಗಳಿಗೆ ಬದ್ಧತೆ ಇದ್ದಿದ್ದರೆ ಮಸೂದೆಯ ಹಂಗಿಲ್ಲದೆಯೂ ಹೆಚ್ಚು ಮಹಿಳೆಯರಿಗೆ ಅವಕಾಶ ಕಲ್ಪಿಸಲು ಸಾಧ್ಯವಿಲ್ಲವೇ? ಮಹಿಳೆಯರ ಮತ ಗಳಿಸುವಲ್ಲಿ ಇರುವ ಹವಣಿಕೆಯು ಅವರನ್ನು ಚುನಾವಣಾ ಕಣದಲ್ಲಿ ಹುರಿಯಾಳುಗಳನ್ನಾಗಿಸುವಲ್ಲಿ ಮಾತ್ರ ಹೆಚ್ಚಾಗಿ ಕಾಣುವುದಿಲ್ಲವೇಕೆ? ಇಂತಹ ಪ್ರಶ್ನೆಗಳಿಗೆ, ಪ್ರಶ್ನಾತೀತವಾದ ರಾಜಕೀಯ ಚಾಣಾಕ್ಷ ನಡೆ ಎಂಬುದಲ್ಲದೆ ಬೇರೆ ಯಾವ ಉತ್ತರವೂ ಕಾಣಸಿಗದು. ಈ ಬಾರಿಯ ಅಭ್ಯರ್ಥಿಗಳ ಪಟ್ಟಿಯನ್ನು ಮುಂದಿಟ್ಟುಕೊಂಡು ಮಹಿಳೆಯರ ಉಮೇದುವಾರಿಕೆಯಲ್ಲಿನ ವಿವಿಧ ಪಕ್ಷಗಳ ಬದ್ಧತೆಯನ್ನು ನಿಕಷಕ್ಕೆ ಒಡ್ಡಿದರೆ, ರಾಷ್ಟ್ರೀಯ ಪಕ್ಷಗಳಷ್ಟೇ ಅಲ್ಲ ಪ್ರಾದೇಶಿಕ ಪಕ್ಷಗಳ ಮುಖವಾಡವೂ ಕಳಚಿಬೀಳುತ್ತದೆ.

ಜಯಲಲಿತಾ ಅವರಂತಹ ವರ್ಚಸ್ವಿ ನಾಯಕಿಯನ್ನು ಹೊಂದಿದ್ದ ಎಐಎಡಿಎಂಕೆ, ತಮಿಳುನಾಡಿನಲ್ಲಿ ಸ್ಪರ್ಧಿಸುತ್ತಿರುವ 32 ಕ್ಷೇತ್ರಗಳಲ್ಲಿ ನಿಲ್ಲಿಸಿರುವುದು ಏಕೈಕ ಮಹಿಳೆಯನ್ನು! ಇನ್ನು ಡಿಎಂಕೆ ಸ್ಪರ್ಧಿಸುತ್ತಿರುವ 21 ಸ್ಥಾನಗಳಲ್ಲಿ ಸೆಣಸುತ್ತಿರುವ ಮಹಿಳೆಯರು ಮೂವರು ಮಾತ್ರ. ಈ ಮಸೂದೆ ಜಾರಿಯ ವಿಷಯದಲ್ಲಿ ಲವಲೇಶವೂ ಬದ್ಧತೆ ಇಲ್ಲ ಎಂದು ಬಿಜೆಪಿಯ ಕಾಲೆಳೆದಿದ್ದ ಸಿಪಿಎಂ, ಕೇರಳದಲ್ಲಿ ತಾನು ಸ್ಪರ್ಧಿಸುತ್ತಿರುವ 15 ಕ್ಷೇತ್ರಗಳಲ್ಲಿ ಅವಕಾಶ ನೀಡಿರುವುದು 'ಇಬ್ಬರು ಹೆಣ್ಣು ಮಕ್ಕಳಿಗಷ್ಟೇ'. ಮಸೂದೆ ಮಂಡನೆಯಾದ ಸಂಭ್ರಮದಲ್ಲಿ ಇದೇ ರಾಜ್ಯದ ತ್ರಿಶೂರಿನಲ್ಲಿ ಬಿಜೆಪಿ ರಾಜ್ಯ ಘಟಕ ತಮಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮೋದಿ, ಇಲ್ಲಿನ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಸಿಪಿಎಂ ನೇತೃತ್ವದ ಎಲ್‌ಡಿಎಫ್‌ಗೆ ಮಹಿಳೆಯರ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲ ಎಂದು ಲೇವಡಿ ಮಾಡಿದ್ದರು. ಆದರೆ ಅಂತಹ ಸಾಮರ್ಥ್ಯದ ಬಗೆಗೆ ಅವರ ಪಕ್ಷ ಇಟ್ಟಿರುವ ನಂಬಿಕೆಯು ಕೇರಳದ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಮಾತ್ರ ಪ್ರತಿಫಲಿಸುತ್ತಿಲ್ಲ. ಏಕೆಂದರೆ, ಅಲ್ಲಿ ಪಕ್ಷದಿಂದ ಕಣಕ್ಕೆ ಇಳಿದಿರುವವರು ಬರೀ ನಾಲ್ವರು ಮಹಿಳೆಯರು. ಪಶ್ಚಿಮ ಬಂಗಾಳದ 42 ಕ್ಷೇತ್ರಗಳಲ್ಲಿ ಮಮತಾ ದೀದಿ ನೇತೃತ್ವದ ಟಿಎಂಸಿಯಿಂದ 12 ಮಹಿಳೆಯರು ಅಖಾಡದಲ್ಲಿ ಇರುವುದರಿಂದ, ಇದ್ದುದರಲ್ಲಿ ಟಿಎಂಸಿಯೇ ವಾಸಿ ಎನ್ನಬಹುದಾಗಿದೆ.

ಇಂತಹ ನಿರಾಶಾದಾಯಕ ಸ್ಥಿತಿಯಲ್ಲಿ, 2026ರಲ್ಲಿ ನಡೆಯಲಿರುವುದೆಂದು ಅಂದಾಜಿಸಲಾಗಿರುವ ಜನಗಣತಿ, ತದನಂತರ ನಡೆಯಲಿರುವ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ಪ್ರಕ್ರಿಯೆಯು ಮಹಿಳಾ ಮೀಸಲು ಕ್ಷೇತ್ರಗಳ ಸಂಖ್ಯೆ ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುವ ನಿರೀಕ್ಷೆಯಂತೂ ಇದೆ. ಆದರೆ ಈ ಎರಡೂ ಕಾರ್ಯಗಳು ವಿಳಂಬವಾಗದಂತೆ ಎಚ್ಚರ ವಹಿಸಿ, ಮಸೂದೆ ಜಾರಿಯು 2029ರ ಚುನಾವಣೆಯನ್ನೂ ದಾಟಿ ಹೋಗದಂತೆ ನೋಡಿಕೊಳ್ಳಬೇಕಾದ ಗುರುತರ ಹೊಣೆ ಮುಂಬರುವ ಹೊಸ ಸರ್ಕಾರದ ಮೇಲಿದೆ.

ಅಂತಹದ್ದೊಂದು ನಿರೀಕ್ಷೆ ಸಾಕಾರಗೊಂಡಿದ್ದೇ ಆದಲ್ಲಿ, ಐಷಾರಾಮಿ ಕಾರಿನಲ್ಲಿ ಬಂದಿಳಿಯುವ ರಾಜಕೀಯ ಕುಟುಂಬಗಳ ಹೆಣ್ಣುಮಕ್ಕಳ ಜೊತೆಗೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯ ಕಾರಣದಿಂದಲೇ ಬೆಳಗಾವಿಯ ಮೇಯರ್ ಆಗಿ, ಸರ್ಕಾರಿ ಕಾರೇ ತಮ್ಮ ಪುಟ್ಟ ಮನೆಯ ಮುಂದೆ ಬಂದು ನಿಲ್ಲುವಂತೆ ಮಾಡಿದ, ಪೌರಕಾರ್ಮಿಕರಾಗಿದ್ದ ಸವಿತಾ ಕಾಂಬ್ಳೆ ಅಂತಹವರು ಶಾಸನಸಭೆಗಳಲ್ಲೂ ಮಿಂಚಿಯಾರು.

ಕಾಂಗ್ರೆಸ್‌ನ ಐವರು ಸಚಿವರು ಸಂಪರ್ಕದಲ್ಲಿದ್ದಾರೆ: ಬಿಜೆಪಿ

ಹೈದರಾಬಾದ್: ತೆಲಂಗಾಣದಲ್ಲಿ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಕನಿಷ್ಠ ಐವರು ಸಂಪುಟ ಸಚಿವರು ಮತ್ತು ಕಾಂಗ್ರೆಸ್‌ನ ಕೆಲ ಶಾಸಕರು ಬಿಜೆಪಿಯ ಕೇಂದ್ರ ನಾಯಕರೊಂದಿಗೆ ಸಂಪರ್ಕದಲ್ಲಿದ್ದು, ಮನಸ್ಸು ಮಾಡಿದರೆ 48 ಗಂಟೆಗಳಲ್ಲಿ ಸರ್ಕಾರವನ್ನು ಅಸ್ಥಿರಗೊಳಿಸಬಹುದು ಎಂದು ರಾಜ್ಯದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಏಲೇಟಿ ಮಹೇಶ್ವರ್ ರೆಡ್ಡಿ ಶನಿವಾರ ಹೇಳಿದ್ದಾರೆ.

ರಸ್ತೆ ಮತ್ತು ಕಟ್ಟಡ ಸಚಿವ ಕೋಮಟಿರೆಡ್ಡಿ ವೆಂಕಟರೆಡ್ಡಿ ಅವರು ತೆಲಂಗಾಣದ ‘ಏಕನಾಥ ಶಿಂದೆ’ ಆಗುವ ಮತ್ತು ಬಿಜೆಪಿ ಸೇರುವ ಇಂಗಿತವನ್ನು ಈಗಾಗಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಬಳಿ ವ್ಯಕ್ತಪಡಿಸಿದ್ದಾರೆ. ಆದರೆ ಇದಕ್ಕೆ ಗಡ್ಕರಿ ಅವರು ಸಮ್ಮತಿಸಿಲ್ಲ ಎಂದು ಮಹೇಶ್ವರ್ ರೆಡ್ಡಿ ತಿಳಿಸಿದ್ದಾರೆ.

‘ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸುವುದರಲ್ಲಿ ಬಿಜೆಪಿಯು ನಂಬಿಕೆ ಹೊಂದಿಲ್ಲ’ ಎಂದು ಅವರು ಹೇಳಿದ್ದಾರೆ.

ಎರಡು ದಿನಗಳ ಹಿಂದೆಯಷ್ಟೇ ವೆಂಕಟರೆಡ್ಡಿ ಅವರು, ‘ತೆಲಂಗಾಣದಲ್ಲಿ ಬಿಜೆಪಿಯ ಎಂಟು ಶಾಸಕರು ಕಾಂಗ್ರೆಸ್‌ನೊಂದಿಗೆ ಸಂಪರ್ಕದಲ್ಲಿದ್ದು, ಪಕ್ಷ ಸೇರಲು ಸಿದ್ಧರಾಗಿದ್ದಾರೆ’ ಎಂದು ಹೇಳಿದ್ದರು.



ಜಾಗೃತಿ

ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ತಮಿಳುನಾಡಿನ ಮಾಮಲ್ಲಪುರಂ ಕಡಲ ತೀರದಲ್ಲಿ ವಿದ್ಯಾರ್ಥಿಗಳು ಶನಿವಾರ ಮರಳು ಶಿಲ್ಪ ರಚಿಸಿದರು – ಪಿಟಿಐ ಚಿತ್ರ

ಬಿಜೆಪಿ, ಶಿವಸೇನಾ ತಾರಾ ಪ್ರಚಾರಕರ ವಿರುದ್ಧ ದೂರು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಆಡಳಿತಾರೂಢ ಬಿಜೆಪಿ ಮತ್ತು ಶಿವಸೇನಾ ಕೂಟವು ಸರ್ಕಾರದ ಅಧಿಕೃತ ಹುದ್ದೆಗಳನ್ನು ಚುನಾವಣಾ ಪ್ರಚಾರಕ್ಕೆ ಬಳಸುವ ಮೂಲಕ ಪ್ರಜಾಪ್ರತಿನಿಧಿ ಕಾಯ್ದೆ ಹಾಗೂ ಮಾದರಿ ನೀತಿಸಂಹಿತೆ ಉಲ್ಲಂಘಿಸಿದೆ ಎಂದು ಎನ್‌ಸಿಪಿ (ಶರದ್‌ಪವಾರ್ ಬಣ) ಆರೋಪಿಸಿದೆ. ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿರುವುದಾಗಿ ಶನಿವಾರ ತಿಳಿಸಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಎನ್‌ಸಿಪಿ (ಶರದ್‌ಪವಾರ್ ಬಣ), ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ದೂರು ಮತ್ತು ಬಿಜೆಪಿಯ ತಾರಾ ಪ್ರಚಾರಕರ ಪಟ್ಟಿಯನ್ನು ಹಂಚಿಕೊಂಡಿದೆ.

ಏಕನಾಥ ಶಿಂದೆ ನೇತೃತ್ವದ ಎನ್‌ಸಿಪಿ ಮತ್ತು ಶಿವಸೇನಾ ಕೂಟವು ತಮ್ಮ ತಾರಾ ಪ್ರಚಾರಕರನ್ನಾಗಿ ಪ್ರಧಾನ ಮಂತ್ರಿ, ಕೇಂದ್ರ ಸಚಿವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ವಿವಿಧ ಉನ್ನತ ವ್ಯಕ್ತಿಗಳನ್ನೊಳಗೊಂಡ ಪಟ್ಟಿ ಪ್ರಕಟಿಸಿದೆ.

‘ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವು ಅಧಿಕೃತ ಹುದ್ದೆಗಳನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ’ ಎಂದು ಪಕ್ಷವು ದೂರಿನಲ್ಲಿ ತಿಳಿಸಿದೆ.

ರಾಜೀನಾಮೆ ಅಂಗೀಕಾರ ವಿಳಂಬ: ಶಾಸಕರ ಪ್ರತಿಭಟನೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ವಿಧಾನಸಭೆಯ ಸ್ಪೀಕರ್ ಕುಲ್‌ದೀಪ್ ಸಿಂಗ್ ಪಠಾನಿಯಾ ತಮ್ಮ ರಾಜೀನಾಮೆ ಅಂಗೀಕರಿಸುವುದರಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ ಮೂವರು ಪಕ್ಷೇತರ ಶಾಸಕರು ಶನಿವಾರ ವಿಧಾನಸಭೆಯಲ್ಲಿ ಧರಣಿ ನಡೆಸಿದರು.

ಶಾಸಕರಾದ ಹೋಷಿಯಾರ್ ಸಿಂಗ್, ಆಶೀಶ್ ಶರ್ಮಾ, ಕೆ.ಎಲ್. ಠಾಕೂರ್ ಅವರು ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಿದ್ದರು. ಮಾರ್ಚ್ ಎರಡರಂದು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಅವರು ಮಾರನೇ ದಿನ ಬಿಜೆಪಿ ಸೇರಿದ್ದರು.

‘ನಾವು ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ್ದೇವೆ. ಅದನ್ನು ತಕ್ಷಣವೇ ಅಂಗೀಕರಿಸಬೇಕು’ ಎನ್ನುವ ಭಿತ್ತಿಪತ್ರ ಹಿಡಿದು ಅವರು ಪ್ರತಿಭಟಿಸಿದರು.

ನಿರ್ಧಾರ ಬದಲಿಸಿದ ಶಿವತಾರೆ

ಪುಣೆ (ಪಿಟಿಐ): ಮಹಾರಾಷ್ಟ್ರದ ಬಾರಾಮತಿ ಲೋಕಸಭಾ ಕ್ಷೇತ್ರದಲ್ಲಿ ಪವಾರ್ ಕುಟುಂಬಕ್ಕೆ ವಿರುದ್ಧವಾಗಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದ ಶಿವಸೇನಾ ಮುಖಂಡ ವಿಜಯ್ ಶಿವತಾರೆ ತಮ್ಮ ನಿಲುವು ಬದಲಿಸಿದ್ದು, ‘ಮಹಾಯುತಿ’ ಮೈತ್ರಿಕೂಟದ ಅಭ್ಯರ್ಥಿಯನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ.

ಬಾರಾಮತಿ ಕ್ಷೇತ್ರವು ಎನ್‌ಸಿಪಿ (ಶರದ್ ಪವಾರ್ ಬಣ)ದ ಭದ್ರಕೋಟೆಯಾಗಿದ್ದು, ಶರದ್ ಪವಾರ್ ಮಗಳು ಸುಪ್ರಿಯಾ ಸುಳೆ ಅವರನ್ನು ಮಹಾ ‘ವಿಕಾಸ ಅಘಾಡಿ ಕೂಟ’ವು ಅಭ್ಯರ್ಥಿಯಾಗಿ ಘೋಷಿಸಿದೆ. ಏಕನಾಥ ಶಿಂದೆ ಜೊತೆಗಿರುವ ಅಜಿತ್ ಪವಾರ್ ಪತ್ನಿ ಸುನೇತ್ರಾ ಪವಾರ್ ಅವರು ‘ಮಹಾಯುತಿ’ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಶಿವತಾರೆ ಘೋಷಣೆ ಮಾಡಿದ್ದು, ಆಡಳಿತಾರೂಢ ಎನ್‌ಸಿಪಿ ಮತ್ತು ಶಿವಸೇನಾ (ಅಜಿತ್ ಪವಾರ್ ಬಣ) ಕೂಟದಲ್ಲಿ ಬಿಕ್ಕಟ್ಟಿಗೆ ಕಾರಣವಾಗಿತ್ತು.

ಶಿವತಾರೆ, ಬಾರಾಮತಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪುರಂದರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ. ಅವರು ಗುರುವಾರ ಬೆಳಿಗ್ಗೆ ಮುಖ್ಯಮಂತ್ರಿ ಶಿಂದೆ ಮತ್ತು ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು. ಅದರ ನಂತರ ಶನಿವಾರ ಪುಣೆ ಜಿಲ್ಲೆಯ ಪುರಂದರ ತಾಲ್ಲೂಕಿನಲ್ಲಿ ತಮ್ಮ ಬೆಂಬಲಿಗರೊಂದಿಗೆ ಚರ್ಚೆ ನಡೆಸಿದರು.

‘ಮುಂದಿನ ತಲೆಮಾರು ಕಷ್ಟ ಪಡಬಾರದು ಎನ್ನುವ ದೃಷ್ಟಿಯಿಂದ ನಾನು ಈ ನಿರ್ಧಾರ ಕೈಗೊಂಡಿದ್ದೇನೆ. ಏಕನಾಥ ಶಿಂದೆ ಅವರ ಆಪ್ತ ಅಧಿಕಾರಿ ನನಗೆ ಕರೆ ಮಾಡಿ ಎರಡು ಗಂಟೆ ಕಾಲ ಮಾತನಾಡಿದರು’ ಎಂದು ಶಿವತಾರೆ ಹೇಳಿದ್ದಾರೆ.

ಬಾರಾಮತಿ ಕ್ಷೇತ್ರ


ಎನ್‌ಸಿಪಿ ಮೊದಲ ಪಟ್ಟಿ ಬಿಡುಗಡೆ

ಮುಂಬೈ: ಎನ್‌ಸಿಪಿ (ಶರದ್ ಪವಾರ್ ಬಣ), ಲೋಕಸಭಾ ಚುನಾವಣೆಗಾಗಿ ಪಕ್ಷದ ಐವರು ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ. ಪಟ್ಟಿ ಬಿಡುಗಡೆಗೊಳಿಸಿದ ಪಕ್ಷದ ಮುಖ್ಯಸ್ಥ ಜಯಂತ್ ಪಾಟೀಲ್, ‘ಸುಪ್ರಿಯಾ ಸುಳೆ ಮತ್ತು ಅಮೋಲ್ ಕೊಲ್ಹೆ ಅವರಿಗೆ ಕ್ರಮವಾಗಿ ಬಾರಾಮತಿ ಮತ್ತು ಶಿರೂರ್ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸುವ ಅವಕಾಶ ನೀಡಲಾಗಿದೆ’ ಎಂದು ಹೇಳಿದರು.

ಅಜಿತ್ ಪವಾರ್ ಬಣದಿಂದ ಪಕ್ಷಕ್ಕೆ ಬಂದಿರುವ ನೀಲೇಶ್ ಲಂಕೆ ಅವರನ್ನು ಅಹಮದ್‌ನಗರ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ‘ಮಹಾ ವಿಕಾಸ ಅಘಾಡಿ’ ಕೂಟದ ಭಾಗವಾಗಿರುವ ಎನ್‌ಸಿಪಿ (ಶರದ್ ಪವಾರ್ ಬಣ) ಮಹಾರಾಷ್ಟ್ರದ 48 ಲೋಕಸಭಾ ಕ್ಷೇತ್ರಗಳ ಪೈಕಿ 10 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ.

ಬಿಜೆಪಿ ಪ್ರಣಾಳಿಕೆ ಸಮಿತಿಗೆ ರಾಜನಾಥ್ ಸಿಂಗ್ ನೇತೃತ್ವ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗೆ ಪಕ್ಷದ ಪ್ರಣಾಳಿಕೆ ರೂಪಿಸಲು ಬಿಜೆಪಿಯು 27 ಸದಸ್ಯರ ಸಮಿತಿಯನ್ನು ಶನಿವಾರ ಪ್ರಕಟಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ಸಮಿತಿಯಲ್ಲಿ ಕೇಂದ್ರದ ಹಲವು ಸಚಿವರು ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಇದ್ದಾರೆ.



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರನ್ನು ಕ್ರಮವಾಗಿ ಸಂಚಾಲಕಿ ಮತ್ತು ಉಪ ಸಂಚಾಲರಾಗಿ ನೇಮಕ ಮಾಡಲಾಗಿದೆ.

ರಾಜನಾಥ್ ಸಿಂಗ್ ಅವರು 2019ರ ಚುನಾವಣೆ ಸಂದರ್ಭದಲ್ಲೂ ಬಿಜೆಪಿ ಪ್ರಣಾಳಿಕೆ ಸಮಿತಿಯ ನೇತೃತ್ವ ವಹಿಸಿದ್ದರು. ಅಂದು ಸಮಿತಿಯಲ್ಲಿದ್ದ ಹಲವು ಮಂದಿ ಈ ಬಾರಿಯೂ ಸ್ಥಾನ ಪಡೆದುಕೊಂಡಿದ್ದಾರೆ.

ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಅಶ್ವಿನಿ ವೈಷ್ಣವ್, ಭೂಪೇಂದರ್ ಯಾದವ್, ಕಿರಣ್ ರಿಜಿಜು, ಅರ್ಜುನ್ ಮುಂಡಾ, ಅರ್ಜುನ್ ರಾಮ್ ಮೇಘವಾಲ್, ಸ್ಮೃತಿ ಇರಾನಿ ಮತ್ತು ರಾಜೀವ್ ಚಂದ್ರಶೇಖರ್ ಅವರು ಸಮಿತಿಯಲ್ಲಿದ್ದಾರೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದರ್ ಪಟೇಲ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಛತ್ತೀಸ್‌ಗಢ ಮುಖ್ಯಮಂತ್ರಿ ವಿಷ್ಣು ದೇವ್ ಸಾಯ್ ಹಾಗೂ ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಸಮಿತಿಯಲ್ಲಿರುವ ಮುಖ್ಯಮಂತ್ರಿಗಳಾಗಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಸಮಿತಿಯಲ್ಲಿಲ್ಲದ ಕೆಲವು ಹಿರಿಯ ನಾಯಕರಿಗೆ ಚುನಾವಣೆಗೆ ಸಂಬಂಧಿಸಿದ ಇತರ ಸಂಘಟನಾತ್ಮಕ ಚಟುವಟಿಕೆಯ ಜವಾಬ್ದಾರಿ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ.


ಪನ್ನೀರ್‌ಸೆಲ್ವಂ ವಿರುದ್ಧ ನಾಲ್ವರು ಪನ್ನೀರ್‌ಸೆಲ್ವಂ!

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದು, ಅವರು ಕಣದಲ್ಲಿ ತನ್ನದೇ ಹೆಸರಿನ ನಾಲ್ವರು ಅಭ್ಯರ್ಥಿಗಳ ವಿರುದ್ಧ ಹೋರಾಡಬೇಕಾಗಿದೆ.

ಅಲ್ಪಸಂಖ್ಯಾತರ ಪ್ರಾಬಲ್ಯವಿರುವ ರಾಮನಾಥಪುರಂ ಕ್ಷೇತ್ರದಲ್ಲಿ ಪನ್ನೀರ್‌ಸೆಲ್ವಂ ಹೆಸರಿನ ನಾಲ್ವರು ಪಕ್ಷೇತರ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಇದರಿಂದಾಗಿ ಎಐಎಡಿಎಂಕೆಯ ಪದಚ್ಯುತ ನಾಯಕನಿಗೆ ಐಯುಎಂಎಲ್ ಮತ್ತು ಎಐಎಡಿಎಂಕೆ ಅಭ್ಯರ್ಥಿಗಳ ಜತೆಗೆ ತಮ್ಮದೇ ಹೆಸರಿನ ನಾಲ್ವರು ಅಭ್ಯರ್ಥಿಗಳನ್ನು ಎದುರಿಸಬೇಕಾಗಿದೆ.

ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿರುವ ಒ.ಪನ್ನೀರ್‌ಸೆಲ್ವಂ ಹೆಸರಿನ ಯಾವ ಅಭ್ಯರ್ಥಿಯೂ ನಾಮಪತ್ರ ವಾಪಸ್ ಪಡೆದಿಲ್ಲ. ಹೀಗಾಗಿ ಇನ್ನು 20 ದಿನದಲ್ಲಿ ಮಾಜಿ ಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ ತಮ್ಮ ಚುನಾವಣಾ ಚಿಹ್ನೆ ‘ಹಲಸಿನ ಹಣ್ಣು’ ಎಲ್ಲ ಮತದಾರರಿಗೂ ಮುಟ್ಟುವಂತೆ ನೋಡಿಕೊಳ್ಳಲು ಹರಸಾಹಸ ಮಾಡಬೇಕಾಗಿದೆ.



ಇನ್ನೊಂದು ಸಮಸ್ಯೆ ಏನೆಂದರೆ, ಸದ್ಯ ಯಾವುದೇ ಪಕ್ಷದ ಭಾಗವಾಗಿರದ ಪನ್ನೀರ್‌ಸೆಲ್ವಂ ಕೂಡ ಪಕ್ಷೇತರ ಅಭ್ಯರ್ಥಿಯಾಗಿಯೇ ಸ್ಪರ್ಧಿಸುತ್ತಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿದ್ದರೆ, ಕಣದಲ್ಲಿರುವ ಅದೇ ಹೆಸರಿನ ಇತರ ಅಭ್ಯರ್ಥಿಗಳು 42 ರಿಂದ 61 ವರ್ಷದೊಳಗಿನವರು.

ಪನ್ನೀರ್‌ಸೆಲ್ವಂ ವಿರೋಧಿಗಳು ಅವರ ಹೆಸರಿನವರನ್ನೇ ಕಣಕ್ಕಿಳಿಸುವ ಮೂಲಕ ಮತದಾರರಲ್ಲಿ ಗೊಂದಲ ಉಂಟುಮಾಡುವ ಹಳೆಯ ತಂತ್ರದ ಮೊರೆ ಹೋಗಿದ್ದಾರೆ. ಕಣದಲ್ಲಿರುವವರ ಪೈಕಿ ಒಬ್ಬ ಅಭ್ಯರ್ಥಿ ರಾಮನಾಥಪುರಂ ಜಿಲ್ಲೆಯವರಾಗಿದ್ದರೆ, ಉಳಿದ ಮೂವರು ಮದುರೈ ಜಿಲ್ಲೆಯವರು. ಮಾಜಿ ಮುಖ್ಯಮಂತ್ರಿ ಪನ್ನೀರ್‌ಸೆಲ್ವಂ ಅವರು ಥೇಣಿ ಜಿಲ್ಲೆಗೆ ಸೇರಿದವರಾಗಿದ್ದಾರೆ.

ಒಪಿಎಸ್ ಎಂದೇ ಕರೆಯಲ್ಪಡುವ ಪನ್ನೀರ್‌ಸೆಲ್ವಂ ಎಐಎಡಿಎಂಕೆ ನಾಯಕಿಯಾಗಿದ್ದ ಜಯಲಲಿತಾ ಪರವಾಗಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ನಂತರ ಅವರು ಪಕ್ಷದಿಂದ ದೂರವಾಗಿದ್ದರು. ಒಪಿಎಸ್ ವಿರುದ್ಧ ಅವರದೇ ಹೆಸರಿನ ನಾಲ್ವರು ಸ್ಪರ್ಧೆ ಮಾಡಿದ್ದರ ಹಿಂದೆ ತನ್ನ ಕೈವಾಡವಿಲ್ಲ ಎಂದು ಎಐಎಡಿಎಂಕೆ ಸ್ಪಷ್ಟಪಡಿಸಿದೆ. ‘ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕಿದೆ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಹೇಳಿದ್ದಾರೆ.

ತಮಿಳುನಾಡು ಕಣದಲ್ಲಿ 950 ಮಂದಿ

ಚೆನ್ನೈ (ಪಿಟಿಐ): ಲೋಕಸಭಾ ಚುನಾವಣೆಗೆ ತಮಿಳುನಾಡಿನ 39 ಕ್ಷೇತ್ರಗಳಲ್ಲಿ ಒಟ್ಟು 950 ಅಭ್ಯರ್ಥಿಗಳು ಕಣದಲ್ಲಿ ಉಳಿದುಕೊಂಡಿದ್ದಾರೆ. ತಮಿಳುನಾಡಿನ ಎಲ್ಲ ಕ್ಷೇತ್ರಗಳಿಗೆ ಏಪ್ರಿಲ್ 19 ರಂದು ಮತದಾನ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾದ ಶನಿವಾರ 135 ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದರು. 874 ಪುರುಷರು ಮತ್ತು 76 ಮಹಿಳೆಯರು ಸ್ಪರ್ಧೆಯಲ್ಲಿ ಉಳಿದುಕೊಂಡಿದ್ದಾರೆ.

ಚುಟುಕು

ಅರುಣಾಚಲ: ಮುಖ್ಯಮಂತ್ರಿ ಸೇರಿ 10 ಮಂದಿ ಅವಿರೋಧ ಆಯ್ಕೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪ್ರೇಮಾ ಖಂಡು ಮತ್ತು ಉಪಮುಖ್ಯಮಂತ್ರಿ ಚೌನಾ ಮೇನ್ ಸೇರಿದಂತೆ ಬಿಜೆಪಿಯ 10 ಅಭ್ಯರ್ಥಿಗಳು ವಿಧಾನಸಭಾ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಆಗಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ಪವನ್ ಕುಮಾರ್ ಸೈನ್ ಶನಿವಾರ ತಿಳಿಸಿದರು.

ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಒಬ್ಬರೇ ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದರೆ, ಉಳಿದ ನಾಲ್ಕು ಕ್ಷೇತ್ರಗಳಲ್ಲಿ ಎದುರಾಳಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ ಎಂದು ಅವರು ಹೇಳಿದರು.

ಮುಕ್ತೋ ಕ್ಷೇತ್ರದಿಂದ ಪ್ರೇಮಾ ಖಂಡು ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು. ಚೌಕಾಮ್ ಕ್ಷೇತ್ರದಿಂದ ಚೌನಾ ಮೇನ್ ವಿರುದ್ಧ ನಾಮಪತ್ರ ಸಲ್ಲಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಶನಿವಾರ ನಾಮಪತ್ರ ವಾಪಸ್ ಪಡೆದಿದ್ದರು.

ಜಿಗಿ–ನೆಗೆದಾಟ

ಅರ್ಚನಾ ಪಾಟೀಲ್ ಬಿಜೆಪಿಗೆ

ಮುಂಬೈ (ಪಿಟಿಐ): ಕಾಂಗ್ರೆಸ್ ಮುಖಂಡ ಹಾಗೂ ಕೇಂದ್ರದ ಮಾಜಿ ಸಚಿವರೂ ಆಗಿರುವ ಶಿವರಾಜ್ ಪಾಟೀಲ್ ಅವರ ಸೊಸೆ ಅರ್ಚನಾ ಪಾಟೀಲ್ ಶನಿವಾರ ಬಿಜೆಪಿ ಸೇರಿದರು.

ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಮಹಾರಾಷ್ಟ್ರ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಶೇಖರ್ ಬಾವನ್‌ಕುಲೆ ಅವರ ಸಮ್ಮುಖದಲ್ಲಿ ಕಮಲ ಪಕ್ಷ ಸೇರಿಕೊಂಡರು.

‘ಕೈ’ ಹಿಡಿದ ಹೈದರಾಬಾದ್ ಮೇಯರ್(ಹೈದರಾಬಾದ್): ಗ್ರೇಟರ್ ಹೈದರಾಬಾದ್ ಮಹಾನಗರ ಪಾಲಿಕೆ (ಜಿಎಚ್‌ಎಂಸಿ) ಮೇಯರ್ ವಿಜಯಲಕ್ಷ್ಮಿ ಅವರು ಬಿಆರ್‌ಎಸ್ ಪಕ್ಷ ತೊರೆದು ಶನಿವಾರ ಕಾಂಗ್ರೆಸ್ ಸೇರಿದರು.

ವಿಜಯಲಕ್ಷ್ಮಿ ಅವರ ಸೇರ್ಪಡೆಯಿಂದ ಜಿಎಚ್‌ಎಂಸಿ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ಗೆ ಲಾಭ ಉಂಟಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಎಂಥಾ ಮಾತು!



ಬಿಜೆಪಿ ನೇತೃತ್ವದ ಸರ್ಕಾರದಿಂದ ದೇಶದ ಜಾತ್ಯತೀತತೆಗೆ ಅಪಾಯವಿದೆ. ದಶಕಗಳಿಂದ ಇಲ್ಲಿ ನೆಲೆಸಿರುವ ದೊಡ್ಡ ಸಂಖ್ಯೆಯ ಜನರು ತಾವು ಈ ದೇಶವನ್ನು ತೊರೆಯಬೇಕಾಗಬಹುದೇ ಎಂಬ ಆತಂಕದಲ್ಲಿದ್ದಾರೆ. ದೇಶದ ಕೋಟ್ಯಂತರ ಜನರು ಭಯದಿಂದ ಬದುಕುತ್ತಿದ್ದಾರೆ. ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ರಾಷ್ಟ್ರವಾಗಿರುವ ಭಾರತದ ಪ್ರತಿಷ್ಠೆಗೆ ವಿಶ್ವ ಸಮುದಾಯದ ಮುಂದೆ ಧಕ್ಕೆ ತರುತ್ತಿವೆ. ದೇಶದಲ್ಲಾಗುವ ಈಚೆಗಿನ ಬೆಳವಣಿಗೆಗಳನ್ನು ಕಂಡು ವಿಶ್ವಸಂಸ್ಥೆ ಅಲ್ಲದೆ, ಅಮೆರಿಕ ಹಾಗೂ ಜರ್ಮನಿ ಧ್ವನಿಯೆತ್ತಿವೆ. ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಜಾರಿಗೆ ತಂದಿರುವುದಕ್ಕೆ ಹಲವು ರಾಷ್ಟ್ರಗಳು ಹಾಗೂ ಸಂಘಟನೆಗಳು ಟೀಕೆ ವ್ಯಕ್ತಪಡಿಸಿವೆ

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ



ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು ಮತ್ತು ಕಾಶ್ಮೀರವನ್ನು ಸಂವಿಧಾನದ 370ನೇ ವಿಧಿ, ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದದ ಹಿಡಿತದಿಂದ ಸ್ವತಂತ್ರಗೊಳಿಸಿದ್ದಾರೆ. ಇದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಬಹುದೊಡ್ಡ ಸಾಧನೆ. ಅಲ್ಲಿನ ಅಭಿವೃದ್ಧಿಗೆ ಮೋದಿ ನೇತೃತ್ವದ ಸರ್ಕಾರ ಮಹತ್ವದ ಕೊಡುಗೆ ನೀಡಿದೆ. ಗಡಿಯುದ್ದಕ್ಕೂ ಸರ್ಜಿಕಲ್ ಸ್ಟ್ರೈಕ್ ನಡೆಸುವ ಮೂಲಕ ಪಾಕಿಸ್ತಾನ ಪ್ರಾಯೋಜಿತ ಉಗ್ರರ ಸದ್ದಡಗಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ದಾಳಿ ಪ್ರಕರಣಗಳು ಶೇ 75ರಷ್ಟು ಕಡಿಮೆಯಾಗಿವೆ. ನಾಗರಿಕರ ಹತ್ಯೆ ಪ್ರಕರಣಗಳು ಶೇ 81ರಷ್ಟು ಹಾಗೂ ಭದ್ರತಾ ಪಡೆ ಯೋಧರ ಸಾವು– ನೋವು ಶೇ 50ರಷ್ಟು ಕಡಿಮೆಯಾಗಿವೆ

ಅನುರಾಗ್ ಠಾಕೂರ್, ಕೇಂದ್ರ ಸಚಿವ


ಕ್ಷೇತ್ರ ಮಹಾತ್ಮೆ



ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು 15 ವರ್ಷಗಳ ಅಂತರದ ಬಳಿಕ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಒಡಿಶಾದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಸಂಬಲ್‌ಪುರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಹಿಂದೆ ಅವರು ರಾಜ್ಯಸಭಾ ಸದಸ್ಯರಾಗಿ ಸಂಸತ್ ಪ್ರವೇಶಿಸಿದ್ದರು. 2019ರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ನಿತೇಶ್ ಗಂಗಾ ದೇವ್ ಅವರು 4,73,770 ಮತಗಳನ್ನು ಪಡೆದು ಗೆದ್ದಿರುವುದರಿಂದ ಬಿಜೆಪಿ ಈ ಬಾರಿಯೂ ಗೆಲುವಿನ ನಿರೀಕ್ಷೆಯಲ್ಲಿದೆ. ಕಳೆದ ಬಾರಿ ಬಿಜು ಜನತಾ ದಳ (ಬಿಜೆಡಿ) ಅಭ್ಯರ್ಥಿ ನಳಿನಿ ಕಾಂತ ಪ್ರಧಾನ್ ಅವರು ತೀವ್ರ ಪೈಪೋಟಿ ನೀಡಿ ಎರಡನೇ ಸ್ಥಾನಕ್ಕೆ ಪಡೆದಿದ್ದರು. ಬಿಜೆಪಿ ಅಭ್ಯರ್ಥಿ ಕಡಿಮೆ ಅಂತರದಿಂದ ಗೆದ್ದಿದ್ದರು. ಈ ಬಾರಿ ಪ್ರಬಲ ಸ್ಪರ್ಧೆ ನೀಡಲು ಬಿಜೆಡಿಯು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಪ್ರಣವ್ ಪ್ರಕಾಶ್ ದಾಸ್ ಅವರನ್ನು ಅಖಾಡಕ್ಕಿಳಿಸಿದೆ. ಪಕ್ಷದ ಮುಖ್ಯಸ್ಥ ನವೀನ್ ಪಟ್ನಾಯಕ್ ಅವರ ನಂತರದ ಪ್ರಭಾವಿ ನಾಯಕರಲ್ಲಿ ಪ್ರಣವ್ ಅವರೂ ಒಬ್ಬರು. ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅನುಭವ ಅವರಿಗಿದೆ. ಈ ಕಾರಣಕ್ಕೆ ಸ್ಪರ್ಧೆಯು ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಆಡಳಿತಾರೂಢ ಪಕ್ಷದ ಪ್ರಭಾವ ಮತ್ತು ಪ್ರಬಲ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿರುವುದರಿಂದ ಬಿಜೆಡಿ ಕೂಡ ಗೆಲುವಿನ ವಿಶ್ವಾಸದಲ್ಲಿದೆ. 2009ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅಮರನಾಥ್ ಪ್ರಧಾನ್ ಜಯಗಳಿಸಿದ್ದರು.

ಮುಖಾಮುಖಿ

ಕೃಷ್ಣನಗರ (ಪಶ್ಚಿಮ ಬಂಗಾಳ)



ಮಹುವಾ ಮೊಯಿತ್ರಾ
(ತೃಣಮೂಲ ಕಾಂಗ್ರೆಸ್)



ಅಮೃತಾ ರಾಯ್
(ಬಿಜೆಪಿ)

ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ವೈಖರಿಗೆ ಸಂಸತ್‌ನಲ್ಲಿ ಟೀಕಾಪ್ರಹಾರಗಳನ್ನು ಮಾಡುತ್ತಾ ಸದಾ ಬಿಜೆಪಿಯವರ ಕೆಂಗಣ್ಣಿಗೆ ಗುರಿಯಾಗುತ್ತಿದ್ದ ತೃಣಮೂಲ ಕಾಂಗ್ರೆಸ್ ನಾಯಕಿ ಮಹುವಾ ಮೊಯಿತ್ರಾ ಅವರು ಈ ಬಾರಿಯೂ ಪಶ್ಚಿಮಬಂಗಾಳದ ಕೃಷ್ಣನಗರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಧುಮುಕಿದ್ದಾರೆ. ಕಳೆದ ಬಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅವರು 6,14,872 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಬಿಜೆಪಿಯ ಕಲ್ಯಾಣ್ ಚೌಬೆ ಅವರನ್ನು ಪರಾಭವಗೊಳಿಸಿದ್ದರು. ಟಿಎಂಸಿಯ ದಿಟ್ಟ ನಾಯಕಿಯೆಂದೇ ಬಿಂಬಿತವಾಗಿರುವ ಅವರನ್ನು ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣದಲ್ಲಿ, ಸಂಸತ್ತಿನ ನೀತಿ ಸಮಿತಿಯು ದೋಷಿ ಎಂದು ಹೇಳಿತ್ತು. ಬಳಿಕ ಅವರನ್ನು ಉಚ್ಚಾಟನೆ ಮಾಡಲಾಗಿತ್ತು. ಮಹುವಾ ಅವರ ಬೆನ್ನಿಗೆ ನಿಂತಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಯಾವ ಟೀಕೆಗಳಿಗೂ ತಲೆಕೆಡಿಸಿಕೊಳ್ಳದೆ ಅವರನ್ನು ಮತ್ತೆ ಅಖಾಡಕ್ಕಿಳಿಸಿದ್ದಾರೆ.

V/S

ಮಹುವಾ ಅವರಂತಹ ಪ್ರಬಲ ಅಭ್ಯರ್ಥಿಯನ್ನು ಮಣಿಸಲು ಬಿಜೆಪಿಯು ‘ರಾಜ್‌ಬರಿಯ ರಾಜಮಾತೆ’ ಅಮೃತಾ ರಾಯ್ ಅವರನ್ನು ಕಣಕ್ಕಿಳಿಸಿದೆ. ರಾಜಕೀಯದಲ್ಲಿ ಅನನುಭವಿಯಾದರೂ ರಾಜವಂಶಸ್ಥೆಯಾಗಿರುವ ಕಾರಣ ಅವರು ಈ ಕ್ಷೇತ್ರದಲ್ಲಿ ಚಿರಪರಿಚಿತರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಇತಿಹಾಸವಿರುವ ನಾಡಿಯಾದ ಕೃಷ್ಣನಗರದ ರಾಜವಂಶಕ್ಕೆ ಸೇರಿದ ಮಹಾರಾಜ ಕೃಷ್ಣಚಂದ್ರ ರಾಯ್ ಅವರ ಕುಟುಂಬಸ್ಥರಾದ ಅಮೃತಾ, ಈಚೆಗಷ್ಟೇ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ರಾಜವಂಶಸ್ಥೆ ಅಖಾಡಕ್ಕಿಳಿದಿರುವುದರಿಂದ ಸ್ಪರ್ಧಾ ಕಣವು ಕುತೂಹಲ ಮೂಡಿಸಿದೆ. ಮಹುವಾ ಅವರನ್ನು ಸೋಲಿಸಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ನಾಯಕರು ಸ್ಥಳೀಯವಾಗಿ ಸಾಕಷ್ಟು ಪ್ರಭಾವಿರುವ ಅಮೃತಾರನ್ನು ಪಕ್ಷಕ್ಕೆ ಸೆಳೆದು ಅಭ್ಯರ್ಥಿಯಾಗಿಸಿದ್ದಾರೆ. ರಾಜ ಕುಟುಂಬದ ಬಗ್ಗೆ ಸ್ಥಳೀಯರಿಗಿರುವ ಗೌರವವು ಮತವಾಗಿ ಪರಿವರ್ತನೆಯಾಗಬಹುದು ಎಂಬುದು ಕಮಲ ಪಕ್ಷದ ಲೆಕ್ಕಾಚಾರ.

ಹತ್ಯೆ: ಆರ್‌ಎಸ್‌ಎಸ್ ಕಾರ್ಯಕರ್ತರ ಖುಲಾಸೆ

ಕಾಸರಗೋಡು (ಪಿಟಿಐ): ಮದರಸಾದ ಶಿಕ್ಷಕರೊಬ್ಬರ ಹತ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ಆರ್‌ಎಸ್‌ಎಸ್‌ನ ಮೂವರು ಕಾರ್ಯಕರ್ತರನ್ನು ಇಲ್ಲಿನ ನ್ಯಾಯಾಲಯ ಖುಲಾಸೆಗೊಳಿಸಿದೆ.

ದೆಹಲಿಯಲ್ಲಿ ಇಂದು ನಡೆಯುವ ರ‍್ಯಾಲಿಯಲ್ಲಿ 28 ಪಕ್ಷಗಳು ಭಾಗಿ: ಜೈರಾಮ್ ರಮೇಶ್

‘ಇಂಡಿಯಾ’ ರ‍್ಯಾಲಿ ವ್ಯಕ್ತಿ ವಿರುದ್ಧವಲ್ಲ’

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಒಕ್ಕೂಟ ‘ಇಂಡಿಯಾ’ ಆಯೋಜಿಸಿರುವ ‘ಲೋಕತಂತ್ರ ಬಚಾವೊ ರ‍್ಯಾಲಿ’ಯು ಒಬ್ಬ ವ್ಯಕ್ತಿ ವಿರುದ್ಧ ಪ್ರತಿಭಟಿಸುವ ಉದ್ದೇಶವನ್ನು ಹೊಂದಿಲ್ಲ. ಬದಲಾಗಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಮಹತ್ವದ ಗುರಿಯನ್ನು ಹೊಂದಿದೆ ಎಂದು ಕಾಂಗ್ರೆಸ್ ಶನಿವಾರ ತಿಳಿಸಿದೆ.

ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಆಯೋಜಿಸಿರುವ ರ‍್ಯಾಲಿಯು ‘ಬಿಜೆಪಿ ನೇತೃತ್ವದ ಸರ್ಕಾರದ ಕಾಲ ಮುಗಿಯಿತು’ ಎಂಬ ಸಂದೇಶವನ್ನು ಲೋಕ ಕಲ್ಯಾಣ ಮಾರ್ಗಕ್ಕೆ (ಪ್ರಧಾನಿ ನಿವಾಸ ಇರುವ ಸ್ಥಳ) ರವಾನಿಸಲಿದೆ ಎಂದೂ ಹೇಳಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ರ‍್ಯಾಲಿಯನ್ನು ಉದ್ದೇಶಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಲಿದ್ದಾರೆ’ ಎಂದು ತಿಳಿಸಿದರು.

‘ಇದು ನಿರ್ದಿಷ್ಟ ವ್ಯಕ್ತಿ ವಿರುದ್ಧದ ರ‍್ಯಾಲಿ ಅಲ್ಲ. ಹಾಗಾಗಿಯೇ ‘ಲೋಕತಂತ್ರ ಬಚಾವೊ ರ‍್ಯಾಲಿ’ ಎಂದು ಹೆಸರಿಡಲಾಗಿದೆ. ಇದು ಒಂದು ಪಕ್ಷದ ರ‍್ಯಾಲಿ ಸಹ ಅಲ್ಲ. 27-28 ಪಕ್ಷಗಳು ಪಾಲ್ಗೊಳ್ಳಲಿವೆ’ ಎಂದು ಹೇಳಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನವನ್ನು ಖಂಡಿಸಿ ರ‍್ಯಾಲಿ ಆಯೋಜಿಸಲಾಗಿದೆ ಎಂದು ಆಮ್ ಆದ್ಮಿ ಪಕ್ಷದ ಮುಖಂಡರು ಹೇಳಿಕೆ ನೀಡುತ್ತಿರುವ ಹೊತ್ತಲ್ಲೇ ಈ ಸ್ಪಷ್ಟನೆ ನೀಡಿದರು.

‘ಇಂಡಿಯಾ ಒಕ್ಕೂಟವು ಮಾ.17ರಂದು ಮುಂಬೈನಲ್ಲಿ ಲೋಕಸಭಾ ಚುನಾವಣೆಯ ಮೊದಲ ರಣಕಹಳೆ ಊದಿದೆ. ಇದು ಎರಡನೇ ರಣಕಹಳೆಯಾಗಲಿದೆ. ರ‍್ಯಾಲಿಯು ಒಕ್ಕೂಟದ ನಡುವಿನ ಒಗ್ಗಟ್ಟು ಮತ್ತು ಏಕತೆಯ ಸಂದೇಶವನ್ನೂ ರವಾನಿಸಲಿದೆ’ ಎಂದು ಹೇಳಿದರು.

‘ರ‍್ಯಾಲಿಯ ಪ್ರಮುಖ ಉದ್ದೇಶ ಸಂವಿಧಾನದ ರಕ್ಷಣೆಯಾಗಿದೆ. ಬಿಜೆಪಿ ನಾಯಕರು ಸಂವಿಧಾನವನ್ನು ಬದಲಾಯಿಸುವ ಮಾತನಾಡುತ್ತಿದ್ದಾರೆ. ಇದು ಅಪಾಯಕಾರಿ’ ಎಂದು ಹೇಳಿದರು.

‘ನಿರುದ್ಯೋಗ, ಬೆಲೆ ಏರಿಕೆ, ಆರ್ಥಿಕ ತಾರತಮ್ಯ, ಸಾಮಾಜಿಕ ಧ್ರುವೀಕರಣ ಮತ್ತು ಕಾರ್ಮಿಕರ ವಿರುದ್ಧದ ಅನ್ಯಾಯದ ಬಗ್ಗೆ ರ‍್ಯಾಲಿಯು ಧ್ವನಿ ಎತ್ತಲಿದೆ. ಜೊತೆಗೆ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದರ ವಿರುದ್ಧವೂ ಪ್ರತಿಭಟಿಸಲಾಗುವುದು’ ಎಂದು ತಿಳಿಸಿದರು.

ಬಿಜೆಪಿ ಭ್ರಷ್ಟರನ್ನು ಸ್ವಚ್ಛಗೊಳಿಸುವ ‘ವಾಷಿಂಗ್ ಮಷಿನ್’

ನವದೆಹಲಿ (ಪಿಟಿಐ): ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್ ವಿರುದ್ಧದ 2017ರ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಮುಕ್ತಾಯ ವರದಿ ಸಲ್ಲಿಸಿದ್ದಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ‘ಬಿಜೆಪಿ ಸೇರಿ, ಪ್ರಕರಣಕ್ಕೆ ಅಂತ್ಯವಾಡಿ’ ಎಂದು ವ್ಯಂಗ್ಯವಾಡಿದೆ.

ತಮ್ಮ ವಿರುದ್ಧದ ಭ್ರಷ್ಟಾಚಾರದ ಪ್ರಕರಣಗಳನ್ನು ಮುಚ್ಚಿ ಹಾಕುವ ಸಲುವಾಗಿಯೇ ವಿವಿಧ ಪಕ್ಷಗಳ ನಾಯಕರು ಬಿಜೆಪಿ ಸೇರುತ್ತಿದ್ದಾರೆ ಅಥವಾ ಅದರೊಂದಿಗೆ ಮೈತ್ರಿ ಬಯಸುತ್ತಿದ್ದಾರೆ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

‘ನಮ್ಮ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ದುರ್ಬಲಗೊಳಿಸಲು ಕೆಲಸ ಮಾಡುತ್ತಿರುವ ಏಜೆನ್ಸಿಗಳ ಪ್ರತಿ ಅಧಿಕಾರಿಯನ್ನೂ ಗಮನಿಸುತ್ತಿರುವುದಾಗಿ’ ಅದು ಎಚ್ಚರಿಸಿದೆ.

ಈ ಸಂಬಂಧ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು, ಸಾಂಕೇತಿಕವಾಗಿ ‘ಬಿಜೆಪಿ ವಾಷಿಂಗ್ ಮಷಿನ್’ ಹೆಸರು ಅಂಟಿಸಿರುವ ಯಂತ್ರವನ್ನು ಪ್ರದರ್ಶಿಸಿದರು. ಇದು ತತ್ವಗಳನ್ನು ಆಧರಿಸಿ ಕಾರ್ಯನಿರ್ವಹಿಸುವ ‘ಸ್ವಯಂ ಚಾಲಿತವಾಗಿ ವಾಷಿಂಗ್ ಮಷಿನ್’ ಆಗಿದೆ ಎಂದು ಬಿಜೆಪಿ ವಿರುದ್ಧ ವ್ಯಂಗ್ಯವಾಡಿದರು.

ಮಷಿನ್ ಬೆಲೆ ₹ 8,500 ಕೋಟಿ: ಈ ವಾಷಿಂಗ್ ಮಷಿನ್‌ನ ಬೆಲೆ ಬರೋಬ್ಬರಿ ₹8,500 ಕೋಟಿ. ಆಡಳಿತ ಪಕ್ಷವಾದ ಬಿಜೆಪಿಯು ಚುನಾವಣಾ ಬಾಂಡ್‌ಗಳ ಮೂಲಕ ಪಡೆದ ಹಣದಲ್ಲಿ ಇದನ್ನು ಖರೀದಿಸಿದೆ. ಇದನ್ನು ಬಳಸಿದರೆ ಸಾಕು ಎಲ್ಲ ರೀತಿಯ ಭ್ರಷ್ಟಾಚಾರದ ಕಲೆಗಳು ಪರಿಣಾಮಕಾರಿಯಾಗಿ ಸ್ವಚ್ಛವಾಗಿ ಬಿಡುತ್ತವೆ. ಅಲ್ಲದೆ ಮಾರುಕಟ್ಟೆಯಲ್ಲಿ ಇದಕ್ಕಾಗಿಯೇ ‘ಮೋದಿ ವಾಷಿಂಗ್ ಪೌಡರ್’ ಸಹ ಬಂದಿದೆ ಎಂದು, ಆ ಕುರಿತು ಸಿದ್ಧಪಡಿಸಲಾಗಿರುವ ಕರಪತ್ರವೊಂದನ್ನು ಪ್ರದರ್ಶಿಸಿ, ಎಲ್ಲ ರೀತಿಯ ಕಲೆಗಳನ್ನು ಈ ಪೌಡರ್ ಕ್ಷಣಾರ್ಧದಲ್ಲಿ ತೊಳೆಯುತ್ತದೆ ಎಂದು ಲೇವಡಿ ಮಾಡಿದರು.

21 ನಾಯಕರು ಸ್ವಚ್ಛ: ಬಿಜೆಪಿ ತಾನು ಭ್ರಷ್ಟಾಚಾರ ಮತ್ತು ಅಕ್ರಮದ ಆರೋಪಗಳನ್ನು ಮಾಡಿದ್ದ ಕನಿಷ್ಠ 21 ಪ್ರಮುಖ ನಾಯಕರನ್ನು ಸ್ವಚ್ಛಗೊಳಿಸಿದೆ ಎಂದು ಆರೋಪಿಸಿದರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ನಾಯಕರಾದ ನಾರಾಯಣ ರಾಣೆ, ಅಜಿತ್ ಪವಾರ್, ಛಗನ್ ಭುಜಬಲ್ ಮುಂತಾದವರು ಸ್ವಚ್ಛವಾಗಿದ್ದಾರೆ ಎಂದರು.

ನ್ಯಾಯಾಂಗದ ಮೇಲೆ ಕೇಂದ್ರದ ಒತ್ತಡ: ಆರೋಪ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆಯನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿದ ಬಳಿಕ ಕೇಂದ್ರವು ನ್ಯಾಯಾಂಗದ ಮೇಲೆ ಒತ್ತಡ ಹೇರುತ್ತಿದೆ. ನ್ಯಾಯಾಂಗವು ಸ್ವತಂತ್ರ ಮತ್ತು ಬಲಿಷ್ಠವಾಗಿರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಇಷ್ಟವಿಲ್ಲವೇ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಪ್ರಶ್ನಿಸಿದ್ದಾರೆ.

‘ಪಟ್ಟಭದ್ರ ಹಿತಾಸಕ್ತಿ ಗುಂಪು’ ನ್ಯಾಯಾಂಗದ ಮೇಲೆ ಒತ್ತಡ ಹೇರಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿ 600ಕ್ಕೂ ಹೆಚ್ಚು ವಕೀಲರು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದರು. ಇದಕ್ಕೆ ಪ್ರತಿಯಾಗಿ ‘ಇತರರನ್ನು ಬೆದರಿಸುವುದು ಕಾಂಗ್ರೆಸ್‌ನ ಸಂಸ್ಕೃತಿಯಾಗಿದೆ’ ಎಂದು ಪ್ರಧಾನಿ ಮೋದಿ, ಕಾಂಗ್ರೆಸ್ ಅನ್ನು ಟೀಕಿಸಿದ್ದರು. ಈ ಬೆನ್ನಲ್ಲೇ ಪ್ರಿಯಾಂಕಾ, ಕೇಂದ್ರದ ವಿರುದ್ಧ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಪಿಎಫ್‌ಐ ಸದಸ್ಯರ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಸದಸ್ಯರು ಎನ್ನಲಾದ ಮೂವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ಆರೋಪದ ಅಡಿಯಲ್ಲಿ ಬಂಧಿಸಿದ್ದಾರೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಅಬ್ದುಲ್ ಖಾದರ್ ಪುತ್ತೂರು, ಅನ್ಸದ್ ಬದ್ರುದ್ದೀನ್ ಮತ್ತು ಫಿರೋಜ್ ಕೆ. ಬಂಧಿತರು. ಇವರು ಪಿಎಫ್‌ಐ ಸಂಘಟನೆಯ ತರಬೇತುದಾರರಾಗಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ. ಇವರನ್ನು ‘ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ’ಯ (ಪಿಎಂಎಲ್‌ಎ) ಅಡಿ ಬಂಧಿಸಲಾಗಿದೆ ಎಂದು ಗೊತ್ತಾಗಿದೆ.

ಬಂಧಿತರನ್ನು ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಯಿತು. ಪಿಎಫ್‌ಐ ಸದಸ್ಯರಿಗೆ ಈ ಮೂವರು ಶಸ್ತ್ರಾಸ್ತ್ರ ಬಳಕೆ ಕುರಿತು ತರಬೇತಿ ನೀಡಿದ್ದಾರೆ, ಇದಕ್ಕಾಗಿ ನಿಷೇಧಿತ ಸಂಘಟನೆಯಿಂದ ಗಣನೀಯ ಪ್ರಮಾಣದಲ್ಲಿ ಹಣ ಪಡೆದಿದ್ದಾರೆ ಎಂದು ಇ.ಡಿ ಆರೋಪಿಸಿದೆ.

ಉಗ್ರ ಕೃತ್ಯಗಳ ಜೊತೆ ನಂಟು ಹೊಂದಿದ್ದ ಆರೋಪದ ಅಡಿ ಕೇಂದ್ರವು ಪಿಎಫ್‌ಐ ಸಂಘಟನೆಯನ್ನು 2022ರಲ್ಲಿ ನಿಷೇಧಿಸಿದೆ.

ಗಂಗಾ ನದಿ: ನಿರ್ಮಾಣ ಹಂತದ ಸೇತುವೆ ಕುಸಿತ



ಬುಲಂದ್‌ಶಹರ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಗಜರೌಲಾ ಗ್ರಾಮದಲ್ಲಿ ಗಂಗಾ ನದಿ ಮೇಲೆ ನಿರ್ಮಿಸಲಾಗುತ್ತಿದ್ದ ಸೇತುವೆಯು ಭಾಗಶಃ ಕುಸಿದುಬಿದ್ದಿದೆ. ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಘಟನೆ ಬಗ್ಗೆ ತನಿಖೆ ನಡೆಸಲು ಮುಖ್ಯ ಅಭಿವೃದ್ಧಿ ಅಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಚಂದ್ರ ಪ್ರಕಾಶ್ ಸಿಂಗ್ ತಿಳಿಸಿದರು.

ಶುಕ್ರವಾರ ರಾತ್ರಿ 11 ಗಂಟೆ ನಂತರ ಹವಾಮಾನ ವೈಪರಿತ್ಯದಿಂದಾಗಿ ಮೂರು ಸ್ಲ್ಯಾಬ್‌ಗಳಿಗೆ ಹಾನಿಯಾಗಿದೆ. ಘಟನೆ ವೇಳೆ ಸ್ಥಳದಲ್ಲಿ ಯಾರೂ ಇಲ್ಲದ ಕಾರಣ ದುರಂತ ತಪ್ಪಿದೆ ಎಂದರು.

ಅಮರೋಹ ಮತ್ತು ಬುಲಂದ್‌ಶಹರ್ ನಡುವೆ ಸಂಪರ್ಕ ಕಲ್ಪಿಸಲು ಗಂಗಾ ನದಿ ಮೇಲೆ ಸೇತುವೆ ನಿರ್ಮಿಸಲಾಗುತ್ತಿತ್ತು ಎಂದರು.

ಘಟನೆ ವಿಚಾರವಾಗಿ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬಿಜೆಪಿ ನೇತೃತ್ವದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದು, ‘ಸರ್ಕಾರವು ಯೋಜನೆಗಳ ಗುಣಮಟ್ಟದೊಂದಿಗೆ ರಾಜಿ ಆಗುವ ಮೂಲಕ ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿದೆ’ ಎಂದು ಆರೋಪಿಸಿದರು.

ಕಾಂಗ್ರೆಸ್‌ಗೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್

ಯುವ ಕಾಂಗ್ರೆಸ್ ಪ್ರತಿಭಟನೆ



ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ


ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್‌ಗೆ ನೋಟಿಸ್ ನೀಡಿರುವುದನ್ನು ವಿರೋಧಿಸಿ ಮತ್ತು ಕಾಂಗ್ರೆಸ್‌ನ ಬ್ಯಾಂಕ್ ಅಕೌಂಟ್‌ಗಳನ್ನು ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ನಾಯಕರು, ಕಾರ್ಯಕರ್ತರು ಶನಿವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು.

ಐವೈಸಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯು, ರಾಜೇಂದ್ರ ಪ್ರಸಾದ್ ರಸ್ತೆಯೆಡೆಗೆ ಸಾಗದಂತೆ ಪೊಲೀಸರು ತಡೆದು, ಪ್ರತಿಭಟನೆನಿರತರನ್ನು ಬಂಧಿಸಿದರು.

ಈ ವೇಳೆ ಮಾತನಾಡಿದ ಶ್ರೀನಿವಾಸ್, ‘ಕೇಂದ್ರ ಸರ್ಕಾರವು ವಿವಿಧ ಮಾರ್ಗಗಳ ಮೂಲಕ ಕಾಂಗ್ರೆಸ್ ಅನ್ನು ದುರ್ಬಲಗೊಳಿಸಲು ಸತತವಾಗಿ ಯತ್ನಿಸುತ್ತಿದೆ. ಆದರೆ ಇದಕ್ಕೆಲ್ಲ ಕಾಂಗ್ರೆಸ್ ಹೆದರುವುದಿಲ್ಲ’ ಎಂದರು.

‘ತೆರಿಗೆ ನಿಯಮಗಳ ನೆಪದಲ್ಲಿ ಕಾಂಗ್ರೆಸ್ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಲೋಕಸಭೆ ಚುನಾವಣೆ ಘೋಷಣೆಯಾಗಿರುವಾಗ ಕಾಂಗ್ರೆಸ್ ಪಕ್ಷದ ವಿರುದ್ಧ ಆದಾಯ ತೆರಿಗೆ ಇಲಾಖೆಯು ತಪ್ಪಾಗಿ ದಂಡ ವಿಧಿಸಿ, ಹಣ ಪಾವತಿಸುವಂತೆ ಹೇಳುತ್ತಿದೆ’ ಎಂದು ಅವರು ದೂರಿದರು.

ಅಬಕಾರಿ ನೀತಿ: ಗೆಹಲೋತ್ ವಿಚಾರಣೆ ನಡೆಸಿದ ಇ.ಡಿ



ಕೈಲಾಶ್ ಗೆಹಲೋತ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ದೆಹಲಿ ಸಚಿವ, ಎಎಪಿ ಮುಖಂಡ ಕೈಲಾಶ್ ಗೆಹಲೋತ್ ಅವರು ಇ.ಡಿ. ಅಧಿಕಾರಿಗಳ ಎದುರು ಶನಿವಾರ ಹಾಜರಾದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದೆ. ಗೆಹಲೋತ್ ಅವರು ಕೇಜ್ರಿವಾಲ್ ಸಂಪುಟದಲ್ಲಿ ಸಾರಿಗೆ, ಗೃಹ ಮತ್ತು ಕಾನೂನು ಸಚಿವರಾಗಿದ್ದಾರೆ.

ಗೆಹಲೋತ್ ಅವರು ಬೆಳಿಗ್ಗೆ 11.30ರ ಸುಮಾರಿಗೆ ಇ.ಡಿ ಕಚೇರಿಗೆ ತೆರಳಿ, ಸಂಜೆ 4.30ರ ವೇಳೆಗೆ ಅಲ್ಲಿಂದ ಹೊರಬಂದರು. ಇ.ಡಿ ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿರುವುದಾಗಿ, ಮುಂದೆ ತನಿಖೆಗೆ ಸಹಕರಿಸುವುದಾಗಿ ತಿಳಿಸಿದರು.

2021–22ನೆಯ ಸಾಲಿಗೆ ಅಬಕಾರಿ ನೀತಿಯನ್ನು ರೂಪಿಸಿದ್ದಕ್ಕೆ ಸಂಬಂಧಿಸಿದಂತೆ ಗೆಹಲೋತ್ ಅವರನ್ನು ಪ್ರಶ್ನಿಸಲಾಗಿದೆ ಎಂದು ಮೂಲಗಳು ಹೇಳಿವೆ.

‘ಅಬಕಾರಿ ನೀತಿಯ ಆಯಾಮಗಳಿಗೆ ಸಂಬಂಧಿಸಿದಂತೆ ಪ್ರಶ್ನಿಸಲಾಗಿದೆ. ಎಲ್ಲ ಪ್ರಶ್ನೆಗಳಿಗೆ ನನ್ನ ನೆನಪಿನಲ್ಲಿ ಇದ್ದಷ್ಟನ್ನು, ನನಗೆ ತಿಳಿದಷ್ಟುಮಟ್ಟಿಗೆ ಉತ್ತರಿಸಿದ್ದೇನೆ’ ಎಂದು ಗೆಹಲೋತ್ ತಿಳಿಸಿದರು.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಎಎಪಿ ಆರೋಪ

‘ಸಾಕ್ಷಿದಾರನಿಗೂ ಬಿಜೆಪಿಗೂ ಸಂಪರ್ಕವಿದೆ’



ಕೇಜ್ರಿವಾಲ್ ಪತ್ನಿ ಸುನಿತಾ ಮತ್ತು ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೋರೆನ್ ಪತ್ನಿ ಕಲ್ಪನಾ ಉಭಯಕುಶಲೋಪರಿ ನಡೆಸಿದರು

ನವದೆಹಲಿ(ಪಿಟಿಐ): ಅಬಕಾರಿ ನೀತಿ ಹಗರಣದ ಸಾಕ್ಷಿಗಳಲ್ಲಿ ಒಬ್ಬರಿಗೆ ಬಿಜೆಪಿ ಜತೆ ಸಂಪರ್ಕ ಇದೆ ಎಂದು ಆರೋಪಿಸಿರುವ ಎಎಪಿ, ಜಾರಿ ನಿರ್ದೇಶನಾಲಯವು ಈ ಕುರಿತೂ ತನಿಖೆ ನಡೆಸಲಿ ಸವಾಲು ಹಾಕಿದೆ.

ಈ ಪ್ರಕರಣದಡಿ ಮಾಗುಂಟ ಶ್ರೀನಿವಾಸುಲು ರೆಡ್ಡಿ ಅವರ ಮಗ ರಾಘವ ಮಾಗುಂಟ ರೆಡ್ಡಿ ಅವರನ್ನು ಇ.ಡಿ ಬಂಧಿಸಿತ್ತು. ಇದೀಗ ಬಿಜೆಪಿಯ ಮಿತ್ರಪಕ್ಷ ಟಿಡಿಪಿ ಶ್ರೀನಿವಾಸುಲು ಅವರನ್ನು ಚುನಾವಣೆಯಲ್ಲಿ ಕಣಕ್ಕೆ ಇಳಿಸಿದೆ ಎಂದು ದೆಹಲಿ ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಇ.ಡಿ ಸ್ವತಂತ್ರ ತನಿಖಾ ಏಜೆನ್ಸಿಯೇ ಆಗಿದ್ದರೆ, ಈ ಕುರಿತು ದಾಖಲೆ ಸಂಗ್ರಹಿಸಿ, ತನಿಖೆ ನಡೆಸಲಿ ಎಂದು ಸವಾಲು ಹಾಕುತ್ತೇನೆ’ ಎಂದು ಹೇಳಿದ ಆತಿಶಿ ಅವರು, ಬಿಜೆಪಿಗೆ ಮದ್ಯ ವ್ಯಾಪಾರಿಗಳ ‘ಸೌಥ್ ಗ್ರೂಪ್’ ಲಾಬಿ ಜತೆ ಸಂಪರ್ಕ ಇದೆ ಎಂದು ಆರೋಪಿಸಿದರು.

ಮಾಗುಂಟ ಸೇರಿದಂತೆ ನಾಲ್ವರ ಹೇಳಿಕೆಗಳ ಆಧಾರದ ಮೇಲೆ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿದೆ ಎಂದ ಅವರು, ಇನ್ನೊಬ್ಬ ಸಾಕ್ಷಿ ಶರತ್ ರೆಡ್ಡಿ ಅವರು ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ₹55 ಕೋಟಿ ಪಾವತಿಸಿದ್ದಾರೆ. ಇದು ಬಿಜೆಪಿಯು ‘ಸೌಥ್ ಗ್ರೂಪ್’ ಲಾಬಿಯೊಂದಿಗೆ ಸಂಪರ್ಕ ಹೊಂದಿದೆ ಎಂಬುದನ್ನು ಸಾಬೀತುಪಡಿಸುತ್ತದೆ ಎಂದರು.

ಜಾರಿ ನಿರ್ದೇಶನಾಲಯವು, ಕೇಜ್ರಿವಾಲ್ ವಿರುದ್ಧ ಹೇಳಿಕೆಗಳನ್ನು ನೀಡುವವರೆಗೂ ಸಾಕ್ಷಿಗಳಿಗೆ ಚಿತ್ರ ಹಿಂಸೆ ನೀಡುತ್ತಿದೆ ಎಂದು ಅವರು ಆರೋಪಿಸಿದರು.

ನ್ಯೂಸ್‌ಕ್ಲಿಕ್ ಪ್ರಕರಣ ದೋಷಾರೋಪ ದಾಖಲು

ನವದೆಹಲಿ (ಪಿಟಿಐ): ನ್ಯೂಸ್‌ಕ್ಲಿಕ್ ಸುದ್ದಿ ಸಂಸ್ಥೆ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ (ಯುಎಪಿಎ) ಅಡಿಯಲ್ಲಿ ದಾಖಲಿಸಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಶನಿವಾರ ದೋಷಾರೋಪ ಪಟ್ಟಿ ಸಲ್ಲಿಸಿದರು ಎಂದು ಮೂಲಗಳು ತಿಳಿಸಿವೆ.

ದೋಷಾರೋಪ ಪಟ್ಟಿಯು 8,000 ಪುಟಗಳನ್ನು ಒಳಗೊಂಡಿದೆ. ದೋಷಾರೋಪ ಪಟ್ಟಿಯನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ದೀಪ್ ಕೌರ್ ಎದುರು ಸಲ್ಲಿಸಿದರು.

‘ದೋಷಾರೋಪ ಪಟ್ಟಿಯಲ್ಲಿ ನ್ಯೂಸ್‌ಕ್ಲಿಕ್ ಸ್ಟುಡಿಯೊ ಪ್ರೈ.ಲಿ ಮತ್ತು ಪ್ರಬೀರ್ ಪುರಕಾಯಸ್ಥ ಅವರನ್ನು ಆರೋಪಿಗಳೆಂದು ಹೆಸರಿಸಲಾಗಿದೆ’ ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅಖಂಡ್ ಪ್ರತಾಪ್ ಸಿಂಗ್ ಮತ್ತು ಸೂರಜ್ ರಾಠಿ ತಿಳಿಸಿದರು. ಪ್ರಕರಣದ ವಿಚಾರಣೆಯನ್ನು ಕೋರ್ಟ್ ಏ.16ಕ್ಕೆ ಮುಂದೂಡಿದೆ.

ನ್ಯೂಸ್‌ಕ್ಲಿಕ್ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಮತ್ತು ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಕಳೆದ ವರ್ಷ ಅಕ್ಟೋಬರ್ 3ರಂದು ಬಂಧಿಸಿತ್ತು.

ಚೀನಾ ಪರ ಪ್ರಚಾರಕ್ಕಾಗಿ ವಿದೇಶದಿಂದ ಹಣ ಪಡೆದಿರುವ ಆರೋಪ ನ್ಯೂಸ್‌ಕ್ಲಿಕ್ ಮೇಲಿದೆ.

ಠಾಕೂರ್ ಸೇರಿ ನಾಲ್ವರಿಗೆ ‘ಭಾರತ ರತ್ನ’ ಪ್ರದಾನ



ರಾಷ್ಟ್ರಪತಿ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಲ್ವರು ಮಹನೀಯರಿಗೆ ‘ಭಾರತ ರತ್ನ’ ಪ್ರದಾನ ಮಾಡಿದರು. ನರಸಿಂಹರಾವ್ ಪರವಾಗಿ ಅವರ ಪುತ್ರ ಪಿ.ವಿ ಪ್ರಭಾಕರ್ ರಾವ್, ಚರಣ್ ಸಿಂಗ್ ಪರವಾಗಿ ಅವರ ಮೊಮ್ಮಗ ಜಯಂತ್ ಚೌಧರಿ, ಕರ್ಪೂರಿ ಠಾಕೂರ್ ಪರವಾಗಿ ಅವರ ಮಗ ರಾಮನಾಥ್ ಠಾಕೂರ್, ಸ್ವಾಮಿನಾಥನ್ ಪರವಾಗಿ ಅವರ ಮಗಳು ನಿತ್ಯಾರಾವ್ ಪ್ರಶಸ್ತಿಗಳನ್ನು ಸ್ವೀಕರಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿಗಳಾದ ಚೌಧರಿ ಚರಣ್ ಸಿಂಗ್, ಪಿ.ವಿ. ನರಸಿಂಹ ರಾವ್, ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ ಮತ್ತು ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ಮರಣೋತ್ತರವಾಗಿ ‘ಭಾರತ ರತ್ನ’ ಪ್ರಶಸ್ತಿಗಳನ್ನು ಶನಿವಾರ ಪ್ರದಾನ ಮಾಡಲಾಯಿತು.


ರಾಷ್ಟ್ರಪತಿ ಭವನದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಮಹನೀಯರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವಗಳನ್ನು ಪ್ರದಾನ ಮಾಡಿದರು.

ಸಮಾರಂಭದಲ್ಲಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಇತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರವು, ಈ ವರ್ಷ ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿ ಸೇರಿದಂತೆ ಐವರಿಗೆ ‘ಭಾರತ ರತ್ನ’ ಪ್ರಶಸ್ತಿ ಘೋಷಿಸಿತ್ತು.

ವಿಚ್ಛೇದನ ಪ್ರಕರಣದ ವಿಚಾರಣೆ ನಡೆಸಿದ ಪಟ್ನಾ ಹೈಕೋರ್ಟ್ ಅಭಿಪ್ರಾಯ

‘ಸಂಗಾತಿಗೆ ಪಿಶಾಚಿ ಎನ್ನುವುದು ಕ್ರೌರ್ಯವಲ್ಲ’



ಪಟ್ನಾ (ಪಿಟಿಐ): ವಿಚ್ಛೇದನ ಪಡೆದಿರುವ ದಂಪತಿ ಪರಸ್ಪರ ‘ಭೂತ, ಪಿಶಾಚಿ’ ಎಂದು ಬೈದುಕೊಳ್ಳುವುದು ಕ್ರೌರ್ಯವಾಗುವುದಿಲ್ಲ ಎಂದು ಪಟ್ನಾ ಹೈಕೋರ್ಟ್ ಹೇಳಿದೆ.

ಸಹದೇವ ಗುಪ್ತ ಮತ್ತು ಅವರ ಮಗ ನರೇಶ್ ಕುಮಾರ್ ಗುಪ್ತ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿವೇಕ್ ಚೌಧುರಿ ಅವರು ಈ ಮಾತು ಹೇಳಿದ್ದಾರೆ. ಅರ್ಜಿದಾರರು ನೆರೆಯ ಜಾರ್ಖಂಡ್ ರಾಜ್ಯದ ಬೊಕಾರೊ ನಿವಾಸಿಗಳು.

ನರೇಶ್ ಅವರ ವಿಚ್ಛೇದಿತ ಪತ್ನಿ ಸಲ್ಲಿಸಿದ್ದ ದೂರು ಆಧರಿಸಿ ಬಿಹಾರದ ನಳಂದ ಜಿಲ್ಲೆಯ ನ್ಯಾಯಾಲಯಗಳು ನೀಡಿದ್ದ ಆದೇಶವನ್ನು ತಂದೆ–ಮಗ ಪ್ರಶ್ನಿಸಿದ್ದರು. ಪತಿ ಮತ್ತು ಮಾವ ತಮಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ, ವರದಕ್ಷಿಣೆ ರೂಪದಲ್ಲಿ ಕಾರು ಕೊಡಿಸುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ಪತ್ನಿ ದೂರಿದ್ದರು.

ಮೊದಲು ನೆವಾಡದಲ್ಲಿ ಈ ದೂರು ದಾಖಲಾಗಿತ್ತು. ನಂತರ ತಂದೆ–ಮಗನ ಕೋರಿಕೆ ಆಧರಿಸಿ ದೂರನ್ನು ನಳಂದಕ್ಕೆ ವರ್ಗಾಯಿಸಲಾಯಿತು. ಇವರಿಗೆ 2008ರಲ್ಲಿ ಒಂದು ವರ್ಷದ ಕಠಿಣ ಜೈಲುಶಿಕ್ಷೆ ವಿಧಿಸಲಾಯಿತು. ತಂದೆ–ಮಗ ಸಲ್ಲಿಸಿದ್ದ ಮೇಲ್ಮನವಿಯನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು 10 ವರ್ಷಗಳ ನಂತರ ತಿರಸ್ಕರಿಸಿತು.

ಈ ನಡುವೆ ದಂಪತಿಗೆ ಜಾರ್ಖಂಡ್ ಹೈಕೋರ್ಟ್ ವಿಚ್ಛೇದನ ನೀಡಿತು. ಪಟ್ನಾ ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಗೆ ವಿರೋಧ ದಾಖಲಿಸಿ ವಿಚ್ಛೇದಿತ ಮಹಿಳೆಯ ಪರ ವಕೀಲರು ‘21ನೇ ಶತಮಾನದಲ್ಲಿ ಹೆಣ್ಣೊಬ್ಬಳನ್ನು ಭೂತ, ಪಿಶಾಚಿ ಎಂದು ಪತಿಯ ಮನೆಯವರು ಕರೆಯುವುದು ತೀವ್ರ ಕ್ರೌರ್ಯಕ್ಕೆ ಸಮ’ ಎಂದು ಹೇಳಿದರು.

ಆದರೆ ‘ಇಂತಹ ವಾದವನ್ನು ಒಪ್ಪುವ ಸ್ಥಿತಿಯಲ್ಲಿ ಇಲ್ಲ’ ಎಂದು ಕೋರ್ಟ್ ಹೇಳಿತು. ‘ವಿವಾಹಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ, ಅದರಲ್ಲೂ ಮುಖ್ಯವಾಗಿ ವಿವಾಹ ಮುರಿದುಬಿದ್ದ ಸಂದರ್ಭಗಳಲ್ಲಿ ಪತಿ ಹಾಗೂ ಪತ್ನಿ ಒಬ್ಬರನ್ನೊಬ್ಬರು ಕೊಳಕು ಭಾಷೆಯಲ್ಲಿ ಬೈದುಕೊಂಡ ನಿದರ್ಶನಗಳು ಇವೆ’ ಎಂದು ಹೇಳಿತು.

ಆದರೆ ಈ ಆರೋಪಗಳೆಲ್ಲವೂ ಕ್ರೌರ್ಯದ ಪರಿಧಿಯೊಳಕ್ಕೆ ಬರುವುದಿಲ್ಲ ಎಂದು ಕೂಡ ಕೋರ್ಟ್ ತಿಳಿಸಿತು. ಕೆಳಹಂತದ ನ್ಯಾಯಾಲಯಗಳು ನೀಡಿದ ಆದೇಶಗಳನ್ನು ಹೈಕೋರ್ಟ್ ರದ್ದುಪಡಿಸಿದೆ.

ದೆಹಲಿ ಜಲ ಮಂಡಳಿ ಹಗರಣ: ದೋಷಾರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ದೆಹಲಿ ಜಲ ಮಂಡಳಿಯಲ್ಲಿ (ಡಿಜೆಬಿ) ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮೊದಲ ದೋಷಾರೋಪ ಪಟ್ಟಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ.) ಸಲ್ಲಿಸಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ದೋಷಾರೋಪ ಪಟ್ಟಿಯು ಒಟ್ಟು ಎಂಟು ಸಾವಿರ ಪುಟಗಳಷ್ಟು ಇದೆ, ಇದನ್ನು ಗುರುವಾರ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದು ಗೊತ್ತಾಗಿದೆ. ಇದನ್ನು ನ್ಯಾಯಾಲಯವು ಸೋಮವಾರ ವಿಚಾರಣೆಗೆ ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ.

ಮಂಡಳಿಯ ಮಾಜಿ ಮುಖ್ಯ ಎಂಜಿನಿಯರ್ ಜಗದೀಶ್ ಕುಮಾರ್ ಅರೋರ, ಗುತ್ತಿಗೆದಾರ ಅನಿಲ್ ಕುಮಾರ್ ಅಗರ್ವಾಲ್, ಎನ್‌ಬಿಸಿಸಿ ಮಾಜಿ ವ್ಯವಸ್ಥಾಪಕ ನಿರ್ದೇಶಕ ಡಿ.ಕೆ. ಮಿತ್ತಲ್, ತೇಜಿಂದರ್ ಸಿಂಗ್, ಎನ್‌ಕೆಜಿ ಇನ್‌ಫ್ರಾಸ್ಟ್ರಕ್ಚರ್ ಕಂಪನಿಯನ್ನು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ಇವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಇ.ಡಿ ಕೋರಿದೆ. ಅಲ್ಲದೆ, ಮುಂದೆ ಪೂರಕ ದೋಷಾರೋಪ ಪಟ್ಟಿಯನ್ನು ತಾನು ಸಲ್ಲಿಸಬಹುದು ಎಂದು ಕೂಡ ತಿಳಿಸಿದೆ.

ಬಿಎಫ್‌ಸಿ, ಒಡಿಶಾ ಪಂದ್ಯ ಡ್ರಾ

ಐಎಸ್‌ಎಲ್: ಆರನೇ ಸ್ಥಾನಕ್ಕೇರಿದ ಚೆಟ್ರಿ ಪಡೆ, ಮುಂಬೈಗೆ 41 ಪಾಯಿಂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ನಡುವೆ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಡಿಯನ್ ಸೂಪರ್ ಲೀಗ್ ಪಂದ್ಯ ಗೋಲಿಲ್ಲದೇ 'ಡ್ರಾ' ಆಯಿತು. ಲೀಗ್ ಅಗ್ರಸ್ಥಾನಕ್ಕೇರುವ ಒಡಿಶಾ ಎಫ್‌ಸಿ ತಂಡದ ಕನಸಿಗೆ ಈ ಫಲಿತಾಂಶದಿಂದ ಹಿನ್ನಡೆಯಾಗಿದೆ.

ಒಂದೆಡೆ ಒಡಿಶಾ ನಿರಾಸೆ ಅನುಭವಿಸಿದರೆ, ಇನ್ನೊಂದೆಡೆ ಆತಿಥೇಯ ಬೆಂಗಳೂರು 20 ಪಂದ್ಯಗಳಿಂದ 22 ಪಾಯಿಂಟ್ಸ್ ಕಲೆಹಾಕಿದ್ದು ಆರನೇ ಸ್ಥಾನಕ್ಕೇರಿದೆ. ಇನ್ನೂ ಎರಡು ಪಂದ್ಯಗಳು ಆಡಲು ಉಳಿದಿದ್ದರೂ, ಜೆರಾಲ್ಡ್ ಜಾರ್ಗೋಝಾ ಪಡೆಯ ಪ್ಲೇ ಆಫ್ ಅವಕಾಶ ಕ್ಷೀಣವಾಗಿದೆ.

ಒಡಿಶಾ ತಂಡ ಈ ಮೊದಲೇ ಪ್ಲೇ ಆಫ್‌ಗೆ ಅರ್ಹತೆ ಪಡೆದಿದ್ದರೂ, ಅಗ್ರಸ್ಥಾನಕ್ಕೇರಿ ಲೀಗ್ ಶೀಲ್ಡ್ ಪಡೆಯುವ ಹಾದಿಯಲ್ಲಿ ಎಡವಿದಂತಾಗಿದೆ. ಸೆರ್ಗಿಯೊ ಲೊಬೆರಾ ತರಬೇತಿಯ ತಂಡ 19 ಪಂದ್ಯಗಳಿಂದ 36 ಪಾಯಿಂಟ್ಸ್ ಸಂಗ್ರಹಿಸಿದೆ.

ಅಗ್ರಸ್ಥಾನದಲ್ಲಿರುವ ಮುಂಬೈ ಇಷ್ಟೇ ಪಂದ್ಯಗಳಿಂದ 41 ಪಾಯಿಂಟ್ಸ್ ಕಲೆಹಾಕಿದೆ.

ಜಾರ್ಗೋಝಾ ಈ ಪಂದ್ಯಕ್ಕೆ ಶಿವಶಕ್ತಿ ನಾರಾಯಣನ್ ಮತ್ತು ಶಂಕರ್ ಸಂಪಿಂಗಿರಾಜ್ ಅವರಿಗೆ 11ರಲ್ಲಿ ಅವಕಾಶ ಕಲ್ಪಿಸಿದರು.

ಇದರಿಂದ ಸುನಿಲ್ ಚೆಟ್ರಿಗೆ ಅವಕಾಶವಾಗಲಿಲ್ಲ. ಬ್ಲೂಸ್ ಗೋಲ್‌ಕೀಪರ್ ಗುರುಪ್ರೀತ್ ಸಂಧು ನಾಯಕತ್ವ ವಹಿಸಿದರು. ಪಂದ್ಯದಲ್ಲಿ ಗುರುಪ್ರೀತ್, ಒಡಿಶಾ ತಂಡದ ಕೆಲವು ಗೋಲು ಯತ್ನಗಳನ್ನು ಉತ್ತಮವಾಗಿ ತಡೆದರು.

ಪಂದ್ಯ ನಿರೀಕ್ಷಿಸಿದಷ್ಟು ಬಿರುಸು ಪಡೆಯಲಿಲ್ಲ. ಒಡಿಶಾ, ಆತಿಥೇಯರ ಮೇಲೆ ಒತ್ತಡ ಹೇರತೊಡಗಿತು. ಪಂದ್ಯದ 31ನೇ ನಿಮಿಷ ಅಹ್ಮದ್ ಜಹೋವ ಪಾಸ್‌ನಲ್ಲಿ ಜೆರ್ರಿ ಲಾಲ್ರಿನ್‌ಝುವಾಲಾ ಅವರು ಬಾಕ್ಸ್ ಒಳಗಿಂದ ನಡೆಸಿದ ಗೋಲು ಯತ್ನವನ್ನು ಗುರುಪ್ರೀತ್ ಯಶಸ್ವಿಯಾಗಿ ತಡೆದರು.

ಬೆಂಗಳೂರು ಬ್ಲೂಸ್‌ಗೂ ಅವಕಾಶ ದೊರಕಿತ್ತು. ಸ್ಪೇನ್‌ನ ಜೇವಿ ಹೆರ್ನಾಂಡಿಝ್ ಅವರ ಪಾಸ್‌ನಲ್ಲಿ ಡ್ರೋಸ್ಟ್ ಅವರ ಗೋಲಿನತ್ತ ಒದ್ದ ಚೆಂಡನ್ನು ರಕ್ಷಣೆ ಆಟಗಾರ, ಸೆನೆಗಲ್‌ನ ಮೊರ್ತಾಡಾ ಫಾಲ್ ಅವರು ತಡೆದರು.

ವಿರಾಮಕ್ಕೆ ಮೊದಲು ಒಡಿಶಾ ತಂಡದ ರಾಯ್ ಕೃಷ್ಣ ಅವರು ಗೋಲಿನತ್ತ ಒದ್ದ ಚೆಂಡು ಗುರುಪ್ರೀತ್ ಅವರನ್ನು ವಂಚಿಸಿ ಗೋಲಿನತ್ತ ಹೋದರೂ, ಶಂಕರ್ ಸಕಾಲದಲ್ಲಿ ತಡೆದು ಅಪಾಯ ತಪ್ಪಿಸಿದರು.

ವಿರಾಮದ ಸ್ವಲ್ಪ ಹೊತ್ತಿನ ನಂತರ ಶಿವಶಕ್ತಿ ಬದಲು ಚೆಟ್ರಿ ಆಟಕ್ಕಿಳಿದರು. ಚೆಟ್ರಿ ಮತ್ತು ಜೇವಿ ಜೋಡಿ ಕೆಲಮಟ್ಟಿಗೆ ಒಡಿಶಾ ತಂಡಕ್ಕೆ ಸವಾಲೊಡ್ಡಿತು.

ಜೇವಿ ಅವರ ಮತ್ತೊಂದು ಗೋಲು ಯತ್ನಕ್ಕೆ ಅಮರಿಂದರ್ ಅಡ್ಡಿಯಾದರು.

ಬ್ಲೂಸ್ ತಂಡ ಮುಂದಿನ ಪಂದ್ಯವನ್ನು ಕೋಲ್ಕತ್ತದಲ್ಲಿ ಏಪ್ರಿಲ್ 7ರಂದು ಈಸ್ಟ್ ಬೆಂಗಾಲ್ ವಿರುದ್ಧ ಆಡಲಿದೆ. ಒಡಿಶಾ ಎಫ್‌ಸಿ ತನ್ನ ಮುಂದಿನ ಪಂದ್ಯವನ್ನು ತವರು ಭುವನೇಶ್ವರದಲ್ಲಿ ಏಪ್ರಿಲ್ 2ರಂದು ಪಂಜಾಬ್ ಎಫ್‌ಸಿ ವಿರುದ್ಧ ಆಡಲಿದೆ.



ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಬಿಎಫ್‌ಸಿಯ ಸುನಿಲ್ ಚೆಟ್ರಿ (ಮಧ್ಯದಲ್ಲಿ) ಜೊತೆ ಒಡಿಶಾ ಎಫ್‌ಸಿಯ ಲಾಲ್ರಿನ್‌ಝುವಾಲಾ (ಎಡ) ಮತ್ತು ರಾಯ್ ಕೃಷ್ಣ (ಬಲಗಡೆ) ಅವರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪೈಪೋಟಿ ನಡೆಸಿದರು. ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬ್ಯಾಸ್ಕೆಟ್‌ಬಾಲ್: ಮಂಗಳೂರು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಬಿ.ಸಿ. ತಂಡವು ಕರ್ನಾಟಕ ರಾಜ್ಯ ಗ್ರಾಮೀಣ ಪುರುಷರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಮಂಗಳೂರು ತಂಡವು 81–65 ರಿಂದ ಮೈಸೂರಿನ ರೈಸಿಂಗ್ ಸ್ಟಾರ್ ಬಿ.ಸಿ. ತಂಡವನ್ನು ಮಣಿಸಿತು.

ಮಂಗಳೂರು ತಂಡದ ಪರ ಅಶ್ವಿಜ್ 29, ಗಣೇಶ್ 19 ಪಾಯಿಂಟ್ಸ್ ಗಳಿಸಿದರು.

ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ಮೈಸೂರಿನ ಆರ್ಯನ್ ಬಿಸಿ ತಂಡವು 66–52 ರಿಂದ ಹೊಯ್ಸಳ ಬಿ.ಸಿ. ಹಾಸನದ ತಂಡವನ್ನು ಸೋಲಿಸಿತು.

ಫಿಬಾ ಏಷ್ಯಾ ಅಧ್ಯಕ್ಷ ಗೋವಿಂದರಾಜ್ ಅವರು ವಿಜೇತ ತಂಡಕ್ಕೆ ₹50 ಸಾವಿರ, ರನ್ನರ್ ಅಪ್ ತಂಡಕ್ಕೆ ₹ 30 ಸಾವಿರ, ತೃತೀಯ ₹ 20 ಸಾವಿರ, ನಾಲ್ಕನೇ ಸ್ಥಾನಕ್ಕೆ ₹ 10 ಸಾವಿರ ನಗದು ನೀಡಿ ಗೌರವಿಸಿದರು.

ಟೂರ್ನಿಯ ಉತ್ತಮ ಆಟಗಾರ ಆರ್ಯನ್ ಬಿಸಿ ಮೈಸೂರು ತಂಡದ ಶಕ್ತಿ ಅವರಿಗೆ ₹ 5 ಸಾವಿರ ನಗದು ನೀಡಲಾಯಿತು.



ವಿಜೇತ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ. ನಿಂತವರು (ಎಡದಿಂದ) ದೀಕ್ಷಿತ್ ಎ, ಶೈಲೆನ್ ಎಸ್, ಸೌಗಂಧ್ ಎ, ಗಣೇಶ್ ಜಿ, ಕೋಚ್ ಆದಿತ್ಯ ಮಹಾಲೆ, ಪ್ರದ್ಯುಮ್ನ, ಅಶ್ವಿಜ್ ವಿ ಮತ್ತು ದಿವಿತ್; (ಕುಳಿತವರು): ರೆನಿಶ್, ರೋಹನ್ ಆರ್, ಅನಿಕೇತ್ ರಾವ್, ಪ್ರಸ್ತಿಕ್; ಪ್ರಜಾವಾಣಿ ಚಿತ್ರ /ಪುಷ್ಕರ್ ವಿ

ವೆಸ್ಟ್ ಇಂಡೀಸ್–ಅಮೆರಿಕದಲ್ಲಿ ನಡೆಯುವ ಟಿ20 ವಿಶ್ವಕಪ್

ಏಪ್ರಿಲ್ ಕೊನೆ ವಾರ ತಂಡ ಪ್ರಕಟ

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಸಹಯೋಗದಲ್ಲಿ ಈ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತದ 15 ಆಟಗಾರರ ತಂಡವನ್ನು ಏಪ್ರಿಲ್ ಕೊನೆಯ ವಾರದಲ್ಲಿ ಪ್ರಕಟಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

ಮಂಡಳಿಯು ಆಯ್ಕೆಯಾದ ತಂಡದ ಪಟ್ಟಿಯನ್ನು ಮೇ 1ರೊಳಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ಗೆ ಸಲ್ಲಿಸಬೇಕು.

ಅದರ ನಂತರ ತಂಡದಲ್ಲಿ ಬದಲಾವಣೆ ಮಾಡಲು ಮೇ 25ರವರೆಗೆ ಕಾಲಾವಕಾಶ ಇದೆ.

'ಐಪಿಎಲ್ ಟೂರ್ನಿಯ ಮೊದಲ ಹಂತವು ಮುಗಿದಾಗ ರಾಷ್ಟ್ರೀಯ ಆಯ್ಕೆ ಸಮಿತಿಗೆ ಉತ್ತಮ ಆಟಗಾರರನ್ನು ಆಯ್ಕೆ ಮಾಡುವ ಅವಕಾಶ ಸಿಗುತ್ತದೆ. ಆಟಗಾರರ ಫಿಟ್‌ನೆಸ್, ಸಾಮರ್ಥ್ಯ ಮತ್ತು ಅಂಕಿ ಸಂಖ್ಯೆಗಳನ್ನು ನೋಡಿ ಆಯ್ಕೆ ನಡೆಸುತ್ತಾರೆ. ಆದ್ದರಿಂದ ಏಪ್ರಿಲ್ ಕೊನೆಯ ವಾರದವರೆಗೂ ಅವಲೋಕನ ನಡೆಸಿದ ನಂತರ ತಂಡವನ್ನು ರಚಿಸಲಾಗುವುದು' ಎಂದು ಬಿಸಿಸಿಐ ಹಿರಿಯ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.



'ಐಪಿಎಲ್ ಲೀಗ್ ಹಂತವು ಮೇ 19ರಂದು ಮುಗಿಯುತ್ತದೆ. ಆಗ ಪ್ಲೇ ಆಫ್ ಹಂತಕ್ಕೆ ಹೋಗದಿರುವ ತಂಡಗಳಲ್ಲಿರುವ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಆಟಗಾರರ ಬಳಗವನ್ನು ಮೊದಲ ಹಂತದಲ್ಲಿ ನ್ಯೂಯಾರ್ಕ್‌ಗೆ ಕಳಿಸಲಾಗುವುದು. ಅವರು ಅಲ್ಲಿ ಅಭ್ಯಾಸ ಆರಂಭಿಸುವರು' ಎಂದು ಮೂಲಗಳು ತಿಳಿಸಿವೆ.

'ಕೇಂದ್ರ ಗುತ್ತಿಗೆಯಲ್ಲಿರುವ ಅಥವಾ ತಂಡಕ್ಕೆ ಆಯ್ಕೆಯಾಗುವ ಸಂಭವನೀಯ ಆಟಗಾರರು ಒಂದೊಮ್ಮೆ ಗಾಯಗೊಂಡರೆ, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಯ ಔಷಧ ಮತ್ತು ಕ್ರೀಡಾ ವಿಜ್ಞಾನ ವಿಭಾಗವು ಅವರನ್ನು ನೋಡಿಕೊಳ್ಳಲಿದೆ. ಎನ್‌ಸಿಎ ವೈದ್ಯಕೀಯ ತಂಡವು ನಿಗಾ ವಹಿಸುವುದು' ಎಂದೂ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಿಎಸಿ ಈಜು ಶಿಬಿರ

ಬೆಂಗಳೂರು: ಬಸವನಗುಡಿ ಈಜು ಕೇಂದ್ರ (ಬಿಎಸಿ)ದಲ್ಲಿ ಏಪ್ರಿಲ್ 1ರಿಂದ ಈಜು ತರಬೇತಿಯ ಬೇಸಿಗೆ ಶಿಬಿರ ನಡೆಯಲಿದೆ. ಮಕ್ಕಳು, ಮಹಿಳೆಯರು ಮತ್ತು ವಯಸ್ಕರು ಇದ ರಲ್ಲಿ ಭಾಗವಹಿಸಬಹುದು. ಮಾಹಿತಿಗೆ 9972737607, 9844462077 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರಿಕೆಟ್ ಶಿಬಿರ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ಮತ್ತು ಎಪಿಎಸ್ ಪಬ್ಲಿಕ್ ಶಾಲೆ ಆಶ್ರಯದಲ್ಲಿ ಏಪ್ರಿಲ್ 3 ರಿಂದ ಮೇ 24ರವರೆಗೆ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ ನಡೆಯಲಿದೆ. ಎನ್.ಆರ್. ಕಾಲೋನಿಯಲ್ಲಿರುವ ಎಪಿಎಸ್ ಕಾಲೇಜು ಮೈದಾನದಲ್ಲಿ ಶಿಬಿರ ನಡೆಯುವುದು. ಮಾಹಿತಿಗಾಗಿ ಸಂಘಟನಾ ಕಾರ್ಯದರ್ಶಿ ಕೆ. ಮುರಳೀಧರ (ಮೊಬೈಲ್: 9845096056) ಸಂಪರ್ಕಿಸಬೇಕು.

ಅಪಹಾಸ್ಯ ಮಾಡದಿರಿ: ಅಶ್ವಿನ್

ನವದೆಹಲಿ (ಪಿಟಿಐ): ಕ್ರಿಕೆಟ್ ಅಭಿಮಾನಿಗಳು ತಾವು ಟೀಕಿಸುತ್ತಿರುವ ಆಟಗಾರರು ಯಾವ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಇಷ್ಟೊಂದು ಅಹಿತಕರ ಮಟ್ಟಕ್ಕೆ ಯಾವ ಆಟಗಾರನನ್ನೂ ಅಪಹಾಸ್ಯ ಮಾಡಬಾರದು ಎಂದು ಭಾರತ ಕ್ರಿಕೆಟ್ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅಭಿಪ್ರಾಯಪಟ್ಟಿದ್ದಾರೆ.

ಅಹಮದಾಬಾದ್ ಮತ್ತು ಹೈದರಾಬಾದ್ ನಗರಗಳಲ್ಲಿ ಈಚೆಗೆ ನಡೆದ ಐಪಿಎಲ್ ಪಂದ್ಯಗಳಲ್ಲಿ ಮುಂಬೈ ಇಂಡಿಯನ್ಸ್ ತಂಡದ ಹಾರ್ದಿಕ್ ಪಾಂಡ್ಯ ಅವರನ್ನು ಪ್ರೇಕ್ಷಕರು ಅಪಹಾಸ್ಯ ಮಾಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿಯೂ ವ್ಯಂಗ್ಯ, ಟೀಕೆಗಳು ವ್ಯಕ್ತವಾಗಿದ್ದವು.

ಹಾರ್ದಿಕ್, ಹೋದ ಎರಡು ವರ್ಷ ಗುಜರಾತ್ ಟೈಟನ್ಸ್ ತಂಡದ ನಾಯಕರಾಗಿದ್ದರು. ಈ ವರ್ಷ ಅವರನ್ನು ಮುಂಬೈ ಇಂಡಿಯನ್ಸ್ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿತ್ತು. ರೋಹಿತ್ ಶರ್ಮಾ ಅವರನ್ನು ನಾಯಕತ್ವದಿಂದ ಮುಕ್ತಗೊಳಿಸಲಾಗಿತ್ತು. ಇದು ಈಗ ರೋಹಿತ್ ಮತ್ತು ಹಾರ್ದಿಕ್ ಅಭಿಮಾನಿಗಳ ನಡುವಿನ 'ಸಮರ'ವಾಗಿ ಮಾರ್ಪಟ್ಟಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪರ–ವಿರೋಧ ಹೇಳಿಕೆಗಳು ಹರಿದಾಡುತ್ತಿವೆ. 'ಅಭಿಮಾನಿಗಳಿಗೆ ಒಬ್ಬ ಆಟಗಾರ ಇಷ್ಟವಾಗದಿದ್ದರೆ, ಅವರನ್ನೂ ಅಪಹಾಸ್ಯ ಮಾಡಿದರೆ ತಂಡವು ಯಾಕೆ ಸ್ಪಷ್ಟೀಕರಣ ನೀಡಬೇಕೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಇದು ಅಭಿಮಾನಿಗಳದ್ದೇ ಹೊಣೆ' ಎಂದು ಅಶ್ವಿನ್ ತಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಹೇಳಿದ್ದಾರೆ.


ಆರ್. ಅಶ್ವಿನ್

'ಇಂಗ್ಲೆಂಡ್‌ನಲ್ಲಿ ಜೋ ರೂಟ್ ಮತ್ತು ಜಾಕ್ ಕ್ರಾಲಿ ಅಥವಾ ಜಾಸ್ ಬಟ್ಲರ್ ಅಭಿಮಾನಿಗಳು ಯಾವಾಗಲಾದರೂ ಪರಸ್ಪರ ಹೊಡೆದಾಡಿದ್ದಾರೆಯೇ? ಆಸ್ಟ್ರೇಲಿಯಾದಲ್ಲಿ ಸ್ಟೀವ್ ಸ್ಮಿತ್ ಮತ್ತು ಪ್ಯಾಟ್ ಕಮಿನ್ಸ್ ಅಭಿಮಾನಿಗಳ ನಡುವೆ ಗಲಾಟೆಯಾಗುತ್ತದೆಯೇ?' ಎಂದು ಅಶ್ವಿನ್ ಹೇಳಿದ್ದಾರೆ.

'ಈ ಹಿಂದೆ ಭಾರತ ತಂಡದಲ್ಲಿ ಸೌರವ್ ಗಂಗೂಲಿ ಅವರು ಸಚಿನ್ ನಾಯಕತ್ವದಲ್ಲಿ ಆಡಿದ್ದರು. ಕೆಲವು ವರ್ಷಗಳ ನಂತರ ಗಂಗೂಲಿ ನಾಯಕತ್ವದಲ್ಲಿ ಸಚಿನ್ ಆಡಿದರು. ಸಚಿನ್ ಮತ್ತು ಗಂಗೂಲಿ ಇಬ್ಬರೂ ರಾಹುಲ್ ದ್ರಾವಿಡ್ ನಾಯಕತ್ವದಲ್ಲಿ ಆಡಿದರು. ಮೂವರೂ ಅನಿಲ್ ಕುಂಬ್ಳೆಯವರ ಮುಂದಾಳತ್ವದ ತಂಡದಲ್ಲಿದ್ದರು. ಇವರೆಲ್ಲರೂ ತಮಗಿಂತಲೂ ಬಹಳಷ್ಟು ಚಿಕ್ಕ ವಯಸ್ಸಿನ ಆಟಗಾರ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ಆಡಿದ್ದರು. ಅಷ್ಟೇ ಅಲ್ಲ; ಧೋನಿಯವರು ಕೊಹ್ಲಿಯ ನಾಯಕತ್ವದಲ್ಲಿ ಆಟವಾಡಿದ್ದರು' ಎಂದರು.

ಒಲಿಂಪಿಕ್ಸ್ ಧ್ವಜಧಾರಿ ಶರತ್ : ಆಕ್ಷೇಪ

ಚೆನ್ನೈ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಸ್ಟಾರ್ ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಅವರನ್ನು ಭಾರತದ ಧ್ವಜಧಾರಿಯಾಗಿ ಹೆಸರಿಸುವ ಐಒಎ ನಿರ್ಧಾರವನ್ನು ತಮಿಳುನಾಡಿನ ಅಥ್ಲೆಟಿಕ್ಸ್ ಅಸೋಸಿಯೇಷನ್ ಪ್ರಶ್ನಿಸಿದೆ. ಅವರನ್ನು 'ಸಾಧಾರಣ ಕ್ರೀಡಾಪಟು' ಎಂದು ಕರೆದಿದ್ದು, ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರಿಗೆ ಗೌರವವನ್ನು ನೀಡಬೇಕೆಂದು ಒತ್ತಾಯಿಸಿದೆ.

ಜುಲೈ 16 ರಿಂದ ಆಗಸ್ಟ್ 11 ರವರೆಗೆ ನಡೆಯಲಿರುವ ಕ್ರೀಡಾಕೂಟದ ಕೊನೆಯಲ್ಲಿ ಚೋಪ್ರಾ ಅವರ ಸ್ಪರ್ಧೆ ಪ್ರಾರಂಭವಾಗುವುದರಿಂದ ಉದ್ಘಾಟನಾ ಸಮಾರಂಭಕ್ಕೆ ಚೋಪ್ರಾ ಅವರನ್ನು ಧ್ವಜಧಾರಿಯನ್ನಾಗಿ ಮಾಡುವುದು ನಿರ್ಣಾಯಕ ಕೊನೆಯ ಕ್ಷಣದ ತಯಾರಿಯ ಸಮಯವನ್ನು ವ್ಯರ್ಥ ಮಾಡುತ್ತದೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮೂಲಗಳು ಪಿಟಿಐಗೆ ತಿಳಿಸಿವೆ.



ಶರತ್ ಕಮಲ್

ಖ್ಯಾತ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಕೂಡ ಚೋಪ್ರಾ ಅವರನ್ನು ಧ್ವಜಧಾರಿಯನ್ನಾಗಿ ಮಾಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ.

ಟಿಎನ್‌ಎಎ ಅಧ್ಯಕ್ಷ ಡಬ್ಲ್ಯುಐ ದಾವರಮ್ ಮತ್ತು ಕಾರ್ಯದರ್ಶಿ ಸಿ ಲತಾ ಶುಕ್ರವಾರ ಬಿಡುಗಡೆ ಮಾಡಿದ ಜಂಟಿ ಹೇಳಿಕೆಯಲ್ಲಿ, ಐಒಎ ನಿರ್ಧಾರವು ದೇಶಾದ್ಯಂತ ಆಘಾತವನ್ನುಂಟು ಮಾಡಿದೆ ಎಂದು ಹೇಳಿದೆ.

ಟಿ20 ನಾಯಕತ್ವ ತೊರೆಯಲು ಅಫ್ರಿದಿ ಚಿಂತನೆ

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್‌ಗೆ ಸಂಬಂಧಿಸಿದಂತೆ ತಮ್ಮನ್ನು ಯಾವುದೇ ಚರ್ಚೆಗೆ ಕರೆಯದ ಕಾರಣ ನಿರಾಶರಾಗಿರುವ ಟಿ20 ತಂಡದ ನಾಯಕ ಶಾಹೀನ್ ಶಾ ಅಫ್ರಿದಿ ಇದೀಗ ಆ ಸ್ಥಾನದಿಂದ ಕೆಳಗಿಳಿಯಲು ಚಿಂತನೆ ನಡೆಸುತ್ತಿದ್ದಾರೆ.

ಪಿಸಿಬಿ ಅಧ್ಯಕ್ಷ ಮೊಹಸಿನ್ ನಕ್ವಿ ಆಗಲಿ, ರಾಷ್ಟ್ರೀಯ ಆಯ್ಕೆಗಾರರಾಗಲಿ, ತಮ್ಮ ಜೊತೆ ಭವಿಷ್ಯದ ಯೋಜನೆ, ನಾಯಕತ್ವ ಅಥವಾ ಕೋಚ್‌ಗಳ ಆಯ್ಕೆಗೆ ಸಂಬಂಧಿಸಿ ಒಮ್ಮೆಯೂ ಮಾತನಾಡದೇ ಇರುವುದರಿಂದ ಶಾಹೀನ್ ಬೇಸರಗೊಂಡಿದ್ದಾರೆ ಎಂದು ಅವರಿಗೆ ಆಪ್ತವಾದ ಮೂಲಗಳು ತಿಳಿಸಿವೆ.

ಟಿ20 ವಿಶ್ವಕಪ್, ಕೋಚ್‌ಗಳ ನೇಮಕ, ನಾಯಕತ್ವಕ್ಕೆ ಸಂಬಂಧಿಸಿ ಪಿಸಿಬಿ ಮುಖ್ಯಸ್ಥರು, ತಮ್ಮನ್ನು ಕತ್ತಲಲ್ಲಿಟ್ಟು, ಮಾಜಿ ನಾಯಕ ಬಾಬರ್ ಆಜಂ ಜೊತೆ ಮಾತುಕತೆ ನಡೆಸಿದ್ದರಿಂದ ಶಾಹೀನ್ ಅಫ್ರಿದಿ ಅವರು ಬೇಸರಗೊಂಡಿದ್ದಾರೆ ಎಂದು ಈ ಮೂಲ ತಿಳಿಸಿದೆ.

ಡಿಜಿಸಿಎ ನಡೆಗೆ ಪೈಲಟ್‌ಗಳ ಆಕ್ಷೇಪ

ವಿಶ್ರಾಂತಿ ಸೌಲಭ್ಯ: ಪರಿಷ್ಕೃತ ನಿಯಮ ಜಾರಿ ಮುಂದೂಡಿಕೆ

ಮುಂಬೈ (ಪಿಟಿಐ): ಪೈಲಟ್‌ಗಳ ವಿಶ್ರಾಂತಿಗೆ ಸಂಬಂಧಿಸಿದಂತೆ ರೂಪಿಸಿರುವ ಪರಿಷ್ಕೃತ ನಿಯಮಾವಳಿಗಳ ಅನುಷ್ಠಾನದ ದಿನಾಂಕವನ್ನು ಮುಂದೂಡಿರುವ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ (ಡಿಜಿಸಿಎ) ಕ್ರಮಕ್ಕೆ ಭಾರತೀಯ ಪೈಲಟ್‌ಗಳ ಒಕ್ಕೂಟವು (ಎಫ್‌ಐಪಿ) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಪತ್ರ ಬರೆದಿದೆ. ವಿಮಾನಯಾನ ಕಂಪನಿಗಳಿಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಪೈಲಟ್‌ಗಳ ಆರೋಗ್ಯವನ್ನು ಪೂರ್ವಗ್ರಹಪೀಡಿತವಾಗಿ ನೋಡುವುದು ಸರಿಯಲ್ಲ ಎಂದು ಒಕ್ಕೂಟ ಹೇಳಿದೆ.

ಜೂನ್ 1ರಿಂದ ಪರಿಷ್ಕೃತ ನಿಯಮಾವಳಿಗಳನ್ನು ಜಾರಿಗೊಳಿಸುವಂತೆ ಎಲ್ಲಾ ವಿಮಾನಯಾನ ಕಂಪನಿಗಳಿಗೆ ಡಿಜಿಸಿಎ ಈ ಮೊದಲು ಸೂಚಿಸಿತ್ತು. ಆದರೆ, ಮಾರ್ಚ್ 26ರಂದು ಜಾರಿಯ ದಿನಾಂಕವನ್ನು ಏಕಾಏಕಿ ಮುಂದೂಡಿದೆ.

ಡಿಜಿಸಿಎ ತಳೆದಿರುವ ನಡೆಯು ಪೈಲಟ್‌ಗಳ ಸುರಕ್ಷತೆಗೆ ಅಪಾಯವನ್ನು ಉಂಟು ಮಾಡುತ್ತದೆ. ಅಲ್ಲದೆ, ಪ್ರಯಾಣಿಕರ ಸುರಕ್ಷತೆ ಸಂಬಂಧ ಕೇಂದ್ರ ವಿಮಾನಯಾನ ಸಚಿವಾಲಯವು ಪರಿಷ್ಕರಿಸಿರುವ ನಿಯಮಾವಳಿಗಳ ಅನುಷ್ಠಾನಕ್ಕೂ ಅಡ್ಡಿಯಾಗುವ ಸಾಧ್ಯತೆಯಿದೆ ಎಂದು ದೂರಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ವಿಮಾನಯಾನ ಸಚಿವಾಲಯವು ನಾಗರಿಕ ವಿಮಾನಯಾನ ಅಗತ್ಯತೆ ಕುರಿತಂತೆ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು. ವಿಮಾನಗಳ ರದ್ದತಿ ಮತ್ತು ವಿಳಂಬದಿಂದ ಸಂಕಷ್ಟ ಅನುಭವಿಸುವ ಪ್ರಯಾಣಿಕರಿಗೆ ಕಂಪನಿಗಳು ಅಗತ್ಯ ಸೌಲಭ್ಯ ಕಲ್ಪಿಸಬೇಕಿದೆ. ಇಂತಹ ಸಂದರ್ಭದಲ್ಲಿ ಟಿಕೆಟ್‌ನ ಸಂಪೂರ್ಣ ಮೊತ್ತವನ್ನು ಮರುಪಾವತಿಸಬೇಕು ಅಥವಾ ಪರ್ಯಾಯ ವಿಮಾನದ ವ್ಯವಸ್ಥೆ ಮಾಡಬೇಕು ಎಂದು ತಾಕೀತು ಮಾಡಿತ್ತು.

ಪೈಲಟ್‌ಗಳು ಹಾಗೂ ವಿಮಾನಯಾನ ಕ್ಷೇತ್ರಕ್ಕೆ ಸಂಬಂಧಿಸಿದ ಸೇವೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಐದು ಸಾವಿರಕ್ಕೂ ಹೆಚ್ಚು ಮಂದಿ ಈ ಒಕ್ಕೂಟದ ಸದಸ್ಯರಾಗಿದ್ದಾರೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮಾರ್ಚ್ 22ಕ್ಕೆ ಕೊನೆಗೊಂಡ ವಾರದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಈ ವಾರದಲ್ಲಿ ₹1,167 ಕೋಟಿಯಷ್ಟು ಹೆಚ್ಚಳವಾಗಿದೆ. ಒಟ್ಟಾರೆ ಮೀಸಲು ಸಂಗ್ರಹವು ₹53.58 ಲಕ್ಷ ಕೋಟಿಗೆ (642.63 ಬಿಲಿಯನ್ ಡಾಲರ್) ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ. ಸತತ ಐದು ವಾರಗಳಿಂದಲೂ ಮೀಸಲು ಸಂಗ್ರಹ ಏರಿಕೆಯಾಗುತ್ತಿದೆ. ಈ ಅವಧಿಯಲ್ಲಿ ಮೀಸಲು ನಿಧಿಗೆ ಒಟ್ಟು ₹53,329 ಕೋಟಿ ಸೇರ್ಪಡೆಯಾಗಿದೆ ಎಂದು ವಿವರಿಸಿದೆ.

2021ರ ಸೆಪ್ಟೆಂಬರ್‌ನಲ್ಲಿ ಮೀಸಲು ಸಂಗ್ರಹವು ₹53.56 ಲಕ್ಷ ಕೋಟಿಗೆ (642.45 ಬಿಲಿಯನ್ ಡಾಲರ್) ತಲುಪಿದ್ದು, ಇಲ್ಲಿಯವರೆಗಿನ ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿತ್ತು.

ಮಾರ್ಚ್ 22ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ಗರಿಷ್ಠ ಪ್ರಮಾಣದಲ್ಲಿದೆ. ವಿದೇಶಿ ಕರೆನ್ಸಿಗಳ ಸಂಗ್ರಹವು ₹1,025 ಕೋಟಿ ಹೆಚ್ಚಳವಾಗಿದ್ದು, ಒಟ್ಟಾರೆ ಸಂಗ್ರಹವು ₹47.38 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹವು ₹2,893 ಕೋಟಿ ಹೆಚ್ಚಾಗಿದ್ದು, ಒಟ್ಟು ₹4.29 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹225 ಕೋಟಿಯಷ್ಟು ಹೆಚ್ಚಾಗಿದ್ದು, ₹38,871 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ. ಮೀಸಲು ಸಂಗ್ರಹದಲ್ಲಿ ಅಮೆರಿಕದ ಡಾಲರ್ ಹೊರತುಪಡಿಸಿ ಯೂರೊ, ಪೌಂಡ್ ಮತ್ತು ಯೆನ್ ಕರೆನ್ಸಿಯ ಮೌಲ್ಯ ಇಳಿಕೆಯಾಗಿದೆ.

ಜೀ: ಶೇ 50ರಷ್ಟು ಸಿಬ್ಬಂದಿ ವಜಾ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಜಿಇಎಲ್) ಒಡೆತನಕ್ಕೆ ಸೇರಿದ ಬೆಂಗಳೂರಿನಲ್ಲಿರುವ ತಂತ್ರಜ್ಞಾನ ಮತ್ತು ನಾವೀನ್ಯತಾ ಕೇಂದ್ರದ (ಟಿಐಸಿ) ಶೇ 50ರಷ್ಟು ಉದ್ಯೋಗಿಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಕಳೆದ ವರ್ಷ ಕೇಂದ್ರದ ವೆಚ್ಚವು ₹600 ಕೋಟಿ ದಾಟಿತ್ತು. ಕಂಪನಿಯ ವೆಚ್ಚವನ್ನು ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಕೇಂದ್ರದಲ್ಲಿ 650ಕ್ಕೂ ಹೆಚ್ಚು ಎಂಜಿನಿಯರ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಕಂಪನಿಯು ಇತ್ತೀಚೆಗೆ ಪ್ರಕಟಿಸಿದ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಪುತ್ತೂರು	
ಕೋಕ	11500-26000
ಹೊಸತು	26500-36500
ಶಿವಮೊಗ್ಗ	
ಗೊರಬಲು	17500-18600
ಶಿರಸಿ	
ಬೆಟ್ಟೆ	35699-42399
ಬಿಳಿಗೋಟು	20299-30699
ಚಾಲಿ	30299-35699
ಕೆಂಪುಗೋಟು	25199-33689
ರಾಶಿ	42199-46899
ತುಮಕೂರು	
ರಾಶಿ	46000-47500
ಕೊಪ್ಪ	
ಸರಕು	61963-79410
ಬೆಟ್ಟೆ	40608-52366
ಗೊರಬಲು	10698-31469

ಮುಂಬೈ ಧಾರಣೆ

ಶೇಂಗಾ

30-3-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	910 (910)
ಪಾಮ್ ವಾರದ ಡೆಲಿವರಿ	948 (945)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹67,950 (68,000)
ಬೆಳ್ಳಿ ಕೆ.ಜಿ ₹74,600 (74,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹955 (955)
ಸೂರ್ಯಕಾಂತಿ (ರಿಫೈನ್ಡ್)	₹955 (960)
ಪಾಮೋಲಿನ್	₹950 (945)

ಗಾಜಾದಲ್ಲಿ ಇಸ್ರೇಲ್ ದಾಳಿ: ಈವರೆಗೆ 32,705 ಸಾವು

ಕೈರೊ, ಈಜಿಪ್ಟ್ (ರಾಯಿಟರ್ಸ್): ಇಸ್ರೇಲ್‌ನ ಸೇನೆಯು ಗಾಜಾಪಟ್ಟಿಯ ಮೇಲೆ ಆಕ್ರಮಣ ಆರಂಭಿಸಿದ ಬಳಿಕ ಇದುವರೆಗೆ ಒಟ್ಟು 32,705 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ.

ಇಸ್ರೇಲ್ ಸೇನೆ ಕಳೆದ ವರ್ಷದ ಅ.7ರಂದು ಗಾಜಾಪಟ್ಟಿಯಲ್ಲಿ ದಾಳಿ ಆರಂಭಿಸಿತ್ತು. ಅಲ್ಲದೆ, ಸೇನೆ ದಾಳಿಯಿಂದ 75,190 ಜನರು ಗಾಯ ಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಶನಿವಾರ ಹೇಳಿಕೆ ನೀಡಿದೆ.

ಮೊಳಕಾಲ್ಮುರು ತಾಲ್ಲೂಕಿನಲ್ಲಿ ಶೇ 25ರಷ್ಟು ಬೆಳೆ ನಷ್ಟ ● ಇಳುವರಿ ಕುಂಠಿತ– ಬೆಳೆಗಾರರ ಆತಂಕ

ಬಿಸಿಲ ಬೇಗೆಗೆ ಒಣಗಿದ ರೇಷ್ಮೆ ತೋಟ

● ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ಬಿಸಿಲಿನ ಪ್ರಖರತೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ರೇಷ್ಮೆ ಕೃಷಿ ಸಂಕಷ್ಟಕ್ಕೆ ಸಿಲುಕಿದೆ.

ಕಳೆದ ವರ್ಷ ವಾಡಿಕೆಯಷ್ಟು ಮಳೆ ಸುರಿಯಲಿಲ್ಲ. ಇದರಿಂದ ಅಂತರ್ಜಲ ಮಟ್ಟ ಕುಸಿದಿದ್ದು, ಕೃಷಿಕರಿಗೆ ರೇಷ್ಮೆ ತೋಟಗಳನ್ನು ಉಳಿಸಿಕೊಳ್ಳುವ ಸವಾಲು ಎದುರಾಗಿದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ಮತ್ತು ಚಳ್ಳಕೆರೆ ತಾಲ್ಲೂಕು ರೇಷ್ಮೆ ಬಿಳಿಗೂಡು (ಬೈವೋಲ್ಟೈನ್) ಉತ್ಪಾದನೆಗೆ ಖ್ಯಾತಿ ಪಡೆದಿವೆ. ಇಲ್ಲಿ ಗುಣಮಟ್ಟದ ಗೂಡು ಉತ್ಪಾದನೆಯಾಗುತ್ತದೆ. ರಾಮನಗರದ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯ ಜತೆಗೆ ಅಧಿಕ ದರಕ್ಕೂ ಮಾರಾಟವಾಗುತ್ತಿದೆ.

'ಈ ಬಾರಿ ಬಿಸಿಲಿನ ತಾಪದಿಂದಾಗಿ ಶೇ 25ಕ್ಕೂ ಹೆಚ್ಚು ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಗೂಡಿನ ಗುಣಮಟ್ಟ ಕುಸಿತದಿಂದ ದರ ಇಳಿಕೆಯಾಗುತ್ತಿದೆ. ಒಂದು ವರ್ಷದ ಹಿಂದೆ ಬಿಳಿಗೂಡಿನ ದರ ಪ್ರತಿ ಕೆ.ಜಿ.ಗೆ ₹1,000 ದಾಟಿತ್ತು. ಈಗ ₹450ರಿಂದ ₹600ಕ್ಕೆ ಇಳಿಕೆಯಾಗಿದೆ' ಎಂದು ರೈತರು ಹೇಳಿದರು.


ನೀರಿಲ್ಲದೆ ಒಣಗಿ ಹೋಗಿರುವ ರೇಷ್ಮೆ ಬೆಳೆ

'ತಾಲ್ಲೂಕಿನಲ್ಲಿ 700 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ (ಹಿಪ್ಪುನೇರಳೆ) ನಾಟಿ ಮಾಡಲಾಗಿದೆ. ಮಾಸಿಕ 35,000ದಿಂದ 40,000 ಮೊಟ್ಟೆ ಚಾಕಿ ಮಾಡಲಾಗುತ್ತದೆ. ಪ್ರತಿ ತಿಂಗಳು 35,000ದಿಂದ 40,000 ಕೆ.ಜಿ.ಯಷ್ಟು ಬಿಳಿಗೂಡು ಉತ್ಪಾದನೆಯಾಗುತ್ತಿದೆ. ಬಿಸಿಲಿನಿಂದಾಗಿ ಅಂದಾಜು 10,000 ಕೆ.ಜಿಯಷ್ಟು ಉತ್ಪಾದನೆ ಕುಸಿತವಾಗಿದೆ' ಎಂದು ರೇಷ್ಮೆ ಇಲಾಖೆಯ ತಾಲ್ಲೂಕು ವಿಸ್ತರಣಾಧಿಕಾರಿ ಮಹೇಶ್ ತಿಳಿಸಿದರು.

> ಕೊಳವೆಬಾವಿಗಳು ಬತ್ತುತ್ತಿವೆ. ಲಕ್ಷಾಂತರ ವೆಚ್ಚದಲ್ಲಿ ಹುಳು ಸಾಕಣೆ ಮನೆಗಳನ್ನು ಕಟ್ಟಿಸಿದ್ದೇವೆ. ದರ ಕುಸಿತ, ಇಳುವರಿ ಕುಂಠಿತ, ಸತತ ರೋಗಬಾಧೆಯಿಂದ ಬೇಸತ್ತಿದ್ದೇವೆ
> **ಎಸ್‌.ಕೆ. ಗುರುಲಿಂಗಪ್ಪ,** ಬೆಳೆಗಾರ

'ಬಿಸಿಲಿನ ಪ್ರಖರತೆಗೆ ಸೊಪ್ಪು ಬಾಡುತ್ತಿದೆ. ಗುಣಮಟ್ಟವಿಲ್ಲದ ಸೊಪ್ಪು ತಿನ್ನುವ ರೇಷ್ಮೆ ಹುಳುಗಳಿಗೆ 'ಸಪ್ಪೆರೋಗ' ಬಾಧಿಸುತ್ತದೆ ಎಂಬ ಕಾರಣಕ್ಕೆ ಸೊಪ್ಪು ಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ. ಸಾಮಾನ್ಯವಾಗಿ ರೇಷ್ಮೆ ಕೃಷಿಗೆ 25ರಿಂದ 29 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಬೇಕು. ಈ ಬೇಸಿಗೆಯಲ್ಲಿ ಉಷ್ಣಾಂಶ 37ರಿಂದ 38 ಡಿಗ್ರಿ ಸೆಲ್ಸಿಯಸ್‌ಗೆ ಏರಿದೆ. ಇದು ರೇಷ್ಮೆ ಕೃಷಿಯ ಹಿನ್ನಡೆಗೆ ಕಾರಣವಾಗಿದೆ. ಗೂಡಿನ ಗುಣಮಟ್ಟ ಹಾಗೂ ಗಾತ್ರದ ಮೇಲೂ ಪರಿಣಾಮ ಬೀರಿದೆ' ಎಂದು ಮಾಹಿತಿ ನೀಡಿದರು.

ಸಿಬ್ಬಂದಿ ಕೊರತೆ

ಮೊಳಕಾಲ್ಮುರು ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ಬಗ್ಗೆ ಬೆಳೆಗಾರರಿಗೆ ಅಗತ್ಯ ಮಾರ್ಗದರ್ಶನ ನೀಡಬೇಕಿದ್ದ ರೇಷ್ಮೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿದೆ. ಇಲ್ಲಿನ ಕಚೇರಿಗೆ 15ಕ್ಕೂ ಹೆಚ್ಚು ಹುದ್ದೆಗಳು ಮಂಜೂರಾಗಿವೆ. ಈ ಪೈಕಿ ಒಬ್ಬ ವಿಸ್ತರಣಾಧಿಕಾರಿ ಮಾತ್ರ ಇದ್ದಾರೆ. ಅವರನ್ನೂ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚೆಕ್‌ಪೋಸ್ಟ್‌ನಲ್ಲಿ ತಪಾಸಣಾ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ಕಚೇರಿ ಬಾಗಿಲು ತೆರೆಯುವವರೂ ಇಲ್ಲದಂತಾಗಿದೆ.


ಪಂಜಾಬ್‌ನ ಜಲಂಧರ್‌ನಲ್ಲಿ ಮಳೆಯಿಂದ ಹಾನಿಗೀಡಾಗಿರುವ ಗೋಧಿ ಬೆಳೆಯನ್ನು ತೋರಿಸುತ್ತಿರುವ ರೈತ —ಪಿಟಿಐ ಚಿತ್ರ

ಅಕಾಲಿಕ ಮಳೆ: ಗೋಧಿ ಬೆಳೆ ನಷ್ಟ

ಚಂಡೀಗಢ (ಪಿಟಿಐ): ಪಂಜಾಬ್‌ನ ವಿವಿಧೆಡೆ ಶನಿವಾರ ಅಕಾಲಿಕವಾಗಿ ಮಳೆ ಸುರಿದಿದ್ದು, ಗೋಧಿ ಬೆಳೆಗಾರರು ಆತಂಕಗೊಂಡಿದ್ದಾರೆ.

ಕಳೆದ ವರ್ಷದ ಅಕ್ಟೋಬರ್ ಮತ್ತು ಡಿಸೆಂಬರ್‌ನಲ್ಲಿ ಬಿತ್ತನೆ ಮಾಡಿರುವ ಗೋಧಿ ಫಸಲು ಕೊಯ್ಲಿಗೆ ಬಂದಿದೆ. ಏಪ್ರಿಲ್ 1ರಿಂದ ಪಂಜಾಬ್ ಹಾಗೂ ಹರಿಯಾಣದಲ್ಲಿ ಗೋಧಿ ಸಂಗ್ರಹಣೆ ಆರಂಭವಾಗಲಿದೆ. ಈ ವೇಳೆಯೇ ಮಳೆ ಹಾಗೂ ಗಾಳಿಯ ವೇಗವು ಹೆಚ್ಚಿದ್ದು, ಫಸಲು ನೆಲಕಚ್ಚಿದೆ.

ಬಟಿಂಡಾ, ಫಾಜಿಲ್ಕಾ, ಲೂಧಿಯಾನ, ಪಾಟಿಯಾಲ, ಅಮೃತಸರ ಹಾಗೂ ಪಠಾಣ್‌ಕೋಟ್‌ನಲ್ಲಿ ಮಳೆ ಸುರಿದಿದೆ. ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ.

ಮಾಲ್ವಾ ಭಾಗದಲ್ಲಿ ಅತಿಹೆಚ್ಚು ಫಸಲು ಹಾನಿಗೀಡಾಗಿದೆ. ಈ ಬಗ್ಗೆ ಸಮೀಕ್ಷೆ ನಡೆಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಶಿರೋಮಣಿ ಅಕಾಲಿ ದಳವು, ಸರ್ಕಾರಕ್ಕೆ ಒತ್ತಾಯಿಸಿದೆ.


ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹179-450

ದ್ವಿತಳಿ (ಬಿ.ವಿ) ₹244-592

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಚನ್ನಪಟ್ಟಣದಿಂದ ಶಾ ಪ್ರಚಾರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಏಪ್ರಿಲ್ 2ರಂದು ರಾಜ್ಯದಲ್ಲಿ ಪ್ರವಾಸ ಕೈಗೊಳ್ಳಲಿದ್ದು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಚನ್ನಪಟ್ಟಣಕ್ಕೆ ಸೇರಿ ಹಲವೆಡೆ ಚುನಾವಣಾ ಪ್ರಚಾರ ನಡೆಸಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್ ಶನಿವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಅಮಿತ್ ಶಾ ಅವರು ಅಂದು ಸಂಜೆ 6 ಗಂಟೆಗೆ ಚನ್ನಪಟ್ಟಣದಲ್ಲಿ ರೋಡ್ ಶೋ ನಡೆಸಲಿದ್ದಾರೆ' ಎಂದರು.

ದೇಶವನ್ನು ಒಡೆಯುವ ಮಾನಸಿಕತೆಯವರು ಬೇಕೋ? ಅಥವಾ ದೇಶ ಒಗ್ಗೂಡಿಸುವವರು ಬೇಕೋ? ಎಂಬ ಪ್ರಶ್ನೆಯ ಅಡಿಯಲ್ಲೇ ಈ ಚುನಾವಣೆ ನಡೆಯಲಿದೆ. ದೇಶ ಒಡೆಯುವ ಮಾನಸಿಕತೆ ಸಮರ್ಥಿಸಿಕೊಳ್ಳುವ ಕಾಂಗ್ರೆಸ್‌ನ ವಿರುದ್ಧ ದೇಶ ಒಗ್ಗೂಡಿಸುವ ಸಂ ದೇಶ ನೀಡುವ ಪ್ರಚಾರ ನಡೆಸುತ್ತಾರೆ.

ಬೆಳಿಗ್ಗೆ ಅಮಿತ್ ಶಾ ಅವರು ಬಿಜೆಪಿ, ಜೆಡಿಎಸ್ ಮುಖಂಡರ ಜತೆ ಉಪಾಹಾರ ಸಭೆ ನಡೆಸುವರು. ಬೆಳಿಗ್ಗೆ 11 ಗಂಟೆಗೆ ಅರಮನೆ ಮೈದಾನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಬಿಜೆಪಿ ಶಕ್ತಿ ಕೇಂದ್ರಗಳ ಕಾರ್ಯಕರ್ತರ ಸಮಾವೇಶದಲ್ಲಿ ಭಾಗವಹಿಸುವರು.

ಮಧ್ಯಾಹ್ನ 2ರಿಂದ 5 ಗಂಟೆವರೆಗೆ ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಚಿತ್ರದುರ್ಗ ಕ್ಷೇತ್ರಗಳ ಪ್ರಮುಖರ ಜತೆ ಸಂವಾದ ನಡೆಸುವರು.

ಧನ್ಯವಾದ ಮೋದಿ ಅಭಿಯಾನ: ಮೋದಿ ನೇತೃತ್ವದ ಸರ್ಕಾರದ ಜನಪರ ಯೋಜನೆಗಳ ಆಧಾರದಲ್ಲಿ 40 ದಿನಗಳ ಕಾಲ 'ಧನ್ಯವಾದ ಮೋದಿ ಅಭಿಯಾನ' ನಡೆಸಲಾಗುವುದು ಎಂದು ಹೇಳಿದರು.

40 ಮಂದಿ ತಾರಾ ಪ್ರಚಾರಕರು

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ ಸೇರಿದಂತೆ 40 ಮಂದಿ ತಾರಾ ಪ್ರಚಾರಕರಾಗಿ ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಈ ಪಟ್ಟಿಯನ್ನು ಶುಕ್ರವಾರ ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಹಾವೇರಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ, ಬೆಳಗಾವಿ ಅಭ್ಯರ್ಥಿ ಜಗದೀಶ ಶೆಟ್ಟರ್, ಶಾಸಕ ಬಸನಗೌಡ ಪಾಟೀಲ ಯತ್ನಾಳ ಪಟ್ಟಿಯಲ್ಲಿದ್ದಾರೆ.

ಪಕ್ಷ ಟಿಕೆಟ್ ನಿರಾಕರಿಸಿರುವ ಡಿ.ವಿ. ಸದಾನಂದ ಗೌಡ, ಎ. ನಾರಾಯಣ ಸ್ವಾಮಿ, ನಳಿನ್ ಕುಮಾರ್ ಕಟೀಲ್, ಪ್ರತಾಪ ಸಿಂಹ ಅವರ ಹೆಸರು ಇವೆ.

ಗಡಿ ಪಾಯಿಂಟ್ ತೆರವು: ಚೀನಾಗೆ ಆಗ್ರಹ

ಕಠ್ಮಂಡು (ಪಿಟಿಐ): 'ಟಿಬೆಟ್ ಸ್ವಾಯತ್ತ ವಲಯದ ಗಡಿಗೆ ಹೊಂದಿಕೊಂಡಿರುವ ಗಡಿಭಾಗದಲ್ಲಿ 14 ಸಾಂಪ್ರದಾಯಿಕ ಪಾಯಿಂಟ್‌ಗಳನ್ನು ಕಾರ್ಯಾಚರಣೆಗೆ ಮುಕ್ತಗೊಳಿಸಬೇಕು' ಎಂದು ನೇಪಾಳ ಸರ್ಕಾರ ಚೀನಾಗೆ ಆಗ್ರಹಪಡಿಸಿದೆ.

ಈ ಗಡಿ ಪಾಯಿಂಟ್‌ಗಳನ್ನು ಕಾರ್ಯಾಚರಣೆಗೆ ತೆರವುಗೊಳಿಸುವು ದರಿಂದ ದ್ವಿಪಕ್ಷೀಯ ವಾಣಿಜ್ಯ ಚಟುವಟಿಕೆಗಳು ಹೆಚ್ಚುವ ಜೊತೆಗೆ ಜನರ ಮುಕ್ತ ಸಂಚಾರಕ್ಕೂ ಅನುಕೂಲವಾಗ ಲಿದೆ ಎಂದು ನೇಪಾಳ ಪ್ರತಿಪಾದಿಸಿದೆ.

ನೇಪಾಳ ಉಪ ಪ್ರಧಾನಿಯೂ ಆದ ವಿದೇಶಾಂಗ ವ್ಯವಹಾರಗಳ ಸಚಿವ ನಾರಾಯಣ ಕಾಜಿ ಶ್ರೇಷ್ಠ ಅವರು ಈಚೆಗೆ ಚೀನಾ ಕಮ್ಯುನಿಸ್ಟ್ ಪಾರ್ಟಿಯ ಟಿಬೆಟ್ ಸ್ವಾಯತ್ತ ವಲಯ ಸಮಿತಿ ಕಾರ್ಯದರ್ಶಿ ವಾಂಗ್ ಜುಂಜೆಂಗ್ ಅವರೊಂದಿಗೆ ಈ ಕುರಿತು ಚರ್ಚಿಸಿದರು. ಉಪ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಶ್ರೇಷ್ಠ ಅವರ ಪ್ರಥಮ ಚೀನಾ ಭೇಟಿಯಾಗಿದೆ.

ಬರ ಹನಿ ಹನಿ ನೀರಿನ ಲೆಕ್ಕ

ಶಿವಾನಂದ ಕಳವೆ

ದಿನ ನಿತ್ಯ ಟ್ಯಾಂಕರ್ ನೀರು ಖರೀದಿಗೆ ಹಣ ಖರ್ಚು ಮಾಡಿಯೇ ಹೋಟೆಲ್, ವಸತಿ ಗೃಹ, ಅಪಾರ್ಟ್‌ಮೆಂಟ್ ನಡೆಯುತ್ತಿವೆ. ಜಲಕ್ಷಾಮದಿಂದಾಗಿ ಉದ್ಯಮಿಗಳಿಗೆ ಖರ್ಚಿನ ಹೊಸ ಬಾಪ್ತು ಶುರುವಾಗಿದೆ. ಬಹುವಾರ್ಷಿಕ ತೋಟಗಾರಿಕೆ, ಮುಖ್ಯವಾಗಿ ಅಡಿಕೆ ಬೆಳೆಗಾರರಂತೂ ಒಣಗುವ ತೋಟ ಉಳಿಸಲು ನೀರು ಖರೀದಿಯ ಮಟ್ಟಕ್ಕೆ ಇಳಿದಿದ್ದಾರೆ. ಕೃಷಿಕರ ಆದಾಯ ಕೊಳವೆಬಾವಿ, ಪೈಪ್‌ಲೈನ್‌ಗಳ ಪಾಲಾಗುತ್ತಿದೆ. ನಾವು ಕಟ್ಟಿದ ನಗರಗಳು ನಿತ್ಯ ನೀರ ನೋವಿನ ಮಾತಾಡುತ್ತಿವೆ. ಕಾಲುಬುಡದ ಕೆರೆ, ಬಾವಿಯ ವಿಕೇಂದ್ರೀಕೃತ ವ್ಯವಸ್ಥೆ ಹಾಳು ಮಾಡುತ್ತ ದೂರದ ಜಲಾಶಯ, ನದಿಗಳಿಂದ ನೀರು ಪೂರೈಸುವ ಕೇಂದ್ರೀಕೃತ ನೀರಾವರಿ ನಂಬಿದ್ದೇವೆ. ಮಳೆಗಾಲ ಮುಗಿಯುತ್ತಲೇ ಸಾರ್ವಜನಿಕ ನೀರು ಸರಬರಾಜು ಕೈ ಕೊಡುತ್ತಿದೆ. ಜನಸಂಖ್ಯೆ, ಮನೆಗಳು ಬೆಳೆದಂತೆ ಸಾವಿರಾರು ಕೋಟಿ ಖರ್ಚಿನ ಹೊಸ ಹೊಸ ಯೋಜನೆಗಳ ಕನಸು ಬಿತ್ತುವ ಕೆಲಸ ಸಾಗಿದೆ. ಗುಡ್ಡದೆತ್ತರದಲ್ಲಿ ವಿಸ್ತರಿಸಿದ ಬಡಾವಣೆಗಳು ಸಾವಿರಾರು ಅಡಿ ಆಳದ ಕೊಳವೆಬಾವಿಯ ಪೈಪೋಟಿಗೆ ಇಳಿದು ಅಳಿದುಳಿದ ತೆರೆದಬಾವಿಗಳು ಬತ್ತುತ್ತಿವೆ. ದಿನಕ್ಕೆ 800-1000 ಲೀಟರ್ ನೀರು ಬಳಸುವ ಪ್ರತಿ ಕುಟುಂಬಗಳು ಶೇ. 50-60ರಷ್ಟು ತ್ಯಾಜ್ಯನೀರನ್ನು ಚರಂಡಿಗೆ ಹರಿಯ ಬಿಟ್ಟಿವೆ. ಇವುಗಳ ಜೊತೆಗೆ ಕೈಗಾರಿಕೆ ತ್ಯಾಜ್ಯಗಳೆಲ್ಲ ಸೇರಿ ರಾಜ್ಯದ ನದಿಗಳ ನೀರು ಕಳೆದ ಆರು ವರ್ಷಗಳ ಹಿಂದೆಯೇ ಕುಡಿಯಲು ಅಯೋಗ್ಯವೆಂದು ವರದಿಗಳು ಎಚ್ಚರಿಸಿವೆ.

ಜಲ ಸತ್ಯ ಅರಿಯದ ಯೋಜನೆಗಳು

ಸಿಲಿಕಾನ್ ಸಿಟಿ, ಉದ್ಯಾನ ನಗರಿ, ಭತ್ತದ ಕಣಜ, ಸಕ್ಕರೆ ನಗರ, ಉಕ್ಕಿನ ನಗರ, ಕುಂದಾ ನಗರಿ, ಬೆಣ್ಣೆ ನಗರಿಯಷ್ಟೇ ಅಲ್ಲ, ನದಿ ನಾಡಿನ ಕರಾವಳಿಯೂ ಜಲಕ್ಷಾಮಕ್ಕೆ ತುತ್ತಾಗುತ್ತಿದೆ. ಶೈಕ್ಷಣಿಕ, ಸಾಂಸ್ಕೃತಿಕ, ಕೃಷಿ ಸೇರಿದಂತೆ ಎಲ್ಲ ಸಾಧನೆಗಳ ಹಿಂದೆ ನೀರಿನ ಕೊಡುಗೆಯಿದೆ. ಹನಿ ನೀರಿನ ನಡೆ ಮರೆತು ಮೆರೆದಿದ್ದೇವೆ. ಅಣೆಕಟ್ಟು ಕಟ್ಟುವ ವಿಸ್ತೃತ ಯೋಜನೆ ಮಾಡುವಾಗ ನೀರಿನ ಮೂಲ, ಲಭ್ಯತೆ, ಬೇಡಿಕೆಯ ಲೆಕ್ಕ ನಡೆಯುತ್ತದೆ. ಎಂಜಿನಿಯರ್‌ಗಳು ಸೋತರೋ? ಚುನಾವಣೆ ತಂತ್ರದ ರಾಜಕೀಯದವರ ಆಟಕ್ಕೆ ತಲೆ ಕೊಟ್ಟರೋ ಗೊತ್ತಿಲ್ಲ. ಎತ್ತಿನಹೊಳೆಯ ಖಾಲಿ ಪೈಪ್ ಯೋಜನೆಯಂತೆ ಜಿಲ್ಲೆ ಜಿಲ್ಲೆಗಳಲ್ಲಿ, ಹೋಬಳಿ ಮಟ್ಟದಲ್ಲೂ ಇದೇ ಮಾದರಿಯ ವಿಫಲತೆಯ ಪ್ರಹಸನಕ್ಕೆ ಹಣ ನೀರಾಗಿದೆ. ಸರ್ಕಾರದ ಹಣ ವಿನಿಯೋಗಿಸಿ ಕೆರೆ ತುಂಬಿಸುವ ಕಾರ್ಯಕ್ರಮ, ಏತ ನೀರಾವರಿ, ಕಿಂಡಿ ತಡೆ ಅಣೆಕಟ್ಟುಗಳ ನಾಲ್ಕು ದಶಕಗಳ ಯೋಜನೆಗಳ ಸರಿ–ತಪ್ಪುಗಳ ಮೌಲ್ಯಮಾಪನ ನಡೆದಿದ್ದರೆ ಪಾಠ ಕಲಿಯಬಹುದಿತ್ತು.




ಕಲೆ: ಯೋಗಾನಂದ ಎಲ್.

ಸಾವಿರಾರು ಕೋಟಿ ವಿನಿಯೋಗಿಸುವ ಸರ್ಕಾರಕ್ಕೆ ಸೂಕ್ತ ಜಲ ಯೋಜಕರಿಲ್ಲದ ಸಂಕಟ ಕಾಡುತ್ತದೆ. ಜನಕ್ಕೆ ಜಲಸತ್ಯ ಹೇಳುವ ಧೈರ್ಯವಿಲ್ಲದ ನೇತಾರರಿಂದ ಶಾಶ್ವತ ನೀರಾವರಿಯೆಂಬ ಕಾಂಕ್ರೀಟ್ ಸ್ಮಾರಕಗಳ ಅನಾವರಣವಾಗಿ ಯೋಜನೆಗಳು ಹಳ್ಳ ಹಿಡಿದಿವೆ. ನೀರಿಲ್ಲದ ಹಳ್ಳಕ್ಕೆ ಒಡ್ಡು ಹಾಕುವುದು, ಕೆರೆ ತುಂಬಿಸುವ ಭಾಷಣ ಬಿಗಿದು ಭೂಮಿಗೆ ಪೈಪ್ ಹೂಳುವ ನಾಟಕಗಳಲ್ಲಿ ರಾಜ್ಯದ ಸರ್ವಪಕ್ಷಗಳ ಕೊಡುಗೆ ದೊಡ್ಡದಿದೆ. ಇದರಿಂದ ಜಲ ದುಃಖ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ.

ಹವಾಮಾನ ಬದಲಾಗಿದೆ, ಮಳೆ ವ್ಯತ್ಯಾಸವಾಗಿದೆ. ಒಂದು ಚದರ ಮೀಟರ್ ಜಾಗದಲ್ಲಿ ಒಂದು ಮಿಲಿ ಮೀಟರ್ ಮಳೆಯಾದರೆ ಒಂದು ಲೀಟರ್ ನೀರು ಸುರಿಯುತ್ತದೆ. ಕನಿಷ್ಠ 300 ಮಿಲಿ ಮೀಟರ್‌ನಿಂದ 6,000 ಮಿಲಿ ಮೀಟರ್ ಮಳೆ ಸುರಿಯುವ ನಮ್ಮ ರಾಜ್ಯದಲ್ಲಿ ವಿವಿಧ ವಲಯಗಳಲ್ಲಿ ಪರಿಸರಕ್ಕೆ ತಕ್ಕುದಾದ ಪಾರಂಪರಿಕ ವ್ಯವಸ್ಥೆಗಳಿವೆ. ಇವನ್ನು ನಂಬಿ ಶತಮಾನಗಳಿಂದ ಬದುಕು ಸಾಗಿದೆ. ವಾರ್ಷಿಕವಾಗಿ ಪ್ರತಿ ಎಕರೆಯಲ್ಲಿ ಸುರಿಯಬಹುದಾದ 15 ರಿಂದ 80 ಲಕ್ಷ ಲೀಟರ್ ನೀರಿನಲ್ಲಿ ಶೇಕಡ 15-20 ರಷ್ಟನ್ನಾದರೂ ಹಿಡಿಯಬಹುದಿತ್ತು. ಅಕಾಲಿಕ ಮಳೆಯನ್ನು ನೀರಿನ ಲಾಭವಾಗಿಸುವ ಅವಕಾಶವಿದೆ. ಸಂರಕ್ಷಣೆಯ ಸಣ್ಣ ಸಣ್ಣ ಮಾದರಿಗಳು ಮುಖ್ಯ. ಆದರೆ ಬಣ್ಣ ಹಚ್ಚಿದ ಭಾರೀ ಯೋಜನೆಗಳ ಹಿಂದೆ ಜಲ ಜಗದ ಓಟ ಸಾಗುತ್ತ ಪರಿಸ್ಥಿತಿ ಇಲ್ಲಿಗೆ ಬಂದಿದೆ.

ಕೆರೆ ಕಾಯಕ ಯಶಸ್ಸಿನ ಪಾಠ

ಎರೆಭೂಮಿಯಲ್ಲಿ ಹೂಳು ತಡೆಗೆ ಸೂಕ್ತ ತಂತ್ರ ಅಳವಡಿಸಿ ಕೆರೆ ನಿರ್ಮಿಸಬಹುದು. ಒಮ್ಮೆ ಈ ಕೆರೆ ಭರ್ತಿಯಾದರೆ ಮೂರು ವರ್ಷಗಳ ಕಾಲ ನೀರಿರುವ ಸಾಕ್ಷಿಗಳು ಗದಗ, ಕೊಪ್ಪಳ, ರಾಯಚೂರು ಮುಂತಾದೆಡೆಗಳಲ್ಲಿವೆ. ಹಾಸನದಿಂದ ಹಾವೇರಿಯ ಶಿಗ್ಗಾವಿ ತನಕದ ಅರೆಮಲೆನಾಡಿನ ಸೆರಗಿನಲ್ಲಿ ಆಗಸ್ಟ್ ಮಳೆಯಲ್ಲಿ ಕೆರೆ ತುಂಬಿ ವರ್ಷದ ಅನ್ನವಾಗುವ ಸೋಜಿಗವಿದೆ. ಕೃಷಿ ಹೊಂಡದಲ್ಲಿ ಗೆದ್ದ ರಾಯಚೂರಿನ ಸಿಂಗಡದಿನ್ನಿಯಂಥ ಹಳ್ಳಿಗಳಿವೆ. ತೆರೆದಬಾವಿಯಲ್ಲಿ ಕೃಷಿ ಗೆಲ್ಲಿಸಿದ ಬೀದರ್ ಜಿಲ್ಲೆಯ ಬಸವಕಲ್ಯಾಣ, ಹುಮನಾಬಾದ್ ಪ್ರದೇಶಗಳಿವೆ. ಮಲೆನಾಡಿನ ಗುಡ್ಡದಲ್ಲಿ ನೀರಿಂಗಿಸಿ ನೀರ ನೆಮ್ಮದಿ ಹುಡುಕಿದ ಮಾರ್ಗವಿದೆ.

> ವಿಕೇಂದ್ರೀಕೃತ ನೀರಾವರಿಯ ಅತ್ಯುತ್ತಮ ಮಾದರಿಯಾಗಿದ್ದ ನಮ್ಮ ಕರ್ನಾಟಕ ಈಗ ಆಳದ ಕೊಳವೆಬಾವಿಗೆ ಬಿದ್ದಿದೆ. ಕಾಡು,ನದಿ,ಕೆರೆಗಳನ್ನು ಕಳೆದುಕೊಳ್ಳುತ್ತ ಸುರಿವ ಮಳೆ ಹನಿಯನ್ನು ಪ್ರವಾಹವಾಗಿಸಿದೆ. ಯೋಜನೆಗಳ ಸೋಲಿನಲ್ಲಿ ಗೆಲ್ಲುವ ದಾರಿ ಹುಡುಕುವ ಕಾಳಜಿಯಿಲ್ಲದೇ ಆಡಳಿತದ ನೀರಿನ ಮಾತುಗಳು ಸೋತಿವೆ.

ಹೊಲಕ್ಕೆ ಬದು ನಿರ್ಮಿಸಿ, ಮರ ಬೆಳೆಸಿ ಬಿಸಿಗಾಳಿಯ ಹೊಡೆತ ತಪ್ಪಿಸಿ ಮಣ್ಣಿನ ತೇವ ಉಳಿಸಿದ್ದಕ್ಕೆ ಕಾರೆಕಂಟಿ ಬೆಳೆಯುವ ಹೊಲದಲ್ಲಿ ತೋಟ ಗೆದ್ದ ನಿದರ್ಶನ ತಿಪಟೂರಿನಲ್ಲಿದೆ. ಸಮುದಾಯ ಜಾಗೃತಿಯಲ್ಲಿ ಕೆರೆ ಹೂಳು ತೆಗೆದು ಅಂತರ್ಜಲ ಹೆಚ್ಚಿಸಿದ ಸಂಘ ಸಂಸ್ಥೆಗಳು, ವ್ಯಕ್ತಿಗಳು, ಮಠಮಾನ್ಯರು, ಜನಪ್ರತಿನಿಧಿಗಳು, ರೈತರ ಯಶೋಗಾಥೆಗಳಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಕಳೆದ ಎಂಟು ವರ್ಷಗಳಲ್ಲಿ ವಿವಿಧ ಭಾಗದಲ್ಲಿ 730 ಕೆರೆಗಳ ಹೂಳು ತೆಗೆಸಿದೆ. ಇವುಗಳಲ್ಲಿ 351 ಕೆರೆಗಳಲ್ಲಿ ಈ ಬರದಲ್ಲಿಯೂ ನೀರಿದೆ! ಸರ್ಕಾರಕ್ಕೆ ನೀರಿನ ಸಮಸ್ಯೆ ಪರಿಹರಿಸುವ ಕಳಕಳಿಯಿದ್ದರೆ ಇಷ್ಟು ಸಾಕಲ್ಲವೇ?

ರಾಜ್ಯದಲ್ಲಿ 39,173 ಕೆರೆಗಳಿವೆ. ನಿಶ್ಚಿತ ಜಲನಿಧಿಗಳಾದ ಇವುಗಳ ಬಗ್ಗೆ ಗಮನ ಏನೇನೂ ಸಾಲದು. ಕೆಂಪೇಗೌಡರ ಕೆರೆಗಳ ನಗರ ಬೆಂಗಳೂರಲ್ಲಿ ಕೆರೆ ಕಳೆಯುವ ಆಟ ಊರಿಗೇ ಮಾದರಿ! ಇಲ್ಲಿ ಸುರಿದ 40-50 ಟಿ.ಎಂ.ಸಿ ಮಳೆ ನೀರು ಛಾವಣಿ, ಗಟಾರ, ರಾಜಕಾಲುವೆ, ಹೆದ್ದಾರಿ ಹಿಡಿದು ಜಲಪ್ರಳಯವೆಂಬ ಟೀಕೆ ಹೊತ್ತು ಮಾಯವಾಗುತ್ತಿದೆ. 1973 ರಲ್ಲಿ ಬೆಂಗಳೂರಿನ ಒಟ್ಟೂ ಭೂಮಿಯ ಶೇಕಡ 8 ರಷ್ಟು ಜಾಗದಲ್ಲಿ ಮಾತ್ರ ಮನೆಗಳಿದ್ದವು. ಈಗ ಶೇಕಡ 77 ಭಾಗ ಮನೆ ಭರ್ತಿಯಾಗಿ ಕಾಂಕ್ರೀಟ್ ಮಯವಾಗಿ ನೀರು ಇಂಗುತ್ತಿಲ್ಲ. 40 ವರ್ಷಗಳ ಹಿಂದೆ 5 ಸಾವಿರ ಕೊಳವೆಬಾವಿಗಳ ಈ ಪ್ರದೇಶ ಈಗ 5 ಲಕ್ಷ ಬಾವಿಗಳಾಗಿ ಭೂಗತ ಪೊಳ್ಳಾಗಿದೆ. ಮುಂದಿನ ಹತ್ತು ವರ್ಷಕ್ಕೆ 3 ಕೋಟಿ ಜನ ಈ ನಗರದಲ್ಲಿರಬೇಕಂತೆ! ಈಗಲೇ ನೀರಿಲ್ಲ. ಲಭ್ಯ ಮಾಹಿತಿಯಂತೆ ರಾಜ್ಯದಲ್ಲಿ 45 ಲಕ್ಷಕ್ಕೂ ಹೆಚ್ಚು ಕೊಳವೆಬಾವಿಗಳಿವೆಯಂತೆ! ದಶಕದೀಚೆಗೆ ಇಡೀ ರಾಜ್ಯವೇ ಕೊಳವೆಬಾವಿಗೆ ಬಿದ್ದಿದೆ. ನೀರಿನ ಕುರಿತ ನೀತಿ ಸಂಹಿತೆ ಏನಾದರೂ ಜನ ಮನದಲ್ಲಿ ಇದೆಯೇ? ಕೆರೆಯಲ್ಲಿ ನೀರು ನಿಂತರೆ ಸುತ್ತಲಿನ ಬಾವಿ, ಕೊಳವೆಬಾವಿಗಳಲ್ಲಿ ನೀರು ದೊರೆಯುತ್ತದೆ. ದನ-ಕರು ವನ್ಯ ಸಂಕುಲಕ್ಕೆ ಅನುಕೂಲವಾಗುತ್ತದೆ. ಕೆರೆ ಹೂಳು ತೆಗೆಯಲು ಎಷ್ಟು ಹಣ ಬೇಕೆಂದು ಕಾಯಕ ಮಾಡಿದ ನಮಗೆ ಗೊತ್ತಿದೆ. ಹೂಳು ತೆಗೆಯುವ ಪ್ರದರ್ಶನಕ್ಕೆ ಕೋಟಿ ಕೋಟಿ ಹಣ ಹೊಡೆಯುವ ಸರ್ಕಾರದ ವರ್ತನೆ ನಿಲ್ಲುವುದು ಯಾವಾಗೆಂಬ ಪ್ರಶ್ನೆ.

ಮಾತು ಸೋತಿದೆ, ಕಾಯಕ ಬೇಕಿದೆ

ರಾಜ್ಯದ ಪ್ರಮುಖ ಏಳು ನದಿಗಳಲ್ಲಿ 3472.5 ಟಿ.ಎಂ.ಸಿ ನೀರಿದೆ. ಇವುಗಳಲ್ಲಿ ಶೇಕಡ 50 ರಷ್ಟು ಈಗಾಗಲೇ ಬಳಕೆಯಾಗುತ್ತಿದೆ. ರಾಜ್ಯದ ಭೂಮಿಯ 70ರಷ್ಟು ಪ್ರದೇಶ 750 ಮಿಲಿ ಮೀಟರ್‌ಗಿಂತ ಕಡಿಮೆ ಮಳೆ ಸುರಿಯುವ ನೆಲೆಯಾಗಿದೆ. ಎಷ್ಟೇ ಪ್ರಯತ್ನ ಮಾಡಿದರೂ ಕೃಷಿಭೂಮಿಯ 60 ಭಾಗವನ್ನು ನೀರಾವರಿಗೆ ಒಳಪಡಿಸಲು ಸಾಧ್ಯವಿಲ್ಲ. ಸತ್ಯ ಗೊತ್ತಿದ್ದರೂ ಸರ್ಕಾರ ಮಾತಾಡುವುದಿಲ್ಲ. 2050ರ ಹೊತ್ತಿಗೆ ನೀರಿನ ಬೇಡಿಕೆ ಇಂದಿಗಿಂತ ಶೇಕಡ 55 ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ. ಇನ್ನೊಂದೆಡೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಈಗಾಗಲೇ 2 ಲಕ್ಷ ಹೆಕ್ಟೇರಿಗೂ ಅಧಿಕ ಅರಣ್ಯ ಅತಿಕ್ರಮಣಕ್ಕೆ ಒಳಗಾಗಿದೆ.

12ನೇ ಪುಟಕ್ಕೆ...


ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಿದನೂರು ಗ್ರಾಮದಲ್ಲಿ ನೀರಿಗಾಗಿ ಹೀಗೆ ಸರತಿ ಸಾಲು ಸಾಮಾನ್ಯ

ಚಿತ್ರ: ತಾಜುದ್ದೀನ್ ಆಜಾದ್

ಹಲಗೆ ಮೇಳದ ವನಿತೆಯರು

ಸಂತೋಷ ಈ. ಚಿನಗುಡಿ

ಹಲಗೆ ಸದ್ದು ಕಿವಿಗೆ ಬಿದ್ದರೆ ಸಾಕು; ಊರಲ್ಲಿ ಯಾರೋ ಸತ್ತಿದ್ದಾರೆ ಎಂದೇ ಅರ್ಥ. ಅಷ್ಟರಮಟ್ಟಿಗೆ ಇದು ಅಮಂಗಳಕರ ವಾದನ ಎಂದು ನಿರ್ಧರಿಸಿದ್ದು ಸಂಪ್ರದಾಯ. ಅಂಥ ಹಲಗೆಗೂ 'ಮಂಗಳ ನಾದ'ದ ಭಾವನೆ, ಭಾವುಕತೆ ತಂದುಕೊಟ್ಟವರು ವನಿತೆಯರು. ಹತ್ತು ವರ್ಷಗಳ ಹಿಂದೆ 'ಮಹೇಶ್ವರಿ ಹಲಗೆ ಮೇಳ' ಕಟ್ಟಿಕೊಂಡು, ಊರೂರು ಸುತ್ತಿ ಹಲವು ಅಡೆತಡೆಗಳ ವಿರುದ್ಧ ಈಜಿದವರು. ಹಲಗೆಗೂ, ತಮ್ಮ ಬದುಕಿಗೂ ಹೊಸ ಹುಟ್ಟು ತಂದವರು.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರಕುಂಟ ಎಂಬ ಗ್ರಾಮದಲ್ಲಿ ಹತ್ತು ಮಹಿಳೆಯರು ಇಟ್ಟ ದಿಟ್ಟ ಹೆಜ್ಜೆ ಈಗ ಯಶೋಗಾಥೆಯಾಗಿದೆ. ಈ ಸಾಧನೆಯ ಹಿಂದಿನ ರೂವಾರಿ; ಅದೇ ಊರಿನ ಶಿಕ್ಷಕಿ ಅಕ್ಕನಾಗಮ್ಮ. ತಾವೇ ಮುಂದಾಗಿ ಹಲಗೆ ವಾದನ ಕಲಿತು, ನಂತರ ಎಲ್ಲರಿಗೂ ಕಲಿಸಿದ್ದಾರೆ.

ಕುರಕುಂಟದಲ್ಲಿ ಪರಿಶಿಷ್ಟ ಸಮುದಾಯದ ಹಲವು ಪುರುಷರು ಹಲಗೆ ಬಾರಿಸಿಯೇ ಜೀವನ ಸಾಗಿಸುತ್ತಿದ್ದರು. ಅವರು ಕೆಲಸವಿಲ್ಲದೇ ಅಲೆಯುತ್ತಿದ್ದಾಗ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದವು. ತುತ್ತಿನ ಚೀಲ ತುಂಬಿಸಿಕೊಳ್ಳಲು, ಮಕ್ಕಳಿಗೆ ಅಕ್ಷರ ಕಲಿಸಲು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಆಗಲೇ ಈ ತಾಯಂದಿರು ಹಲಗೆ ಹೆಗಲೇರಿಸಿಕೊಂಡರು.

ಪುರುಷರು ಮಾತ್ರ ಹಲಗೆ ಬಡಿಯುವ ರೂಢಿ ಹಿಂದಿನಿಂದಲೂ ಇದೆ. ಹೆಣ್ಣುಮಕ್ಕಳು ಹಲಗೆ ಹಿಡಿದಾಗ ಮನೆಯವರು, ಊರಿನವರು ವಿರೋಧ ಮಾಡಿದರು. ಆದರೂ ಹಲಗೆ ನಾದದ ಗುಂಗಿನಲ್ಲಿ ಮಿಂದಿದ್ದ ಈ ಗಟ್ಟಿಗಿತ್ತಿಯರು; ತಮ್ಮಲ್ಲಿ ಕೀಳರಿಮೆ ಮೂಡಲು ಬಿಡಲಿಲ್ಲ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಾತ್ರೆ, ಉತ್ಸವ, ಹಬ್ಬ, ಪೂಜೆ, ಜಯಂತಿ ಹೀಗೆ ಎಲ್ಲ ಕಾರ್ಯಗಳಲ್ಲೂ ಇವರ ಹಲಗೆಗಳು ಸದ್ದು ಮಾಡುತ್ತಿವೆ. ಮಂಗಳಕರ ನಾದ ಜನರಲ್ಲಿ ಚುಂಬಕಶಕ್ತಿ ಮೂಡಿಸುತ್ತಿದೆ. ಈಗ ಸ್ಥಳೀಯ ಕಾರ್ಯಕ್ರಮಗಳಿಗೆ ₹10 ಸಾವಿರ, ಬೇರೂರಿನ ಹಾಗೂ ಸರ್ಕಾರದ ಕಾರ್ಯಕ್ರಮಗಳಿಗೆ ₹20 ಸಾವಿರ ಕಲಾಧನ ಪಡೆಯುತ್ತಿದೆ ಈ ತಂಡ.

ದುರ್ಗಮ್ಮ ಈರಪ್ಪ, ಕೃಷ್ಣಮ್ಮ ದೊಡ್ಡಬಲರಾಮ ಮಟ್ಟಿ, ನರಸಮ್ಮ ಸಣ್ಣಬಲರಾಮ ಮಟ್ಟಿ, ನಾಗಮ್ಮ ದ್ಯಾವಪ್ಪ ಮುದೆಳ್ಳಿ, ನರಸಮ್ಮ ಲಕ್ಷ್ಮಪ್ಪ ಟೈಗರ್, ಸೈದಮ್ಮ ಕೃಷ್ಣಪ್ಪ ಹಲಗಿ, ನರಸಮ್ಮ ತಿಪ್ಪಣ್ಣ ಮೇಟಿ, ಮರೆಮ್ಮ ಬಲರಾಮ ಐದಮನಿ, ರುಕ್ಮಿಣಿ ಶಾಂತಪ್ಪ ಸಿಂಗನೂರ ಹಲಗೆ ಕಲಾವಿದರಾಗಿ ರೂಪುಗೊಂಡವರು.

11ನೇ ಪುಟಕ್ಕೆ...


ಮಹಿಳೆಯರ ಮೊಗದಲ್ಲಿ ನಗು ತಂದ ಹಲಗೆ ನಾದ... ಚಿತ್ರಗಳು: ತಾಜುದ್ದೀನ್ ಆಜಾದ್


ನಾದದ ಗುಂಗಿನಲ್ಲಿ ನಾಗಮ್ಮ ದ್ಯಾವಪ್ಪ ಮುದೆಳ್ಳಿ

ತಿರಸ್ಕಾರದ ನೆಲದಲ್ಲೇ ಪುರಸ್ಕಾರ

ಬಾಲಚಂದ್ರ ಎಚ್.

ಭಿಕ್ಷಾಟನೆ, ಲೈಂಗಿಕ ವೃತ್ತಿಯ ಹೊರತಾಗಿ ಲಿಂಗತ್ವ ಅಲ್ಪಸಂಖ್ಯಾತರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಗೆ ಉತ್ತರವಾಗಿ ನಿಲ್ಲುತ್ತಾರೆ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಪೇತ್ರಿಯ ಕಾವೇರಿ ಮೇರಿ ಡಿಸೋಜಾ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಬೀದಿಗಳಲ್ಲಿ ಭಿಕ್ಷಾಟನೆ ಮಾಡುತ್ತ, ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ಕಾವೇರಿ, ಈಗ ರಾಜ್ಯದ ಮೊದಲ ಲಿಂಗತ್ವ ಅಲ್ಪಸಂಖ್ಯಾತ ಆಟೊ ಚಾಲಕಿ ಎಂಬ ಹೆಗ್ಗಳಿಕೆ ಪಡೆದುಕೊಂಡಿದ್ದಾರೆ.

ಕಾವೇರಿಯ ಈ ಸಾಧನೆಯ ಹಾದಿಯಲ್ಲಿ ಅವಮಾನ, ತಿರಸ್ಕಾರ, ಅಪಾರ ನೋವು ಇತ್ತು. ಸ್ವಾಭಿಮಾನದ ಬದುಕಿಗಾಗಿ ನಿರಂತರ ಎರಡು ದಶಕಗಳು ನಡೆಸಿದ ಹೋರಾಟ ಇದೆ. ಜೀವನದುದ್ದಕ್ಕೂ ಎದುರಾದ ಸಂಕಷ್ಟ, ಸವಾಲುಗಳನ್ನೆಲ್ಲ ಮೆಟ್ಟಿನಿಂತು ಮೇಲೆದ್ದು ಬಂದಿರುವ ಕಾವೇರಿ, ಅಂದು ತಿರಸ್ಕಾರಕ್ಕೊಳಗಾದ ನೆಲದಲ್ಲಿಯೇ ಪುರಸ್ಕಾರಕ್ಕೊಳಗಾಗುತ್ತಿದ್ದಾರೆ.

ಸಮಾಜಕ್ಕೆ ಹೆದರಿ ಮನೆಬಿಟ್ಟಿದ್ದ ಕಾವೇರಿ, ನಿಂದಿಸಿದ ಜನರಿಂದಲೇ ಪ್ರೀತಿ, ಗೌರವ ಸಂಪಾದಿಸಿ ಮಾದರಿ ಬದುಕು ರೂಪಿಸಿಕೊಂಡಿದ್ದಾರೆ. ಒಂದು ವರ್ಷದಿಂದ ಆಟೊ ರಿಕ್ಷಾ ಚಾಲಕಿಯಾಗಿ ದುಡಿಯುತ್ತಿದ್ದು, ಪುರುಷ ಚಾಲಕರನ್ನೂ ಮೀರಿಸುವಂತೆ 5 ಸಾವಿರಕ್ಕೂ ಹೆಚ್ಚು ಟ್ರಿಪ್ ಬಾಡಿಗೆ ಮಾಡಿದ್ದಾರೆ. ಅವರ ಆತ್ಮವಿಶ್ವಾಸದ 'ಬಂಡಿ' ದಿನ ಕಳೆದಂತೆ ವೇಗ ಹೆಚ್ಚಿಸಿಕೊಂಡು ಸಾಗುತ್ತಿದೆ.

ಭಿಕ್ಷಾಟನೆ, ಲೈಂಗಿಕ ವೃತ್ತಿ ಬಿಟ್ಟು ಹೊಸ ಬದುಕು ಕಟ್ಟಿಕೊಳ್ಳಲು ಮುಂದಾದಾಗ ಎದುರಾದ ಸವಾಲುಗಳು ಹಲವು. ಖಾಕಿ ಸಮವಸ್ತ್ರ ಧರಿಸಿ ಆಟೊ ಓಡಿಸುವುದಾಗಿ ಹೇಳಿದಾಗ ಮೊದಲು ಎದುರಾಗಿದ್ದು ಅವಮಾನ, ಅಪಹಾಸ್ಯ ಮಾತ್ರ. 'ಇವಳಿಂದ ಸಾಧ್ಯವೇ?' ಎಂಬ ಕೊಂಕುಮಾತುಗಳನ್ನು ಆಡಿದವರೇ ಹೆಚ್ಚು. ಸಂಬಂಧಿಗಳ, ನೆರೆಹೊರೆಯವರ ಟೀಕೆಟಿಪ್ಪಣಿಗಳನ್ನೆಲ್ಲ ಬದಿಗಿಟ್ಟು ದೃಢ ಮನಸ್ಸಿನಿಂದ ಆಟೊ ಖರೀದಿಸಿದಾಗಲೂ ಆರಂಭದಲ್ಲಿ ಕಾಡಿದ್ದು ನಿರಾಶೆ ಮತ್ತು ಸೋಲು.

'ಲಿಂಗತ್ವ ಅಲ್ಪಸಂಖ್ಯಾತೆ' ಎಂಬ ಕಾರಣಕ್ಕೆ ಮೊದಲು ಆಟೊ ಹತ್ತಲು ಬಹಳಷ್ಟು ಜನರು ಹಿಂದೇಟು ಹಾಕಿದರು.

13ನೇ ಪುಟಕ್ಕೆ...



> “ಅಡ್ಡದಾರಿ ಬಿಟ್ಟು ಸರಿದಾರಿಯಲ್ಲಿ ಸಾಗಿದಾಗ ಸಮಾಜ ಕೂಡ ಬೆನ್ನಿಗೆ ನಿಲ್ಲುತ್ತದೆ ಎಂಬುದಕ್ಕೆ ನಾನೇ ನಿದರ್ಶನ”
>
> **ಕಾವೇರಿ ಮೇರಿ ಡಿಸೋಜಾ** ಲಿಂಗತ್ವ ಅಲ್ಪಸಂಖ್ಯಾತ ಆಟೊ ಚಾಲಕಿ

ಸ್ಟ್ಯಾನಿ ಕಾವೇರಿಯಾಗಿದ್ದು...

24 ವರ್ಷಗಳ ಹಿಂದೆ ಈಗಿನ ಕಾವೇರಿ ಮೇರಿ ಡಿಸೋಜಾ, ಸ್ಟ್ಯಾನಿ ಡಿಸೋಜಾ ಆಗಿ ಊರಿನವರಿಗೆ ಪರಿಚಿತ. ಪ್ರೌಢಾವಸ್ಥೆಯಲ್ಲಿ ದೇಹದಲ್ಲಾದ ಬದಲಾವಣೆಯಿಂದ ಯುವಕನೊಬ್ಬ ಯುವತಿಯಾಗಿ ಬದಲಾದಾಗ ಕುಟುಂಬ ಹಾಗೂ ಸಮಾಜದ ಮುಂದೆ ಧೈರ್ಯವಾಗಿ ಹೇಳಿಕೊಳ್ಳಲಾಗದೆ ಮನೆಬಿಟ್ಟು ಮೈಸೂರು ಸೇರಿದರು. ಬಸ್ ನಿಲ್ದಾಣಗಳಲ್ಲಿ ಮಲಗಿ, ಮದುವೆ ಸಮಾರಂಭಗಳಲ್ಲಿ ಊಟ ಮಾಡಿ ಆರಂಭದ ದಿನ ಕಳೆದಿದ್ದರು. ಲಿಂಗತ್ವ ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗೆ ದುಡಿಯುತ್ತಿರುವ 'ಗೆಳೆಯ' ಎಂಬ ಎನ್‌ಜಿಒ ಸಂಪರ್ಕಕ್ಕೆ ಸಿಕ್ಕು ಸಣ್ಣ ಉದ್ಯೋಗ ಪಡೆದುಕೊಂಡರು. ಬಳಿಕ ಬೆಂಗಳೂರು ಸೇರಿದ ಸ್ಟ್ಯಾನಿ, ಕಾವೇರಿ ಮೇರಿ ಡಿಸೋಜಾ ಆಗಿ ಬದಲಾದರು.

ಅನಿವಾರ್ಯ ಪರಿಸ್ಥಿತಿಗೆ ಸಿಲುಕಿ ಭಿಕ್ಷಾಟನೆ, ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡು ಹೊರಬರಲು ಒದ್ದಾಡುತ್ತಿದ್ದ ಕಾವೇರಿಗೆ ಪರಿಚಿತರೊಬ್ಬರಿಂದ 'ಡಿ' ಗ್ರೂಪ್ ನೌಕರಿ ದೊರೆಯಿತು. ಜೀವನ ಸರಿದಾರಿಗೆ ಬರುತ್ತಿರುವಾಗಲೇ ಟಿ.ಬಿ (ಕ್ಷಯ) ಕಾಯಿಲೆಯಿಂದಾಗಿ ಕೆಲಸ ತೊರೆದು ತವರು ಸೇರಿದರು. ಲಿಂಗತ್ವ ಅಲ್ಪಸಂಖ್ಯಾತರು ಎಂಬ ಹಣೆಪಟ್ಟೆಯೊಂದಿಗೆ ಕ್ಷಯವೂ ಅಂಟಿಕೊಂಡಿದ್ದರಿಂದ ಸ್ನೇಹಿತರು, ಹಿತೈಷಿಗಳು, ರಕ್ತ ಸಂಬಂಧಿಗಳು, ನೆರೆಹೊರೆಯವರು ದೂರವಾದರು. ಕಷ್ಟದ ದಿನಗಳಲ್ಲಿ ತಾಯಿ ಮಾತ್ರ ಗಟ್ಟಿಯಾಗಿ ನಿಂತರು. ಯಾವ ಹಂತದಲ್ಲೂ ಜೀವನೋತ್ಸಾಹ ಕಳೆದುಕೊಳ್ಳದ ಕಾವೇರಿ ಕ್ಷಯದಿಂದ ಗುಣಮುಖವಾಗಿ ಮತ್ತೆ ಬದುಕು ಕಟ್ಟಿಕೊಳ್ಳಲು ಹೋರಾಟ ಮಾಡಬೇಕಾಯಿತು.

ಗಾರ್ಮೆಂಟ್ ಸೇರಿದರು, ಜಾತ್ರೆ, ಧಾರ್ಮಿಕ ಉತ್ಸವಗಳಲ್ಲಿ ಚುರುಮುರಿ, ಐಸ್‌ಕ್ಯಾಂಡಿ ಮಾರಿದರು. ಸಣ್ಣದೊಂದು ಕಿರಾಣಿ ಅಂಗಡಿ ತೆರೆದರು. ತಿಂಗಳು ಕಳೆಯುವಷ್ಟರಲ್ಲಿ ಕೋವಿಡ್ ಲಾಕ್‌ಡೌನ್‌ನಿಂದ ಅಂಗಡಿ ಮುಚ್ಚಬೇಕಾಯಿತು. ಕೊನೆಗೆ ಆಟೊರಿಕ್ಷಾ ಕೈಹಿಡಿಯಿತು. ಇದೀಗ ಅವರ ಬದುಕಿನ ಬಂಡಿ ಸರಿದಾರಿಯಲ್ಲಿ ಸಾಗುತ್ತಿದೆ.

ಗಡಿನಾಡಿನ ಕಿರು ಗಿರಿಧಾಮ ಪೊಸಡಿ ಗುಂಪೆ



ಪೊಸಡಿ ಗುಂಪೆಯ ಮೇಲೆ ತುಂತುರು ಮಳೆಯ ಸಿಂಚನ

ಎನ್‌ಕೆಜಿ

ದೂರದಿಂದ ನುಣ್ಣಗೆ ಕಾಣುವ ಗುಡ್ಡಗಳು, ದಾರಿಯುದ್ದಕ್ಕೂ ಹಬ್ಬಿನಿಂತ ಕುರುಚಲು ಕಾಡು, ಗುಡ್ಡದ ತುದಿ ತಲುಪಿದಾಗ ಮಂಜು ಚುಂಬಿಸಿರುವ ಗಿರಿಶ್ರೇಣಿಗಳ ವಿಹಂಗಮ ನೋಟ, ದೂರದಲ್ಲಿ ಕಾಣುವ ಭೋರ್ಗರೆಯುವ ಅರಬ್ಬಿ ಸಮುದ್ರ...

ಇಂತಹ ಹೃನ್ಮನ ತಣಿಸುವ ದೃಶ್ಯಾನುಭವವನ್ನು ಆಸ್ವಾದಿಸಬೇಕಾದರೆ ಕೇರಳದ ಕಾಸರಗೋಡಿನ ಪೊಸಡಿ ಗುಂಪೆಗೆ ಒಮ್ಮೆ ಭೇಟಿ ನೀಡಲೇಬೇಕು.

ಮಂಗಳೂರಿನಿಂದ 48 ಕಿ.ಮೀ. ದೂರದಲ್ಲಿರುವ ಈ ಕಿರು ಗಿರಿಧಾಮವು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಹೊಂದದಿದ್ದರೂ ಸಾಮಾಜಿಕ ಮಾಧ್ಯಮಗಳಲ್ಲಿ ಈ ಕಿರು ಗಿರಿಧಾಮದ ಬಗೆಗಿನ ಮಾಹಿತಿ ಪಡೆದು ಬರುವವರ ಸಂಖ್ಯೆಯೇ ಹೆಚ್ಚು.

ತುಳು ಭಾಷೆಯಲ್ಲಿ 'ಪೊಸ' ಎಂದರೆ ಹೊಸತು, 'ಗುಂಪೆ' ಎಂದರೆ ಗುಡ್ಡ ಎಂದರ್ಥ. ಹೀಗೆ ಪೊಸಡಿ ಗುಂಪೆ ಪದ ರೂಪುಗೊಂಡಿದೆ. ಸಮುದ್ರಮಟ್ಟದಿಂದ ಅಂದಾಜು 1059 ಅಡಿ ಎತ್ತರದಲ್ಲಿರುವ ಮೂರು ಗುಡ್ಡಗಳು ಸೇರಿದಂತಿರುವ ಈ ಗಿರಿಧಾಮವು ಚಾರಣಪ್ರಿಯರಿಗೂ ಮುದ ನೀಡುವ ಸ್ಥಳ. ಚಾರಣ ತೆರಳುವವರು ನೀರು ಮತ್ತು ತಿನಿಸುಗಳನ್ನು ಮರೆಯದೇ ಕೊಂಡೊಯ್ಯಬೇಕು.

ಸೂರ್ಯೋದಯ ಮತ್ತು ಸೂರ್ಯಾಸ್ತವನ್ನು ವೀಕ್ಷಿಸಲು ಇಲ್ಲಿಗೆ ಬರುವವರ ಸಂಖ್ಯೆಯೇ ಜಾಸ್ತಿ. ಬೇಸಗೆಯಲ್ಲಿ ಬರುವವರು ಬೆಳಿಗ್ಗೆ ಅಥವಾ ಸಂಜೆ ಹೊತ್ತಿನಲ್ಲಿ ಬಂದರೆ ಉತ್ತಮ. ಇಲ್ಲದಿದ್ದರೆ ಬಿಸಿಲಿನ ಝಳಕ್ಕೆ ಬಸವಳಿಯಬೇಕಾದೀತು.

ಪೊಸಡಿ ಗುಂಪೆಯ ಒಂದು ಬದಿಯಲ್ಲಿ ರಸ್ತೆ ಹಾದುಹೋಗಿರುವುದರಿಂದ ವಾಹನದಲ್ಲಿ ತೆರಳಿ ಒಂದು ಕಿಲೊಮೀಟರ್ ಗುಡ್ಡ ಹತ್ತಿದ್ದರೆ ತುದಿಯನ್ನು ತಲುಪಬಹುದು. ನಡೆದು ಆಯಾಸವಾದರೂ ಗುಡ್ಡದ ಮೇಲಿನಿಂದ ಕಾಣುವ ರಮಣೀಯ ದೃಶ್ಯ ದಣಿವನ್ನು ಮರೆಸುತ್ತದೆ.

ಗುಡ್ಡದ ಮೇಲೆ ನಿಂತರೆ ದೂರದ ಮಂಗಳೂರು, ಕುದುರೆಮುಖ ಗಿರಿಶ್ರೇಣಿಗಳು, ಅರಬ್ಬಿ ಸಮುದ್ರವನ್ನು ಕಾಣಬಹುದು. ಮಳೆಗಾಲದಲ್ಲಿ ತುಂತುರು ಮಳೆಯ ನಡುವೆ ಇಲ್ಲಿಗೆ ತೆರಳಿದರೆ ಹಚ್ಚಹಸಿರಿನ ಹುಲ್ಲುಗಾವಲು ಜೊತೆಗೆ ಮೋಡಗಳು ದೂರದ ಶಿಖರಗಳನ್ನು ಚುಂಬಿಸುವ ಮನಮೋಹಕ ದೃಶ್ಯವನ್ನು ಕಣ್ತುಂಬಹುದು.


ಮಂಜೇಶ್ವರ ತಾಲ್ಲೂಕಿನ ಪೈವಳಿಕೆ ಪಂಚಾಯತ್ ವ್ಯಾಪ್ತಿಯಲ್ಲಿ ಪೊಸಡಿ ಗುಂಪೆಯ ಬಹುಭಾಗವು ನೆಲೆ ನಿಂತಿದೆ. ಇದು ಜೀವವೈವಿಧ್ಯಗಳ ತಾಣವೂ ಹೌದು.

> ಮಂಗಳೂರಿನಿಂದ 48 ಕಿ.ಮೀ. ದೂರದಲ್ಲಿರುವ ಕೇರಳದ ಕಾಸರಗೋಡಿನ 'ಪೊಸಡಿ ಗುಂಪೆ' ಗಿರಿಧಾಮವು ಹೃನ್ಮನ ತಣಿಸುವ ತಾಣವಾಗಿದೆ...

ಹೀಗೆ ಬನ್ನಿ : ಮಂಗಳೂರಿನಿಂದ ಕಾಸರಗೋಡಿಗೆ ತೆರಳುವ ಹೆದ್ದಾರಿಯಲ್ಲಿ ಬರುವ ಬಂದ್ಯೋಡ್‌ನಿಂದ 19 ಕಿಲೊಮೀಟರ್ ಒಳರಸ್ತೆಯಲ್ಲಿ ಸಾಗಿದರೆ ಧರ್ಮತ್ತಡ್ಕ ಸಿಗುತ್ತದೆ. ಅಲ್ಲಿಂದ ಪೊಸಡಿ ಗುಂಪೆಗೆ ತೆರಳಬಹುದು.

2003ರಲ್ಲಿ ತೆರೆಕಂಡಿದ್ದ ವಿನಯನ್ ನಿರ್ದೇಶನದ 'ವಾರ್ ಆ್ಯಂಡ್ ಲವ್' ಮಲಯಾಳ ಸಿನಿಮಾವು ಈ ಗುಡ್ಡದಲ್ಲಿ ಚಿತ್ರೀಕರಣಗೊಂಡಿದೆ. ಭಾರತ -ಪಾಕಿಸ್ತಾನ ಯುದ್ಧದ ಕಥಾಹಂದರವನ್ನು ಹೊಂದಿರುವ ಈ ಸಿನಿಮಾದಲ್ಲಿ ಬರುವ ಪಾಕಿಸ್ತಾನದ ಜೈಲಿನ ಸೆಟ್ ಅನ್ನು ಪೊಸಡಿ ಗುಂಪೆಯಲ್ಲಿ ಹಾಕಲಾಗಿತ್ತು.

ಬ್ರಿಟಿಷರಿಗೂ ನಂಟು: ಪೊಸಡಿ ಗುಂಪೆಯ ತುದಿಯಲ್ಲಿ ಬ್ರಿಟಿಷರು ಸ್ಥಾಪಿಸಿರುವ 'ಗ್ರೇಟ್ ಟ್ರಿಗ್ನಾಮೆಟ್ರಿಕ್ (ಜಿ.ಟಿ) ಸ್ಟೇಷನ್' ಇತಿಹಾಸದ ಕುರುಹಾಗಿ ಇಂದಿಗೂ ಕಾಣಸಿಗುತ್ತದೆ. ಬ್ರಿಟಿಷ್ ಸರ್ವೇಯರ್ ವಿಲಿಯಂ ಲ್ಯಾಂಬ್ಟನ್ 1802ರಲ್ಲಿ ಈ ಸುಂದರ ತಾಣದಲ್ಲಿ ಜಿ.ಟಿ ಸ್ಟೇಷನ್ ಸ್ಥಾಪಿಸಿದ್ದಾರೆ ಎನ್ನಲಾಗುತ್ತಿದೆ. ಶಿಖರಗಳ ಎತ್ತರವನ್ನು ಸಮೀಕ್ಷೆ ಮಾಡುವುದಕ್ಕಾಗಿ ಇದನ್ನು ಸ್ಥಾಪಿಸಲಾಗಿದೆ.



ದೂರದಿಂದ ಕಾಣುವ ಪೊಸಡಿ ಗುಂಪೆ. ಚಿತ್ರ: ಕೇರಳ ಪ್ರವಾಸೋದ್ಯಮ ಇಲಾಖೆ

ಏಕವ್ಯಕ್ತಿ ನಾಟಕದಲ್ಲಿ ಗೋಕುಲ ಸಂಭ್ರಮ

ನವೀನ್ ಕುಮಾರ್ ಜಿ.

ರಂಗದ ಮೇಲಿನ ಮಂದ ಬೆಳಕಿನಲ್ಲಿ ಪಾಪಣ್ಣಿಯ ಬೆರಗುಗಣ್ಣುಗಳ ನೋಟ. ಮಾನಸ ಗೆಳೆಯ ಕೆರೆ, ಚಿಟ್ಟೆಯೇ ಅವನ ಒಡನಾಡಿಗಳು. ಅವನ ಬದುಕಿನ ದುಃಖ, ದುಮ್ಮಾನಗಳಿಗೆ ಕಿವಿಯಾಗುವವರು ಇವರೇ... ತನ್ನದೇ ಜಗತ್ತಿನಲ್ಲಿ ಪ್ರೀತಿಯ ಹುಡುಕಾಟದಲ್ಲಿ ತೊಡಗುವ ಪಾಪಣ್ಣಿ ಎಂಬ ಬಾಲಕನ ಅಭದ್ರತೆಗಳಿಗೆ ಪ್ರಕೃತಿಯೇ ಉತ್ತರ ನೀಡುವ ಬಗೆಯನ್ನು 'ಚಿಟ್ಟೆ' ಎಂಬ ಏಕವ್ಯಕ್ತಿ ನಾಟಕವು ಪ್ರೇಕ್ಷಕರ ಮುಂದೆ ತೆರೆದಿಡುತ್ತದೆ.

ಪಾಪಣ್ಣಿಯ ಬೆರಗುಗಳಿಗೆ ಜೀವ ತುಂಬಿ ತನ್ನ ಮನೋಜ್ಞ ಅಭಿನಯದ ಮೂಲಕ ರಂಗಾಸಕ್ತರ ಮನಗೆಲ್ಲುತ್ತಾನೆ 14ರ ಬಾಲಕ ಗೋಕುಲ ಸಹೃದಯ. ಗೋಕುಲ ಅಭಿನಯಿಸಿರುವ 'ಚಿಟ್ಟೆ' ನಾಟಕವು ಈಗಾಗಲೇ 100 ಪ್ರದರ್ಶನಗಳನ್ನು ಕಂಡಿದೆ.

ಭಾರತ ರಂಗಭೂಮಿಯಲ್ಲಿಯೇ ಒಂದು ಗಂಟೆ ರಂಗದ ಮೇಲೆ ಏಕವ್ಯಕ್ತಿ ನಾಟಕ ಪ್ರದರ್ಶಿಸಿದ ಮೊದಲ ಬಾಲ ಕಲಾವಿದ ಎಂಬ ಹೆಗ್ಗಳಿಕೆಗೆ ಪಾತ್ರನಾಗಿರುವ ಗೋಕುಲ, ಈ ಸಾಧನೆಗಾಗಿ 'ಕಲಾಂ ಬುಕ್ ಆಫ್ ವರ್ಲ್ಡ್' ಹಾಗೂ 'ಇಂಡಿಯಾ ಬುಕ್ ಆಫ್ ರೆಕಾರ್ಡ್'ನಲ್ಲಿ ದಾಖಲಾಗಿದ್ದಾನೆ. ಈತ ಬೆಂಗಳೂರಿನ ಪ್ರೆಸಿಡೆನ್ಸಿ ಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದಾನೆ.

'ಗೋಕುಲ, ನಾಲ್ಕನೇ ವಯಸ್ಸಿನಿಂದಲೇ ರಂಗಾಸಕ್ತಿ ಬೆಳೆಸಿಕೊಂಡವ. ಬೇಸಿಗೆ ಶಿಬಿರದಿಂದ ಆರಂಭವಾದ ಅವನ ರಂಗದ ಜೊತೆಗಿನ ಒಡನಾಟ ದಿನೇ ದಿನೇ ಹೆಚ್ಚಾಗುತ್ತಿದೆ' ಎನ್ನುತ್ತಾರೆ ತಾಯಿ ಲಕ್ಷ್ಮಿ ರಘುನಂದನ್.

'ಚಿಟ್ಟೆ' ನಾಟಕವು ರಾಜ್ಯದಲ್ಲಿ ಮಾತ್ರವಲ್ಲದೆ ತಮಿಳುನಾಡು, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ ಮತ್ತು ಅಂಡಮಾನ್‌ನಲ್ಲೂ ಪ್ರದರ್ಶನಗೊಂಡು ಪ್ರೇಕ್ಷಕರನ್ನು ಮೋಡಿ ಮಾಡಿದೆ. ಗೋಕುಲನ ಮನೋಜ್ಞ ಅಭಿನಯಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಬೇಲೂರು ರಘುನಂದನ್ ಅವರ ರಚನೆಯಲ್ಲಿ ಮೂಡಿಬಂದಿರುವ 'ಚಿಟ್ಟೆ' ಏಕವ್ಯಕ್ತಿ ನಾಟಕವನ್ನು 'ಕಾಜಾಣ' ಸಂಸ್ಥೆಯು ಪ್ರಸ್ತುತ ಪಡಿಸಿದೆ. ಕೃಷ್ಣಮೂರ್ತಿ ಕವತ್ತಾರ್ ಅವರ ನಿರ್ದೇಶನದ ಈ ನಾಟಕವು ಅಕ್ಷರ, ಅನ್ನ, ಹಸಿವು, ಕಲೆ, ಕುಟುಂಬ ಮತ್ತು ಸಮಾಜ, ಶೈಕ್ಷಣಿಕ ವ್ಯವಸ್ಥೆ-ಹೀಗೆ ಬಹುಮುಖೀ ಆಯಾಮಕ್ಕೂ ಬೆಳಕು ಚೆಲ್ಲುತ್ತದೆ. ಮಕ್ಕಳ ಮನಸ್ಥಿತಿಯನ್ನು ಕೇಂದ್ರೀಕರಿಸಿ ಈ ನಾಟಕವು ರೂಪುಗೊಂಡಿದೆ.



ಚಿಟ್ಟೆ ನಾಟಕದಲ್ಲಿ ಗೋಕುಲ ಸಹೃದಯ

ಸಾಧನೆ

'ಚಿಟ್ಟೆ' ನಾಟಕವು ಮೂರೇ ವರ್ಷಕ್ಕೆ 100 ರಂಗ ಪ್ರದರ್ಶನಗಳನ್ನು ಕಂಡಿರುವುದು ಹೆಮ್ಮೆ ತಂದಿದೆ. ಅಪ್ಪ, ಅಮ್ಮ, ಶಾಲೆಯ ಶಿಕ್ಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಕೃಷ್ಣಮೂರ್ತಿ ಕವತ್ತಾರ್ ಅವರ ಶಿಸ್ತುಬದ್ಧ ಮಾರ್ಗದರ್ಶನದಲ್ಲಿ ಈ ನಾಟಕವು ಸಾಕಾರವಾಗಿದೆ' ಎನ್ನುತ್ತಾನೆ ಗೋಕುಲ ಸಹೃದಯ.

'ಸಾಮಾನ್ಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ಯಾವ ತಿಳಿವಳಿಕೆ, ವಿವೇಕವನ್ನು ಪಡೆಯಲು ಸಾಧ್ಯವೋ ಅದಕ್ಕಿಂತ ಮಿಗಿಲಾದ ಮಾನವೀಯ ವಿವೇಕ, ಅರಿವನ್ನು 'ಚಿಟ್ಟೆ' ನಾಟಕದ ಮೂಲಕ ಗೋಕುಲ ಪಡೆದಿದ್ದಾನೆ. ಶಿಕ್ಷಣದಲ್ಲಿ ರಂಗಭೂಮಿ ಸೇರಿದರೆ ಇಂತಹ ಅದ್ಭುತಗಳು ಸಂಭವಿಸುತ್ತವೆ. ಈ ನಾಟಕದ ಮೂಲಕ ಆತ ಮನುಷ್ಯತ್ವಕ್ಕೆ ಬೇಕಾದ ದಾರಿಯನ್ನು ಕಂಡುಕೊಂಡಿದ್ದಾನೆ. ಜವಾಬ್ದಾರಿಯುತವಾದ ಪಾಲಕರಾಗಿ ನಾವು ಆತನಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವನ ಜೊತೆಗೆ ನಿಂತಿದ್ದೇವೆ' ಎನ್ನುತ್ತಾರೆ ನಾಟಕಕಾರ ಹಾಗೂ ಗೋಕುಲನ ತಂದೆ ಬೇಲೂರು ರಘುನಂದನ್.

'ಚಿಟ್ಟೆ ನಾಟಕಕ್ಕಾಗಿ ಬೇರೆ ಬೇರೆ ಕಡೆ ಸುತ್ತಾಟ ನಡೆಸುವಾಗ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಭೌಗೋಳಿಕವಾಗಿ ವಿಭಿನ್ನ ಪರಿಸರದಲ್ಲಿ ಗೋಕುಲ ಒಡನಾಟ ನಡೆಸಿದ್ದಾನೆ. ಇದು ಆತನ ಮೇಲೆ ತುಂಬಾ ಪರಿಣಾಮ ಬೀರಿದೆ. ರಂಗಭೂಮಿಯು ಶಿಕ್ಷಣದಲ್ಲಿ ಬಂದರೆ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಇನ್ನಷ್ಟು ಸಹಕಾರಿಯಾಗಲಿದೆ' ಎನ್ನುತ್ತಾರೆ ಅವರು.

ಮೇಘಮೈತ್ರಿ ಬಾಲ ಪುರಸ್ಕಾರ, ಪಂಡಿತ್ ಪುಟ್ಟರಾಜ ಸನ್ಮಾನ, ಸಿ.ಜಿ.ಕೆ. ರಾಷ್ಟ್ರೀಯ ನಾಟಕೋತ್ಸವದಲ್ಲಿ ರಂಗಗೌರವ, ಶಾರದಾ ಪ್ರತಿಷ್ಠಾನದ ರಂಗಗೌರವ ಸೇರಿದಂತೆ ಹಲವು ಗೌರವ, ಪುರಸ್ಕಾರಗಳಿಗೆ ಗೋಕುಲ ಪಾತ್ರನಾಗಿದ್ದಾನೆ.

'ಚಿಟ್ಟೆ'ಯ ಸುತ್ತ...

ಮಕ್ಕಳನ್ನು ಸಾಕಿ, ಸಲಹಿ ವಿವೇಕಯುತ ಪ್ರಜೆಗಳನ್ನಾಗಿ ರೂಪಿಸುವುದು ತಂದೆ-ತಾಯಿಯ ಬಹುದೊಡ್ಡ ಜವಾಬ್ದಾರಿ. 'ಚಿಟ್ಟೆ' ನಾಟಕವು ಪಾಲಕರಿಗೆ ತಮ್ಮ ಈ ಜವಾಬ್ದಾರಿಯನ್ನು ನೆನಪಿಸುತ್ತದೆ. ಮಕ್ಕಳಿಗೆ ಸರಿಯಾದ ಪೋಷಣೆ ಸಿಗದಿದ್ದರೆ, ಅವರ ಮನಸ್ಸು ಹೇಗೆ ನೊಂದುಕೊಳ್ಳುತ್ತದೆ ಎಂಬುದನ್ನೂ ಈ ಏಕವ್ಯಕ್ತಿ ನಾಟಕವು ಕಣ್ಣಿಗೆ ಕಟ್ಟುವಂತೆ ಪ್ರಸ್ತುತ ಪಡಿಸುತ್ತದೆ.

ಕುಟುಂಬ ಮತ್ತು ಸಮಾಜವು ಶಿಕ್ಷಣಕ್ಕೆ ನೀಡಿರುವ ವ್ಯಾಖ್ಯಾನಕ್ಕೂ ಮಕ್ಕಳ ಮನಸ್ಸಿನಲ್ಲಿ ಅಡಗಿರುವ ಅವರದೇ ಆದ ವಿವೇಕಕ್ಕೂ ಇರುವ ಭಿನ್ನತೆಯೂ ಇಲ್ಲಿ ಅನಾವರಣಗೊಂಡಿದೆ.

ಕುಟುಂಬ, ಸಮಾಜದ ವ್ಯವಸ್ಥೆಯು ಮಕ್ಕಳ ಮನಸ್ಸಿಗೆ ಘಾಸಿಯುಂಟು ಮಾಡಿದರೆ, ಅದು ಅವರ ಮನೋಲೋಕವನ್ನು ಹೇಗೆ ಕಾಡುತ್ತದೆ ಎಂಬುದನ್ನೂ ಮನೋಜ್ಞವಾಗಿ ಕಟ್ಟಿಕೊಡಲಾಗಿದೆ. ನಾಟಕದಲ್ಲಿ ಪಾಪಣ್ಣಿಯು ತನ್ನ ಮನಸ್ಸಿನ ತುಮುಲಗಳನ್ನು, ನೋವನ್ನು ಹಾಡು, ಕುಣಿತಗಳೊಂದಿಗೆ ಪ್ರೇಕ್ಷಕರ ಮುಂದಿಡುತ್ತಾ, ಸಮಾಜಕ್ಕೆ ಮಹತ್ವದ ಸಂದೇಶವನ್ನೂ ನೀಡುತ್ತಾನೆ. ಇದು ಕೇವಲ ಮಕ್ಕಳ ನಾಟಕವಷ್ಟೇ ಅಲ್ಲದೆ ಹಿರಿಯರಿಗೂ ಮುದ ನೀಡುತ್ತದೆ. ಹಾಸ್ಯ ಸನ್ನಿವೇಶಗಳು ನಗೆಗಡಲಲ್ಲಿ ತೇಲಿಸಿದರೆ, ಭಾವುಕ ಸನ್ನಿವೇಶಗಳು ನೋಡುಗರ ಮನಸ್ಸನ್ನು ಆರ್ದ್ರಗೊಳಿಸುತ್ತವೆ.

'ಚಿಟ್ಟೆ' ನಾಟಕವಲ್ಲದೆ, 'ಸಾಲುಮರಗಳ ತಾಯಿ ತಿಮ್ಮಕ್ಕ', 'ರೂಬಿಕ್ಸ್ ಕ್ಯೂಬ್', 'ಅರೇಬಿಯನ್ ನೈಟ್ಸ್', 'ಅಣ್ಣನ ನೆನಪು' ಸೇರಿದಂತೆ ಹಲವು ನಾಟಕಗಳಲ್ಲಿ ನಟಿಸುವ ಮೂಲಕ ಗೋಕುಲ ಪಳಗಿದ್ದಾನೆ.

ಸವಿತಕ್ಕ, ಬಸಂತ್ ಜಿ. ಪ್ರಸಾದ್, ಪವನ್ ಕುಮಾರ್ ಅವರ ಹಿಮ್ಮೇಳದಲ್ಲಿ 'ಚಿಟ್ಟೆ'ಯು ರಂಗದಲ್ಲಿ ರೆಕ್ಕೆ ಬಿಚ್ಚಿ ಹಾರಾಡಿದೆ.

ಹಲಗೆ ಮೇಳದ ವನಿತೆಯರು

10ನೇ ಪುಟದಿಂದ...

ತಂಡದಲ್ಲಿದ್ದ ಹಿರಿಯ ಸದಸ್ಯೆ ತಿಪ್ಪಮ್ಮ ಬಾಲಪ್ಪ ಸಿಂಗನೂರ ಅವರು ಆರು ತಿಂಗಳ ಹಿಂದೆ ನಿಧನರಾದರು. ಆ ಸ್ಥಾನವನ್ನು ಅವರ ಸೊಸೆ ರುಕ್ಮಿಣಿ ತುಂಬಿದ್ದಾರೆ. ವೆಂಕಟೇಶ ಎಂಬ ಯುವಕ ತಂಡದ ನೆರವಿಗೆ ಇದ್ದಾರೆ.

ಮೇಳ ಮೇಳೈಸಿದ್ದು ಹೀಗೆ

ಕುರಕುಂಟದ ಅಕ್ಕನಾಗಮ್ಮ ಪ್ರಾಥಮಿಕ ಅನುದಾನಿತ ಶಾಲೆಯಲ್ಲಿ ಅಕ್ಕನಾಗಮ್ಮ ಶಿಕ್ಷಕಿಯಾಗಿದ್ದರು. ಪರಿಶಿಷ್ಟ ಸಮುದಾಯದ ಮಕ್ಕಳು ಪದೇಪದೇ ಶಾಲೆ ತಪ್ಪಿಸುತ್ತಿದ್ದರು. ಅವರನ್ನು ಕರೆತರಲು ಶಿಕ್ಷಕಿ ಕಾಲೊನಿಗೆ ಹೋಗುತ್ತಿದ್ದರು. 'ಮಕ್ಕಳನ್ನು ಶಾಲೆಗೆ ಕಳಿಸಿದರೆ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ. ನಮಗೆ ಏನಾದರೂ ಕೆಲಸ ಕೊಡಿಸಿ, ಮಕ್ಕಳನ್ನು ಶಾಲೆಗೆ ಕಳಿಸುತ್ತೇವೆ' ಎಂದು ಪೋಷಕರು ಹೇಳುತ್ತಿದ್ದರು.

ಎಲ್ಲರ ಮನೆಯಲ್ಲೂ ಗೂಟಕ್ಕೆ ನೇತು ಹಾಕಿದ ಹಲಗೆ ಬಿಟ್ಟರೆ ಬೇರೇನೂ ಬಂಡವಾಳ ಇರಲಿಲ್ಲ. ಹಲಗೆಯನ್ನೇ ಅವರ ಬಂಡವಾಳ ಮಾಡಲು ಶಿಕ್ಷಕಿ ನಿರ್ಧರಿಸಿದರು. ಶಾಲೆ ಅವಧಿ ಮುಗಿದ ಬಳಿಕ ತಾಯಂದಿರಿಗೆ 'ಹಲಗೆ ಕ್ಲಾಸ್' ಶುರು ಮಾಡಿದರು. ಆರಂಭದಲ್ಲಿ ಮಹಿಳೆಯರು ಕೀಳರಿಮೆಯಿಂದ ಹಿಂಜರಿದರು. ಪುರುಷರೂ ವಿರೋಧಿಸಿದರು. ಆದರೂ ಛಲ ಬಿಡದ ಅಕ್ಕನಾಗಮ್ಮ ತಾವೇ ಹಲಗೆ ಹೆಗಲೇರಿಸಿಕೊಂಡು ನಿಂತರು. 'ಟೀಚರ್ರು ಮುಂದೆ ಬಂದಾರಂದಮ್ಯಾಲ್ ನಮ್ಮದೇನೂ ತಕರಾರಿಲ್ಲ ಬಿಡ್ರಿ...' ಎಂದು ಪುರುಷರು ಹೇಳಿದರು.

ತಮ್ಮ ಬದುಕು ನಾಲ್ಕು ಗೋಡೆಗಳ ಒಳಗೇ ಮುಗಿದಿದೆ ಎಂದು ನಿರ್ಧರಿಸಿಬಿಟ್ಟಿದ್ದ ಮಹಿಳೆಯರನ್ನು ಬೆಳಕಿಗೆ ಎಳೆತಂದರು ಅಕ್ಕನಾಗಮ್ಮ. ಒಬ್ಬ ಶಿಕ್ಷಕಿ ಮನಸ್ಸು ಮಾಡಿದ್ದಕ್ಕೆ ಹತ್ತು ಕುಟುಂಬಗಳು ಸ್ವಾವಲಂಬಿಯಾದವು. ಹತ್ತು ಹೆಣ್ಣುಮಕ್ಕಳು ಹೊಸ್ತಿಲ ದಾಟಿದ್ದಕ್ಕೆ ಒಂದು ಊರಿಗೆ ಹಿರಿಮೆ ಬಂತು.

ಮೊಮ್ಮಕ್ಕಳನ್ನು ಆಡಿಸುವ ವಯಸ್ಸಿನಲ್ಲಿಯೂ ಇವರು ಹಲಗೆ ಹಿಡಿದುಕೊಂಡರು. ಸಂಕೋಚ, ಸಂಕೋಲೆಗಳನ್ನು ಮೀರಿ ಉತ್ತಮ ಕಲಾವಿದೆಯರು ಅನ್ನಿಸಿಕೊಂಡರು. ಊರೂರು ಸುತ್ತಿ, ಹಾಡಿ, ಕುಣಿದು, ಹಲಗೆ ನುಡಿಸಿ ತಮ್ಮ ಛಾಪು ಮೂಡಿಸಿದರು.

ತಂಡದಲ್ಲಿ ಶಿಸ್ತು ತಂದಿರುವ ಅಕ್ಕನಾಗಮ್ಮ, ಎಲ್ಲರಿಗೂ ತಮ್ಮದೇ ಹಣದಿಂದ ಸಮವಸ್ತ್ರ ಕೊಡಿಸಿದ್ದಾರೆ. ಕಾರ್ಯಕ್ರಮಕ್ಕೆ ಸ್ವಂತ ಖರ್ಚಿನಲ್ಲಿ ಕರೆದುಕೊಂಡು ಹೋಗಿ-ಬರುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಮೇಳದ ನೋಂದಣಿ ಮಾಡಿಸಿದ್ದಾರೆ. ಎರಡು ವರ್ಷಗಳ ಹಿಂದೆ ಅವರು ನಿವೃತ್ತರಾದರು. ಆದರೂ ಹಲಗೆ ಸದ್ದು ಕೇಳುತ್ತಲೇ ಇದೆ.

> "ಮಹಿಳಾ ಕೋಲಾಟ ತಂಡ, ಕೀಲುಕುದುರೆ ತಂಡ, ಮುಖವಾಡದ ತಂಡ, ಯುವತಿಯರ ತಂಡ ಕಟ್ಟುವ ಕನಸಿದೆ. ಈಗಾಗಲೇ ಹದಿನೈದು ಹೆಣ್ಣುಮಕ್ಕಳ ಭಜನಾ ಮೇಳ ಸಿದ್ಧವಾಗಿದೆ. ಪುರಾಣ, ಪ್ರವಚನ, ಜಾತ್ರೆ, ಮದುವೆ ಕಾರ್ಯಕ್ರಮಗಳಲ್ಲೂ ಈ ತಂಡ ಭಜನೆ ಮಾಡಿ ಹೆಸರು ಗಳಿಸುತ್ತಿದೆ. ಒಂದೇ ಊರಿನಲ್ಲಿ ಎಲ್ಲ ಪ್ರಕಾರದ ಕಲಾವಿದೆಯರ ತಂಡ ಇರಬೇಕು ಎಂಬುದು ನನ್ನ ಕನಸು"
>
> **ಅಕ್ಕನಾಗಮ್ಮ,** ಶಿಕ್ಷಕಿ



ಹಲಗೆ ಸದ್ದಿಗೆ ಹೆಜ್ಜೆ ಹಾಕಿದ ಶಿಕ್ಷಕಿ ಅಕ್ಕನಾಗಮ್ಮ

ಮುನ್ನೋಟ 31-03-2024 ರಿಂದ -06-04-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವ್ಯವಹಾರಗಳಲ್ಲಿ ಉತ್ತಮ ಸ್ಥಾನ ಪಡೆಯಲು ಪ್ರಯತ್ನ ಮಾಡುವಿರಿ. ಸ್ಥಿರಾಸ್ತಿ ವಿಚಾರಗಳಲ್ಲಿ ಸ್ತ್ರೀಯರಿಂದ ಸ್ವಲ್ಪ ಸಮಸ್ಯೆಯಾಗುವ ಸಂದರ್ಭಗಳಿವೆ. ಉದರ ಸಂಬಂಧಿ ತೊಂದರೆಗಳು ಭಾದಿಸಬಹುದು. ಸಂಗಾತಿಯ ವ್ಯವಹಾರಗಳಿಗೆ ಬಂಡವಾಳ ಹೂಡಬೇಕಾದ ಪರಿಸ್ಥಿತಿ ಇರುತ್ತದೆ. ದಿನಸಿಯ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ. ವಾಹನ ರಿಪೇರಿಗಾಗಿ ಹೆಚ್ಚು ಹಣ ಖರ್ಚಾಗಬಹುದು.

ವೃಷಭ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2

ವ್ಯವಹಾರಿಕವಾಗಿ ಹೆಚ್ಚು ಮುಂದುವರೆಯಲು ಪ್ರಯತ್ನ ಪಡುವಿರಿ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಸರ್ಕಾರದ ಜೊತೆಗೆ ವಿದೇಶಿ ವ್ಯವಹಾರ ಮಾಡುವವರಿಗೆ ಹೆಚ್ಚು ಅನುಕೂಲವಿರುತ್ತದೆ. ವಿದೇಶದಲ್ಲಿ ಓದಬೇಕೆನ್ನುತ್ತಿರುವವರಿಗೆ ಅನುಕೂಲತೆಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಗತಿಯ ಫಲಿತಾಂಶವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಹಳ ವ್ಯವಹಾರಿಕವಾಗಿ ಯೋಚಿಸಿ ಅದನ್ನು ಕಾರ್ಯಗತ ಮಾಡುವಿರಿ. ಧನ ಆದಾಯವು ಉತ್ತಮವಾಗಿದ್ದರೂ ಅದನ್ನು ಮೀರಿದ ಖರ್ಚುಗಳು ಬರಬಹುದು. ನಿಮ್ಮ ಕೆಲಸಗಳಿಗೆ ಕೆಲವು ಹಿರಿಯರು ಸ್ವಲ್ಪ ವಿರೋಧ ವ್ಯಕ್ತಪಡಿಸುವರು. ವಿದೇಶದಲ್ಲಿರುವವರು ತಮ್ಮ ಸ್ಥಿರಾಸ್ತಿಯನ್ನು ಮಾಡಿಕೊಳ್ಳಲು ಈಗ ಸಕಾಲ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಬಹಳ ಉತ್ಸಾಹದಲ್ಲಿ ಕೆಲಸ ಆರಂಭಿಸುವಿರಿ. ಹಣಕಾಸಿನ ಹರಿವು ನಿರೀಕ್ಷೆಯಷ್ಟಿಲ್ಲದಿದ್ದರೂ, ಸಾಲ ಮಾಡುವ ಪರಿಸ್ಥಿತಿ ಇರುವುದಿಲ್ಲ. ಬರಬೇಕಾಗಿದ್ದ ಸರ್ಕಾರಿ ಹಣಗಳು ನಿಧಾನವಾದರೂ ಬರುತ್ತವೆ. ನಿಮ್ಮ ಆಲಸಿ ನಡವಳಿಕೆಗಳೇ ಕೆಲಸಕಾರ್ಯಗಳು ನಿಧಾನವಾಗಲು ಕಾರಣವಾಗುತ್ತದೆ. ಕೊಳ್ಳಬೇಕೆಂದಿದ್ದ ಆಸ್ತಿಯ ದಾಖಲೆಗಳಲ್ಲಿ ವ್ಯತ್ಯಾಸಗಳಿರುವ ಸೂಚನೆಯಿದ್ದು, ಸರಿಯಾಗಿ ಪರಿಶೀಲಿಸಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಾರದ ಆರಂಭಿಕ ಹಂತಗಳು ಅಷ್ಟು ಸುಖವಾಗಿರುವುದಿಲ್ಲ. ಧನ ಆದಾಯವು ಮಂದಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳಲ್ಲಿ ಸಂಗಾತಿಯ ನೆರಳನ್ನು ಕಾಣಬಹುದು. ತಾಯಿಯು ನಿಮಗೆ ಆಸ್ತಿಯನ್ನು ಕೊಳ್ಳಲು ಸಹಾಯ ಮಾಡುವರು. ಕುಟುಂಬದ ಒಗ್ಗಟ್ಟಿಗಾಗಿ ತಾಯಿ ಶ್ರಮಿಸುವರು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಭಿವೃದ್ಧಿ ಇರುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೆಲಸ ಕಾರ್ಯಗಳನ್ನು ಮುಂದುವರೆಸಲು ಅಷ್ಟು ಇಷ್ಟವಿಲ್ಲದಿದ್ದರೂ ಬಲವಂತವಾಗಿ ಮುಂದುವರಿಸುವಿರಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಒಂದೆರಡು ದಿನಗಳ ನಂತರ ಚುರುಕಾಗಿ ಕೆಲಸ ಮಾಡುವಿರಿ. ಆಸ್ತಿ ವಿಚಾರದಲ್ಲಿ ಬಹಳ ಆತುರಬೇಡ. ಉಸಿರಾಟದ ತೊಂದರೆ ಅಥವಾ ಮೂಳೆಯ ತೊಂದರೆಗಳಿರುವವರು ಹೆಚ್ಚು ಎಚ್ಚರವಹಿಸಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಆಲೋಚನೆಯನ್ನು ಮಾಡುವಿರಿ. ಧನ ಆದಾಯವು ನಿರೀಕ್ಷೆಯ ಹತ್ತಿರಕ್ಕೆ ಬರುವ ಸಾಧ್ಯತೆ ಇದೆ. ನಿಮ್ಮ ನಡವಳಿಕೆಗಳ ಮೇಲೆ ಹಣದ ಛಾಯೆ ಎದ್ದು ಕಾಣುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಮುಂದುವರೆಯಲು ಸಕಾಲವಲ್ಲ. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಬಹುದು. ಕೆಲವರಿಗೆ ಚರ್ಮರೋಗಗಳು ಬಾಧಿಸುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ತುಂಬಾ ಉತ್ಸಾಹಭರಿತರಾಗಿರುವಿರಿ. ಧನ ಆದಾಯ ಉತ್ತಮವಾಗಿದ್ದರೂ ಅಷ್ಟೇ ಖರ್ಚು ಇರುತ್ತದೆ. ನಿಮ್ಮ ಚಟುವಟಿಕೆಗಳಿಗೆ ಹೆಚ್ಚು ಪ್ರಾಮುಖ್ಯ ಕೊಡುವಿರಿ. ಕೃಷಿ ಕೆಲಸಗಳಲ್ಲಿ ಹೆಚ್ಚು ಆಸಕ್ತಿ ತಳೆದು ಅದನ್ನು ಮಾಡುವಿರಿ. ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಪ್ರಗತಿ ಇರುತ್ತದೆ. ರಕ್ತದಲ್ಲಿ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿ. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ನಿಮ್ಮಲ್ಲಿ ಬಹಳ ಬುದ್ಧಿವಂತಿಕೆ ಇರುತ್ತದೆ. ಧನ ಆದಾಯವು ಮಂದಗತಿಯಲ್ಲಿರುತ್ತದೆ. ನ್ಯಾಯವಾಗಿ ಮಾತನಾಡಿ ಎಲ್ಲರಿಗೂ ಪ್ರಿಯವಾಗುವಿರಿ. ಶತ್ರುಗಳ ತಂತ್ರಕ್ಕೆ ನೀವು ಹೂಡುವ ಪ್ರತಿತಂತ್ರ ಅವರನ್ನು ತಣ್ಣಗಾಗಿಸುವುದು. ವಿದೇಶದಲ್ಲಿರುವವರು ಅಲ್ಲಿ ಕಾನೂನಿನ ಮೂಲಕ ಸ್ಥಿರಾಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ್ದ ಯಶಸ್ಸು ಖಂಡಿತ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶ್ರದ್ಧೆಯಿಂದ ಕೆಲಸ ಮಾಡುವಿರಿ. ಇದು ನಿಮಗೂ ಹಾಗೂ ಸಂಸ್ಥೆಗೂ ಒಳ್ಳೆಯದನ್ನು ಮಾಡುತ್ತದೆ. ಧನ ಆದಾಯವು ಕಡಿಮೆ ಇದ್ದರೂ ಅದನ್ನು ಸರಿಯಾಗಿ ನಿರ್ವಹಣೆ ಮಾಡುವಿರಿ. ಅತಿ ಕಠಿಣವಾದ ಮಾತುಗಳು ಯಾರೊಂದಿಗೂ ಬೇಡ. ಆಸ್ತಿ ಮಾಡಲು ಸಕಾಲವಾಗಿದೆ, ಅದಕ್ಕೆ ಪೂರಕವಾಗಿ ಧನಸಹಾಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮನಸ್ಸಿನಲ್ಲಿ ವಿರೋಧಾಭಾಸಗಳಿರುತ್ತವೆ. ಮಾತನಾಡುವಾಗ ಜಾಣ್ಮೆಯಿಂದ ಮಾತನಾಡಿರಿ. ಹಿರಿಯರು ನಿಮ್ಮ ನಡವಳಿಕೆ ನೋಡಿ ನಂತರ ಸಹಾಯ ಮಾಡುವರು. ಈ ರಾಶಿಯ ಹಿರಿಯರಿಗೆ ಉತ್ತಮವಾದ ಗೌರವ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚು ಶ್ರಮಹಾಕಿ ಹೆಚ್ಚಿನ ಫಲಿತಾಂಶವನ್ನು ಪಡೆಯುವ ಯೋಗವಿದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳ ಕೈಗೆ ಸಿಕ್ಕಿಬೀಳುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎಲ್ಲಾ ಜಾಗಗಳಲ್ಲೂ ನೀವೇ ಹಿರಿಯರಂತೆ ವರ್ತಿಸುವಿರಿ. ನಿಮ್ಮ ಕೆಲವು ಬಂಧುಗಳು ನಿಮ್ಮಿಂದ ದೂರವಾಗುವರು. ಬಣ್ಣ ಬಣ್ಣದ ಮಾತನಾಡಿ ನಿಮ್ಮ ಕೆಲಸ ಕಾರ್ಯಗಳನ್ನು ಇತರರಿಂದ ಮಾಡಿಸಿಕೊಳ್ಳುವಿರಿ. ನಿಮ್ಮ ಒಡಹುಟ್ಟಿದವರ ಜೊತೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆಸ್ತಿಗಾಗಿ ಹಣ ಹೂಡಿಕೆ ಮಾಡುವಿರಿ. ವಾಯು ಸಂಬಂಧದಿಂದ ಕೆಲವರಿಗೆ ಎದೆ ನೋವು ಕಾಣಿಸಿಕೊಳ್ಳಬಹುದು.

ಪದಬಂಧ 2835



ಮೇಲಿನಿಂದ ಕೆಳಕ್ಕೆ

1. ಸದಾ ಅರಳುತ್ತಾ ಹೋಗುವ ಪ್ರವೃತ್ತಿ 3
2. ಹರೆಯದ ಯೋಧ ತಲೆಕೆಳಗು ಮಾಡಿದ್ದಾನೆ 3
3. ಉಗ್ರಳಾದ ಶಕ್ತಿ ಅವತಾರ 3
4. ಹೇಗಿದೆಯೋ ಹಾಗೆ ಅದೇ ಅರ್ಥದಲ್ಲಿ 3
8. ನೈಜ ರೂಪದ ಜಗತ್ತು 5
10. ಆಲಸ್ಯದಿಂದ ಕೂಡಿದ ಗುಣ ಪ್ರವೃತ್ತಿ 3
11. ಒಂದಾಗಿ ಬೆರೆತ ನದಿಗಳ ಕೂಡಲು ತಲೆಕೆಳಗು 3
12. ಹಸುಗೂಸಿನ ದಯಾಗುಣ ಸಂಕೇತ 3
13. ನಗುನಗುತ್ತಾ ಹೊಸದಾಗಿ ಬಂದ ಋತುಗಳ ರಾಜ 5
14. ಹೇಗೆ ನೋಡಿದರೂ ದೃಷ್ಟಿ ಹರಿಸುವ ಕಣ್ಣು 3
16. ಭ್ರಮಾ ಲೋಕದಲ್ಲಿ ಹಾರುವ ದುಂಬಿ 3
18. ಒಬ್ಬರ ಕೆಳಗೆ ಮಾಡುವ ಅತಿಯಾದ ಸೇವೆ 3
19. ಅಂತ್ಯದಲ್ಲಿ ಬದುಕಿನ ಜಟಕಾಬಂಡಿ ಇಲ್ಲಿಗೆ ಎಳೆಯುತ್ತದೆ 3
20. ಆಚಾರದ ಜೊತೆಯಾಗುವ ವಿಷಯ 3
21. ಕೌಸಲ್ಯೆಯ ಮಗ ರಾಮ ಒಳ್ಳೆಯ ಪ್ರಜೆಯೂ ಹೌದು 3

ಎಡದಿಂದ ಬಲಕ್ಕೆ

1. ನಿವೃತ್ತಿ ಪಡೆದವರ ಬಿಡುವಿನ ಬದುಕು 6
3. ಕೃತ್ತಿಕೆಯಲ್ಲಿ ಹುಟ್ಟಿದ ವೀರ ಸ್ಕಂದ 4
5. ಮಾತಾಡುವುದೇ ಈತನ ಚಾಳಿ 3
6. ಯಾವ ವ್ಯತ್ಯಾಸವೂ ಇಲ್ಲದ ಏಕರೂಪ ಜನ ಸಮೂಹ 6
9. ಭಗವಂತನನ್ನು ಪ್ರಾರ್ಥಿಸುವುದು ಬಯಸಿದ್ದನ್ನು ಪಡೆವ ಸಲುವಾಗಿ 4
11. ಶ್ರೇಷ್ಠ ಬ್ರಾಹ್ಮಣನೆಂಬ ಬಿರುದು ವಿಶ್ವಾಮಿತ್ರನಿಗೆ ಸಲ್ಲುತ್ತದೆ 4
12. ಅನುಷ್ಠಾನ ಕಷ್ಟವೆನಿಸುವ ಶಿಸ್ತಿನ ವಿಧೇಯಕ 6
15. ಭ್ರಮೆಯಿಂದ ಕೂಡಿದ ಸಂತೋಷ ಸಡಗರಗಳ ಅನೂಚಾನ 6
17. ಜೀವನದಲ್ಲಿ ಬೆಳೆಯುವ ವಯಸ್ಸಿನ ಅಳತೆ 4
18. ಉತ್ತರಖಂಡದ ನಾಲ್ಕು ಯಾತ್ರಾ ಕ್ಷೇತ್ರಗಳು 4
20. ಕವಿಕೃತ ಕಲ್ಪನೆಯಲ್ಲಿ ವಿಕಾರ ಅಂತರಂಗ 6
22. ಹಿಂದಿಯ ನಲವತ್ತು ಹಿಂದುಮುಂದು 3
23. ವೈರಿಗಳ ಗುಂಪು ಇದು 4
24. ಸೂರ್ಯವಂಶದಲ್ಲಿ ಪ್ರಕಾಶಮಾನವಾಗಿ ಹೊಳೆದವ 6

ಪದಬಂಧ ಉತ್ತರ -2834

ಮೇಲಿಂದ ಕೆಳಕ್ಕೆ

1.ರಕ್ತದಾನ 2.ಜಲಾನಯನ 3.ಚರಣದಾಸಿ 4.ಕಡುಕೋಪ 7.ವಾರಸುದಾರ 9.ದೀನದಲಿತ 11.ಗಲೀಜು 12.ವಾದ್ಯಾರು 13.ಅಂಧಕಾನೂನು 14.ಕವನಪ್ರಿಯ 15.ಮಧುಮಾಸ 17.ಕಮಲೇಶ

ಎಡದಿಂದ ಬಲಕ್ಕೆ

1.ರವಿತೇಜ 3.ಚಕ್ರವಾಕ 5.ನವಾವರಣ 6.ನವಾಲಯ 8.ದಾರಿದೀಪ 10.ನಗರವಾಸಿ 13.ಅಂಜುಬುರುಕ 15.ಮರಗಂಧ 16.ವಸಂತಕ 18.ಕಾಮದಹನ 19.ಸವಿಜೇನು 20.ಯಮಪಾಶ

ಬಾ.ಕಿ.ನ. : ಕೆಲವು ನೆನಪುಗಳು

ಎಸ್. ದಿವಾಕರ್

ನುಡಿ ನಮನ

ಅರ್ಧ ಶತಮಾನದ ಹಿಂದಿನ ಪ್ರಸಂಗ: ಕಿರುಗುಟ್ಟುವ ಕಬ್ಬಿಣದ ಗೇಟನ್ನು ತಳ್ಳಿ ತುಸು ವಿಶಾಲವೆನ್ನಬಹುದಾದ ಅಂಗಳದಲ್ಲಿ ಎಡಗಡೆಗಿದ್ದ ಮೆಟ್ಟಿಲುಗಳನ್ನು ಹತ್ತಿ ಮೊದಲ ಮಜಲೆಯ ತೆರೆದ ಬಾಗಿಲಿನ ಒಂದು ಕೊಠಡಿಯ ಮುಂದೆ ನಿಂತಾಗ ನನಗೆ ಕಾಣಿಸಿದ್ದು ಲುಂಗಿ ಸುತ್ತಿಕೊಂಡು ಬರೀ ಬನಿಯನ್ನಿನಲ್ಲಿದ್ದ, ನೆಲದ ಮೇಲೆ ಕೂತು ಪತ್ರಿಕೆಯೊಂದನ್ನು ಓದುತ್ತಿದ್ದ ಒಬ್ಬ ವ್ಯಕ್ತಿ. ತುಸು ಉದ್ದವೆನ್ನಿಸುವಂತಿದ್ದರೂ ಚಚ್ಚೌಕನಾದ, ಕಣ್ಣು ಮೂಗು ಕೊರೆದಿಟ್ಟಂತಹ ಆಕರ್ಷಕ ಮುಖದ, ಕೂದಲಿಲ್ಲದೆ ಫಳಫಳನೆ ಹೊಳೆಯುವ ಮುಂದಲೆಯ ಆ ವ್ಯಕ್ತಿ ಕಾವ್ಯಕ್ಕೆ ಮೀಸಲಾದ 'ಕವಿತಾ' ಎಂಬ ಸಣ್ಣ ಪತ್ರಿಕೆ ಹೊರತರುತ್ತಿದ್ದ. ಅವನ ಹೆಸರು ಬಾ.ಕಿ.ನ. ಅರ್ಥಾತ್ ಬಾಲಕೃಷ್ಣ ಕಿ.ನ. ಅಂದು ನಾನಲ್ಲಿಗೆ ಹೋದದ್ದು ನನ್ನದೊಂದು ಕವನವನ್ನು ಕೊಡುವುದಕ್ಕಾಗಿ.


ಅವನ ರೂಮಿದ್ದ ಆ ಕಟ್ಟಡಕ್ಕೆ ಒಂದು ಹೆಸರಿತ್ತೋ ಇಲ್ಲವೋ ನನಗೆ ನೆನಪಿಲ್ಲ. ಅದು ಇದ್ದದ್ದು ಬೆಂಗಳೂರಿನ ಬಸವನಗುಡಿಯಲ್ಲಿ; ಈಗಿಲ್ಲದ 'ಪ್ರಜಾಮತ' ಪತ್ರಿಕಾ ಕಚೇರಿಯ ಪಕ್ಕದಲ್ಲಿ. ಆಗ ಅವನು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟಿನಲ್ಲಿ ಮುದ್ರಣ ಕಲೆಯನ್ನು ಕಲಿಯುತ್ತಿದ್ದ. ಅಲ್ಲಿಂದ ಡಿಪ್ಲೊಮಾ ಪಡೆದ ಮೇಲೆ ಸಾಗರಕ್ಕೆ ಹೋಗಿ ಕೆ.ವಿ.ಸುಬ್ಬಣ್ಣ, ಪ್ರಭಾಕರ ಮೊದಲಾದವರು ಸ್ಥಾಪಿಸಿದ್ದ ಮುದ್ರಣಾಲಯವನ್ನು ಸೇರಿಕೊಂಡ. ಅಡಿಗರ 'ಸಾಕ್ಷಿ' ತ್ರೈಮಾಸಿಕವನ್ನಲ್ಲದೆ ಆ ಕಾಲದ ಅಕ್ಷರ ಪ್ರಕಾಶನದ ಅನೇಕ ಪುಸ್ತಕಗಳನ್ನು ಮುದ್ರಿಸಿದವನು ಅವನೇ. ಕನ್ನಡದಲ್ಲಿ ಅದುವರೆಗೆ ಪುಸ್ತಕಗಳು ಪ್ರಕಟವಾಗುತಿದ್ದದ್ದು ಕ್ರೌನ್ 1/8 ಆಕಾರದಲ್ಲಿ. ಅದನ್ನು ಇಂದು ಸರ್ವೇಸಾಧಾರಣವಾಗಿರುವ ಡೆಮಿ 1/8 ಆಕಾರಕ್ಕೆ ಬದಲಾಯಿಸಿದ ಕೀರ್ತಿ ಅಕ್ಷರ ಪ್ರಕಾಶನಕ್ಕೆ ಹೇಗೋ ಹಾಗೆ ಬಾ.ಕಿ.ನ.ನಿಗೂ ಸಲ್ಲಬೇಕು.

> ರಂಗಭೂಮಿ, ಸಾಹಿತ್ಯ ವಲಯದಲ್ಲಿ ಬಾ.ಕಿ.ನ. ಎಂದೇ ಜನಪ್ರಿಯರಾಗಿದ್ದ ಬಾಲಕೃಷ್ಣ ಕಿ.ನ. ಮಾರ್ಚ್ 12ರಂದು ನಿಧನ ಹೊಂದಿದರು. 'ಲಿಪಿ' ಮುದ್ರಣದ ಮೂಲಕ ಅವರು ಮಾಡಿದ್ದ ಸಾಹಿತ್ಯದ ಕೆಲಸಗಳ ಮೆಲುಕು ಇಲ್ಲಿದೆ...

ಕೆಲವು ವರ್ಷಗಳಾದ ಮೇಲೆ ಅವನು ಮತ್ತೆ ಬೆಂಗಳೂರಿಗೇ ಬಂದ; ಪುತ್ತೂರಿನಿಂದ ಶಿವರಾಮ ಕಾರಂತರ ಮುದ್ರಣ ಯಂತ್ರವನ್ನು ಕೊಂಡು ತಂದ. ಅವನು ಮೊದಲು ವಾಸಮಾಡುತ್ತಿದ್ದ ರೂಮಿಗೆ ಅಷ್ಟೇನೂ ದೂರದಲ್ಲಿಲ್ಲದ, ಗಾಂಧಿ ಬಜಾರ್ ಬಳಿಯ ಬ್ಯೂಗಲ್ ರಾಕ್ ರಸ್ತೆಯಲ್ಲಿ, ಒಂದು ಶುಭ ಮುಹೂರ್ತದಲ್ಲಿ 'ಲಿಪಿ ಮುದ್ರಣ' ತಲೆಯೆತ್ತಿತು. ಮೊದಮೊದಲು ಆ ಪ್ರೆಸ್ಸಿಗೆ ಕೆಲಸ ಕೊಡುತ್ತಿದ್ದವರು ನಾಟಕದವರು, ಹೊಸ ಅಲೆಯ ಸಿನಿಮಾದವರು, ಸುಗಮ ಸಂಗೀತಗಾರರು, ಚಿತ್ರಗಳನ್ನು ರಚಿಸುತ್ತಿದ್ದ ಕಲಾವಿದರು. ಯಾಕೆಂದರೆ ಬಾ.ಕಿ.ನ.ನಿಗೆ ಬಹುಮಟ್ಟಿಗೆ ಪರಿಚಿತರಾಗಿದ್ದವರು ಅವರೇ.

ಆ ಕಾಲದಲ್ಲಿ ಗೋಪಾಲಕೃಷ್ಣ ಅಡಿಗರು ಹೆಚ್ಚು ಕಡಿಮೆ ಪ್ರತಿ ದಿನವೂ ಸಂಜೆ ಗಾಂಧಿ ಬಜಾರಿಗೆ ಬಂದವರು ಲಿಪಿ ಮುದ್ರಣಕ್ಕೂ ಬರುತ್ತಿದ್ದರು. ಅಮೆರಿಕದಿಂದ ಹಿಂತಿರುಗಿ ಬಂದು ನಿರುದ್ಯೋಗಿಯಾಗಿದ್ದ ಸುಮತೀಂದ್ರ ನಾಡಿಗರು ಗಾಂಧಿ ಬಜಾರಿನಲ್ಲೇ ಒಂದು ಪುಸ್ತಕದಂಗಡಿ ತೆರೆದಿದ್ದರು. ಅಡಿಗರನ್ನು ನೋಡುವುದಕ್ಕೋ ಲಿಪಿ ಮುದ್ರಣಕ್ಕೋ ಬರುತ್ತಿದ್ದ ಲೇಖಕರನ್ನು ಸೇರಿಸಿದರೆ ಅದೊಂದು ಬಹುದೊಡ್ಡ ಪಟ್ಟಿಯಾದೀತು. ಆ ಕಾಲದಲ್ಲಿ ನಾನೊಬ್ಬ ನಿರುದ್ಯೋಗಿ. ಬಾ.ಕಿ.ನ. ತನ್ನ ನೀಲಿ ಬಣ್ಣದ ಮೋಟರ್ ಬೈಕ್ ಹತ್ತಿಕೊಂಡು ಎಲ್ಲಿಗೋ ಹೊರಟನೆಂದರೆ ನಾನು ಅವನ ಪ್ರೆಸ್ಸಿನಲ್ಲೇ ಕಾಲ ಕಳೆಯುತ್ತಿದ್ದೆ.

ಲಂಕೇಶರು ತಮ್ಮ ಪತ್ರಿಕೆಯನ್ನು ಪ್ರಾರಂಭಿಸುವುದಕ್ಕೂ ಮುಂಚೆ ಒಂದು ವರ್ಷ ಒಂದು ದೀಪಾವಳಿ ವಿಶೇಷಾಂಕವನ್ನು ಹೊರತಂದರಷ್ಟೆ. ಅದರ ಹೆಸರು 'ಪಾಂಚಾಲಿ'. ಆ ಸುದ್ದಿ ಕೇಳಿಸಿಕೊಂಡ ನಾಡಿಗರು 'ನಾವೂ ಒಂದು ವಿಶೇಷಾಂಕ ತರೋಣ' ಎಂದು ಬಾ.ಕಿ.ನ.ನನ್ನು ಪುಸಲಾಯಿಸಿದರು. ಅದರ ಫಲವಾಗಿ ಮೂಡಿಬಂದದ್ದು 'ಕ್ಷಿತಿಜ' ಎಂಬ ದೀಪಾವಳಿ ಸಂಚಿಕೆ. ಅದರಲ್ಲಿ ನನ್ನ ಕೆಲವು ಕಾರ್ಟೂನುಗಳೂ, ಕ್ಯಾರಿಕೇಚರುಗಳೂ ಇದ್ದವು. ಲಾಭಕ್ಕಿಂತ ನಷ್ಟವನ್ನೇ ಅನುಭವಿಸಿದ



ಆ ವಿಶೇಷಾಂಕದಿಂದ ಬಾ.ಕಿ.ನ.ನೇನೂ ಎದೆಗುಂದಲಿಲ್ಲವೆನ್ನುವುದಕ್ಕೆ ಅವನು ಆಮೇಲೆ ಪ್ರಾರಂಭಿಸಿದ 'ಲಿಪಿ ಪ್ರಕಾಶನ'ವೇ ಸಾಕ್ಷಿ. ಮೊದಲ ಕೃತಿಯಾಗಿ ಅವನು ಪ್ರಕಟಿಸಿದ್ದು ರಾಮಚಂದ್ರ ಶರ್ಮರ 'ಹೇಸರಗತ್ತೆ' ಎಂಬ ಕವನ ಸಂಕಲನ. ಪ್ರಸಿದ್ಧ ಕಲಾವಿದ ಎಸ್. ಜಿ. ವಾಸುದೇವ್ ಮುಖಪುಟ ರಚಿಸಿದ್ದ ಆ ಸಂಕಲನ ಇಂದಿಗೂ ತನ್ನ ಸೊಗಸಿನಿಂದ ಮನಸೂರೆಗೊಳ್ಳುವಂತಿದೆ. ನಂತರ ನಾಡಿಗರ 'ಕಾರ್ಕೋಟಕ', ನಿಸಾರ್ ಅಹಮದರ 'ನಿತ್ಯೋತ್ಸವ', ವೈಯೆನ್ಕೆಯವರ 'ಜೋಕ್ ಫಾಲ್ಸ್', ಎಂ.ಎಸ್.ಕೆ. ಪ್ರಭು ಅವರ 'ಮುಖಾಬಿಲೆ', ಕೆ.ಎಸ್.ನ. ಅವರ 'ಮಲ್ಲಿಗೆಯ ಮಾಲೆ', ಪು.ತಿ.ನ. ಅವರ ಸಮಗ್ರ ಕಾವ್ಯ' ಅವನು ಪ್ರಕಟಿಸಿದ ಕೆಲವು ಮುಖ್ಯ ಕೃತಿಗಳು. 1976ರಲ್ಲಿ ಗೋಪಾಲಕೃಷ್ಣ ಅಡಿಗರು ತಮ್ಮ ಸಂಪೂರ್ಣ ಕವನಗಳನ್ನು ಪ್ರಕಟಿಸಬೇಕೆಂದು ನಿರ್ಧರಿಸಿದಾಗ ಬಾ.ಕಿ.ನ. ತೋರಿಸಿದ ಉತ್ಸಾಹವನ್ನು ಮರೆಯಲಾರೆ. ಅದಕ್ಕೆಂದೇ ಹೊಸದಾಗಿ ಅಚ್ಚಿನ ಮೊಳೆಗಳನ್ನು ಕೊಂಡು ತಂದ. ಕವನಗಳು ಸ್ಫುಟವಾಗಿ ಕಾಣಿಸಬೇಕೆಂದು ದಪ್ಪ ಕಾಗದವನ್ನು ಆಯ್ಕೆ ಮಾಡಿದ. ಅಡಿಗರು ತಮ್ಮ ಫೋಟೋ ಬೇಡವೇ ಬೇಡವೆಂದಾಗ 'ಫೋಟೋಲಿತ್' ತಂತ್ರವನ್ನು ಬಳಸಿಕೊಂಡು ಅವರು ಎದ್ದು ಕಾಣದಂಥ ಮುಖಪುಟವನ್ನು ವಿನ್ಯಾಸಗೊಳಿಸಿದ. ಹೀಗೆ ಅವನ ಮುತುವರ್ಜಿಯಿಂದ ಸಿದ್ಧವಾದದ್ದು 'ಸಮಗ್ರ ಕಾವ್ಯ'. ಈ ಸಮಗ್ರ ಎಂಬ ಹೆಸರು ಅಂದಿನಿಂದ ಇಂದಿನವರೆಗೂ ನಮ್ಮ ಅನೇಕ ಲೇಖಕ ಲೇಖಕಿಯರ ಒಟ್ಟು ಕತೆ, ಕವನಗಳಿಗೆ ಸೂಕ್ತ ಶೀರ್ಷಿಕೆಯಾಗಿದೆ ಎಂಬುದನ್ನು ಗಮನಿಸಬೇಕು.

ನನ್ನ ಮೊದಲ ಕಥಾ ಸಂಕಲನ 'ಇತಿಹಾಸ'ವನ್ನು ಪ್ರಕಟಿಸಿದವನು ಬಾ.ಕಿ.ನ. ಅದಕ್ಕೆ ನನ್ನ ಪರವಾಗಿ ಶಾಂತಿನಾಥ ದೇಸಾಯಿಯವರನ್ನು ವಿನಂತಿಸಿಕೊಂಡು ಅವರಿಂದ ಮುನ್ನುಡಿ ಬರೆಸಿದ. ನನ್ನ 'ಆತ್ಮಚರಿತ್ರೆಯ ಕೊನೆಯ ಪುಟ' ಕವನ ಸಂಕಲನವನ್ನು ಹೊರತಂದವನೂ ಅವನೇ. ಎರಡಕ್ಕೂ ಅವನದೇ ಮುಖಪುಟ ವಿನ್ಯಾಸ.

ಎಂಬತ್ತರ ದಶಕದಲ್ಲಿ ವೈಯೆನ್ಕೆಯವರ ಪ್ರೋತ್ಸಾಹದಿಂದ ಅವನು ಪ್ರಾರಂಭಿಸಿದ ಪತ್ರಿಕೆ 'ಗಾಂಧಿ ಬಜಾರ್' ಮೊದಲು ಟ್ಯಾಬ್ಲಾಯ್ಡ್ ಆಕಾರದಲ್ಲಿತ್ತು. ಕೆಲವು ಸಂಚಿಕೆಗಳ ನಂತರ ಹಣಕಾಸಿನ ಮುಗ್ಗಟ್ಟಿನಿಂದಾಗಿ ನಿಂತುಹೋಯಿತು. ಕಾಲಾನಂತರ ಅವನೇ ಅದನ್ನು ಮಾಸ ಪತ್ರಿಕೆಯಾಗಿ ಪರಿವರ್ತಿಸಿ ಸುಮಾರು 25 ವರ್ಷ ನಡೆಸಿದ. ಆಮೇಲೂ, ಹಣ ಮಾಡುವ ಆಸೆಯಿಲ್ಲದ, ನಷ್ಟವಾಯಿತೆಂದು ಕಂಗೆಡದ, ನಿರಾಶೆಯನ್ನು ಹತ್ತಿರ ಸೇರಿಸದ ಅವನು ಮಾತ್ರ ಅಂಥ ಬೇರೆ ಏನನ್ನು ಮಾಡಬೇಕೆಂದು ಯೋಚಿಸಿರಲಿಕ್ಕೆ ಸಾಕು.

'ಚಂಡೆಮದ್ದಳೆ'ಯ ಸಾಲುಗಳು, ಎನ್. ನರಸಿಂಹಯ್ಯನವರ ಮೊದಮೊದಲ ಪತ್ತೇದಾರಿ ಕಾದಂಬರಿಗಳು, ಮಾಸ್ತಿಯವರ ಸಜ್ಜನಿಕೆ, ಶಿವರಾಮ ಕಾರಂತರ ಸಾಹಸಗಳು, ವೈಯೆನ್ಕೆಯವರ ಶ್ಲೇಷಾಪ್ರಾವೀಣ್ಯ, ಕೆ.ಕೆ. ಹೆಬ್ಬಾರ್, ಎಸ್.ಜಿ. ವಾಸುದೇವ್ ಅವರ ಪೇಂಟಿಂಗುಗಳು, ಮೂರ್ತಿಯವರ ವ್ಯಂಗ್ಯಚಿತ್ರ, ಸತ್ಯಜಿತ್ ರಾಯ್, ಸಂಗ್ಯಾ ಬಾಳ್ಯಾ, ಬಾಳಪ್ಪ ಹುಕ್ಕೇರಿ... ಇವರೆಲ್ಲ, ಇವೆಲ್ಲ ಅವನ ಮಾತುಗಳಲ್ಲಿ ಜೀವ ತಳೆಯುತ್ತಿದ್ದವು.

ಸುಮಾರು ಮೂರು ವರ್ಷಗಳ ಹಿಂದೆ ಬಾ.ಕಿ.ನ.ನ ನೆನಪಿನ ಶಕ್ತಿ ಕುಂದಿತು. ಫೋನಿನಿಂದ ದೂರವಿರತೊಡಗಿದವನಿಗೆ ಜನರ ಸಂಪರ್ಕವೂ ಇಲ್ಲದಾಯಿತು. ಬಹುದೊಡ್ಡ ಲೇಖಕರ ಜೊತೆ ಒಡನಾಡಿದ್ದವನು, ಒಳ್ಳೆಯ ಸಾಹಿತ್ಯ ಕೃತಿ ಪ್ರಕಟವಾದರೆ, ಅದು ತನ್ನದೇ ಕೃತಿಯೇನೋ ಎನ್ನುವ ಹಾಗೆ ಓದಿ ಸಂತೋಷಪಡುತ್ತಿದ್ದವನು, ಓದಿದ ಮೇಲೆ ಬರೆದವರು ಅನಾಮಿಕರಾಗಿದ್ದರೂ, 'ನೋಡಯ್ಯ, ಎಷ್ಟು ಚೆನ್ನಾಗಿ ಬರೆದಿದ್ದಾರೆ' ಎಂದು ಸ್ನೇಹಿತರ ಮುಂದೆ ಕೊಂಡಾಡುತ್ತಿದ್ದವನು ಸ್ವತಃ ಸ್ಮೃತಿ ಕಳೆದುಕೊಂಡ. ಮೊನ್ನೆ ಅವನು ತೀರಿಕೊಳ್ಳುವವರೆಗೂ ಸಾಹಿತ್ಯ, ಸಂಸ್ಕೃತಿ ಲೋಕದವರು ಅವನಿಗೆ ಸಂಬಂಧಿಸಿದಂತೆ ವಿಸ್ಮೃತಿಗೆ ಸರಿದುಬಿಟ್ಟದ್ದೊಂದು ವಿಪರ್ಯಾಸ.

ನಿನ್ನೆಯ ಕನ್ನಡಿಗೆ ಮತ್ತೆ ಸಿಕ್ಕ ಹೊಳಪು...

ನಾಗೇಶ ಹೆಗಡೆ

ವಿಮರ್ಶೆ


ಭಾರತದಲ್ಲಿ ಬ್ರಿಟಿಷರು ಕಾಲೂರಿದ ನಂತರ ಅನೇಕ ಬಗೆಯ ಸಮಾಜ ಸುಧಾರಣಾ ಚಳವಳಿಗಳು ಆರಂಭವಾದರೂ ಅವೆಲ್ಲಗಳ ಕಾವು ದಕ್ಷಿಣ ಭಾರತಕ್ಕೆ, ಕರ್ನಾಟಕಕ್ಕೆ ತಟ್ಟಿದ್ದು ಕಡಿಮೆ ಎಂದೇ ಹೇಳಬಹುದು. ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೇ ನಮ್ಮೊಳಗಿನ ವೈರಿಗಳೆನಿಸಿದ ಧಾರ್ಮಿಕ ಕಂದಾಚಾರ, ಮೂಢನಂಬಿಕೆ, ಸ್ತ್ರೀಶೋಷಣೆ, ಜಾತಿಪದ್ಧತಿಗಳಂಥ ಅನಿಷ್ಟಗಳ ನಿವಾರಣೆಗೆಂದು ಕರ್ನಾಟಕದಲ್ಲಿ ಆಂದೋಲನಗಳು ನಡೆದಿದ್ದರೆ ಅವುಗಳ ದಾಖಲೆ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಅಂಥದ್ದೊಂದು ವಿಶಿಷ್ಟ ದಾಖಲೆಯನ್ನು ಹೆಕ್ಕಿ ತೆಗೆದು 'ವಿಧವೆಯರು ವಿವಾಹವಾದರು' ಹೆಸರಿನ ಪುಸ್ತಕವೊಂದನ್ನು ಬಹುರೂಪಿ ಪ್ರಕಾಶನ ಸಂಸ್ಥೆ ಹೊರತಂದಿದೆ.

ನನಗಿನ್ನೂ ನೆನಪಿದೆ, 60 ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ನಮ್ಮ ಹವ್ಯಕ ಸಮುದಾಯದಲ್ಲಿ ಪ್ರತಿಯೊಂದು ಚಿಕ್ಕಪುಟ್ಟ ಊರಿನಲ್ಲೂ ವೈಧವ್ಯದ ಛಾಪು ಹೊತ್ತ ಹೆಂಗಸರಿದ್ದರು. ಅಂಥ ನತದೃಷ್ಟ ಮಹಿಳೆಯರ ಬಗ್ಗೆ ಕತೆ ಕಾದಂಬರಿಗಳು, 'ಘಟಶ್ರಾದ್ಧ'ದಂಥ ಸಿನಿಮಾ ಬರುವುದಕ್ಕಿಂತ ದಶಕಗಳ ಮೊದಲೇ 1920ರಲ್ಲೇ ಈ ಕ್ರೂರ ಸಂಪ್ರದಾಯದ ವಿರುದ್ಧ ಜನಾಂದೋಲನವನ್ನು ರೂಪಿಸಿದ ಅಕದಾಸ ಗಣಪತಿ ಭಟ್ಟರ ಹೋರಾಟದ ಕತೆ ಈ ಪುಸ್ತಕದ ಕೇಂದ್ರಭಾಗವಾಗಿದೆ. ಅಷ್ಟೇನೂ ಸುಶಿಕ್ಷಿತರಲ್ಲದಿದ್ದರೂ ಶಿರಸಿಯಲ್ಲಿ ಅಡಿಕೆ ಮಂಡಿಯನ್ನು ನಡೆಸುತ್ತ ಭಟ್ಟರು ಅಂದಿನ ಸಮಾಜದಲ್ಲಿ ಪ್ರತಿಷ್ಠಿತರಾಗಿದ್ದರು. ಆ ಪ್ರತಿಷ್ಠೆಯನ್ನೇ ಪಣಕ್ಕಿಟ್ಟು ಮಠಾಧೀಶರ ಮತ್ತು ಕರ್ಮಠ ಬ್ರಾಹ್ಮಣರ ವಿರುದ್ಧ ನಿಂತು ಬಾಲವಿಧವೆಯರಿಗೆ ಮತ್ತೆ ಕಂಕಣಬಲ ಕೊಡಿಸುವಲ್ಲಿ ಎದುರಿಸಿದ ಏಳುಬೀಳುಗಳ ವಿವರಗಳು ಇದರಲ್ಲಿವೆ. ತೊಟ್ಟಿಲಲ್ಲಿರುವ ಹೆಣ್ಣುಶಿಶುಗಳಿಗೇ ಮದುವೆ ಮಾಡುವ ಸಂಪ್ರದಾಯ ರೂಢಿಯಲ್ಲಿದ್ದ ಕಾಲ ಅದಾಗಿತ್ತು. ಸಮಾಜ ಸುಧಾರಣೆ ಸುಲಭವಾಗಿರಲಿಲ್ಲ. ಅಂಥ ಹೆಣ್ಣುಮಕ್ಕಳು ಮೈನೆರೆಯುವ ಮೊದಲೇ ವಿಧವೆಯಾದರೆ (ಅಕ್ಷತಕನ್ಯೆ) ಮತ್ತೊಮ್ಮೆ ವಿವಾಹವಾಗಲು ವೇದಗಳಲ್ಲಿ, ಶಾಸ್ತ್ರಗ್ರಂಥಗಳಲ್ಲಿ ಅನುಮತಿ ಇದೆಯೆಂಬುದಾಗಿ ಸಾಕ್ಷ್ಯವನ್ನು ಸಂಗ್ರಹಿಸಿ ಇವರು ಪ್ರಚಾರ ಮಾಡಿದರು. ಬಂಗಾಳದಲ್ಲಿ, ಲಾಹೋರಿನಲ್ಲಿ, ಮಹಾರಾಷ್ಟ್ರದಲ್ಲಿ ಅಲ್ಲಲ್ಲಿ ವಿಧವಾ ವಿವಾಹ ನಡೆದ ಉದಾಹರಣೆಗಳನ್ನು ಕರಪತ್ರಗಳಲ್ಲಿ ಅಚ್ಚು ಹಾಕಿ ಊರೂರಿಗೆ ವಿತರಿಸಿದ್ದೂ ಫಲ ಕೊಡುತ್ತಿರಲಿಲ್ಲ.

ದುರಾದೃಷ್ಟವೆಂಬಂತೆ ಅದೇ ಅವಧಿಯಲ್ಲಿ ಸ್ವತಃ ಭಟ್ಟರೇ ಪತ್ನಿಯನ್ನು ಕಳೆದುಕೊಂಡು ವಿಧುರರಾಗುತ್ತಾರೆ. ಮತ್ತೆ ಅದೇ ಅದೃಷ್ಟವೆಂಬಂತೆ, ಸಾಗರದ ಸಮೀಪದ ನಂದಿತಳೆ ಎಂಬ ಗ್ರಾಮದ ಬಾಲವಿಧವೆ ಮಹಾಂಕಾಳಿ ಎಂಬ ಯುವತಿ (ಹೆಗ್ಗೋಡಿನ ಕೆ.ವಿ. ಸುಬ್ಬಣ್ಣರ ತಾಯಿಯ ಅಕ್ಕ ಈಕೆ) ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರಿ ಇವರ ಸಂಪರ್ಕಕ್ಕೆ ಬರುತ್ತಾಳೆ. ಒಂದಿಬ್ಬರು ವೈದಿಕರ ಮನವೊಲಿಸಿ, ಮಠಾಧೀಶರ ಕಟ್ಟಪ್ಪಣೆಯನ್ನು ಧಿಕ್ಕರಿಸಿ ಅಕದಾಸ ಭಟ್ಟರು ಈ ಯುವತಿಯನ್ನು 1932ರಲ್ಲಿ ಮದುವೆಯಾಗುತ್ತಾರೆ. ಪ್ರಶಂಸೆ, ಪ್ರತಿಭಟನೆಗಳ ನಂತರವೇ ಚಳವಳಿಗೆ ಹೊಸ ಬಲ ಬರುತ್ತದೆ. ಸನಾತನಿಗಳ ಸಭೆಗಳಲ್ಲಿ ಚರ್ಚೆಗಳಾಗುತ್ತವೆ. ಗುರುಮಠಗಳ ಬಹಿಷ್ಕಾರ ಘೋಷಣೆಗಳ ನಡುವೆಯೂ ಅಲ್ಲೊಬ್ಬ ಇಲ್ಲೊಬ್ಬ ವಿಧುರರು ವಿಧವೆಯರ ಕೈ ಹಿಡಿಯುತ್ತಾರೆ. ಅಂದಿನ ಕಾಲದ ಹೆಸರಾಂತ ಪತ್ರಕರ್ತ ಮತ್ತು ಸ್ವಾತಂತ್ರ್ಯ ಹೋರಾಟಗಾರ ಜಿ. ಆರ್. ಪಾಂಡೇಶ್ವರ ತಮ್ಮ ಮೊದಲ ಮದುವೆಗೇ ಒಬ್ಬ ವಿಧವೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವರಕವಿ ಬೇಂದ್ರೆಯವರ ಸಮ್ಮುಖದಲ್ಲಿ ಜನಪ್ರಿಯ ವೈದ್ಯ-ಸಾಹಿತಿ ಡಾ. ಎಂ. ಗೋಪಾಲಕೃಷ್ಣರಾವ್ ವಿಧವಾ ವಿವಾಹ ಮಾಡಿಕೊಳ್ಳುತ್ತಾರೆ.

1930ರ ದಶಕದಲ್ಲಿ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಅಂಕೋಲಾದಲ್ಲಿ ಕರನಿರಾಕರಣೆ, ಶಿರಸಿ-ಸಿದ್ದಾಪುರಗಳಲ್ಲಿ ಜಂಗಲ್ ಸತ್ಯಾಗ್ರಹ ನಡೆಯುತ್ತಿದ್ದ ಕಾಲದಲ್ಲೇ ವಿಧವಾ ವಿವಾಹ ಚಳವಳಿಯೂ ವ್ಯಾಪಕವಾಗಿತ್ತು. ಇನ್ನೂರಕ್ಕೂ ಹೆಚ್ಚು 'ಅಕ್ಷತ ಕನ್ಯೆ'ಯರಿಗೆ ಮರುಮದುವೆಯ ಅವಕಾಶ ಸಿಕ್ಕಿತು. ಮುಂದಿನ ದಶಕದಲ್ಲಿ ಮಹಾಂಕಾಳಮ್ಮ ತಮ್ಮ ಪತಿಯನ್ನು ಕಳೆದುಕೊಂಡು ಮತ್ತೆ ವೈಧವ್ಯಕ್ಕೆ ಜಾರಿದರೂ (1944) ಧೃತಿಗೆಡದೆ ಚಳವಳಿಯ ಪ್ರಮುಖ ವಕ್ತಾರೆಯಾಗಿ, ನಾಯಕಿಯಾಗಿ ಆ ಕಾವು ಆರದಂತೆ ನೋಡಿಕೊಳ್ಳುತ್ತಾರೆ. ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳ ಬ್ರಾಹ್ಮಣರ ಸಮುದಾಯಕ್ಕೂ ಈ ಆಂದೋಲನ ವ್ಯಾಪಿಸುತ್ತದೆ.

ಕಾಲದ ಚಲನೆಯಲ್ಲಿ ಕಳೆದು ಹೋದಂತಿದ್ದ ಆ ಚಳವಳಿಯ ಅಳಿದುಳಿದ ಸಾಕ್ಷ್ಯಗಳನ್ನು ಸಂಗ್ರಹಿಸಿ, ಹಿರಿಯಜ್ಜಿ ಮಹಾಂಕಾಳಮ್ಮನ ಸಂದರ್ಶನ ನಡೆಸಿ, ದಾಖಲೆಗಾಗಿ ಎಲ್ಲೆಲ್ಲ ಅಲೆದು, ಮಾಹಿತಿಯನ್ನು ಸಂಗ್ರಹಿಸಿದ ಶ್ರೇಯ ಪತ್ರಕರ್ತರಾದ ಕಲಗಾರು ಲಕ್ಷ್ಮೀನಾರಾಯಣ ಹೆಗಡೆ ಮತ್ತು ರಾಜೀವ ಅಜ್ಜೀಬಳರಿಗೆ ಸೇರಬೇಕು. ಇಲ್ಲೂ ಒಂದು ವಿಧಿವಿರ್ಯಾಸವಿದೆ:



ವಿಧವೆಯರು ವಿವಾಹವಾದರು

ಲೇ: ಕಲಗಾರು ಲಕ್ಷ್ಮೀನಾರಾಯಣ ಹೆಗಡೆ

ಪ್ರ:ಬಹುರೂಪಿ ಪ್ರಕಾಶನ

ಸಂ: 7019182729

ಪು: 80 ₹130

ವಿಧವಾ ವಿವಾಹಗಳ ಬಗೆಗಿನ ತುಂಡು ತುಂಡು ಸಾಕ್ಷ್ಯಗಳನ್ನು ಕಲೆಹಾಕುತ್ತಿದ್ದ ಅವಧಿಯಲ್ಲೇ ಕಲಗಾರು ಅವರ ಗರ್ಭಿಣಿ ಪತ್ನಿ ಶೈಲಜಾ ವಿಧಿವಶರಾಗುತ್ತಾರೆ. ಮರುಮದುವೆ ಬೇಡವೆಂದು ಖಿನ್ನತೆಯಲ್ಲಿ ಕಾಲನೂಕುತ್ತಿದ್ದ ಕಲಗಾರು ಸ್ವತಃ ತಮ್ಮ ಅತ್ತೆ-ಮಾವನ ಒತ್ತಾಯದ ಮೇರೆಗೆ, ಮಗುವಿದ್ದ ವಿಧವೆಯನ್ನು ಲಗ್ನವಾಗುತ್ತಾರೆ. ಅಕದಾಸ ಭಟ್ಟರ ಕ್ರಾಂತಿಕೈಂರ್ಯದ ಕೊನೆಯ ಕೊಂಡಿ ಅವರೇ ಆಗುತ್ತಾರೆ. ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳದೆ, ರಾಜೀವ ಅಜ್ಜೀಬಳರ ಜೊತೆಗೂಡಿ ವಿಧವಾ ವಿವಾಹದ ಆಂದೋಲನ ಬಗ್ಗೆ ಕಿರುಪುಸ್ತಕವನ್ನು ಪ್ರಕಟಿಸುತ್ತಾರೆ.

ಶಿರಸಿ, ತಾಳಗುಪ್ಪ, ಸಾಗರದ ಸೀಮಿತ ವಲಯದಲ್ಲೇ ವಿತರಣೆಗೊಂಡು ಮರೆತೂ ಹೋದಂತಿದ್ದ ಆ ಪುಟ್ಟ ಪುಸ್ತಕ ಹೇಗೋ ಜಿ.ಎನ್. ಮೋಹನ್ ಅವರಿಗೆ ಸಿಕ್ಕಿತು. 'ಇದು ನಿನ್ನೆಗೆ ಹಿಡಿದ ಕನ್ನಡಿ; ನಾಳೆಗೆ ನೀಡಿದ ಎಚ್ಚರ' ಎಂದು ನಿರ್ಧರಿಸಿ, ಇದನ್ನೇ ಇನ್ನಷ್ಟು ವಿಸ್ತೃತವಾಗಿ ಬರೆದುಕೊಡುವಂತೆ ಕಲಗಾರು ಲಕ್ಷ್ಮೀನಾರಾಯಣ ಹೆಗಡೆ ಅವರನ್ನು ಕೋರುತ್ತಾರೆ. ಇನ್ನಷ್ಟು ಸಂಗತಿಗಳು ಬೆಳಕಿಗೆ ಬರುವಂತೆ ಮಾಡುತ್ತಾರೆ. ಉದಾಹರಣೆಗೆ: 1921ರ ಜನಗಣತಿ ದಾಖಲೆಯ ಪ್ರಕಾರ ಅಂದು ಇಡೀ ದೇಶದಲ್ಲಿ ಗರ್ಭಧರಿಸುವ ವಯಸ್ಸಿನ ಮಹಿಳೆಯರ ಸಂಖ್ಯೆ 6,11,85,00 ಇದ್ದರೆ, ವಿಧವೆಯರ ಸಂಖ್ಯೆ 60,71,206 (ಶೇಕಡಾ 10)ರಷ್ಟು ದೊಡ್ಡ ಪ್ರಮಾಣದಲ್ಲಿತ್ತು. ನೆಹರೂ ಶಿರಸಿಗೆ ಬಂದಾಗ ಬಹಿರಂಗ ಸಭೆಯಲ್ಲಿ ಅಷ್ಟೊಂದು ವಿಧವೆಯರನ್ನು ನೋಡಿ ದಂಗಾಗಿದ್ದರು.

ಆಗಿನ ಹವ್ಯಕ ಸಮುದಾಯದಲ್ಲಿ ವಿಧವೆಯರು ಗರ್ಭಿಣಿಯರಾಗಿ, ಬಸಿರನ್ನು ಇಳಿಸಿಕೊಳ್ಳಲೆಂದು ಏನೆಲ್ಲ ಯತ್ನಿಸಿ, ಅಥವಾ ಕದ್ದುಮುಚ್ಚಿ ಪ್ರಸವಿಸಿ ಪ್ರಾಣತೆತ್ತವರ ಸಂಖ್ಯೆ ಎಷ್ಟಿತ್ತೊ ಗೊತ್ತಿಲ್ಲ. ಅಂಥ ಹತಭಾಗ್ಯೆಯರಿಗೆ ಹುಟ್ಟಿದ ಮಕ್ಕಳು ಬಹಿಷ್ಕೃತರಾಗಿ ಶೂದ್ರರಿಗೆ ಸಮನಾದ 'ಮಾಲೇರು' ಎಂಬ ಹೊಸ ಸಮುದಾಯವೇ ಸೃಷ್ಟಿಯಾಗಿತ್ತು.

ಈ ಹೊಸ ಕೃತಿಯಲ್ಲಿ ಮಲೆನಾಡಿನ ಕತ್ತಲಯುಗದ ಅಂಥ ಕ್ರೂರ ಕಥನವೂ ಇದೆ, ದೀವಟಿಗೆಯ ಹಳೆಬೆಳಕೂ ಇದೆ.

ಬರ ಹನಿ ಹನಿ ನೀರಿನ ಲೆಕ್ಕ

10ನೇ ಪುಟದಿಂದ...

ಗುಡ್ಡ ಬೆಟ್ಟ ಅಗೆತ, ಅರಣ್ಯ ನಾಶ, ಭೂಕುಸಿತದ ಪರಿಣಾಮಗಳಿಂದ ಅಣೆಕಟ್ಟುಗಳಿಗೆ ಹೂಳು ಭರ್ತಿಯಾಗುತ್ತ ನೀರು ಸಂಗ್ರಹಣಾ ಸಾಮರ್ಥ್ಯ ಕುಸಿಯುತ್ತಿದೆ. ಹೊಸ ನಿರ್ಮಾಣ ಅಸಾಧ್ಯ. ಆಲಮಟ್ಟಿಯ ಅಣೆಕಟ್ಟಿನಲ್ಲಿ ರಾಜ್ಯದ ಪಾಲಿನ ನೀರು ಸಂಗ್ರಹಕ್ಕೆ ನ್ಯಾಯಾಲಯದ ತೀರ್ಪಿದೆ, ಪ್ರಸ್ತುತ 509 ರಿಂದ 519 ಮೀಟರ್‌ಗೆ ನೀರು ಸಂಗ್ರಹಿಸಲು ಸಮ್ಮತಿಯಿದ್ದರೂ 20 ವರ್ಷವಾದರೂ ಏಕೆ ಸಾಧ್ಯವಾಗಿಲ್ಲ! ಮಳೆ ಬಂದರೆ ಪ್ರವಾಹ ಪರಿಹಾರ, ಬೇಸಿಗೆ ಶುರುವಿನಲ್ಲಿ ಬರ ಘೋಷಣೆ ಮಾಡುತ್ತ ಅವರಿವರ ಟೀಕಿಸುವ ಮಾತಿನಿಂದ ನಾಡಿಗೆ ನೀರಾಗುವುದಿಲ್ಲ. ಜನಪ್ರತಿನಿಧಿಗಳು ಜಲಪ್ರತಿಧಿಗಳಾಗುವುದು ಕಾಲದ ಅಗತ್ಯ. ಬರ, ನದಿ, ಕಾಡು, ಕೆರೆ, ಕೃಷಿ ಕುರಿತ ಇವರೆಲ್ಲರ ಅಜ್ಞಾನ ಭವಿಷ್ಯದ ಇನ್ನಷ್ಟು ಜಲಕ್ಷಾಮಕ್ಕೆ ಆಹ್ವಾನ ನೀಡುತ್ತಿದೆ.

ವಿಚಿತ್ರವೆಂದರೆ ಕೃಷಿ ನೀರಾವರಿ, ಆಹಾರ ಧಾನ್ಯ ಉತ್ಪಾದನೆ ಕನಸಿನೊಂದಿಗೆ ಶುರುವಾದ ಬೃಹತ್ ನೀರಾವರಿ ಯೋಜನೆಗಳು ಅಧಿಕ ನೀರು ಬಳಸುವ ಕಬ್ಬು, ಭತ್ತ, ಅಡಿಕೆ ಬೆಳೆ ವಿಸ್ತರಣೆಯ ಸಾಧ್ಯತೆಯಾಗಿವೆ. ಮಲಪ್ರಭಾ,ಘಟಪ್ರಭಾ ನದಿ ಸೇರಿದಂತೆ ಇಡೀ ಕೃಷ್ಣಾ ಕಣಿವೆ ಒಣಗುತ್ತಿದೆ. ಬೀದರಿನ ಮಾಂಜ್ರಾ, ಬಳ್ಳಾರಿಯ ಹಗರಿ ಹಳ್ಳ ಸೇರಿದಂತೆ ಬಹುತೇಕ ನದಿಗಳು ಮರಳು ಅಗೆತಕ್ಕೆ ಸೋತಿವೆ. ಕಾವೇರಿ ಹರಿವು ನಿಲ್ಲಿಸಿದೆ. ಕೃಷಿಗೆ ನೀರು ಕೊಡುವುದಕ್ಕಿಂತ ಕುಡಿಯುವ ನೀರಿನ ಅಗತ್ಯ ಪೂರೈಸುವುದು ನಾರಾಯಣಪುರ, ಆಲಮಟ್ಟಿ, ತುಂಗಭದ್ರಾ, ಕೃಷ್ಣರಾಜ ಸಾಗರ ಅಣೆಕಟ್ಟುಗಳ ಮುಖ್ಯ ಕಾರ್ಯವಾಗಿದೆ. ಭದ್ರಾ ಕಾಲುವೆಗೆ ನೀರು ಹರಿಸಿದರೆ ಸಾಲು ಸಾಲು ಟ್ಯಾಂಕರ್‌ಗಳು ನೀರು ಒಯ್ಯುವ ಚಿತ್ರಗಳು ನಾಳಿನ ಪರಿಸ್ಥಿತಿಯ ದಿಕ್ಸೂಚಿ.

ಕಳಕೊಂಡಿದ್ದನ್ನು ಎಲ್ಲಿ ಹುಡುಕಬೇಕು? ಎಲ್ಲಿ ಕಳೆದಿದೆಯೋ ಮೊದಲು ಅಲ್ಲಿ ಹುಡುಕೋಣ. 2001 ರಿಂದ ಪ್ರೌಢಶಾಲಾ ಮಕ್ಕಳಿಗೆ ನಿಸರ್ಗ ವಿಸ್ಮಯ ಪರಿಸರ ಶಿಕ್ಷಣ ಕಾರ್ಯಕ್ರಮ ಮಾಡುವಾಗ ರಾಜ್ಯದ ನದಿ, ಕುಡಿಯುವ ನೀರಿನ ಕುರಿತ



ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾದಾಗ ಕಲಬುರಗಿ ತಾಲ್ಲೂಕಿನ ಗಬ್ಬೂರ ಗ್ರಾಮದಲ್ಲಿ ಈ ದೃಶ್ಯ ಸಾಮಾನ್ಯ

ಪ್ರಶ್ನೆ ಕೇಳಲು ಶುರು ಮಾಡಿದೆ. 24 ವರ್ಷಗಳಲ್ಲಿ ಸುಮಾರು ಒಂದೂವರೆ ಲಕ್ಷ ಮಕ್ಕಳು ಶಿಬಿರಕ್ಕೆ ಬಂದು ಉತ್ತರಿಸಿದ್ದಾರೆ. ರಾಜ್ಯದ ನದಿಯ ಹೆಸರು ಕೇಳಿದರೆ 'ನೈಲ್' ನದಿಯ ಹೆಸರು ಬರೆದ ಮಕ್ಕಳ ಸಂಖ್ಯೆ ಜಾಸ್ತಿಯಿದೆ! ಊರಿನ ಕಾಡು, ಕೃಷಿ, ನದಿ, ನೀರಿನ ಬಳಕೆ, ಸಂರಕ್ಷಣೆಯ ಪ್ರಾಯೋಗಿಕ ಶಿಕ್ಷಣವಿಲ್ಲ. ವಾರ್ಷಿಕ ಎಷ್ಟು ಮಳೆ ಸುರಿಯಿತು? ಸರಾಸರಿ ಮಳೆ ಎಷ್ಟು? ಕುಡಿಯುವ ನೀರಿನ ಮೂಲ ಯಾವುದು? ಎಂಬುದು ಪ್ರಶ್ನೆಯಲ್ಲ. ಸುರಿದ ಮಳೆ ಹನಿ ಸಂರಕ್ಷಣೆಗೆ ಕಾಡು, ಕೃಷಿ, ಕೆರೆ, ಬಾವಿಗಳನ್ನು ಸಂರಕ್ಷಿಸಿ ಸಕಾಲಕ್ಕೆ ಸಜ್ಜುಗೊಳಿಸುವ ನೀರ ನ್ಯಾಯದ ನಾಗರಿಕ ಕಾಳಜಿ ಮುಖ್ಯ.




ಮೊದಲ ಓದು

ಕ್ಯಾನ್ಸರ್ ಗೆದ್ದು ಬಂದ ದಿಟ್ಟ ಮಹಿಳೆ

ವ್ಯಕ್ತಿಯ ಬದುಕು, ಪರಿವಾರ ಎರಡನ್ನೂ ನುಂಗಿನೊಣೆಯುವ ಮಹಾಮಾರಿ ಎಂದರೆ ಅದು ಕ್ಯಾನ್ಸರ್. ಒಮ್ಮೆ ಈ ಅರ್ಬುದ ವಕ್ಕರಿಸಿತೆಂದರೆ ಬದುಕನ್ನು ಹಿಂಡಿ ಹಿಪ್ಪೆ ಮಾಡುತ್ತದೆ. ದೈಹಿಕ, ಮಾನಸಿಕ, ಸಾಮಾಜಿಕ, ಕೌಟುಂಬಿಕ, ಆರೋಗ್ಯವನ್ನು ಸಂಪೂರ್ಣ ಹದಗೆಡಿಸುವ ಕ್ಯಾನ್ಸರ್ ಈಗೀಗ ಬಡವ-ಶ್ರೀಮಂತ, ಎಳೆವಯಸ್ಸು, ಹದಿವಯಸ್ಸು, ಮುದಿವಯಸ್ಸು ಎನ್ನದೆ ಎಲ್ಲ ವರ್ಗದವರನ್ನೂ ಕಾಡುತ್ತಿದೆ. ಕೆಲವು ಧೈರ್ಯವಂತರು ಕ್ಯಾನ್ಸರ್ ಬಂದಿದೆ ಎಂದು ಗೊತ್ತಾದರೂ ಎದೆಗುಂದದೆ ದಿಟ್ಟತನದಿಂದ ಎದುರಿಸುತ್ತಾರೆ. ಈ ಮಹಾರೋಗವನ್ನು ಮೆಟ್ಟಿನಿಂತು, ಆತ್ಮವಿಶ್ವಾಸ, ಛಲದೊಂದಿಗೆ ಮುಂದಿನ ಬದುಕನ್ನು ಸಾಗಿಸುತ್ತಾರೆ. ಅಂಥವರಲ್ಲಿ ದೊಡ್ಡಕರುಳಿನ ಕ್ಯಾನ್ಸರ್ ಬಂದಿದ್ದರೂ ಅದನ್ನು ಧೈರ್ಯವಾಗಿ ಎದುರಿಸಿ ಮರುಜನ್ಮ ಪಡೆದವರು ಭೌತಶಾಸ್ತ್ರ ಪ್ರಾಧ್ಯಾಪಕಿ ಗಾಯತ್ರಿಮೂರ್ತಿ.

ಕ್ಯಾನ್ಸರ್‌ನೊಂದಿಗೆ ಹೋರಾಡಿ, ಅಪಾಯದಿಂದ ಪಾರಾಗಿ ಬಂದ ಪರಿಯನ್ನು ಈ ಕಿರುಹೊತ್ತಗೆಯಲ್ಲಿ ಹೃದಯಂಗಮವಾಗಿ, ಕಣ್ಣಿಗೆ ಕಟ್ಟುವ ಹಾಗೆ ಕಟ್ಟಿಕೊಟ್ಟಿದ್ದಾರೆ. ಕಾಯಿಲೆಯ ಆರಂಭದ ರಕ್ತಪರೀಕ್ಷೆ, ಸ್ಕ್ಯಾನಿಂಗ್, ಬಯಾಪ್ಸಿಯಿಂದ ಹಿಡಿದು ರೇಡಿಯೊಥೆರಪಿ, ಕಿಮೋಥೆರಪಿ, ಸರ್ಜರಿವರೆಗಿನ ಹೋರಾಟದ ಹಂತ ಹಂತವನ್ನು ಯಥಾವತ್ತಾಗಿ ವಿವರಿಸಿ, ಕ್ಯಾನ್ಸರ್ ಅನ್ನು ಗೆಲ್ಲಬಹುದು, ಸಹಜ ಜೀವನ ನಡೆಸಬಹುದು ಎಂಬುದನ್ನು ಕೃತಿಯಲ್ಲಿ ವಿವರಿಸಿದ್ದಾರೆ. ಕ್ಯಾನ್ಸರ್ ಎಂದರೆ ಧೈರ್ಯ ಕಳೆದುಕೊಂಡು, ಆಕಾಶವೇ ತಲೆಮೇಲೆ ಬಿದ್ದ ಹಾಗೆ ಹೆದರಿ, ಹೃದಯಾಘಾತವಾಗಿ ಪ್ರಾಣ ಬಿಡುವ ಮಂದಿಗೆ ಈ ಬರಹ ಸ್ಫೂರ್ತಿ ನೀಡಬಲ್ಲದು. ಈ ಹೊತ್ತಗೆಯಲ್ಲಿ ತಮ್ಮ ಅನುಭವ ಕಥನ ಮಾತ್ರವಲ್ಲದೆ ವೈದ್ಯಕೀಯ ಪರಿಭಾಷೆಗಳಾದ ಪೆಟ್ ಸ್ಕ್ಯಾನ್, ಕಿಮೋಥೆರಪಿಗಳ ಸ್ವರೂಪ, ಇದರಿಂದ ಉಂಟಾಗುವ ಅಡ್ಡಪರಿಣಾಮಗಳು, ಮಾನಸಿಕ ವೇದನೆ ಎಲ್ಲವನ್ನೂ ಚಿತ್ರಿಸಿರುವುದು ಓದುಗರಿಗೆ ಕ್ಯಾನ್ಸರ್ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳಲು ಅನುವಾಗುವಂತಿದೆ. ಕ್ಯಾನ್ಸರ್ ರೋಗಿಯ ಮನೋಬಲ ಹೆಚ್ಚಿಸಲು ಕುಟುಂಬದವರ ಸಹಕಾರ, ಪ್ರೀತಿ ವಾತ್ಸಲ್ಯ ಎಷ್ಟು ಅಗತ್ಯ ಎಂಬುದನ್ನೂ ಪುಸ್ತಕದಲ್ಲಿ ವಿವರಿಸಿರುವುದು ಈ ರೋಗದ ಬಗ್ಗೆ ಆಳವಾಗಿ ತಿಳಿದುಕೊಳ್ಳಲು ಸಹಕಾರಿಯಾಗಿದೆ. ಒಟ್ಟಿನಲ್ಲಿ 'ಅಂಜದಿರು ಮನವೇ' ಕೃತಿ ಸಂಗ್ರಹಯೋಗ್ಯ.



ಅಂಜದಿರು ಮನವೇ


ಲೇ: ಗಾಯತ್ರಿ ಮೂರ್ತಿ

ಪ್ರ: ನವಕರ್ನಾಟಕ

ಸಂ: 08022161900

ಪು: 112 ₹140

ಮಲೆನಾಡಿನ ಜೀವ ವೈವಿಧ್ಯ ವರ್ಣನೆ



ಕಾಳಿಂಗ ಕಥನ

ಲೇ: ನೆಂಪೆ ದೇವರಾಜ್

ಪ್ರ: ಭಾಗ್ಯಶಂಕರ ಪ್ರಕಾಶನ

ಸಂ: 7795091222

ಪು: 100 ₹150

ಕಾಳಿಂಗನನ್ನು ಕಥಾ ವಸ್ತುವನ್ನಾಗಿ ಇಟ್ಟುಕೊಂಡು ಮಲೆನಾಡಿನ ಜೀವ ವೈವಿಧ್ಯತೆಯನ್ನು ಕಟ್ಟಿಕೊಡುವ ಕಿರು ಪುಸ್ತಕ ಇದು. ಮೇಲ್ನೋಟಕ್ಕೆ ಕಾಳಿಂಗ ಸರ್ಪದ ಕುರಿತೇ ಇರುವ ಪುಸ್ತಕ ಎಂದು ಮೇಲ್ನೋಟಕ್ಕೆ ತೋರಿದರೂ, ಅಲ್ಲಿ ಬೇರೆಯದೇ ಕಥೆಗಳಿಗೆ / ಘಟನೆಗಳಿಗೆ ಜಾಗವಿದೆ.

ಕಥೆ ರೂಪದಲ್ಲಿ ಹೆಣೆದಿದ್ದರೂ ಹಲವು ನಿಜ ಸಂಗತಿಗಳು, ಮಲೆನಾಡಿನ ರೈತರ ಬವಣೆ, ಅಧಿಕಾರಶಾಹಿಯ ಗೊತ್ತುಗುರಿಯಿಲ್ಲದ ನಿರ್ಧಾರಗಳು, ಪ್ರಕೃತಿಯ ನಿಗೂಢತೆ, ಲೇಖಕರ ಕಾಳಜಿ, ಆಕ್ರೋಶ, ಪರಿಸರ ಪ್ರೇಮ ಈ ಪುಸ್ತಕದಲ್ಲಿ ಮಿಳಿತವಾಗಿದೆ.

ರಾಜೀವ ಈ ಕಥೆಯ ನಾಯಕ. ತನ್ನ ಅಡಿಕೆ ತೋಟದ ಮೂಲೆಯಲ್ಲಿ ಬೆಳೆದಿರುವ ಕೋಕೊ ಮರಗಳ ಕೆಳಗೆ ಮಗುಮ್ಮಾಗಿ ಮಲಗಿರುವ, ಕಾಳಿಂಗನನ್ನು ಹೋಲುವ ಆಕೃತಿಯ ರಾಜೀವನ ತಲೆಯಲ್ಲಿ ನೆನಪುಗಳ ಮೆರವಣಿಗೆಯನ್ನೇ ಮಾಡಿಸುತ್ತದೆ. ಈ ನೆನಪುಗಳಲ್ಲಿ ಮಲೆನಾಡ ಜನರ ಜೀವನನ್ನು ಲೇಖಕರು ವಿವರಿಸಿದ್ದಾರೆ. ಅಲ್ಲಿನ ಪ್ರಕೃತಿ ಸೌಂದರ್ಯ, ಕೃಷಿ, ಕೃಷಿಕರ ಬವಣೆ, ಶಿಕಾರಿ, ಹಾವುಗಳ ಬಗ್ಗೆ ಜನರಲ್ಲಿ ಇರುವ ಭಯ ಹಾಗೂ ಮೂಢನಂಬಿಕೆ, ಪ್ರಕೃತಿ ಜತೆಗಿನ ಜನರ ಸಹಬಾಳ್ವೆ, ಮಂಕಿ ಪಾರ್ಕ್‌ನಂತಹ ಸರ್ಕಾರದ ಮುಂದಾಲೋಚನೆ ಇಲ್ಲದ ನಿರ್ಧಾರಗಳು, ಬಂಡವಾಳಶಾಹಿಗಳ ಲಾಭಕೋರತನ ಪುಸ್ತಕದಲ್ಲಿ ದಾಖಲಾಗಿದೆ. ರೈತ ಹೋರಾಟಕ್ಕೂ ಕಥೆಯಲ್ಲಿ ಜಾಗವಿದೆ. ಜನಜಾಗೃತಿಯ ಕಾಳಜಿಯೂ ವ್ಯಕ್ತವಾಗಿದೆ.

ದೂಮನಾಯ್ಕ ಎನ್ನುವ ಕಥಾ ಪಾತ್ರದ ಸಾಹಸಕ್ಕೆ ಊರವರಿಂದ ಮನ್ನಣೆ ಸಿಗದಿರುವುದು, ಮಗ ಸತ್ತರೂ ಹಾವಿನ ಬಗ್ಗೆ ಮಹಿಳೆಯೊಬ್ಬರ ಮೌಢ್ಯ ನಿವಾರಣೆಯಾಗದಿರುವುದು, ಕೋತಿಗಳ ಬಗ್ಗೆ ಜನರಿಗೆ ಇರುವ ಆಕ್ರೋಶದ ಕಟ್ಟೆ ಒಡೆಯುವುದು ಓದುಗನಿಗೆ ಮಿಶ್ರ ಭಾವ ಮೂಡಿಸುತ್ತದೆ.

ಪ್ರತಿಯೊಂದನ್ನೂ ಪ್ರಶ್ನಿಸುತ್ತಲೇ ಸಂಶೋಧನಾ ಕಣ್ಣಿರುವ ವ್ಯಕ್ತಿಯಾಗಿ ಕಥಾನಾಯಕನ್ನು ಚಿತ್ರಿಸಿರುವುದು ಲೇಖಕರ ಹೆಚ್ಚುಗಾರಿಕೆ. ಸ್ಥಳೀಯ ಪದಗಳನ್ನೇ ಬಳಸಿರುವುದು ಬೇರೆ ಭಾಗದ ಓದುಗನಿಗೆ ಪಥ್ಯವಾಗುವುದು ಕಷ್ಟ. ಪ್ರಕೃತಿಯ ವರ್ಣನೆ ಅಗತ್ಯಕ್ಕಿಂತ ಹೆಚ್ಚಿದೆ. ಅದಾಗ್ಯೂ ಪರಿಸರ ಸಾಹಿತ್ಯವನ್ನು ಓದುಗನಿಗೆ ರುಚಿಸುವಂತೆ ಮಾಡುವ ಲೇಖಕರ ಪ್ರಯತ್ನ ಗಮನಾರ್ಹ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಗೋತ್ರಸ್ಕಂಧ

ಗೋತ್ರಸ್ಕಂಧ (ನಾ). ಬೆಟ್ಟದ ತುದಿ
(ಗೋತ್ರ + ಸ್ಕಂಧ)

ಭರತನು ಚಿತ್ರಕೂಟಕ್ಕೆ ತಾಯಿಯರು ಹಾಗೂ ಪರಿವಾರದೊಡನೆ ಬಂದು ರಾಮಚಂದ್ರನ ಪಾದುಕೆಗಳನ್ನು ಪಡೆಯುವನು. ಅವನು ಅವರೆಲ್ಲರೊಡನೆ ಅಯೋಧ್ಯಾ ನಗರಾಭಿಮುಖವಾಗಿ ಹಿಂದಿರುಗುವನು. ಆಗ ಅವರನ್ನು ರಾಮ ಸೀತೆ ಲಕ್ಷ್ಮಣರು ಮುನಿಸಂಕುಲದೊಡನೆ ಬೆಟ್ಟದ ತುದಿಯಲ್ಲಿ ನಿಂತು ಕಣ್ಣಿನ ದೃಷ್ಟಿ ಮುಟ್ಟುವವರೆಗೂ ನೋಡುವರು. ಅವರು ನಿಂತ ಬೆಟ್ಟದ ತುದಿಯನ್ನು ಕುವೆಂಪು ಅವರು 'ಗೋತ್ರ ಸ್ಕಂಧ' ಎನ್ನುವ ಹೊಸ ಪದದಿಂದ ಚಿತ್ರಿಸಿದ್ದಾರೆ.

ಗೋತ್ರಸ್ಕಂಧಮಂ ಮೆಟ್ಟಿ, ಕಣ್ದಿಟ್ಟಿ
ಮುಟ್ಟುವನ್ನೆಗಮಟ್ಟಿ ನೋಡುತಿರೆ ಸೌಮಿತ್ರಿ ಮೇಣ್
ರಾಮಸೀತೆಯರೊಡನೆ ನಿಂದ ಮುನಿಸಂಕುಲಂ;
ಭರತವಾಹಿನಿ ದಾಂಟಿದತ್ತು ಮಂದಾಕಿನಿಯ
ವಾಹಮಂ.

ಚೆಂದೊಂಗಲ್ಚೆಂ

ದೊಂಗಲ್ (ನಾ). ಕೆಂಪಾದ ಗೊಂಚಲು, ಚಿಗುರಿನ ಗೊಂಚಲು (ಚೆಂ + ತೊಂಗಲ್)

ಸೀತಾ ಫಲದ ಬಯಕೆಯಿಂದ ರಘುಕುಲ ಸೂರ್ಯನಾದ ರಾಮಚಂದ್ರನು ತನ್ನ ಬಿಳಿಯಾನೆ ಸೊಂಡಿಲಿನಂತಹ ನೀಳ ತೋಳಿನಿಂದ ಕಲ್ಪವೃಕ್ಷ ಸಮನಾದ ಶಿವಧನುಸ್ಸನ್ನು ಹಿಡಿದು ಅಲುಗಾಡಿಸಿದ ಎಂದು ಕವಿ ವರ್ಣಿಸಿದ್ದಾರೆ. ಅದಕ್ಕೂ ಮೊದಲು ಅವರು ಆ ತೋಳುಗಳನ್ನು ಇಂದ್ರನ ಐರಾವತದ ಸೊಂಡಿಲಿನಂತೆ ಬಲಯುತವಾಗಿತ್ತು ಎಂದು ಹೇಳಲು ಐರಾವತದ ಚಿತ್ರಣ ನೀಡಿದ್ದಾರೆ.

ಆ ಐರಾವತಕ್ಕೆ ಅಗ್ನಿಯು ತನ್ನ ಅಂಗಳದ ಮಾಂದಳಿರ 'ಚೆಂದೊಂಗಲ'ನ್ನು ನೀಡಿದ ಎಂದು ಬಣ್ಣಿಸಿದ್ದಾರೆ. ಅಗ್ನಿಯ ಕೆಂಪು, ಮಾವಿನ ಚಿಗುರ ಕೆಂಪು 'ಚೆಂದೊಂಗಲ್' ಪದದಲ್ಲಿ ಪ್ರತಿಫಲಿಸಿದೆ!

ಅಗ್ನಿ ನೀಡಿದನಲ್ತೆ
ತನ್ನಂಗಳದ ಮರದ ಮಾಂದಳಿರ
ಚೆಂದೊಂಗಲಂ?

ಛಾಯಾಶರೀರ

ಛಾಯಾಶರೀರ (ನಾ). 1. ದೇಹದ ನೆಳಲು. 2. (ಆಲಂ) ನೆರಳಿನಂತೆ ಯಾವಾಗಲೂ ಅನುಸರಿಸುವವನು.

[ಸಂ. (ಛಾಯಾ + ಶರೀರ)]

ಕುವೆಂಪು ಅವರು ಭರತ ಮತ್ತು ಶತ್ರುಘ್ನರ ಸಹೋದರತ್ವವನ್ನು ಚಿತ್ರಿಸುವಾಗ 'ಛಾಯಾಶರೀರ' ಎಂಬ ಪದ ಬಳಸಿದ್ದಾರೆ. ಭರತನನ್ನು ಶತ್ರುಘ್ನನು ನೆರಳಿನಂತೆ ಅನುಸರಿಸುತ್ತಿದ್ದನು ಎಂದು ಆ ಪದವನ್ನು ಆಲಂಕಾರಿಕವಾಗಿ ಪ್ರಯೋಗಿಸಿದ್ದಾರೆ

ಬಾಲಋಷಿ ಭರತನಿಗೆ ಮತ್ತು ರಾಜ್ಯಕ್ಕೆ ರಕ್ಷಣೆಯಾಗಿದ್ದವನು ಶತ್ರುಘ್ನ. ಕವಿ 'ನಾಮ ಲಕ್ಷ್ಯಕ್ಕೆ ಲಕ್ಷಣಂ ತಾನೆನಲ್' ಎಂದು ಅವನ ಹೆಸರಿನ ವಿಶಿಷ್ಟ ಗುಣವನ್ನು ತಿಳಿಸಿದ್ದಾರೆ.

ಭರತಂಗೆ
ಛಾಯಾ ಶರೀರವೆನೆ ಶತ್ರುಘ್ನನಿರ್ದನು ತನ್ನ
ನಾಮ ಲಕ್ಷ್ಯಕ್ಕೆ ಲಕ್ಷಣಂ ತಾನೆನಲ್.

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಮೂಲ: ಉದಯ ಪ್ರಕಾಶ್
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್ ಅವರ

ಡಬ್ಬಿ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story


ಕವನ

ಸವಿತಾ ನಾಗಭೂಷಣ ಅವರ

ತಕರಾರು

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry



ಸಿನಿ ಸಮ್ಮಾನದ ತಾಂತ್ರಿಕ ತೀರ್ಪುಗಾರರು

‘ಪ್ರಜಾವಾಣಿ’ ಪತ್ರಿಕೆಗೆ 75 ವರ್ಷ ತುಂಬಿದ ಸಂದರ್ಭದಲ್ಲಿ, ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂಲಕ ಪತ್ರಿಕೆ ಹಾಗೂ ಕನ್ನಡ ಸಿನಿಮಾ ನಂಟಿಗೆ ಹೊಸ ಆಯಾಮ ದೊರಕಿತು. 2023ರ ಜೂನ್ 3ರಂದು ಬೆಂಗಳೂರಿನಲ್ಲಿ ನಡೆದ ‘ಸಿನಿ ಸಮ್ಮಾನ’ದ ಚೊಚ್ಚಲ ಆವೃತ್ತಿಯಲ್ಲಿ 2022ರಲ್ಲಿ ತೆರೆಕಂಡ ಕನ್ನಡ ಚಿತ್ರಗಳನ್ನು ಪರಿಗಣಿಸಿ, ಅವುಗಳಲ್ಲಿನ ಪ್ರತಿಭಾನ್ವಿತ ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡಲಾಯಿತು. ಈ ವರ್ಷ ನಡೆಯಲಿರುವ ಎರಡನೇ ಆವೃತ್ತಿಗೆ 2023ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದ್ದು, ನೂರಕ್ಕೂ ಅಧಿಕ ಸಿನಿಮಾಗಳು ಸ್ಪರ್ಧೆಯಲ್ಲಿ ಭಾಗವಹಿಸಿವೆ. ಈ ಸಿನಿಮಾಗಳನ್ನು ಇದೀಗ 21 ತಾಂತ್ರಿಕ ತೀರ್ಪುಗಾರರಿಗೆ ಹಂಚಲಾಗಿದೆ. ಈ ಸಂದರ್ಭದಲ್ಲಿ ಆಡಿಟ್ ಪಾರ್ಟ್‌ನರ್ ಆಗಿ ‘ಇವೈ’ ಸಂಸ್ಥೆ ಜೊತೆಯಾಗಿದೆ. ತಾಂತ್ರಿಕ ತೀರ್ಪುಗಾರರ ಮಂಡಳಿಯಲ್ಲಿ ಸಿನಿಮಾ ರಂಗದಲ್ಲಿ ಅಪಾರ ಅನುಭವ ಹೊಂದಿರುವವರಿದ್ದು, ಇವರು ಸಿನಿಮಾಗಳನ್ನು ವೀಕ್ಷಿಸಿ ಎರಡು ವಿಭಾಗದಲ್ಲಿರುವ 19 ಪ್ರಶಸ್ತಿಗಳಿಗೆ ತಲಾ 5 ನಾಮನಿರ್ದೇಶನಗಳನ್ನು ನೀಡಲಿದ್ದಾರೆ. ಈ ಪ್ರಕ್ರಿಯೆ ಆರಂಭವಾಗಿದ್ದು, ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಈ ಹಂತದಲ್ಲಿ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ತಾಂತ್ರಿಕ ತೀರ್ಪುಗಾರರನ್ನು ಪರಿಚಯಿಸುವ ಸಮಯ ಇದಾಗಿದೆ.



ಶಶಿಧರ ಅಡಪ ಕಲಾ ನಿರ್ದೇಶಕ

ಗಂಗಾಧರ್ ಮೊದಲಿಯಾರ್ ಸಿನಿಮಾ ವಿಮರ್ಶಕ

ಎಂ.ಎಸ್.ಸ್ವಾಮಿ ಸಂಕಲನಕಾರ

ಎಸ್.ವಿಶ್ವನಾಥ್ ಸಿನಿಮಾ ವಿಮರ್ಶಕ

ಪೂಜಾ ಗಾಂಧಿ ನಟಿ

ಎಚ್.ಎಂ.ರಾಮಚಂದ್ರ ಸಿನಿಮಾ ಛಾಯಾಚಿತ್ರಗ್ರಾಹಕ

ನಾಗೇಂದ್ರ ಪ್ರಸಾದ್ ಚಿತ್ರಸಾಹಿತಿ–ನಿರ್ದೇಶಕ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ



ಪ್ರತಿಭಾ ನಂದಕುಮಾರ್ ಸಾಹಿತಿ- ಸಿನಿಮಾ ವಿಮರ್ಶಕಿ

ಜಾನ್ಸನ್ ಧ್ವನಿ ಗ್ರಹಣ ಪರಿಣಿತ

ಎಂ.ಡಿ.ಪಲ್ಲವಿ, ಗಾಯಕಿ–ಸಂಗೀತ ನಿರ್ದೇಶಕಿ

ಅನೂಪ್ ಸೀಳಿನ್ ಸಂಗೀತ ನಿರ್ದೇಶಕ

ಜಯತೀರ್ಥ ನಿರ್ದೇಶಕ

ಅಬ್ಬೂರು ಪ್ರಕಾಶ್ ಸಿನಿಮಾ ವಿಮರ್ಶಕ



ಹರಿಣಿ ನೃತ್ಯ ನಿರ್ದೇಶಕಿ

ಸಂಧ್ಯಾರಾಣಿ ಸಾಹಿತಿ–ಸಿನಿಮಾ ವಿಮರ್ಶಕಿ

ಉದಯ ರವಿ ಹೆಗಡೆ ವಿಎಫ್‌ಎಕ್ಸ್ ಪರಿಣಿತ

ಸಂಪತ್ ಕುಮಾರ್ ನಟ

ಚಂಪಾ ಶೆಟ್ಟಿ ನಿರ್ದೇಶಕಿ

ಸುನಿಲ್ ಕಾಮತ್ ಕಲರ್ ಗ್ರೇಡಿಂಗ್ ಪರಿಣತ

ಪ್ರೀತಿ ನಾಗರಾಜ್ ಸಿನಿಮಾ ವಿಮರ್ಶಕಿ

ಹರೀಶ್ ಮಲ್ಯ ಸಿನಿಮಾ ವಿಮರ್ಶಕ

ತಿರಸ್ಕಾರದ ನೆಲದಲ್ಲೇ...

10ನೇ ಪುಟದಿಂದ...

ತಿರಸ್ಕಾರ ಭಾವದಿಂದ ನೋಡಿದರು. ಬಾಡಿಗೆ ಇಲ್ಲದ ದಿನಗಳನ್ನು ನೋಡಬೇಕಾಯಿತು. ಜೀವನದುದ್ದಕ್ಕೂ ಅವಮಾನವನ್ನೇ ಬೆನ್ನಿಗೆ ಕಟ್ಟಿಕೊಂಡು ಬಂದಿದ್ದರಿಂದ ಕಾವೇರಿ ಆತ್ಮವಿಶ್ವಾಸ ಕಳೆದುಕೊಳ್ಳಲಿಲ್ಲ. ದಿನ ಕಳೆದಂತೆ ಸ್ಥಳೀಯರ ಪ್ರೀತಿ, ವಿಶ್ವಾಸ ಗಳಿಸುತ್ತಾ ಹೋದರು. ಆಟೊ ಹತ್ತಲು ಹಿಂಜರಿಯುತ್ತಿದ್ದವರೇ ಅವರ ಛಲದ ಬದುಕು ಕಂಡು ಕಾಯಂ ಗ್ರಾಹಕರಾದರು. ಮಾತನಾಡಲೂ ಹಿಂಜರಿಯುತ್ತಿದ್ದವರು ಫೋನ್ ಮಾಡಿ ಬಾಡಿಗೆಗೆ ಕರೆಯಲು ಆರಂಭಿಸಿದರು ಎನ್ನುವಾಗ ಕಾವೇರಿ ಅವರ ಕಣ್ಣಾಲಿಗಳು ತುಂಬಿಬಂದವು.

‘ಬೆಂಗಳೂರಿನಲ್ಲಿ ವಾಸವಿದ್ದಾಗ ಪಕ್ಕದ ಮನೆಯಲ್ಲಿದ್ದ ಆಟೊ ಚಾಲಕರೊಬ್ಬರ ಸಹಾಯದಿಂದ ಆಟೊ ಚಾಲನೆಯನ್ನು ಕಲಿತೆ. ಕುತೂಹಲಕ್ಕಾಗಿ ಕಲಿತದ್ದು ಇದೀಗ ಬದುಕಿಗೆ ದಾರಿಯಾಗಿದೆ’ ಎಂದು ಹೆಮ್ಮೆಯಿಂದ ಹೇಳುತ್ತಾರೆ ಕಾವೇರಿ.

ಆಟೊರಿಕ್ಷಾ ಖರೀದಿಸಲು ಆರ್ಥಿಕ ಸಮಸ್ಯೆ ಎದುರಾದಾಗ ಬ್ರಹ್ಮಾವರದ ಚೇರ್ಕಾಡಿಯ ಸಮೃದ್ಧಿ ಮಹಿಳಾ ಮಂಡಳಿ ಹಾಗೂ ಇನ್ನರ್‌ವೀಲ್ ಕ್ಲಬ್ ₹ 60 ಸಾವಿರ ನೆರವು ನೀಡಿದವು. ಸಹಕಾರ ಸಂಘಗಳು ಉಳಿದ ಹಣವನ್ನು ಸಾಲದ ರೂಪವಾಗಿ ನೀಡಿದವು. ಹ್ಯುಮಾನಿಟಿ ಟ್ರಸ್ಟ್‌ನ ರೋಷನ್ ಬೆಳ್ಮಣ್ಣು ಆಟೊರಿಕ್ಷಾ ಮೇಲಿದ್ದ ಸಂಪೂರ್ಣ ಸಾಲವನ್ನು ಭರಿಸಿದರು. 51 ಚರ್ಚ್‌ಗಳ ಒಕ್ಕೂಟವಾಗಿರುವ ಸುಗಮ್ಯ ಸ್ತ್ರೀ ಸಂಘಟನೆ ಹಾಗೂ ಹ್ಯುಮಾನಿಟಿ ಟ್ರಸ್ಟ್ ಪುಟ್ಟಮನೆ ಕಟ್ಟಿಕೊಳ್ಳಲು ಆರ್ಥಿಕ ನೆರವು ನೀಡಿದವು.

‘ಪ್ರೌಢಾವಸ್ಥೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಹೆಚ್ಚಾಗಿ ಮನೆ ತೊರೆಯುವುದರಿಂದ ವಿದ್ಯಾಭ್ಯಾಸ ಮೊಟಕುಗೊಳ್ಳುತ್ತದೆ. ಹೆಚ್ಚಿನವರು ಎಸ್ಸೆಸ್ಸೆಲ್ಸಿ ಕೂಡ ಮುಗಿಸಿರುವುದಿಲ್ಲ. ವಿದ್ಯೆಯೇ ಉದ್ಯೋಗಕ್ಕೆ ಪ್ರಮುಖ ಮಾನದಂಡವಾಗಿರಬಾರದು, ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಉದ್ಯೋಗಾವಕಾಶಗಳು ದೊರೆಯಬೇಕು. ಭಿಕ್ಷಾಟನೆ, ಲೈಂಗಿಕ ವೃತ್ತಿ ಇಷ್ಟಪಟ್ಟು ಮಾಡುವ ಕೆಲಸವಲ್ಲ; ಬದುಕಲು ಅನಿವಾರ್ಯತೆಗೆ ಆಯ್ಕೆ ಮಾಡಿಕೊಳ್ಳುವ ವೃತ್ತಿಯಷ್ಟೆ. ಬಹಳಷ್ಟು ಲಿಂಗತ್ವ ಅಲ್ಪಸಂಖ್ಯಾತರು ಸ್ವಾಭಿಮಾನದ ಬದುಕಿನ ಕನಸು ಕಾಣುತ್ತಿದ್ದು ಸಮಾಜ ಅವಕಾಶ ನೀಡಬೇಕು’ ಎನ್ನುತ್ತಾರೆ ಕಾವೇರಿ.

ಮಾನಸಿಕ ತೊಳಲಾಟ, ಆರ್ಥಿಕ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಸಾವಿರಾರು ಲಿಂಗತ್ವ ಅಲ್ಪಸಂಖ್ಯಾತರು ಒಲ್ಲದ ಮನಸ್ಸಿನಿಂದ ಭಿಕ್ಷಾಟನೆ, ಲೈಂಗಿಕ ವೃತ್ತಿಯಲ್ಲಿ ತೊಡಗಿದ್ದು, ಅದರಿಂದ ಹೊರಬರಲಾಗದೆ ಒದ್ದಾಡುತ್ತಿದ್ದಾರೆ. ಅವರನ್ನೆಲ್ಲ ಸಮಾಜದ ಮುಖ್ಯವಾಹಿನಿಗೆ ತರುವುದು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸಹಭಾಗಿತ್ವದಲ್ಲಿ ಉದ್ಯಮ ಆರಂಭಿಸುವ ದೊಡ್ಡ ಕನಸನ್ನು ಕಾವೇರಿ ಹೊಂದಿದ್ದಾರೆ. ಅವರ ಕನಸುಗಳು ನನಸಾಗಲಿ. ❖


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಬ್ಬ ಚಿತ್ರ ಶೀರ್ಷಿಕೆ ಕಥೆಯ — ಊಟಕ್ಕೊಂದು ಉಪಾಯ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗಾಜಿನ ಹೂಜಿಯೊಳಗಿದ್ದ ತಾಯಿ ಮೀನು ಮತ್ತು ಮರಿ ಮೀನಿಗೆ ಹಸಿವು ಜೋರಾಗಿತ್ತು. ಪಕ್ಕದಲ್ಲೇ ಇದ್ದ ಆಹಾರದ ಪೊಟ್ಟಣವನ್ನು ನೋಡಿ ಅವುಗಳಿಗೆ ಹಸಿವು ದುಪ್ಪಟ್ಟಾಯಿತು. ಹೊರಗೆ ಹೋಗಿ ತಿನ್ನುವಂತಿಲ್ಲ! ಅದಕ್ಕೆ ಅಮ್ಮ ಮೀನು ಉಪಾಯವೊಂದನ್ನು ಮಾಡಿತು. ಹೂಜಿಯೊಳಗಿದ್ದ ಕೋಲುಗಳನ್ನು ಸಂಗ್ರಹಿಸಿ ಅದರಿಂದ ಗಾಳವೊಂದನ್ನು ರಚಿಸಿ ಮೆಲ್ಲನೆ ಹೂಜಿಯಿಂದ ಹೊರಕ್ಕೆ ಹಾಕಿತು. ಗಾಳಕ್ಕೆ ಆಹಾರದ ಪೊಟ್ಟಣ ಸಿಗುತ್ತಿದ್ದಂತೆಯೇ ಅದನ್ನು ಹೂಜಿಯೊಳಕ್ಕೆ ಎಳೆದುಕೊಂಡಿತು. ಹೀಗೆ ಭರ್ಜರಿ ಊಟ ಮೀನುಗಳಿಗೆ ದೊರೆಯಿತು.

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಸಂಗತಿಸು 2.ತುಕಡಿಸು 3.ಖಾತರಿಸು 4.ಹಸಿವುಡು 5.ಪ್ರವಾಹನ 6.ಆಭಾರತ

ಜಾಣಪದ ಆಟ: 1.ಕೌರವ 2.ಗೌರವ 3.ಚೌರಸ 4.ನೌಕರ 5.ಗೌತಮ 6.ಚೌಕಾಶಿ 7.ಹೌಹಾರು 8.ಸೌರವ 9.ಯೌವನ 10.ಕೌರವ

ನಿಮ್ಮ ಜಿ.ಕೆ. ಎಷ್ಟು ಒಕೆ? : 1.ನೀಲಕಂಠ 2.ಮಿಟ್ಟಚಿ(ಮಿಡತೆ) 3.ತಪ್ಪು 4.ಗುಬ್ಬಿ 5.Apple

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಧನ್ಯತಾ ಆರ್ ಚಳ್ಳಕೆರೆ



ಶ್ರೀಜನ್ ಪಂಡಿತ್ ಜಮಖಂಡಿ




ಸ್ಫೂರ್ತಿ ಎಚ್.ಎಂ. ದಾವಣಗೆರೆ



ವಂದನಾ ಬಿ.ಎಚ್. ದಾವಣಗೆರೆ



ಸಾನಿಕ ಪಿ. ಎಚ್. ಲಿಂಗಸೂಗೂರು



ತೌಫೀಕ್ ಹಗರಿಬೊಮ್ಮನಹಳ್ಳಿ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಬರ | ನಕ | ಜರ

ಬಳ | ಜಿಗ | ಬಳಿ

ಅಕ್ಷರ ಪಟ್ಟಿ

ಕ	ಅಂ	ಕ	ಳಿ	ಹ	ಲಿ
ಕಂ	ಸಿಂ	ಪಂ	ಸೋ	ಡಿ	ಕೆ

ಗಣಿತದಲ್ಲಿ ಗರ್ದಿ ಗಮ್ಮತ್ತು — ಜೀರೋ–ಹೀರೋ

ಇಲ್ಲಿ ಕೊಟ್ಟಿರುವ 9ರಿಂದ 0ಯವರೆಗಿನ ಸಂಖ್ಯೆ ಸರಣಿಯಲ್ಲಿ ನಡುವೆ +,– ಚಿಹ್ನೆ ಹಾಕಿ 0 ಉತ್ತರಕ್ಕೆ ಸರಿ ಮಾಡಿ.

9 ◯ 8 ◯ 7 ◯ 6 ÷ 5 ◯ 4 ◯ 3 ◯ 2 ◯ 1 = 0

ಕೊಂಚತಂತ್ರ

ಕೊಂಚತಂತ್ರ ಬಳಸಿ ಕೆಲವು ಸಂಖ್ಯೆಗಳನ್ನು ಸುಲಭವಾಗಿ ನೆನಪಿಡಬಹುದು

1. ಭಾರತ ದೇಶದ ಸಂಸತ್ ಸದಸ್ಯರ ಸಂಖ್ಯೆ **543**. ಇದನ್ನು 5ರಿಂದ ಇಳಿಕೆ ಕ್ರಮದಲ್ಲಿ 4,3 ಇರುವುದರಿಂದ ಸುಲಭವಾಗಿ ನೆನಪಿಡಬಹುದು.

2. ಕರ್ನಾಟಕ ರಾಜ್ಯದ ವಿಧಾನಸಭೆಯ ಶಾಸಕರ ಸಂಖ್ಯೆ **224**. ಇದನ್ನು 2x2 = 4 ಎಂಬ ಮಗ್ಗಿ ನೆನಪಿಡುವ ಮೂಲಕ ಸುಲಭವಾಗಿ ಹೇಳಿಬಿಡಬಹುದು.

3. ದೊಡ್ಡ ನೀಲಿ ತಿಮಿಂಗಿಲಗಳ ಬಾಯಲ್ಲಿ **842** ಹಲ್ಲುಗಳಿರುತ್ತವೆ. ಇದನ್ನು 8ರ ಅರ್ಧ 4, 4ರ ಅರ್ಧ 2 ಎಂದು ನೆನಪಿಟ್ಟು ಸುಲಭವಾಗಿ ಹೇಳಬಹುದು.



ಅರ್ಥ ಅಪಾರ್ಥವಾದಾಗ...

1. ಶಾಲೆಯೊಂದರ ಕಾರ್ಯಕ್ರಮದಲ್ಲಿ ಮಂತ್ರಿಗಳು ಕನ್ನಡದ ಬಗ್ಗೆ ಮಾತನಾಡುತ್ತಾ, ನಾವೆಲ್ಲರೂ ಕನ್ನಡಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದೆ. ಮಕ್ಕಳು ಕನ್ನಡಕ್ಕೆ ಹೆಚ್ಚು ಒತ್ತು ಕೊಡಿರಿ ಎಂದು ಹೇಳಿದರು. ಮರುದಿನ ಮಕ್ಕಳು ಕನ್ನಡ ಬರಹ ಬರೆದುಕೊಂಡು ಬಂದಿದ್ದರು. ಮಜಾ ಎಂದರೆ, ಎಲ್ಲ ಅಕ್ಷರಗಳಿಗೂ ಒತ್ತು ಕೊಟ್ಟಿದ್ದರು.

2. ಶಾಲೆಯಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ನಡೆಯುತ್ತಿತ್ತು. ಮುಖ್ಯ ಶಿಕ್ಷಕರು ಭಾಷಣ ಮಾಡುತ್ತಾ ನಮ್ಮ ಶಾಲೆ ಈಗ ಬಿಟ್ಟು ಹೋಗುತ್ತಿದ್ದೀರಿ. ಬಿಟ್ಟು ಹೋದ ಮೇಲೆ ಶಾಲೆಗೆ ಹೆಸರು ತರಬೇಕೆಂದು ಹೇಳಿದರು. ಒಬ್ಬ ಹುಡುಗ ಮರುದಿನ ಶಾಲೆಗೆ ಬಂದು ಚೀಲದಲ್ಲಿ ಹೆಸರು ತಂದು ‘ತೊಗೊರ್ರಿ ಸರ್ ಹೆಸರು ತಂದಿದ್ದೇನೆ’ ಎಂದ.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಕಾಗುಣಿತ ಚಿಹ್ನೆಗಳಿಗೆ ಮುಂದೆ ಕೊಟ್ಟ ಸುಳಿವು ಆಧರಿಸಿ ಇನ್ನರ್ಧ ಅಕ್ಷರ ಬರೆದರೆ ಅರ್ಥಬದ್ಧ ಪದಗಳಾಗುತ್ತವೆ. ರಚಿಸಿ.

			ಸುಳಿವು
1	ೌ	ೌ	ದರ
2	ೌ	ೌ	ರೇಖೆ
3	ೌ	ೌ	ಝಳ
4	ೌ	ೌ	ಪೀಕು
5	ೌ	ೌ	ಕೂಡು
6	ೌ	ೌ	ಹೆಪ್ಪಾಗು
7	ೌ	ೌ	ನಾಗರಹಾವಿಗೆ ಇರುವಂಥದ್ದು
8	ೌ	ೌ	ಪರದೆ
9	ೌ	ೌ	ಜಿಗಿ
10	ೌ	ೌ	ನೀರಿನ ಬುಗ್ಗೆ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಮಿಂಚಿದ ಪೂರನ್, ಮಯಂಕ್

ಲಖನೌ ಸೂಪರ್ ಜೈಂಟ್ಸ್ ಸರ್ವಾಂಗೀಣ ಆಟ, ಪಂಜಾಬ್ ಕಿಂಗ್ಸ್‌ಗೆ ನಿರಾಸೆ

ಲಖನೌ (ಪಿಟಿಐ): ಶತಕದ ಜೊತೆಯಾಟದೊಡನೆ ಉತ್ತಮ ಆರಂಭ ಮಾಡಿದರೂ ಪಂಜಾಬ್ ಕಿಂಗ್ಸ್ ತಂಡಕ್ಕೆ ಗೆಲುವಿನ ಸೌಧ ಕಟ್ಟಲು ಯುವ ವೇಗದ ಬೌಲರ್ ಮಯಂಕ್ ಯಾದವ್ (27ಕ್ಕೆ3) ಅಡ್ಡಿಯಾದರು. ಲಖನೌ ಸೂಪರ್ ಜೈಂಟ್ಸ್ ತಂಡ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ 21 ರನ್‌ಗಳಿಂದ ಪಂಜಾಬ್ ಕಿಂಗ್ಸ್ ಮೇಲೆ ಜಯಗಳಿಸಿತು.

ಪದಾರ್ಪಣೆ ಪಂದ್ಯದಲ್ಲಿ 21 ವರ್ಷದ ಯಾದವ್ ಎಕ್ಸ್‌ಪ್ರೆಸ್ ವೇಗ ಮತ್ತು ಕರಾರುವಾಕ್ ಲೈನ್ ಮತ್ತು ಲೆಂಗ್ತ್ ಮೂಲಕ ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕಿ ಪಂದ್ಯವನ್ನು ಲಖನೌ ತಂಡದ ಕಡೆ ವಾಲಿಸಿದರು.

ಮಯಂಕ್ ಈ ಋತುವಿನ ಅತಿ ವೇಗದ ಎಸೆತವನ್ನೂ (ಗಂಟೆಗೆ 155.8 ಕಿ.ಮೀ) ದಾಖಲಿಸಿದರು. ಕೆಲ ನಿಮಿಷಗಳಲ್ಲೇ ಪಂಜಾಬ್ ತಂಡದ ಮೊದಲ ಮೂರು ವಿಕೆಟ್‌ಗಳನ್ನು ಪಡೆದು ಸಂಭ್ರಮಿಸಿದರು.

ಏಕನಾ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟ್ ಮಾಡಿದ ಲಖನೌ ತಂಡ 8 ವಿಕೆಟ್‌ಗೆ 199 ರನ್ ಗಳಿಸಿತು. ಉತ್ತರವಾಗಿ ಪಂಜಾಬ್ ಕಿಂಗ್ಸ್ ಒಂದು ಹಂತದಲ್ಲಿ 11.4 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 102 ರನ್ ಗಳಿಸಿದರೂ ಅಂತಿಮವಾಗಿ 5 ವಿಕೆಟ್‌ಗೆ 178 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ನಾಯಕ ಶಿಖರ್ ಧವನ್ (70, 50ಎ, 4x7, 6x3) ಮತ್ತು ಜಾನಿ ಬೇಸ್ಟೊ (42, 29ಎ, 4x3, 6x3) ಆಡುವಾಗ ತಂಡ ಗೆಲ್ಲುವಂತೆ ಕಂಡಿತ್ತು. ಆದರೆ ಇವರಿಬ್ಬರನ್ನು ಬಿಟ್ಟರೆ ಉಳಿದವರು ಯಾರೂ, ಯಾದವ್ ಮತ್ತು ಮೊಹ್ಸಿನ್ ಖಾನ್ (34ಕ್ಕೆ2) ದಾಳಿಯ ಮುಂದೆ ದೊಡ್ಡ ಇನಿಂಗ್ಸ್ ಆಡಲು ವಿಫಲರಾದರು. 200 ರನ್‌ಗಳ ಗುರಿ ದೂರವಾಗುತ್ತ ಹೋಯಿತು. ಲಿವಿಂಗ್‌ಸ್ಟೋನ್ (ಔಟಾಗದೇ 28, 17ಎ) ಕೊನೆಗಳಿಗೆಯಲ್ಲಿ ಬ್ಯಾಟ್ ಬೀಸಿದರೂ ಕಾಲಮಿಂಚಿತ್ತು.

ಇದಕ್ಕೆ ಮೊದಲು, ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ (54; 38ಎ) ಹಾಕಿದ ಅಡಿಪಾಯದ ಮೇಲೆ ನಿಕೋಲಸ್ ಪೂರನ್ (42; 21ಎ, 4X3, 6X3) ಮತ್ತು ಕೃಣಾಲ್ ಪಾಂಡ್ಯ (ಔಟಾಗದೆ 43; 22ಎ, 4X4, 6X2) ಲಖನೌ ತಂಡ ದೊಡ್ಡ ಮೊತ್ತ ಪೇರಿಸಲು ನೆರವಾದರು.

ಕೆ.ಎಲ್. ರಾಹುಲ್ 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಕಣಕ್ಕಿಳಿದರು. ಅವರ ಬದಲಿಗೆ ನಿಕೊಲಸ್ ಪೂರನ್ ನಾಯಕತ್ವ ವಹಿಸಿದರು.

ಒಂದು ಹಂತದಲ್ಲಿ ಅರ್ಷದೀಪ್ ಸಿಂಗ್ ಮತ್ತು ಸ್ಯಾಮ್ ಕರನ್ ಅವರ ಚುರುಕಾದ ದಾಳಿಯಿಂದಾಗಿ ಆತಿಥೇಯ ತಂಡವು 78 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತ್ತು.

ಈ ಹಂತದಲ್ಲಿ ಕ್ವಿಂಟನ್ ಜೊತೆಗೂಡಿದ ಪೂರನ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 47 ರನ್ ಸೇರಿಸಿದರು. ಇನಿಂಗ್ಸ್‌ನ ಈ ಅವಧಿಯಲ್ಲಿ ನಾಲ್ಕು ವಿಕೆಟ್‌ಗಳೂ ಪತನವಾದವು. 51 ರನ್‌ಗಳೂ ಲಖನೌ ಖಾತೆ ಸೇರಿದವು. ಇದಕ್ಕೆ ಕಾರಣವಾಗಿದ್ದು ಕೃಣಾಲ್ ಏಕಾಂಗಿ ಹೋರಾಟ. ಕೃಣಾಲ್ 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಸ್ಪಿನ್ನರ್ ಮತ್ತು ವೇಗಿಗಳಿಬ್ಬರನ್ನೂ ದಂಡಿಸಿದರು.


ಲಖನೌ ಸೂಪರ್ ಜೈಂಟ್ಸ್ ತಂಡದ ಮಯಂಕ್ ಯಾದವ್ . ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 8ಕ್ಕೆ199 (20 ಓವರ್‌ಗಳಲ್ಲಿ)
ಕ್ವಿಂಟನ್ ಸಿ ಜಿತೇಶ್ ಬಿ ಅರ್ಷದೀಪ್ 54 (38ಎ, 4X5, 6X2)
ರಾಹುಲ್ ಸಿ ಜಾನಿ ಬಿ ಅರ್ಷದೀಪ್ 15 (9ಎ, 4X1, 6X1)
ದೇವದತ್ತ ಸಿ ಧವನ್ ಬಿ ಸ್ಯಾಮ್ 9 (6ಎ, 4X2)
ಮಾರ್ಕಸ್ ಬಿ ಚಾಹರ್ 19 (12ಎ, 6X2)
ಪೂರನ್ ಬಿ ರಬಾಡ 42 (21ಎ, 4X3, 6X3)
ಆಯುಷ್ ಸಿ ಜಾನಿ ಬಿ ಸ್ಯಾಮ್ 8 (10ಎ)
ಕೃಣಾಲ್ ಔಟಾಗದೆ 43 (22ಎ, 4X4, 6X2)
ರವಿ ಸಿ (ಬದಲಿ ಫೀಲ್ಡರ್/ನಟರಾಜನ್) ಬಿ ಸ್ಯಾಮ್ 0 (1ಎ)
ಮೊಹಸಿನ್ ರನ್‌ಔಟ್ (ಹರ್ಷಲ್ ಪಟೇಲ್) 2 (1ಎ)
ನವೀನ್ ಉಲ್ ಹಕ್ ಔಟಾಗದೆ 0
ಇತರೆ: 7 (ಬೈ 1, ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1–35 (ಕೆ.ಎಲ್. ರಾಹುಲ್; 3.5), 2–45 (ದೇವದತ್ತ ಪಡಿಕ್ಕಲ್; 5.1), 3–78 (ಮಾರ್ಕಸ್ ಸ್ಟೊಯಿನಿಸ್; 8.4), 4–125 (ಕ್ವಿಂಟನ್ ಡಿ ಕಾಕ್; 13.1), 5–146 (ನಿಕೊಲಸ್ ಪೂರನ್; 15.1), 6–189 (ಆಯುಷ್ ಬದೋನಿ; 18.4), 7–189 (ರವಿ ಬಿಷ್ಣೋಯಿ; 18.5), 8–197 (ಮೊಹಸಿನ್ ಖಾನ್; 19.4)
ಬೌಲಿಂಗ್: ಸ್ಯಾಮ್ ಕರನ್ 4–0–28–3, ಅರ್ಷದೀಪ್ ಸಿಂಗ್ 3–0–30–2, ಕಗಿಸೊ ರಬಾಡ 4–0–38–1, ರಾಹುಲ್ ಚಾಹರ್ 3–0–42–1, ಹರಪ್ರೀತ್ ಬ್ರಾರ್ 2–0–14–0, ಹರ್ಷಲ್ ಪಟೇಲ್ 4–0–45–0

ಪಂಜಾಬ್ ಕಿಂಗ್ಸ್: 5ಕ್ಕೆ 178 (20 ಓವರುಗಳಲ್ಲಿ)
ಧವನ್ ಸಿ ಡಿ ಕಾಕ್ ಬಿ ಮೊಹ್ಸಿನ್ 70 (50ಎ, 4x7, 6x3)
ಬೇಸ್ಟೊ ಸಿ ಸ್ಟೊಯಿನಿಸ್ ಬಿ ಮಯಂಕ್ 42 (29ಎ, 4x3, 6x3)
ಪ್ರಭಸಿಮ್ರನ್ ಸಿ ನವೀನ್ ಬಿ ಮಯಂಕ್ 19 (7ಎ, 4x1, 6x2)
ಜಿತೇಶ್ ಸಿ ನವೀಣ್ ಬಿ ಮಯಂಕ್ 6 (9ಎ, 4x1)
ಲಿವಿಂಗ್‌ಸ್ಟೋನ್ ಔಟಾಗದೇ 28 (17ಎ, 4x2, 6x2)
ಕರನ್ ಸಿ ಪೂರನ್ ಬಿ ಮೊಹ್ಸಿನ್ 0 (1ಎ)
ಶಶಾಂಕ್ ಔಟಾಗದೇ 9 (7ಎ, 4x1)
ಇತರೆ: 4 (ಲೆಗ್‌ಬೈ 2, ವೈಡ್ 2)
ವಿಕೆಟ್ ಪತನ: 1–102 (ಜಾನಿ ಬೇಸ್ಟೊ, 11.4), 2–128 (ಪ್ರಭಸಿಮ್ರನ್ ಸಿಂಗ್, 13.3), 3–139 (ಜಿತೇಶ್ ಶರ್ಮಾ, 15.4), 4–141 (ಶಿಖರ್ ಧವನ್, 16.2), 5–141 (ಸ್ಯಾಮ್ ಕರನ್, 16.3).
ಬೌಲಿಂಗ್: ಮಣಿಮಾರನ್ ಸಿದ್ಧಾರ್ಥ್ 2–0–21–0, ನವೀನ್ ಉಲ್ ಹಕ್ 4–0–41–0; ಮೊಹಿಸಿನ್ ಖಾನ್ 4–0–34–2; ಕೃಣಾಲ್ ಪಾಂಡ್ಯ 3–0–26–0; ರವಿ ಬಿಷ್ಣೋಯಿ 3–0–25–0; ಮಯಂಕ್ ಯಾದವ್ 4–0–27–3.
ಪಂದ್ಯದ ಆಟಗಾರ: ಮಯಂಕ್ ಯಾದವ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಚೆನ್ನೈ ಸೂಪರ್ ಕಿಂಗ್ಸ್	2	2	0	4	1.979
ಕೋಲ್ಕತ್ತ ನೈಟ್ ರೈಡರ್ಸ್	2	2	0	4	1.047
ರಾಜಸ್ಥಾನ ರಾಯಲ್ಸ್	2	2	0	4	0.800
ಸನ್‌ರೈಸರ್ಸ್ ಹೈದರಾಬಾದ್	2	1	1	2	0.675
ಲಖನೌ ಸೂಪರ್ ಜೈಂಟ್ಸ್	2	1	1	2	0.025
ಪಂಜಾಬ್ ಕಿಂಗ್ಸ್	3	1	2	2	-0.337
ರಾಯಲ್ ಚಾಲೆಂಜರ್ಸ್ ಬೆಂಗಳೂರು	3	1	2	2	-0.711
ಗುಜರಾತ್ ಟೈಟನ್ಸ್	2	1	1	2	-1.425
ಡೆಲ್ಲಿ ಕ್ಯಾಪಿಟಲ್ಸ್	2	0	2	0	-0.528
ಮುಂಬೈ ಇಂಡಿಯನ್ಸ್	2	0	2	0	-0.925

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (181ರನ್)
ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (6 ವಿಕೆಟ್)

ರಿಷಭ್ ಪಂತ್ ಬಳಗಕ್ಕೆ ಜಯದ ಖಾತೆ ತೆರೆಯುವ ತವಕ

ಚೆನ್ನೈಗೆ ಕ್ಯಾಪಿಟಲ್ಸ್ ಸವಾಲು

ವಿಶಾಖಪಟ್ಟಣ (ಪಿಟಿಐ): ಟೂರ್ನಿಯಲ್ಲಿ ಆಡಿದ ಎರಡೂ ಪಂದ್ಯಗಳನ್ನು ಗೆದ್ದಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಇನ್ನೂ ಜಯದ ಖಾತೆ ತೆರೆಯದ ಡೆಲ್ಲಿ ಕ್ಯಾಪಿಟಲ್ಸ್ ಭಾನುವಾರ ಎದುರಿಸಲಿದೆ.

'ಕೂಲ್ ಕ್ಯಾಪ್ಟನ್' ಮಹೇಂದ್ರಸಿಂಗ್ ಧೋನಿ ಮಾರ್ಗದರ್ಶನದಲ್ಲಿ ಯುವನಾಯಕ ಋತುರಾಜ್ ಸಿಂಗ್ ಅವರು ಚೆನ್ನೈ ತಂಡವನ್ನು ತಮ್ಮ ತವರಿನಂಗಳದಲ್ಲಿ ನಡೆದ ಪಂದ್ಯಗಳಲ್ಲಿ ಗೆಲುವಿನತ್ತ ಮುನ್ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಆವೃತ್ತಿಯಲ್ಲಿ ಇದೇ ಮೊದಲ ಬಾರಿಗೆ ತವರಿನಿಂದ ಹೊರಗಿನ ತಾಣದಲ್ಲಿ ಚೆನ್ನೈ ಪಂದ್ಯವಾಡಲಿದೆ.

ವಿಶಾಖಪಟ್ಟಣದ ವಿಸಿಎ ಕ್ರೀಡಾಂಗಣವು ಡೆಲ್ಲಿ ಕ್ಯಾಪಿಟಲ್ಸ್‌ಗೆ 'ತವರು' ತಾಣವಾಗಿದೆ. ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ರಿಷಭ್ ಪಂತ್ 15 ತಿಂಗಳುಗಳ ನಂತರ ಕ್ರಿಕೆಟ್‌ಗೆ ಮರಳಿರುವ ಟೂರ್ನಿ ಇದಾಗಿದೆ. ಮುಖ್ಯ ಕೋಚ್ ರಿಕಿ ಪಾಂಟಿಂಗ್ ಹಾಗೂ ನಿರ್ದೇಶಕ ಸೌರವ್ ಗಂಗೂಲಿ ಅವರ ಮಾರ್ಗದರ್ಶನದಲ್ಲಿ ಪಂತ್ ನಾಯಕತ್ವವನ್ನು ನಿಭಾಯಿಸುತ್ತಿದ್ದಾರೆ. ವಿಕೆಟ್‌ಕೀಪಿಂಗ್‌ನಲ್ಲಿಯೂ ತಕ್ಕಮಟ್ಟಿಗೆ ಉತ್ತಮವಾಗಿಯೇ ಇದ್ದಾರೆ. ಆದರೆ ಬ್ಯಾಟಿಂಗ್‌ನಲ್ಲಿ ತಮ್ಮ ಹಿಂದಿನ ಲಯಕ್ಕೆ ಮರಳಬೇಕಿದೆ.

ಕಳೆದ ಪಂದ್ಯದಲ್ಲಿ ಡೆಲ್ಲಿ ತಂಡವು ರಾಜಸ್ಥಾನ ರಾಯಲ್ಸ್ ಎದುರು ಸೋತಿತ್ತು. ಅದರಲ್ಲಿ ಡೇವಿಡ್ ವಾರ್ನರ್ ಮತ್ತು ಮಿಚೆಲ್ ಮಾರ್ಷ್ ಉತ್ತಮ ಆರಂಭ ನೀಡಿದ್ದರು. ಕೊನೆಯ ಹಂತದಲ್ಲಿ ಟ್ರಿಸ್ಟನ್ ಸ್ಟಬ್ಸ್ ಕೂಡ ಮಿಂಚಿದ್ದರು. ಆದರೂ ಡೆಲ್ಲಿ ತಂಡಕ್ಕೆ ಗೆಲುವಿನ ಗುರಿ ಮುಟ್ಟಲು ಸಾಧ್ಯವಾಗಿರಲಿಲ್ಲ. ಸ್ಪಿನ್ ಬೌಲಿಂಗ್ ಎದುರು ಬ್ಯಾಟರ್‌ಗಳು ಸ್ವಲ್ಪ ದುರ್ಬಲವಾಗಿದ್ದರು.

ಚೆನ್ನೈ ತಂಡದ ಎದುರು ಡೆಲ್ಲಿ ತಂಡವು ಈ ಹಿಂದೆ ಮುಖಾಮುಖಿಯಾದ ಮೂರು ಪಂದ್ಯಗಳಲ್ಲಿ ಕ್ರಮವಾಗಿ 91, 27 ಹಾಗೂ 77 ರನ್‌ಗಳ ಅಂತರದಿಂದ ಪರಾಭವಗೊಂಡಿತ್ತು. ಈ ಬಾರಿಯೂ ಸಮತೋಲನದಿಂದ ಕೂಡಿರುವ ಚೆನ್ನೈ ತಂಡವನ್ನು ಸೋಲಿಸಲು ವಿಭಿನ್ನ ತಂತ್ರಗಾರಿಕೆಯೊಂದಿಗೆ ಕಣಕ್ಕಿಳಿಯುವ ಸವಾಲು ಡೆಲ್ಲಿ ಮುಂದಿದೆ.

ತನ್ನ ಅನುಭವಿ ಆಟಗಾರರ ಜೊತೆಗೆ, ಯುವಪ್ರತಿಭೆಗಳನ್ನು ಕಣಕ್ಕಿಳಿಸುವ ಪ್ರಯೋಗದಲ್ಲಿಯೂ ಚೆನ್ನೈ ಯಶಸ್ವಿಯಾಗಿದೆ. ತಂಡದ ಆಲ್‌ರೌಂಡರ್‌ಗಳಾದ ರಚಿನ್ ರವೀಂದ್ರ, ಶಿವಂ ದುಬೆ ಹಾಗೂ ಹೊಸಪ್ರತಿಭೆ ಸಮೀರ್ ರಿಜ್ವಿ ಅಮೋಘ ಲಯದಲ್ಲಿದ್ದಾರೆ.

ಡೆರಿಲ್ ಮಿಚೆಲ್, ರವೀಂದ್ರ ಜಡೇಜ ಮತ್ತು ಅಜಿಂಕ್ಯ ರಹಾನೆ ತಮ್ಮ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲ ಆಟಗಾರರು. ಬೌಲಿಂಗ್‌ನಲ್ಲಿಯೂ ದೀಪಕ್ ಚಾಹರ್, ಮುಸ್ತಫಿಜುರ್ ರೆಹಮಾನ್, ಮತೀಶ ಪಥಿರಾಣ ಅವರು ವಿಕೆಟ್ ಬೇಟೆಯಾಡುತ್ತಿದ್ದಾರೆ. ಈ ಬೌಲರ್‌ಗಳ ಮುಂದೆ ದಿಟ್ಟವಾಗಿ ಆಡುವ ಸವಾಲು ಡೆಲ್ಲಿ ಬ್ಯಾಟರ್‌ಗಳ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್.


ಡೇವಿಡ್ ವಾರ್ನರ್ ಮತ್ತು ರಿಷಭ್ ಪಂತ್ –ಪಿಟಿಐ ಚಿತ್ರ

ಲಖನೌಗೆ ಮ್ಯಾಟ್ ಹೆನ್ರಿ

ನವದೆಹಲಿ (ಪಿಟಿಐ): ನ್ಯೂಜಿಲೆಂಡ್‌ನ ವೇಗದ ಬೌಲರ್ ಮ್ಯಾಟ್ ಹೆನ್ರಿ ಅವರು ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಶನಿವಾರ ಸೇರ್ಪಡೆಗೊಂಡಿದ್ದಾರೆ. ಇಂಗ್ಲೆಂಡ್ ಆಲ್‌ರೌಡರ್ ಡೇವಿಡ್ ವಿಲಿ ವೈಯಕ್ತಿಕ ಕಾರಣ ನೀಡಿ ತಂಡದಿಂದ ಹಿಂದೆ ಸರಿದಿರುವ ಕಾರಣ ಬದಲಿಯಾಗಿ ಹೆನ್ರಿ ಅವಕಾಶ ಪಡೆದಿದ್ದಾರೆ.

ಹೆನ್ರಿ ಅವರು ₹1.25 ಕೋಟಿ ಮೂಲಬೆಲೆಗೆ ಲಖನೌ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. 2022 ಮತ್ತು 2023ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ವಿಲಿ ಕಳೆದ ವರ್ಷದ ಕೊನೆಯಲ್ಲಿ ನಡೆದ ಹರಾಜಿನಲ್ಲಿ ಲಖನೌ ಪಾಲಾಗಿದ್ದರು. ವಿಲಿ, ಲಖನೌ ತಂಡದಿಂದ ಹಿಂದೆ ಸರಿದ ಇಂಗ್ಲೆಂಡ್‌ನ ಎರಡನೇ ವೇಗಿ. ಈ ಹಿಂದೆ, ಟಿ20 ವಿಶ್ವಕಪ್ ಮುಂಚಿತವಾಗಿ ಕಾರ್ಯಭಾರ ನಿರ್ವಹಣೆ ಭಾಗವಾಗಿ ಮಾರ್ಕ್ ವುಡ್ ಅವರಿಗೆ ಇಸಿಬಿ ವಿಶ್ರಾಂತಿ ನೀಡಲು ಬಯಸಿದ್ದರಿಂದ ಅವರು ಹಿಂದೆಸರಿದಿದ್ದರು. ಅವರ ಜಾಗಕ್ಕೆ ಶಮರ್ ಜೋಸೆಫ್ ಅವಕಾಶ ಪಡೆದಿದ್ದರು.

ಸನ್‌ರೈಸರ್ಸ್–ಟೈಟನ್ಸ್ ಪಂದ್ಯ ಇಂದು

ಅಹಮದಾಬಾದ್ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡ ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಮುಂಬೈ ಇಂಡಿಯನ್ಸ್ ವಿರುದ್ಧ ಕಳೆದ ಪಂದ್ಯದಲ್ಲಿ ದಾಖಲೆ ಮೊತ್ತ (277) ಪೇರಿಸಿದ್ದ ಪ್ಯಾಟ್ ಕಮಿನ್ಸ್ ಪಡೆಯನ್ನು ಕಟ್ಟಿಹಾಕಬೇಕಾದರೆ ಗುಜರಾತ್ ಟೈಟನ್ಸ್ ತಂಡ, ವಿಶೇಷವಾಗಿ ಬೌಲಿಂಗ್‌ನಲ್ಲಿ ಸಾಕಷ್ಟು ಸುಧಾರಿತ ಪ್ರದರ್ಶನ ನೀಡಬೇಕಾಗಿದೆ.

ಟೈಟನ್ ಒಂದು ಗೆದ್ದು ಒಂದು ಸೋತಿದೆ. ಸನ್‌ರೈಸರ್ಸ್ ಕೂಡ ಅಷ್ಟೇ. ಆದರೆ ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ನಾಲ್ಕು ರನ್‌ಗಳಿಂದ ಸೋಲುವ ಮುನ್ನ ಹೆನ್ರಿಚ್ ಕ್ಲಾಸೆನ್ ವೀರೋಚಿತ ಹೋರಾಟ ಪ್ರದರ್ಶಿಸಿದ್ದರು.

ಗಾಯಾಳಾಗಿರುವ ಮೊಹಮ್ಮದ್ ಶಮಿ ಅವರ ಜಾಗ ತುಂಬಲು ಉಮೇಶ್ ಯಾದವ್ ಅವರಿಗೆ ಸಾಧ್ಯವಾಗಿಲ್ಲ. ಕಳೆದ ಋತುವಿನಲ್ಲಿ ಹಾರ್ದಿಕ್ ಪಾಂಡ್ಯ ನೀಡಿದ್ದ ಸಮತೋಲನವೂ ಈಗ ಇಲ್ಲ.

ಚೆನ್ನೈ ಸೂಪರ್‌ಕಿಂಗ್ಸ್ ಎದುರು ಟೈಟನ್ಸ್ ಅನುಭವಿಸಿದ 63 ರನ್‌ಗಳ ಸೋಲು ಈ ಋತುವಿನ ಐಪಿಎಲ್‌ನಲ್ಲಿ ಅತಿ ದೊಡ್ಡದೆನಿಸಿದೆ.

ತಂಡದಿಂದ ಸ್ಫೂರ್ತಿಯುತ ಆಟ ಹೊಮ್ಮಿಸುವ ಸವಾಲು ಗಿಲ್ ಮುಂದಿದೆ. ವೃದ್ಧಿಮಾನ್ ಸಹಾ, ಡೇವಿಡ್ ಮಿಲ್ಲರ್, ತೆವಾಟಿಯಾ ಯಾರೂ ಅಬ್ಬರದ ಆಟವಾಡಿಲ್ಲ. ಸಾಯಿ ಸುದರ್ಶನ್ ಬಿಟ್ಟರೆ ಉಳಿದವರು ಯಾರೂ 30ರ ಗಡಿ ದಾಟಿಲ್ಲ. ಏಕದಿನ ಪಂದ್ಯಗಳ ರೀತಿಯಲ್ಲೇ ಬ್ಯಾಟರ್‌ಗಳು ಆಟವಾಡುತ್ತಿದ್ದಾರೆ. ಮಿಲ್ಲರ್ ಅವರಿಂದ ಅಬ್ಬರದ ಆಟ ಬರಬೇಕಾಗಿದೆ.

ಟ್ರಾವಿಸ್ ಹೆಡ್, ಹೈದರಾಬಾದ್ ಪರ ಪದಾರ್ಪಣೆ ಪಂದ್ಯದಲ್ಲೇ ವೇಗದ ಅರ್ಧ ಶತಕ (18 ಎಸೆತ) ಹೊಡೆದಿದ್ದರೆ, ಕೆಲಹೊತ್ತಿನಲ್ಲೇ ಅಭಿಷೇಕ್ ಶರ್ಮಾ 16 ಎಸೆತಗಳಲ್ಲೇ ಅರ್ಧ ಶತಕ ದಾಟಿ ಆ ದಾಖಲೆ ಸುಧಾರಿಸಿದ್ದರು. ಹೆನ್ರಿಚ್ ಕ್ಲಾಸೆನ್ ಅವರೂ ಸ್ಫೋಟಕ ಇನಿಂಗ್ಸ್ ಆಡಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30.